₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 04.03.2025 ಸಂಪುಟ: 10 ಸಂಚಿಕೆ: 49 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗಿರ್‌ನಲ್ಲಿ ಮೋದಿ ಸಫಾರಿ

ವಿಶ್ವ ವನ್ಯಜೀವಿ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬೆಳಗ್ಗೆ ಗುಜರಾತ್‌ನ ಜುನಾಗಢ್ ಜಿಲ್ಲೆಯ ಗಿರ್ ವನ್ಯಜೀವಿ ಅಭಯಾರಣ್ಯದಲ್ಲಿ ಸಿಂಹ ಸಫಾರಿ ನಡೆಸಿದ್ದಾರೆ. ಸಫಾರಿಯ ಸಮಯದಲ್ಲಿ ತಾವು ಕಂಡ ಸಿಂಹಗಳ ಚಿತ್ರಗಳನ್ನು ಪ್ರಧಾನಿ ಪೋಸ್ಟ್ ಮಾಡಿದ್ದಾರೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್, ಇತರ ಸಚಿವರು ಮತ್ತು ಹಿರಿಯ ಅರಣ್ಯ ಇಲಾಖೆ ಅಧಿಕಾರಿಗಳು ಸಫಾರಿಯ ಸಮಯದಲ್ಲಿ ಮೋದಿ ಅವರೊಂದಿಗೆ ಇದ್ದರು.

ಸೊಂಪಾದ ಪುಟಗಳು

ಅಷ್ಟಕ್ಕೂ ದೇವಾಲಯಕ್ಕೆ ಹೋದರೆ ತಪ್ಪೇನು?
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ನನ್ನ ತಾತ ಜೆಡಿಪಿಗೂ ದೇಣಿಗೆ ನೀಡಲಿಲ್ಲ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ಯಾವತ್ತೂ ಒರಿಜಿನಲ್ ಆಗಿರಲು ಪ್ರಯತ್ನಿಸಬೇಕು. ನೀವು ಬೇರೆಯವರನ್ನು ಕಾಪಿ ಮಾಡಿದ್ದೀರಿ ಎಂದು ಆಗ ಯಾರೂ ಹೇಳುವುದಿಲ್ಲ. ಬೇರೆಯವರಿಗೂ ನಿಮ್ಮನ್ನು ಕಾಪಿ ಮಾಡುವುದು ಸುಲಭವಾಗುವುದಿಲ್ಲ. ನಮ್ಮತನ ಎಂಬುದಕ್ಕಿಂತ ದೊಡ್ಡ ಆಸ್ತಿ ನಮಗೆ ಬೇರೆ ಯಾವುದೂ ಇಲ್ಲ.

ವಕ್ರತುಂಡೋಕ್ತಿ

ದಿನವೂ ಧ್ಯಾನ ಮಾಡಬೇಕು, ಸ್ಕಾಚ್ ಕುಡಿಯಬೇಕು. ಎಲ್ಲ ಪ್ರಶ್ನೆಗಳಿಗೂ ಗೂಗಲ್‌ನಲ್ಲಿ ಉತ್ತರವಿರುವುದಿಲ್ಲ.

ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ

ರಾಜ್ಯದ ಆರ್ಥಿಕತೆ ಸುಭದ್ರ ಎಂದ ಗೆಹ್ಲೋಥ್

ರಾಜ್ಯಪಾಲರಿಂದ ಗ್ಯಾರಂಟಿ ಗುಣಗಾನ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯದಲ್ಲಿ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ, ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂಬ ಪ್ರತಿಪಕ್ಷಗಳ ಆರೋಪಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಂದಲೇ ತಿರುಗೇಟು ಕೊಡಿಸಿರುವ ರಾಜ್ಯ ಸರಕಾರ, ರಾಜ್ಯದ ಅಭಿವೃದ್ಧಿಯ ವೇಗ ಚುರುಕುಗೊಳಿಸುವುದರಲ್ಲಿ ಮತ್ತು ಹಣಕಾಸು ವ್ಯವಸ್ಥೆ ಸದೃಢಗೊಳಿಸುವಲ್ಲಿ ಸರಕಾರ ಯಶಸ್ವಿಯಾಗಿದ್ದು, ಗಂಭೀರವಾದ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಉದ್ಭವಿಸದೇ ಜನಸ್ನೇಹಿಯಾಗಿ ಕೆಲಸ ಮಾಡುತ್ತಿವೆ ಎಂದು ರಾಜ್ಯಪಾಲರು ಸರಕಾರವನ್ನು ಶ್ಲಾಘಿಸಿದ್ದಾರೆ.

ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಿದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು, ತಮ್ಮ ಭಾಷಣದ ಆರಂಭದಲ್ಲಿ ಎಲ್ಲರಿಗೂ ನಮಸ್ಕಾರ ಎಂದು ಕನ್ನಡದಲ್ಲೇ ಸ್ವಾಗತಿಸಿದರಲ್ಲದೆ, ಒಟ್ಟು 39 ಪುಟಗಳ ಲಿಖಿತ ಭಾಷಣದ ಉದ್ದಕ್ಕೂ ರಾಜ್ಯ ಸರಕಾರದ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸರಕಾರ ಜಾರಿ ಮಾಡಿರುವ ಗ್ಯಾರಂಟಿ ಯೋಜನೆ ಗಳಿಂದ ರಾಜ್ಯವು ಅಭಿವೃದ್ಧಿಯಲ್ಲಿ ಹಿಂದೆ ಬೀಳುತ್ತದೆ ಮತ್ತು ರಾಜ್ಯದ ಹಣಕಾಸು ವ್ಯವಸ್ಥೆ ಹದಗೆಡುತ್ತದೆ ಎಂದು ಹಲವರು ಭವಿಷ್ಯ ನುಡಿದಿದ್ದರು. ಈ ಭವಿಷ್ಯವನ್ನು ಸರಕಾರ ಸುಳ್ಳು ಮಾಡಿದೆ ಎಂದು ಹೇಳುವ ಮೂಲಕ ಅಭಿವೃದ್ಧಿಯಲ್ಲಿ ಹಿನ್ನಡೆಯಾಗಿಲ್ಲ, ಆರ್ಥಿಕ ಸ್ಥಿತಿ ಹದಗೆಟ್ಟಿಲ್ಲ ಎಂಬುದನ್ನು ಪ್ರತಿಪಾದಿಸಿದರು. ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸುವ ಅವಕಾಶ ಎಂಬಂತೆ ಮಹಾತ್ಮ ಗಾಂಧಿ ಅವರು ಹೇಳಿದಂತೆ ಆಡಳಿತವನ್ನು ಅಂತಿಮ ವ್ಯಕ್ತಿಯ ಕಣ್ಣೀರು ಒರೆಸುವ ಅವಕಾಶ ಎಂಬಂತೆ ಬಳಸಿಕೊಳ್ಳಲು ಸರಕಾರ ಕಟ್ಟಿಬದ್ಧವಾಗಿದೆ ಎಂಬುದನ್ನು ಪುನರುಚ್ಚರಿಸಿದರು.

→ 4

ವಿಧಾನಮಂಡಲದ ಜಂಟಿ ಅಧಿವೇಶನದ ಆರಂಭಕ್ಕೂ ಮುನ್ನ ವಿಧಾನಸೌಧದ ಮುಂಭಾಗ ರಾಜ್ಯಪಾಲ ಥಾವರಚಂದ್ ಗೆಹ್ಲೋಥ್ ಅವರನ್ನು ಸಭಾಧ್ಯಕ್ಷ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸ್ವಾಗತಿಸಿದರು.

70,000	331
ಕೋಟಿ ರು. ಗ್ಯಾರಂಟಿ ಯೋಜನೆಗಳಿಗೆ ಹಣ	ಘೋಷಣೆ ಸರಕಾರಿ ಆದೇಶ (334 ಘೋಷಣೆ)

ಅಭಿವೃದ್ಧಿ ಶೂನ್ಯವಾದ ಸರಕಾರ ರಾಜ್ಯಪಾಲರ ಬಾಯಲ್ಲಿ ಸುಳ್ಳು ಹೇಳಿಸಿದೆ. ಕಾಂಗ್ರೆಸ್ ನಾಯಕರ ಜೇಬು ತುಂಬಿದೆಯೇ ಹೊರತು ರಾಜ್ಯದ ಅಭಿವೃದ್ಧಿ ಆಗಿಲ್ಲ. ರಾಜ್ಯದ ಆರ್ಥಿಕ ಸ್ಥಿತಿ ಅಧೋಗತಿಗೆ ಹೋಗಿದೆ. ರಾಜ್ಯಪಾಲರನ್ನು ಹೀಯಾಳಿಸುವ ಮಾತಾಡಿ, ಅವರ ಅಧಿಕಾರಗಳನ್ನು ಕಿತ್ತುಕೊಂಡು, ಈಗ ಅವರ ಕೈಯಲ್ಲೇ ನಾವೇ ನಂ.1 ಎಂಬ ರೀತಿಯಲ್ಲಿ ಹೇಳಿಸಲಾಗಿದೆ.
-ಆರ್.ಅಶೋಕ ವಿಧಾನಸಭೆ ಪ್ರತಿಪಕ್ಷ ನಾಯಕ

ಕರ್ನಾಟಕ ಮಾದರಿ

ಕರ್ನಾಟಕ ಮಾದರಿ ಅಭಿವೃದ್ಧಿ ಎಂದರೆ ಜನಕೇಂದ್ರಿತ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಆಡಳಿತ ರೂಪಿಸುವುದು ಎಂದರ್ಥ. ಹಸಿರು ಇಂಧನ, ಮಹಿಳಾ ಸಬಲೀಕರಣ ಮುಂತಾದವು ಇವುಗಳಲ್ಲಿ ಸೇರುತ್ತವೆ. ಕರ್ನಾಟಕದ ಮಾದರಿಯನ್ನು ಜಗತ್ತಿನ ಅನೇಕ ಆರ್ಥಶಾಸ್ತ್ರಜ್ಞರು ಮತ್ತು ವಿಶ್ವವಿದ್ಯಾಲಯಗಳು ಅಧ್ಯಯನ ಮಾಡುತ್ತಿವೆ. ಆಕ್ಸ್‌ಫರ್ಡ್ ವಿವಿ ಹ್ಯೂಮನ್ ರೈಟ್ಸ್ ಬ್ಲಾಗ್‌ನಲ್ಲಿ 'ಶೈನಿಂಗ್ ಎ ಲೈಟ್ ಇನ್ ದ ಡಾರ್ಕ್‌ನೆಸ್' ಎಂದು ಮತ್ತು 'ಎ ಬ್ಲೂ ಪ್ರಿಂಟ್ ಫಾರ್ ದಿ ವರ್ಲ್ಡ್' ಎಂದು ಈ ಮಾದರಿ ವ್ಯಾಖ್ಯಾನಿಸಿವೆ ಎಂದು ಗೆಹ್ಲೋಥ್ ಹೇಳಿದರು.

ಮೊಯಿಲಿ ಹೇಳಿಕೆಯಿಂದ ಕಾಂಗ್ರೆಸ್‌ನಲ್ಲಿ ಸಂಚಲನ

ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನಿಸಲಿದೆ: ಸಿಎಂ

ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಕ್ಕೆ ನಾನು ಬದ್ಧ: ಡಿಸಿಎಂ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: 'ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಯಾಗುವುದು ತೀರ್ಮಾನವಾಗಿರುವ ವಿಷಯ' ಎನ್ನುವ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹೇಳಿಕೆ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬಣದ ಪರ-ವಿರೋಧ ಹೇಳಿಕೆಗಳಿಗೆ ವೇದಿಕೆ ಹುಟ್ಟು ಹಾಕಿದೆ.

ಉಡುಪಿಯ ಕಾಪುವಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾನುವಾರ ರಾತ್ರಿ ಮೊಯ್ಲಿ ಈ ಹೇಳಿಕೆಯನ್ನು ನೀಡಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು 'ಓಲೈಸುವ' ಕಾರಣಕ್ಕೆ ನೀಡಿರುವ ಹೇಳಿಕೆ ಎನ್ನುವುದು ಸ್ಪಷ್ಟವಾಗಿದ್ದರೂ ಪರ-ವಿರೋಧ ಚರ್ಚೆಗಳು ಶುರುವಾಗಿವೆ. ಇದಕ್ಕೆ ಪೂರಕವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಮಾಜಿ ಸಿಎಂ ವೀರಪ್ಪ ಮೊಯ್ಲಿ ಅವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಅದರ ಅಗತ್ಯವಿಲ್ಲ' ಎಂದಿರುವುದು ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಮೊಯ್ಲಿ ಅವರ ಹೇಳಿಕೆ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, ಮುಖ್ಯಮಂತ್ರಿ ಆಯ್ಕೆ ಎನ್ನುವುದು ಪಕ್ಷದ ಹೈಕಮಾಂಡ್ ತೀರ್ಮಾನ. ಈ ವಿಷಯದಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ ಎನ್ನುವ ಮೂಲಕ ಆ ರೀತಿಯ ಬೆಳವಣಿಗೆ ಇಲ್ಲ ಎನ್ನುವ ಸಂದೇಶ ರವಾನಿಸಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದು, ಅಧಿಕಾರ ಹಂಚಿಕೆ ವಿಚಾರವಾಗಿ ಯಾರೂ ಚರ್ಚಿಸುವಂತಿಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ನಾನು ಅವರ ಮಾತಿಗೆ ಬದ್ಧನಾಗಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ಮೊಯ್ಲಿ ಹೇಳಿದ್ದೇನು?

ಉಡುಪಿಯ ಕಾಪುವಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿರುವ ವೀರಪ್ಪ ಮೊಯ್ಲಿ ಅವರು, ಡಿಕೆಶಿ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಶಿವಕುಮಾರ್ ಸಿಎಂ ಆಗುವುದು ಖಚಿತ. ಮುಖ್ಯಮಂತ್ರಿ ಸ್ಥಾನ ಯಾರು ಕೊಡುವಂಥದ್ದಲ್ಲ. ಡಿಕೆಶಿಗೆ ವಿಧಾನಸಭಾ ಚುನಾವಣೆಯ ಟಿಕೆಟ್ ಕೊಡಿಸಿದವನು ನಾನು. ಇಂದು ಅವರು ಯಶಸ್ವಿ ನಾಯಕರಾಗಿ ಮೂಡಿಬಂದಿದ್ದಾರೆ. ಶೀಘ್ರದಲ್ಲಿಯೇ ಅವರು ಸಿಎಂ ಆಗಲಿದ್ದಾರೆ ಎಂದಿದ್ದರು.

ಡಿಕೆಶಿ ಇಂದು ಅಥವಾ ನಾಳೆ ಸಿಎಂ ಆಗುತ್ತಾರೆಂದು ಮೊಯ್ಲಿ ಆಗಲಿ, ಬೇರೆಯವರಾಗಲಿ ಹೇಳಿಲ್ಲ. ಮುಂದೊಂದು ದಿನ ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ಅದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ. ಈಗ ಸಿದ್ದರಾಮಯ್ಯ ಸಿಎಂ ಆಗಿದ್ದು, ಡಿಕೆ ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದಾರೆ. ಮುಂದೊಂದು ದಿನ ಯಾರಾದರೂ ಸಿಎಂ ಆಗಬೇಕೆಂದು ನಾನು ಬಯಸಬಹುದು; ಅವರು ಕಷ್ಟಪಟ್ಟರೆ, ಅವರಿಗೂ ನಾಳೆ ಪ್ರತಿಫಲ ಸಿಗುತ್ತದೆ.
- ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಚೀನಾದಲ್ಲಿ ಬೃಹತ್ ಥೋರಿಯಂ ನಿಕ್ಷೇಪ

ಬೀಜಿಂಗ್: ಚೀನಾದಲ್ಲಿ ಅಪಾರ ಪ್ರಮಾಣದ ಥೋರಿಯಂ ಖನಿಜದ ನಿಕ್ಷೇಪ ಇರುವುದು ಕಂಡುಬಂದಿದೆ. ಕಮ್ಯುನಿಸ್ಟ್ ದೇಶ ಸಾವಿರಾರು ವರ್ಷಗಳವರೆಗೂ ಇಡೀ ದೇಶದ ಇಂಧನ ಅಗತ್ಯವನ್ನು ನಿರಂತರ ಪೂರೈಸಿಕೊಳ್ಳಬಹುದಾದಷ್ಟು ಬೃಹತ್ ಪ್ರಮಾಣದ ಥೋರಿಯಂ ಖನಿಜದ ನಿಕ್ಷೇಪ ಹೊಂದಿದೆ.

ಹೊಸ ವಿವಿ ಬಂದ್ ಇಲ್ಲ

ಬೆಂಗಳೂರು: ಚಾಮರಾಜನಗರ ಸೇರಿ 9 ವಿವಿಗಳನ್ನು ಮುಚ್ಚುವ ನಿರ್ಧಾರದಿಂದ ಸರಕಾರ ಹಿಂದೆ ಸರಿಯುವ ಸಾಧ್ಯತೆ ಇದೆ. ಈ 9 ವಿವಿಗಳು ಅದೃಷ್ಟವಶಾತ್ ಕಾಂಗ್ರೆಸ್ ಶಾಸಕರಿರುವ ಜಿಲ್ಲೆಗಳಲ್ಲಿವೆ. ಇವು ಗಳಲ್ಲಿ ಕೆಲವು ಕಾಂಗ್ರೆಸ್ ಅವಧಿಯಲ್ಲೇ ಆರಂಭವಾಗಿದ್ದ ಕಾರಣ ಮುಚ್ಚುವುದು ಬೇಡ ಎನ್ನುವ ಬಗ್ಗೆ ಚಿಂತನೆ ನಡೆದಿದೆ.

ವಿವರಪುಟ → 2

ಮಾತಂದ್ರೆ ಮಾತು

ಸಂಸದರ ಸಂಖ್ಯೆ ರಾಜ್ಯದ ಜನಸಂಖ್ಯೆಯ ಮೇಲೆ ಅವಲಂಬಿತವಾಗಿದೆ. ಜನಸಂಖ್ಯೆ ಆಧಾರಿತ ಲೋಕಸಭಾ ಕ್ಷೇತ್ರಗಳ ಪುನರ್‌ವಿಂಗಡಣೆಯು ತಮಿಳುನಾಡಿನ ಪ್ರಾತಿನಿಧ್ಯದ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ ನೂತನ ದಂಪತಿಗಳು ಹೆಚ್ಚು ಮಕ್ಕಳನ್ನು ಪಡೆಯಬೇಕು.
- ಎಂ.ಕೆ.ಸ್ಟಾಲಿನ್ ತಮಿಳುನಾಡು ಸಿಎಂ

ಫನ್‌ತರಂಗ

- ರಘುಪತಿ ಶೃಂಗೇರಿ -



ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಕ್ಕಿಜ್ವರ

ಹಕ್ಕಿಜ್ವರ ಭೀತಿ: ಮಾರ್ಗಸೂಚಿ

ಬೆಂಗಳೂರು: ಹಕ್ಕಿ ಜ್ವರ ನಿಯಂತ್ರಣಕ್ಕೆ ಕೇಂದ್ರ ಸರಕಾರ ಮಾರ್ಗಸೂಚಿ ಬಿಡುಗಡೆಗೊಳಿಸಿದ ಬೆನ್ನಲ್ಲೇ ರಾಜ್ಯ ಸರಕಾರವೂ ಸೋಮವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಹಕ್ಕಿಜ್ವರ ಹೆಚ್ಚಾಗುತ್ತಿರುವ ಹೊತ್ತಲ್ಲಿ ಕೋಳಿ ಸೇವನೆ ಎಷ್ಟು ಸುರಕ್ಷಿತ? ಹಕ್ಕಿಜ್ವರದ ಭೀತಿ ಮಧ್ಯೆಯೂ ಕೋಳಿ ಸೇವನೆಗೆ ಏನೆಲ್ಲಾ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಎಂದು ಪಶು ಸಂಗೋಪನೆ ಇಲಾಖೆ ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಕೋಳಿ ಸೇವನೆಗೆ ಮಾರ್ಗಸೂಚಿ: 70 ಡಿಗ್ರಿ ಸೆಂಟಿಗ್ರೇಡ್ ಅಧಿಕ ಉಷ್ಣಾಂಶದಲ್ಲಿ ಕನಿಷ್ಠ 30 ನಿಮಿಷ ಕೋಳಿ ಬೇಯಿಸಿ ಕೋಳಿ ಮಾಂಸ ಮತ್ತು ಮೊಟ್ಟೆ ಸೇವಿಸಬಹುದು. ಕೋಳಿ ಮಾಂಸವನ್ನು ಅಡುಗೆಗೆ ತಯಾರು ಮಾಡುವವರು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಅಡುಗೆಗಾಗಿ ಕೋಳಿ ಮಾಂಸ ತಯಾರು ಮಾಡಿದ ಬಳಿಕ ನಂಜುನಾಶಕದಿಂದ ಕೈಗಳನ್ನು ಶುಚಿಗೊಳಿಸಿಕೊಳ್ಳಬೇಕು. ಹಸಿ ಕೋಳಿಮಾಂಸ, ಅದರ ದ್ರವಗಳು ಅಥವಾ ಬೇಯಿಸಿದ ಮೊಟ್ಟೆಯನ್ನು, ಬೇಯಿಸದೇ ಉಪಯೋಗಿಸುವ ಆಹಾರ ಪದಾರ್ಥಗಳು ಸಂಪರ್ಕಕ್ಕೆ ಬಾರದಂತೆ ಎಚ್ಚರಿಕೆ ವಹಿಸಬೇಕು. ಬೇಯಿಸದಿರುವ, ಅರೆಬೆಂದ ಮೊಟ್ಟೆಯನ್ನು ತಿನ್ನಬಾರದು. ಅಧಿಕ ಉಷ್ಣಾಂಶದ ವಾತಾವರಣದಲ್ಲಿ ವೈರಾಣು ಹೆಚ್ಚಿನ ಕಾಲ ಬದುಕುಳಿಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಮುಂಜಾಗ್ರತಾ ಕ್ರಮಗಳು

1. ಸಾರ್ವಜನಿಕರು ಅನಗತ್ಯವಾಗಿ ಕೋಳಿ ಫಾರಂಗೆ ಭೇಟಿ ನೀಡಬಾರದು
2. ಕೋಳಿ ಫಾರಂನಲ್ಲಿ ಕೆಲಸ ನಿರ್ವಹಿಸುವವರು ತಮ್ಮ ಬಟ್ಟೆ, ಶೂ, ಕೈ, ಕಾಲುಗಳಿಗೆ ನಂಜುನಾಶಕ ದ್ರಾವಣ ಸಿಂಪಡಿಸಬೇಕು
3. ಕೋಳಿ ಸಾಕಾಣಿಕೆಗೆ ಬೇಕಾಗುವ ಸಲಕರಣೆಗಳನ್ನು ಬೇರೆ ಕೋಳಿ ಫಾರಂನಿಂದ ಪಡೆಯಬೇಕಾದರೆ ಸ್ಯಾನಿಟೈಸೇಷನ್ ಮಾಡಬೇಕು ಮತ್ತು ನಂಜುನಾಶಕ ಅಳವಡಿಸಬೇಕು.
4. ಕೋಳಿ ಪಂಜರಗಳನ್ನು ನಿತ್ಯ ಶುಚಿ ಮಾಡಬೇಕು. ಆಹಾರ ಮತ್ತು ನೀರನ್ನು ಪ್ರತಿದಿನ ಬದಲಾಯಿಸಬೇಕು
5. ಕೋಳಿ ಫಾರಂನಲ್ಲಿ ಬೇರೆ ಹಕ್ಕಿಗಳು ಕೋಳಿಗಳ ಸಂಪರ್ಕಕ್ಕೆ ಬಾರದಂತೆ ಎಚ್ಚರಿಕೆ ವಹಿಸಬೇಕು

ಅನೋರಾ ಚಿತ್ರಕ್ಕೆ ಆಸ್ಕರ್ ಪ್ರಶಸ್ತಿ

ಲಾಸ್ ಏಂಜಲೀಸ್: 2025ರ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ಅದ್ದೂರಿಯಾಗಿ ನಡೆದಿದೆ. ಅತ್ಯುತ್ತಮ ಚಿತ್ರ, ನಿರ್ದೇಶನ, ನಟ, ನಟಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ ವಿಜೇತರ ಪಟ್ಟಿಯನ್ನು ಘೋಷಿಸಲಾಗಿದೆ.ಅನೋರಾ ಹಾಗೂ ದಿ ಬ್ರೂಟಲಿಸ್ಟ್ ಚಿತ್ರಗಳು ಹೆಚ್ಚು ಪ್ರಶಸ್ತಿಗಳನ್ನು ಪಡೆದಿವೆ. ಅತ್ಯುತ್ತಮ ನಟ ಪ್ರಶಸ್ತಿಗೆ ಆಡ್ರಿಯನ್ ಬ್ರಾಡಿ(ದಿ ಬ್ರೂಟ ಲಿಸ್ಟ್), ಅತ್ಯುತ್ತಮ ನಟಿ ಪ್ರಶಸ್ತಿಗೆ ಮೈಕಿ ಮ್ಯಾಡಿಸನ್ (ಅನೋರಾ) ಆಯ್ಕೆಯಾಗಿದ್ದಾರೆ.

ಭೀಕರ ಅಪಘಾತ: ನಾಲ್ವರು ಸಾವು

ಬಂಗಾರಪೇಟೆ: ತಾಲೂಕಿನ ಕುಪ್ಪನಹಳ್ಳಿ ಬಳಿಯ ಚೆನ್ನೈ-ಬೆಂಗಳೂರು ಕಾರಿಡಾರ್ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ಇನ್ನೋವಾ ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಎರಡು ವರ್ಷದ ಮಗು ಸೇರಿ ನಾಲ್ವರು ಮೃತಪಟ್ಟಿದ್ದಾರೆ. ಕಾರಿನಲ್ಲಿದ್ದ ಕೆಜಿಎಫ್ ತಾಲೂಕಿನ ಕಮ್ಮಸಂದ್ರ ಗ್ರಾಮದ ಮಹೇಶ (45), ಉದ್ವಿತ (2), ರತ್ನಮ್ಮ (60) ಹಾಗೂ ಬೈಕ್ ಸವಾರ ಮೃತರಾಗಿದ್ದಾರೆ. ಸುಶ್ಮಿತಾ, ವಿರುತ, ಸುಜಾತ, ಸುನಿಲ್ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹಂತಹಂತವಾಗಿ ಬಾಕಿ ಉಳಿದಿರುವ ಬಿಲ್ ಪಾವತಿ

ಗುತ್ತಿಗೆದಾರರಿಗೆ ಸಿಎಂ ಅಭಯ

ಬೆಂಗಳೂರು: ಸಮಾರು 30 ಸಾವಿರ ಕೋಟಿ ಬಾಕಿ ಮೊತ್ತವನ್ನು ಹಂತಹಂತವಾಗಿ ಬಿಡುಗಡೆ ಮಾಡುವ ಹೊರತಾಗಿಯೂ ಗುತ್ತಿಗೆದಾರರ ಸಂಘ, ಸರಕಾರದಲ್ಲಿ 'ಕಮಿಷನ್' ಹೆಚ್ಚಾಗಿದೆ ಎನ್ನುವ ಆರೋಪ ಇದೀಗ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಮವಾರ ಭೇಟಿಯಾದ ಗುತ್ತಿಗೆದಾರರ ನಿಯೋಗ ಕೂಡಲೇ ಬಾಕಿ ಬಿಲ್ ಬಿಡುಗಡೆ ಮಾಡುವಂತೆ ಆಗ್ರಹಪೂರ್ವಕ ಮನವಿ ಮಾಡಿತು. ಆದರೆ ಏಕಕಾಲಕ್ಕೆ ಈ ಪ್ರಮಾಣದ ಅನುದಾನ ಬಿಡುಗಡೆ ಮಾಡಲು ಸಾಧ್ಯವಿಲ್ಲ. ಹಂತಹಂತವಾಗಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಮೊತ್ತವನ್ನು ಪಾವತಿಸುವ ಭರವಸೆಯನ್ನು ಸಿದ್ದರಾಮಯ್ಯ ಅವರು ನೀಡಿದ್ದಾರೆ. ಈ ಭರವಸೆಗೆ ಪೂರ್ಣ ಪ್ರಮಾಣದಲ್ಲಿ ಒಪ್ಪದಿದ್ದರೂ, ಕಾದು ನೋಡುವ ತಂತ್ರ ಅನುಸರಿಸಲು ಗುತ್ತಿಗೆದಾರರ ಸಂಘ ತೀರ್ಮಾನಿಸಿದೆ.

→ 4

ಬಾಕಿಯಿರುವ ಮೊತ್ತಗಳ ಪಾವತಿಗೆ ಮನವಿ ಮಾಡಿದ್ದು, ಏಪ್ರಿಲ್‌ನಲ್ಲಿ ಸಾಧ್ಯವಾದಷ್ಟು ಬಾಕಿ ಬಿಲ್ಲುಗಳನ್ನು ಪಾವತಿಸಲು ಪ್ರಯತ್ನಿಸಲಾಗುವುದು. ಹಿಂದಿನ ಸರಕಾರದ ಅವಧಿಯಲ್ಲಿ ಅನುದಾನವಿಲ್ಲದಿದ್ದರೂ, ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು, ಕಾಮಗಾರಿ ಪ್ರಾರಂಭಿಸಿದ ಕಾರಣದಿಂದಾಗಿ ಬಾಕಿ ಬಿಲ್ಲುಗಳು ಹೆಚ್ಚಿವೆ. ಇದಕ್ಕೆ ನಮ್ಮ ಸರಕಾರ ಹೊಣೆಯಾಗಲು ಸಾಧ್ಯವೇ?
- ಸಿದ್ದರಾಮಯ್ಯ ಮುಖ್ಯಮಂತ್ರಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಮವಾರ ಭೇಟಿಯಾದ ಗುತ್ತಿಗೆದಾರರ ನಿಯೋಗ ಸನ್ಮಾನಿಸಿ, ಕೂಡಲೇ ಬಾಕಿ ಬಿಲ್ ಬಿಡುಗಡೆ ಮಾಡುವಂತೆ ಮನವಿ ಮಾಡಿತು.

ಐಐಟಿ ಬಾಬಾ ಬಂಧನ, ಬಿಡುಗಡೆ

ಜೈಪುರ: ಮಹಾಕುಂಭಮೇಳದಲ್ಲಿ ಜನಪ್ರಿಯತೆ ಗಳಿಸಿದ್ದ ಐಐಟಿ ಬಾಬಾ ಅಭಯ್ ಸಿಂಗ್ ಅವರನ್ನು ಹೋಟೆಲ್‌ನಲ್ಲಿ ಗಾಂಜಾ ಸಹಿತ ಬಂಧಿಸಲಾಗಿದ್ದು, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅಭಯ್ ಸಿಂಗ್ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕುತ್ತಿರುವ ವಿಡಿಯೊವೊಂದು ವ್ಯಾಪಕವಾಗಿ ಹರಿದಾಡಿತ್ತು. ವಿಡಿಯೊ ಆಧರಿಸಿ ಸ್ಥಳಕ್ಕೆ ಧಾವಿಸಿ ಸಿಂಗ್‌ನನ್ನು ವಿಚಾರಣೆಗೊಳ ಪಡಿಸಿದಾಗ ಆತನ ಬಳಿ ಅಲ್ಪ ಪ್ರಮಾಣದ ಗಾಂಜಾ ಪತ್ತೆಯಾಗಿದೆ.



ಹಿಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಳ

ದೆಹಲಿ: ಕೇಂದ್ರ ಸರಕಾರ ಜೋಳ, ಕಡಲೆ, ಸಾಸಿವೆ, ಮೆಣಸಿನಕಾಯಿ, ಆಲೂಗಡ್ಡೆ , ಹುರುಳಿ, ತೊಗರಿ ಬೇಳೆ, ಸೂರ್ಯಕಾಂತಿ ಸೇರಿ ಹಿಂಗಾರು ಬೆಳೆಗಳ ಬೆಂಬಲ ಬೆಲೆ ಹೆಚ್ಚಿಸಲಿದೆ. ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ಆಹಾರ ಪೂರೈಕೆ ಸಾಗಾಣಕೆ ವೆಚ್ಚವನ್ನು ಶೇ.8ಕ್ಕೆ ಇಳಿಸುವ ಗುರಿ ಹೊಂದಿದೆ. ರಾಷ್ಟ್ರೀಯ ಲಾಜಿಸ್ಟಿಕ್ಸ್ ನೀತಿ ಮತ್ತು ಗತಿ ಶಕ್ತಿ ಕಾರ್ಯಕ್ರಮ ಆರಂಭಿಸುವ ಮೂಲಕ ಸರಕಾರ, ಸಾಗಾಣಿಕೆ ವೆಚ್ಚವನ್ನು ಶೇ.13ರಿಂದ 14 ರಿಂದ ಶೇ.8ಕ್ಕೆ ಇಳಿಸಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಶಂಖನಾದದಿಂದ ಪರ್ವತ ಪ್ರದೇಶಗಳಲ್ಲಿ ಕಂಪನದ ತೀವ್ರತೆ ಹೆಚ್ಚಳ, ಹಿಮಪಾತ ಭೀತಿ

ಬದರಿನಾಥದಲ್ಲಿ ಶಂಖನಾದ ನಿಷೇಧ

ಡೆಹರಾಡೂನ್: ಹಿಮಪಾತ ಭೀತಿ ಎದುರಾಗಿರುವುದರಿಂದ ಉತ್ತರಾಖಂಡದ ಚಮೋಲಿ ಜಿಲ್ಲೆಯ ಪ್ರಸಿದ್ಧ ತೀರ್ಥಕ್ಷೇತ್ರ ಬದರಿನಾಥ ದೇವಾಲಯದಲ್ಲಿ ಇನ್ಮುಂದೆ 'ಶಂಖನಾದ' ಮೊಳಗಿಸುವುದನ್ನು ನಿಷೇಧಿಸ ಲಾಗಿದೆ ಎಂದು ಸ್ಥಳೀಯ ಅರ್ಚಕರು ತಿಳಿಸಿದ್ದಾರೆ.

ಹಿಮಪಾತಕ್ಕೂ, ಶಂಖನಾದಕ್ಕೂ ಸಂಬಂಧವಿದೆ. ಶಂಖನಾದ ಮೊಳಗಿಸಿದಾಗ ಉಂಟಾಗುವ ಶಬ್ದ ತರಂಗಗಳು ಸುತ್ತಲಿನ ಪರ್ವತ ಪ್ರದೇಶಗಳಲ್ಲಿ ಪ್ರತಿಧ್ವನಿ ಉಂಟು ಮಾಡಿ ಕಂಪನದ ತೀವ್ರತೆ ಹೆಚ್ಚಿಸಿ ಪರ್ವತಗಳ ಮೇಲ್ಮೈನಲ್ಲಿನ ಹಿಮ ಬಿರುಕು ಬಿಡುವಂತೆ ಮಾಡುತ್ತದೆ ಎಂದು ಅರ್ಚಕರು ವಿವರಿಸಿದ್ದಾರೆ. ಹಿಮಾವರಿತ ಪರ್ವತಗಳಿಂದ ಆವೃತವಾಗಿರುವ ಈ ಸೂಕ್ಷ್ಮ ಪರಿಸರದಲ್ಲಿ ಸಣ್ಣ ಕಂಪನವೂ ತುಂಬಾ ದೊಡ್ಡ ಪರಿಣಾಮ ಬೀರಬಹುದು. ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಈ ವಿಚಾರದಲ್ಲಿ ಎಚ್ಚರಿಸಲಾಗುತ್ತಿದೆ ಎಂದಿದ್ದಾರೆ. ಧಾರ್ಮಿಕ ಪದ್ಧತಿ ಮತ್ತು ವೈಜ್ಞಾನಿಕ ತರ್ಕ ಎರಡಕ್ಕೂ ದೇವಾಲಯದ ಬದ್ಧತೆಯನ್ನು ಅವರು ಪ್ರತಿಪಾದಿಸಿದ್ದಾರೆ.

ಹಿಂದಿನಿಂದಲೂ ಶಂಖನಾದವಿಲ್ಲ

ಬದರಿನಾಥ ಧಾಮದಲ್ಲಿ ನೀಲಕಂಠ ಪರ್ವತ, ನರ ನಾರಾಯಣ, ಕಾಂಚನಗಂಗಾ, ಸತೋಪಂಥ್, ಮನಾ ಮತ್ತು ಕುಬೇರ್ ಪರ್ವತಗಳಿವೆ. ಹಿಮಾವೃತ ಶಿಖರಗಳಿವೆ. ಹಿಂದೆ ಬದರಿನಾಥದಿಂದ ಮಾನಾ ಪ್ರದೇಶದವರೆಗೂ ಭಾರೀ ಹಿಮಪಾತವಾಗುತ್ತಿತ್ತು. ಹಿಮಾವೃತ ಶಿಖರಗಳಿಂದಾಗುವ ಹಿಮಪಾತದ ಭಯದಿಂದಾಗಿಯೇ ಬದರಿನಾಥ ದೇವಾಲಯದಲ್ಲಿ ಶಂಖ ಊದುತ್ತಿರಲಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಓಂ ಪ್ರಕಾಶ್ ಭಟ್ ತಿಳಿಸಿದ್ದಾರೆ.

ಹಿಮಪಾತದ ಅಪಾಯ

ಬದರಿನಾಥದ ಮುಖ್ಯ ದೇವಾಲಯ ಹೊರತುಪಡಿಸಿ ಬದರಿಪುರಿಯ ಗಮನಾರ್ಹ ಭಾಗವು ಹಿಮಕುಸಿತದ ಅಪಾಯದಲ್ಲಿದೆ ಎಂದು ಪರಿಸರವಾದಿ ಮತ್ತು ಚಿಪ್ಕೊ ಚಳುವಳಿ ನಾಯಕ ಚಂಡಿ ಪ್ರಸಾದ್ ಭಟ್ ಎಚ್ಚರಿಸಿದ್ದಾರೆ. ಈವರೆಗಿನ ಹಿಮಪಾತದ ಸಂದರ್ಭಗಳನ್ನು ಗಮನಿಸಿದರೆ ಎಲ್ಲ ದಶಕಗಳಲ್ಲಿಯೂ ಈ ಅವಧಿಯಲ್ಲಿ ಬದರಿಪುರಿ ಹಿಮಪಾತದಿಂದ ಹಾನಿಗೊಳಗಾಗಿದೆ. 2014ರಲ್ಲಿ ಬದರಿನಾಥದ ನಾರಾಯಣ ಪರ್ವತದಲ್ಲಿ ದೊಡ್ಡ ಹಿಮಪಾತವಾಗಿತ್ತು ಎಂದು ಐದು ದಶಕಗಳಿಂದ ಹಿಮಾಲಯ ಪರಿಸರ ರಕ್ಷಣೆ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿರುವ, ಪದ್ಮವಿಭೂಷಣ, ಪದ್ಮಶ್ರೀ, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ 92 ವರ್ಷದ ಭಟ್ ಹೇಳಿದ್ದಾರೆ.

ಬದರಿನಾಥದಲ್ಲಿ ಅಭಿಷೇಕದ ಸಂದರ್ಭದಲ್ಲಿ ಶಂಖವನ್ನು ಬಳಸಲಾಗುತ್ತದೆ. ಇದನ್ನು ದೇವರಿಗೆ ಅರ್ಪಿಸುವ ನೈವೇದ್ಯ ಪವಿತ್ರಗೊಳಿಸಲು ಸಹ ಬಳಸಲಾಗುತ್ತದೆ. ಆದರೆ ಈಗ ಶಂಖ ಊದುವುದನ್ನು ನಿಷೇಧಿಸಲಾಗಿದೆ. ಇದು ಹಿಮಕುಸಿತವಾಗದಂತೆ ತಡೆಯಬಹುದು.
- ಭುವನ್ ಚಂದ್ರ ಉನಿಯಾಲ್ ಬದರಿನಾಥದ ಧಾರ್ಮಿಕ ಅಧಿಕಾರಿ

ಬಂಧಿತರ ಸಂಖ್ಯೆ ಏಳಕ್ಕೆ ಏರಿಕೆ | ವಿವಿಧ ಆಯಾಮಗಳಲ್ಲಿ ತನಿಖೆ

ಉದ್ಯಮಿ ಅಪಹರಣ ಜಾರಕಿಹೊಳಿ ಆಪ್ತೆ ವಶ

ಬೆಳಗಾವಿ: ಮೂಡಲಗಿ ತಾಲೂಕಿನ ರಾಜಾಪುರ ಗ್ರಾಮದ ರಿಯಲ್ ಎಸ್ಟೇಟ್ ಉದ್ಯಮಿ ಬಸವರಾಜ ಅಂಬಿ ಎಂಬುವವರನ್ನು ಫೆಬ್ರವರಿ 18 ರಂದು ಅಪಹರಿಸಿ ₹5 ಕೋಟಿಗೆ ಬೇಡಿಕೆ ಇಟ್ಟ ಪ್ರಕರಣಕ್ಕೆ ಸಂಬಂಧಿಸಿ, ಮುಖ್ಯ ಆರೋಪಿ ಗೋಕಾಕ ತಾಲೂಕಿನ ಕೊಣ್ಣೂರಿನ ಮಂಜುಳಾ ರಾಮನ ಗಟ್ಟಿ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಕಾರ್ಯ ಕರ್ತೆಯಾಗಿರುವ ಮಂಜುಳಾ, ಸಚಿವ ಸತೀಶ್ ಜಾರಕಿಹೊಳಿ ಆಪ್ತ ವಲಯ ದಲ್ಲೂ ಗುರುತಿಸಿಕೊಂಡಿದ್ದಾರೆ ಎನ್ನಲಾಗಿದೆ.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಎಸ್‌ಪಿ ಡಾ.ಭೀಮಾಶಂಕರ ಗುಳೇದ, ಅಪಹ ರಣ ಪ್ರಕರಣದಲ್ಲಿ ಮಂಜುಳಾ ಪ್ರಮುಖ ಪಾತ್ರ ವಹಿಸಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ. ರಾಜಕೀಯ ಪಕ್ಷ ಮತ್ತು ಸಂಘಟನೆಯೊಂದಿಗೆ ಮಹಿಳೆ ಗುರುತಿಸಿ ಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

- ಬಂಧಿತರಿಂದ ನಾಲ್ಕು ವಾಹನ, 40 ಗ್ರಾಂ ಚಿನ್ನ, ಮೊಬೈಲ್‌ಗಳು ವಶ
- ಮಂಜುಳಾ ರಾಮನಗಟ್ಟಿ ಭಾಗಿಯಾದ ವಂಚನೆ ಪ್ರಕರಣಗಳೂ ಬಯಲು

ನಮ್ಮ ಆಪ್ತರು ಇದ್ದರೂ ಇರಬಹುದು, ಇಲ್ಲ ಎಂದು ಹೇಳಲಾಗಲ್ಲ. ನಾವೇನು ಕಿಡ್ನ್ಯಾಪ್ ಮಾಡಲು ಹೇಳಿರುವುದಿಲ್ಲ. ಅವರ ವೈಯಕ್ತಿಕ ಸಮಸ್ಯೆ. ಈ ರೀತಿಯ ಸಮಸ್ಯೆ ಬಂದಾಗ ಫೋಟೊ ಹರಿದಾಡುತ್ತವೆ. ಪ್ರತಿದಿನ ನೂರು ಜನ ಬಂದು ಫೋಟೊ ತೆಗೆದುಕೊಳ್ಳುತ್ತಾರೆ. ಯಾರು ಎಂದು ನೋಡಲು ಆಗುವುದಿಲ್ಲ. ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.
- ಸತೀಶ್ ಜಾರಕಿಹೊಳಿ ಲೋಕೋಪಯೋಗಿ ಸಚಿವ

ಸಮಾಚಾರ ಸಣ್ಣದಲ್ಲ

ಮಹಿಳೆ ಬ್ಯಾಗ್‌ನಲ್ಲಿದ್ದ 4 ಲಕ್ಷ ಕಳವು

ಹಾಸನ: ಬಸ್‌ನಲ್ಲಿ ಬರುವಾಗ ಮಹಿಳೆಯ ಬ್ಯಾಗಿನಲ್ಲಿದ್ದ 4 ಲಕ್ಷ ರೂ.ಹಣ ಕಳವು ಮಾಡಲಾಗಿದೆ. ಕಲ್ಯಾಣಪುರದ ನಿವಾಸಿ ನಳಿನಾ ಎಂಬ ಮಹಿಳೆ ಕುಟುಂಬ ಸಮೇತ ಮಹಾರಾಷ್ಟ್ರದಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಹೀಗಾಗಿ ಕಲ್ಯಾಣಪುರದ ತಮ್ಮ ಸೈಟ್ ಮಾರಾಟ ಮಾಡಿ ಫೆ.28 ರಂದು ಮಹಾರಾಷ್ಟ್ರದಿಂದ ಪತಿ ರವಿಕುಮಾರ್ ಜತೆ ಕಲ್ಯಾಣಪುರಕ್ಕೆ ಬಂದು, ಸೈಟ್ ಮಾರಾಟ ಮಾಡಿ ಹಣದೊಂದಿಗೆ ಬೆಂಗಳೂರಿಗೆ ತೆರಳುತ್ತಿದ್ದರು. ಮಾ.2 ರಂದು ಖಾಸಗಿ ವಾಹನದಲ್ಲಿ ಹಗರೆಗೆ, ಅಲ್ಲಿಂದ ಹಾಸನಕ್ಕೆ ಕೆಎ-18-ಎಫ್-0894 ನಂಬರಿನ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬಂದರು. ಹೊಸ ಬಸ್‌ನಿಲ್ದಾಣದಲ್ಲಿ ಇಳಿದು ನೋಡಿದಾಗ ಬ್ಯಾಗಲ್ಲಿ ಹಣ ಇರಲಿಲ್ಲ. ಈ ಸಂಬಂಧ ಬಡಾವಣೆ ಠಾಣೆಗೆ ದೂರು ನೀಡಲಾಗಿದೆ

ಹುಂಡಿ ಹಣ ಕದಿಯಲು ಬಂದು ಸಿಕ್ಕಿಬಿದ್ದ ಖದೀಮ

ಬೇಲೂರು: ಪಟ್ಟಣದ ನೆಹರುನಗರ ಅಯ್ಯಪ್ಪ ಸ್ವಾಮಿ ದೇವಾಲಯದ ಹುಂಡಿ ಕದಿಯಲು ಬಂದಿದ್ದ ಕಳ್ಳ, ಕಾವಲುಗಾರನ ಸಮಯಪ್ರಜ್ಞೆಯಿಂದಾಗಿ ಸಿಕ್ಕಿಬಿದ್ದಿದ್ದಾನೆ. ದೇವರಾಜು ಎಂಬುವರು ದೇವಸ್ಥಾನದ ಖಜಾಂಚಿಯಾಗಿದ್ದು, ಕಾವಲಿಗೆ ರೇವಣ್ಣ ಎಂಬುವರನ್ನು ನೇಮಿಸಿಕೊಂಡಿದ್ದರು. ಮಾ.2 ರಂದು ರಾತ್ರಿ 8.15 ರಲ್ಲಿ ನೆಹರು ನಗರಕ್ಕೆ ಹೋಗಿದ್ದರು. ಈ ನಡುವೆ ಅಲ್ಲಿಗೆ ಎಂಟ್ರಿಕೊಟ್ಟ ಪಟ್ಟಣದ ಕರಿಯಮ್ಮ ಬೀದಿಯ ಲೋಕೇಶ ಆಚಾರ್ ಎಂಬಾತ ಹುಂಡಿ ಕಳವು ಮಾಡಲು ಸುತ್ತಿಗೆ ಮತ್ತು ಉಳಿಯಿಂದ ಒಡೆಯುತ್ತಿದ್ದ. ಇದನ್ನು ಗಮನಿಸಿದ ರೇವಣ್ಣ, ಕೂಡಲೇ ಆತನನ್ನು ಹಿಡಿದು ಫೋನ್ ಮಾಡಿ ದೇವರಾಜ್‌ಗೆ ವಿಷಯ ತಿಳಿಸಿದರು. ಅಲ್ಲಿಗೆ ದೌಡಾಯಿಸಿದ ದೇವರಾಜು ಮತ್ತು ಇತರರು ಸೇರಿ ಖದೀಮನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ನಂದಿ ರಥಯಾತ್ರೆ ಅದ್ಧೂರಿ ಮೆರವಣಿಗೆ

ಮಂಡ್ಯ: ರಾಜ್ಯದಲ್ಲಿ ಡಿಸೆಂಬರ್ 31ರಿಂದ ಮಾರ್ಚ್ 29ವರೆಗೆ ನಡೆಯುತ್ತಿರುವ ನಂದಿ ರಥಯಾತ್ರೆಯು ಮಾರ್ಚ್ 4ರಂದು ಮಂಡ್ಯ ಪ್ರವೇಶಿಸಲಿದ್ದು, ನಗರದಲ್ಲಿ ಅದ್ಧೂರಿ ಮೆರವಣಿಗೆ ನಡೆಸಲಾಗುವುದು ಎಂದು ಹೊಸಹಳ್ಳಿ ಅನಂತರಾವ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 04ರ ಸಂಜೆ 04 ಗಂಟೆಗೆ ನಂದಿ ರಥಯಾತ್ರೆ ಮಂಡ್ಯ ಪ್ರವೇಶಿಸಲಿದ್ದು, ನಗರದ ಹೊಸಹಳ್ಳಿಯಲ್ಲಿ ಮಂಗಳವಾದ್ಯ, ವಿವಿಧ ಕಲಾತಂಡಗಳು ಹಾಗೂ ಸ್ಥಳೀಯ ಹಳ್ಳಿಕಾರ್ ನಂದಿಗಳೊಳಗೊಂಡಂತೆ ಭವ್ಯ ಮೆರವಣಿಗೆಯನ್ನು ಆರಂಭಿಸಲಾಗುವುದು ಎಂದರು. ನಗರದ ಹೊಸಹಳ್ಳಿ ವೃತ್ತದಿಂದ ವಿವಿ ರಸ್ತೆ, ಮಹಾವೀರ ವೃತ್ತ, ಜಯಚಾಮರಾಜೇಂದ್ರ ವೃತ್ತ, ಆರ್‌ಪಿ ರಸ್ತೆ, ಕೆ.ಆರ್. ರಸ್ತೆಯಲ್ಲಿ ಸಾಗಿ ರಾಘವೇಂದ್ರ ದೇವಾಲಯದಲ್ಲಿ ಮೆರವಣಿಗೆ ಸಮಾಪ್ತಿಗೊಳ್ಳುವುದು ಎಂದು ಹೇಳಿದರು. ಹಳ್ಳಿಕಾರ್ ಸಂರಕ್ಷಣಾ ಸಮಿತಿಯ ಅಧ್ಯಕ್ಷ ರವಿ ಪಟೇಲ್ ಮಾತನಾಡಿ, ಮೆರವಣಿಗೆಯಲ್ಲಿ 25 ಎತ್ತಿನ ಗಾಡಿಗಳ್ಳಿ ದೇಸಿ ರಾಸುಗಳು ಹಾಗೂ 20ಕ್ಕೂ ಹೆಚ್ಚು ಹಳ್ಳಿಕಾರ್ ರಾಸುಗಳು ಪಾಲ್ಗೊಳ್ಳಲಿದ್ದು, ಜಿಲ್ಲೆಯ ಯುವಕರು ಹಾಗೂ ರೈತರು ಮೆರವಣಿಗೆಯಲ್ಲಿ ಭಾಗವಹಿಸಿ, ಯಶಸ್ಸಿಗೆ ಕೈ ಜೋಡಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸೋಮಶೇಖರ್, ಮಂಚೇಗೌಡ, ರಾಮಕೃಷ್ಣ ಇದ್ದರು.

ಎಸ್ಸಿಎಸ್ಪಿ ಹಣ ಗ್ಯಾರಂಟಿಗೆ ಬಳಕೆ

ಕಾಂಗ್ರೆಸ್ ಸರಕಾರದ ನಡೆಗೆ ಸಂಸದ ಯದುವೀರ್ ಖಂಡನೆ

ಹಾಸನ: ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸದಲಾಗದೆ ಕಾಯ್ದೆ ಉಲ್ಲಂಘಿಸಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಮೀಸಲಿಟ್ಟಿದ್ದ ಹಣವನ್ನುಸರಕಾರ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ದೂರಿದರು.

ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಸಮುದಾಯಗಳಿಗೆ ಮೀಸಲಿಟ್ಟ ಹಣವನ್ನು ಮೂಲ ಉದ್ದೇಶಕ್ಕೇ ಬಳಸಬೇಕು. ಸರಕಾರ ಉಲ್ಲಂಘನೆ ಮಾಡಿದೆ.ಇದರ ವಿರುದ್ಧ ನಮ್ಮ ಹೋರಾಟ ನಡೆಯುತ್ತಿದೆ ಎಂದರು.ಮುಂದೆಯೂ 14,500 ಹಣ ದುರ್ಬಳಕೆ ಮಾಡುವ ಬಗ್ಗೆ ಮಾಹಿತಿ ಇದೆ. ಗ್ಯಾರಂಟಿಗೆ ಹಣ ಹೊಂದಿಸುವ ಯೋಗ್ಯತೆ ಇಲ್ಲದೆ ದಲಿತರ ಹಣ ದುರ್ಬಳಕೆ ಮಾಡುತ್ತಿರುವುದು ವಿಷಾದಕರ ಎಂದರು.

ಸಿನಿಮಾ ಕಲಾವಿದರಿಗೆ ಡಿಸಿಎಂ ಡಿಕೆಶಿ ವಾರ್ನಿಂಗ್ ವಿಚಾರ ಕುರಿತ ಪ್ರಶ್ನೆಗೆ ಚಲನಚಿತ್ರ ನಟರು, ಹೋರಾಟದಲ್ಲಿ ಅಥವಾ ಉತ್ಸವದಲ್ಲಿ ಪಾಲ್ಗೊಳ್ಳಬೇಕೋ, ಬೇಡವೋ, ಎಂಬುದು ಅವರ ಆಯ್ಕೆ, ಅವರೇ ತೀರ್ಮಾನ ಮಾಡಬೇಕಾಗುತ್ತದೆ ಎಂದರು.

ಚಲನಚಿತ್ರದವರು ಯಾವುದೇ ಪಕ್ಷಕ್ಕೆ ಸೇರಿರಲ್ಲ, ಅವರನ್ನು ಬಂದಿಲ್ಲ ಎಂದು ಪ್ರಶ್ನೆ ಮಾಡುವುದು ಸೂಕ್ತವಲ್ಲ. ಸರ್ವಾಧಿಕಾರಿ ವರ್ತನೆ ಬಿಡಬೇಕು, ಅದು ಅವರ ಅಹಂಕಾರ ತೋರಿಸುತ್ತೆ ಎಂದು ತಿರುಗೇಟು ನೀಡಿದರು.

ಒಳ ಮೀಸಲಾತಿ ಹಂಚಿಕೆ ಜನಸಂಖ್ಯೆಗೆ ಅನುಗುಣವಾಗಲಿ ವೈಜ್ಞಾನಿಕವಾಗಿ ಆಗಬೇಕು ಎಂದು ಪ್ರಶ್ನೆಗೆ ಉತ್ತರಿಸಿದರು. ಸಕಲೇಶಪುರ ಶಾಸಕ ಹಾಗೂ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜು ಮಾತನಾಡಿ, ಮತ್ತೆ 14,885 ಕೋಟಿ ಪಡೆಯಲು ಹುನ್ನಾರ ನಡೆದಿದೆ. ಇದರ ವಿರುದ್ಧ ನಾವು ವಿಧಾನ ಸೌಧದ ಒಳಗೆ ಮತ್ತು ಹೊರಗೆ ಹೋರಾಟ ಮಾಡುತ್ತೇವೆ, ಎಸ್‌ಸಿ/ಎಸ್ಟಿ ನಿಗಮ ಹೊರತು ಪಡಿಸಿ ಬೇರೆ ನಿಗಮಗಳಲ್ಲಿ ಏಕೆ ಹಣ ತೆಗೆದಿಲ್ಲ ಎಂದು ಪ್ರಶ್ನಿಸಿದರು. ಹೀಗಿದ್ದರೂ ದಲಿತ ಸಚಿವರು ಪ್ರಶ್ನೆ ಮಾಡುತ್ತಿಲ್ಲ ಎಂದು ಬೇಸರ ಹೊರ ಹಾಕಿದ ಅವರು, ತಳ ಸಮುದಾಯಕ್ಕೆ ನ್ಯಾಯ ಕೊಡಿಸಲು ನಮ್ಮ ಹೋರಾಟ ನಿರಂತರ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಸೇರಿ ಹಲವರಿದ್ದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಮಾತನಾಡಿದರು.

ಕೇಂದ್ರ ಸರಕಾರದ ಮೇಲೆ ಗೂಬೆ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತು ಸಿಎಂ ಮಾಡಿರುವ ಆರೋಪಕ್ಕೆ ತಮ್ಮ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದ ಯದುವೀರ್, ಎಂಪಿ ಕ್ಷೇತ್ರಗಳು ಕಡಿಮೆ ಆಗಲ್ಲ ಅಂತ ಗೃಹ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದರು.

ಪ್ರತಿಭಟನೆ-ಡಿಸಿಗೆ ಮನವಿ: ನಂತರ ಎಸ್‌ಸಿ/ಎಸ್‌ಟಿ, ಟಿಎಸ್‌ಪಿ ಯೋಜನೆ ಬೇರೆ ಉದ್ದೇಶಕ್ಕೆ ಬಳಕೆ ಮಾಡುತ್ತಿರುವುದನ್ನು ಖಂಡಿಸಿ ಯದುವೀರ್ ನೇತೃತ್ವದಲ್ಲಿ ಪ್ರತಿಭಟನೆ ಸಹ ನಡೆಸಲಾಯಿತು. ಬಿಜೆಪಿ ಕಚೇರಿಯಿಂದ ಮೆರವಣಿಗೆ ಹೊರಟ ಮುಖಂಡರು ಹಾಗೂ ಕಾರ್ಯಕರ್ತರು, ಡಿಸಿ ಕಚೇರಿ ಆವರಣ ತಲುಪಿ ಕೆಲ ಹೊತ್ತು ಪ್ರತಿಭಟನೆ ನಡೆಸಿ ರಾಜ್ಯ ಸರಕಾರದ ವಿರುದ್ಧ ಘೋಷಣೆ ಕೂಗಿದರು. ಯಾವುದೇ ಕಾರಣಕ್ಕೂ ಪರಿಶಿಷ್ಟರಿಗೆ ಮೀಸಲಿಟ್ಟಿರುವ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಬಾರದು ಎಂದು ಆಗ್ರಹಿಸಿದರು. ನಂತರ ಡಿಸಿ ಸಿ.ಸತ್ಯಭಾಮ ಅವರಿಗೆ ಮನವಿ ಸಲ್ಲಿಸಿದರು.

ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ರಾಮನಗರ: ಕಳೆದ 24 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಚನ್ನಪಟ್ಟಣ ಪೂರ್ವಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

1999ರಲ್ಲಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ವಿಧ್ವಂಸಕ ಕೃತ್ಯ ಮತ್ತು ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿ 6 ಪ್ರಕರಣಗಳಲ್ಲಿ ಭಾಗಿಯಾಗಿದ್ದ. 2001ನೇ ಇಸವಿಯಿಂದ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ಮಹಾರಾಷ್ಟ್ರ ರಾಜ್ಯದ ಅಹಮದ್‌ನಗರದಲ್ಲಿ ತಲೆಮರೆಸಿಕೊಂಡಿದ್ದ.

ಈ ಸಂಬಂಧ ವಿಚಾರಣಾ ನ್ಯಾಯಾಲಯವು ಆರೋಪಿಯನ್ನು ಹಾಜರುಪಡಿಸುವಂತೆ ಪೊಲೀಸರಿಗೆ ಸೂಚನೆ ನೀಡಿತ್ತು. ಆರೋಪಿಯ ಬಗ್ಗೆ ಮಾಹಿತಿ ಕಲೆಹಾಕಿದ ಪೊಲೀಸರು, ಪತ್ತೆಮಾಡಿ ವಶಕ್ಕೆ ಪಡೆದು, ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ. ಸಧ್ಯ ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ರಾಮನಗರ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. 2011ಯಲ್ಲಿ ಆರೋಪಿಯ ವಿರುದ್ಧ 498ಎ, 506 ಅಡಿ ಪ್ರಕರಣ ದಾಖಲಾಗಿತ್ತು. ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾಗಿ ತಲೆಮರೆಸಿಕೊಂಡಿದ್ದ.

ಕೋಲಾರದ ವಾಸನ್ ಕಣ್ಣಿನ ಆಸ್ಪತ್ರೆಯಲ್ಲಿ ಡಾ.ಕಾವ್ಯ ಅವರ ನೇತೃತ್ವದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಿತು.

ನಿಂಗಯ್ಯ ಅವರ ಪುಣ್ಯ ಸ್ಮರಣೆ

ಚಿಕ್ಕನಾಯಕನಹಳ್ಳಿ: ಸಾಮಾಜಿಕ ಚಿಂತಕ ದಿ.ನಿಂಗಯ್ಯ ಅವರ ಮೊದಲನೆ ವರ್ಷದ ಪುಣ್ಯ ಸ್ಮರಣೆ ಇಂದು ಗೋಡೆಕೆರೆ ಸಮೀಪದ ಸೋಮನಹಳ್ಳಿ ಗ್ರಾಮದಲ್ಲಿ ಏರ್ಪಡಿಸಲಾಗಿದೆ ಎಂದು ಮಾಜಿ ಜಿ.ಪಂ ಸದಸ್ಯ ಹಾಗು ರಾಜ್ಯ ಉಪ್ಪಾರ ಸಂಘದ ಉಪಾಧ್ಯಕ್ಷ ಎಸ್.ಎನ್.ಕಲ್ಲೇಶ್ ತಿಳಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು ನಿಂಗಪ್ಪ ಅವರ ಸ್ವಾಭಿಮಾನದ ವ್ಯಕ್ತಿತ್ವವನ್ನು ನಾವು ಬಾಲ್ಯದಲ್ಲಿಯೇ ಮೈಗೂಡಿಸಿಕೊಂಡಿದ್ದೇವೆ. ಅವರ ಸಮಾಜವಾದಿ ನಿಲುವುಗಳನ್ನು ಅವರ ಮಗನಾಗಿ ಮುಂದುವರೆಸಿಕೊಂಡು ಹೋಗಲು ಸ್ಮರಣ ಮಂದಿರದ ಪ್ರಾರಂಭೋತ್ಸವ, ಅನ್ನದಾನ ಹಾಗು ಸವಿನೆನಪು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಹೊಸದುರ್ಗ ಭಗೀರಥ ಪೀಠದ ಡಾ. ಪುರುಷೋತ್ತಾಮನಂದಪುರಿ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಲಿದ್ದು ಗೋಡೆಕೆರೆ ಮಹಾಸಂಸ್ಥಾನದ ಚರ ಪಟ್ಟಾಧ್ಯಕ್ಷರು ಶ್ರೀ ಮೃತ್ಯುಂಜಯ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಸಂಸ್ಮರಣಾ ಸ್ಮಾರಕದ ಉದ್ಘಾಟನೆಯನ್ನು ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ ನೆರವೇರಿಸಲಿದ್ದಾರೆ. ಕಾರ್ಯಕ್ರಮಕ್ಕೆ ತಾಲ್ಲೂಕಿನ ಎಲ್ಲಾ ಸಾರ್ವಜನಿಕ ಬಂಧುಗಳು, ಪ್ರೀತಿ ಪಾತ್ರರು ಹಾಗು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

30 ಲಕ್ಷ ವೆಚ್ಚದಲ್ಲಿ ಸ್ಮಾರಕ ನಿರ್ಮಾಣ

ನಮ್ಮ ತಂದೆಯವರು ಇಹಲೋಕ ತ್ಯಜಿಸಿ ಒಂದು ವರ್ಷವಾಗಿದೆ. ಅವರ ಆಸೆಯಂತೆ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಿದ್ದೆವು. ನಮ್ಮ ಬಂಧು ಬಳಗದವರೊಂದಿಗೆ ಚರ್ಚಿಸಿ ಶಾಶ್ವತವಾಗಿ ತಂದೆಯ ನೆನಪು ಉಳಿಯುವ ಸಲುವಾಗಿ ಮತ್ತು ಮುಂದೆ ನಮ್ಮ ಮಕ್ಕಳಿಗೂ ಅವರ ಬಗ್ಗೆ ತಿಳಿಯಲೆಂದು ಸ್ಮಾರಕ ರೂಪದ ಮಂದಿರ ನಿರ್ಮಿಸಿ ತಂದೆಯ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸಿದ್ದೇವೆ. ತಿಪಟೂರಿನ ಶಿಲ್ಪಿ ಸತ್ಯ ಅವರು ಇಲ್ಲಿ ಬಂದು ಕೆಲಸ ಮಾಡಿದ್ದಾರೆ ಎಂದು ಸ್ಮರಿಸಿದರು.

ವರದಹಳ್ಳಿಗೆ ಪಶು ಇಲಾಖೆ ಆಯುಕ್ತೆ ಶ್ರೀರೂಪಾ ಭೇಟಿ

ಚಿಕ್ಕಬಳ್ಳಾಪುರ: ತಾಲೂಕಿನ ವರದಹಳ್ಳಿ ಗ್ರಾಮದಲ್ಲಿ ಹಕ್ಕಿಜ್ವರ ಪ್ರಕರಣ ಪತ್ತೆಯಾದ ಹಿನ್ನೆಲೆಯಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯ ಆಯುಕ್ತರಾದ ಶ್ರೀರೂಪಾ ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಕ್ಕಿಜ್ವರದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮತ್ತು ಪಶುವೈದ್ಯಕೀಯ ಇಲಾಖೆ ಅಧಿಕಾರಿಗಳು ವರದಹಳ್ಳಿ ಗ್ರಾಮದಲ್ಲಿ ಕೈಗೊಂಡಿರುವ ಹಕ್ಕಿಜ್ವರ ನಿಯಂತ್ರಣಕ್ಕೆ ಸಂಬಂಧಿಸಿದ ಮುಂಜಾಗ್ರತಾ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿದ ಆಯುಕ್ತರು ಮಾಧ್ಯಮದೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಾತ್ರ ಹಕ್ಕಿಜ್ವರ ಕೋಳಿಗಳಲ್ಲಿ ಮಾತ್ರ ಕಾಣಿಸಿಕೊಂಡಿದೆ.ಇದು ಇತರೆಡೆ ಹಬ್ಬದಂತೆ ಅಲ್ಲಿಯೇ ನಿಯಂತ್ರಣ ಮಾಡಲು ಇಲಾಖೆ ಸಾಕಷ್ಟು ಎಚ್ಚರಿಕೆ ವಹಿಸಿದೆ.ಈ ಸಂಬಂಧ ಗಡಿ ಜಿಲ್ಲೆಗಳಲ್ಲಿ ಕೋಳಿ ಹಾಗೂ ಜಾನುವಾರು ಸಂತೆಗಳ ನಿಷೇಧ ಮಾಡುವ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಬಿಡಲಾಗಿದೆ.ಪರಿಸ್ಥಿತಿಯನ್ನು ಅವಲೋಕನ ಮಾಡಿ ಈ ಬಗ್ಗೆ ನಿರ್ಧಾರವನ್ನು ಕೂಗೊಳ್ಳುತ್ತಾರೆ ಎಂದರು.

ಹಕ್ಕಿಜ್ವರ ಕಂಡುಬಂದಿರುವ ಚಿಕ್ಕಬಳ್ಳಾಪುರದ ವರದಹಳ್ಳಿ ಗ್ರಾಮದಲ್ಲಿ ಕೇಂದ್ರ ಸರಕಾರದ ಎಸ್ ಒಪಿ ಪ್ರಕಾರ ಜಿಲ್ಲಾಡಳಿತ ಮತ್ತು ಪಶು ಮತತು ವೈದ್ಯಕೀಯ ಇಲಾಖೆ ಇಲಾಖೆಯಿಂದ ಕ್ರಮಕ್ಕೈಗೊಳ್ಳಲಾಗುತ್ತಿದೆ.ನಮಗಿರುವ ಮಾಹಿತಿಯಂತೆ ಇದುವರೆಗೆ ಕೋಳಿಗಳಲ್ಲಿ ಮಾತ್ರ ಜ್ವರ ಕಂಡುಬಂದಿದೆ. ಮನುಷ್ಯರಿಗೆ ಜ್ವರ ಬಂದಿರೋ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಹಕ್ಕಿಜ್ವರ ಪತ್ತೆಯಾದ ಪ್ರದೇಶದ ಮೇಲೆ ನಿಗಾ ವಹಿಸಿದ್ದು ಈಗಾಗಲೇ ವಿಶೇಷ ಸಭೆಯನ್ನು ಕರೆದು ಸಂಬಂಧಪಟ್ಟವರಿಗೆ ಪರಿಹಾರ ಕೆಲಸಗಳ ನಿರ್ವಹಣೆಯ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಆಯಾ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ನಿಯಂತ್ರಣದ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಹಾಗೆಯೇ ವರದಹಳ್ಳಿಯಲ್ಲಿ ಕೋಳಿಗಳು ಸೋಂಕಿನಿಂದ ಮೃತಪಡುತ್ತಿದ್ದಂತೆ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಲಾಗಿದೆ. ಗ್ರಾಮದಲ್ಲಿನ ಉಳಿದ ಕೋಗಳನ್ನೂ ಕೂಡ ಇಲಾಖೆ ಮಾರ್ಗಸೂಚಿಗಳನ್ವಯ ವೈಜ್ಞಾನಿಕವಾಗಿ ವಿಲೇ ಮಾಡಲಾ ಎಂದರು.ಈ ಸಂದರ್ಭದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕಿಯ ಇಲಾಖೆಯ ಉಪ ನಿರ್ದೇಶಕ ಡಾ ರಂಗಪ್ಪ, ಪಶು ವೈದ್ಯ ಡಾ ಜ್ಞಾನೇಶ್ ಮತ್ತಿತರರು ಇದ್ದರು.

ತಾಲೂಕಿನ ವರದಹಳ್ಳಿ ಗ್ರಾಮದಲ್ಲಿ ಹಕ್ಕಿಜ್ವರ ಪ್ರಕರಣ ಪತ್ತೆಯಾದ ಹಿನ್ನೆಲೆಯಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆಯ ಆಯುಕ್ತರಾದ ಶ್ರೀರೂಪಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಾನಸಿಕ, ದೈಹಿಕ ಆರೋಗ್ಯದಿಂದ ಸ್ವಾಸ್ಥ ಸಮಾಜ ನಿರ್ಮಾಣ

ಕೋಲಾರ: ಮಾನಸಿಕ, ದೈಕ ಆರೋಗ್ಯದಿಂದ ಮಾತ್ರವೇ ಸ್ವಾಸ್ಥ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸಿವಿಲ್ ಹಿರಿಯ ನ್ಯಾಯಾಧೀಶ ಸುನಿಲ್ ಎಸ್.ಹೊಸಮನಿ ಹೇಳಿದರು.

ಡಿಎಚ್‌ಒ ಕಚೇರಿಯಲ್ಲಿ ನಡೆದ ವಿಶ್ವ ಶ್ರವಣ ದಿನಾಚರಣೆ, ಮದ್ಯಪಾನ-ಮಾದಕ ವಸ್ತುಗಳ ದುಷ್ಪರಿಣಾಮ ಕುರಿತ ಜನಜಾಗೃತಿ ಚಾರಸಂಕಿರಣ-ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪಂಚೇಂದ್ರಿಯಗಳು ಸರಿಯಾಗಿದ್ದರೆ ಮಾತ್ರ ಮನುಷ್ಯನಿಗೆ ಸಂಪೂರ್ಣ ವ್ಯಕ್ತಿತ್ವ ಸಿಗುವುದರಿಂದಾಗಿ ಜಾಥಾ ಮಾಡುವ ಮೂಲಕ ಮಹತ್ವದ ವಿಷಯಗಳ ಕುರಿತು ಜನತೆಗೆ ಅರಿವು ಮೂಡಿಸಬೇಕೆಂದರು.

ವ್ಯಸನಮುಕ್ತ ಕೋಲಾರ ಜಿಲ್ಲೆ ಎನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಎಲ್ಲರೂ ಮುಂದಾಗಬೇಕಿದ್ದು ಅಪ್ರಾಪ್ತ ಮಕ್ಕಳೂ ಸಹಾ ವ್ಯಸನಗಳ ದಾಸರಾಗುತ್ತಿರುವುದರಿಂದಾಗಿ ಪೋಷಕರು ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ನುಡಿದರು.

ಡಿಎಚ್‌ಒ ಡಾ.ಶ್ರೀನಿವಾಸ್ ಮಾತನಾಡಿ, ಕಿ ಸಮಸ್ಯೆಯನ್ನು ವೈದ್ಯರಿಗೆ ತೋರಿಸಲು ಹಿಂಜರಿಕೆ ಬೇಡ. ಕಿವಿಯಲ್ಲಿನ ಕಸ ತೆಗೆಯಲು ಚೂಪಾದ ವಸ್ತುಗಳನ್ನು ಒಳಗೆ ಹಾಕುವುದು ಅಪಾಯಕಾರಿ ಎಂದು ಎಚ್ಚರಿಸಿದರು.

ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ.ಎನ್ .ಸಿ.ನಾರಾಯಣಸ್ವಾ ಮಾತನಾಡಿ, ಮೋಜಿನಿಂದ ಆರಂಭ ಆಗುವ ಮದ್ಯಪಾನ-ಧೂಮಪಾನ ದುರಂತ ಅಂತ್ಯ ಕಾಣುವುದರಿಂದಾಗಿ ಯುವಜನತೆ ಎಚ್ಚರಿಕೆ ವಸಬೇಕು. ಕಿಗೆ ಸ್ವಯಂ ವೈದ್ಯ ಸಲ್ಲದು. ಯಾವುದೇ ರೀತಿಯ ರಸವನ್ನು ಒಳಗೆ ಹಾಕಿಸಿಕೊಳ್ಳುವುದು ಅವೈಜ್ಞಾನಿಕ ಮತ್ತು ಅಪಾಯಕಾರಿ ಎಂದು ಕಿಮಾತು ಹೇಳಿದರು. ವಾರ್ತಾ ಇಲಾಖೆ ಅಧಿಕಾರಿ ಜಿ.ಮಂಜೇಶ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರೇಮ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸಿ.ಗೀತಾ, ರೇಣುಕಾದೇ, ಅನಿತಾ, ಆಂಜಿನಮ್ಮ, ಇದ್ದರು.

ಕೋಲಾರದಲ್ಲಿ ನಡೆದ ವಿಶ್ವ ಶ್ರವಣ ದಿನಾಚರಣೆ, ಮದ್ಯಪಾನ-ಮಾದಕ ವಸ್ತುಗಳ ದುಷ್ಪರಿಣಾಮ ಕುರಿತ ಜನಜಾಗೃತಿ ಚಾರಸಂಕಿರಣದಲ್ಲಿ ಕರಪತ್ರ ಬಿಡುಗಡೆಗೊಳಿಸಲಾಯಿತು.

ಗರ್ಭಿಣಿಯರು ಅನಗತ್ಯ ಔಷಧಗಳನ್ನು ಸೇಸಿದರೆ ಕಿವುಡುತನ ಬರುತ್ತದೆ. ಮೊಬೈಲ್ ಹೆಚ್ಚು ಬಳಕೆಂದಾಗಿ ಯುವಜನರಲ್ಲಿ ಶ್ರವಣದೋಷ ಸಾಮಾನ್ಯ ಆಗುತ್ತಿದೆ. ಜಿಲ್ಲೆಯಲ್ಲಿ 822 ಶ್ರವಣದೋಷದ ವ್ಯಕ್ತಿಗಳಿದ್ದು 499 ಮಂದಿ ಚಿಕಿತ್ಸೆಯಲ್ಲಿದ್ದಾರೆ. 23 ಮಂದಿಗೆ ತಲಾ 10 ಲಕ್ಷ ರು. ವೆಚ್ಚದ ಆಪರೇಷನ್ ಮಾಡಿ ಶ್ರವಣ ಯಂತ್ರಗಳನ್ನು ಅಳವಡಿಸಲಾಗಿದೆ. 1650 ಮಕ್ಕಳಿಗೆ ತಪಾಸಣೆ ನಡೆಸಲಾಗಿದ್ದು ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡಲಾಗಿದೆ.

- ಡಾ.ಚಂದನ್ ಕುಮಾರ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ

IN THE COURT OF THE CIVIL JUDGE AND J.M.F.C. AT KORATAGERE
C.MIS.No. 67/2025
Petitioners:- Krushnamurthy S/o Late. Chikkanarasappa Aged 65 years, R/o Hajjihalli. Village, C.N.Durga. Hobli, Koratagere Taluk.
V/S
Respondent:- The Deputy Tahasildar The Registar of Birth Thovinakere .
PUBLIC NOTIFICATION
Whereas the petitioner mother have filed the above petition to obtain the death certificate of the by Name Lakshmamma w/o Late. ChikkaNarasappa died on 05/05/1985, at Koratagere tauk, C.N.Durga, hobli, Hajjihalli. village, at the said address. It is hereby notify that whoever has interest or objection toobtain the death certificate of the may appear in person or through your advocate on:- 13/06/2025 in the above case. Failing which the matter will be herd written mined in your absence.
By the order of Court
Shirastedar,
Civil Judge & JMFC AT KORATAGERE.
Advocate for petitioners,
Anantharaju K.V, Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS No. 60/2025
PETITIONERS : 1) Chikkarathnamma D. w/o Buthanna Aged about 50 years Residing at Bile kallahalli Village Holavanahalli Hobli, Koratagere Taluk, Tumkur District
V/S
RESPONDENT: The Tahasildhar The Birth and Death Register, Koratagere, Koratagere Taluk Tumkur District.
PUBLIC NOTIFICATION
Where as the petitioner have filed the above petition to obtain the death certificate of the petitioner mother by name Thimmakka w/o Late Dasappa, died on. 11/03/2016 at Bile kallahalli Village Holavanahalli Hobli, Koratagere Taluk, Tumkur District .It is hearby notify that whoever has interest or objection to obtain the death certificate of the petitioner mother may appear in person or through your advocate on: 06/6/2025 in the above case, failing which the matter will be herd and place in exparte.
By the order of Court
Shirastedar,
Civil Judge & JMFC AT KORATAGERE.
Advocate for petitioner,
K.B.Anil , Thimmesh R.H. Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 39 /2025
Petitioners:- Veeranna S/o Late Chikkanna, a/a 60 years R/o Bisadihalli, C.N.Durga Hobli, Koratagere taluk.
V/S
Respondent:- The Deputy- Tahasildar The Registar of Birth and Death, Thovinakere, Koratagere taluk.
PUBLIC NOTIFICATION
Whereas the petitioner have filed the above petition to obtain the death certificate of the petitioner's Grand-father by name Yaraiah S/o Sannathimmaiah died on 10-08-1980 at Koratagere taluk, C.N.Durga Hobli, Bisadihalli. It is hereby notify that whoever has interest or objection to obtain the death certificate of the petitioner may appear in person or through your advocate on:- 05/04/2025 in the above case. Failing which the matter will be herd written mined in your absence.
By the order of Court
Shirastedar,
Civil Judge & JMFC AT KORATAGERE.
Advocate for petitioners,
M.C.Mallikarjunaiah, Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS.No. 56/2025
Petitioners:- M K SannaRamaiah S/o Late. Karigiriyppa Aged 50 years, R/o Mallekavu. Village, C.N.Durga. Hobli, Koratagere Taluk.
V/S
Respondent:- The Deputy Tahasildar The Registar of Birth Thovinakere.
PUBLIC NOTIFICATION
Whereas the petitioner fother and mother have filed the above petition to obtain the death certificate of the by Name Karigiriyappa s/o Late. Narasappa died on 11/01/1998, and Siddagangamma w/o Karigiriyappa died on 25/08/2015, at Koratagere tauk, C.N.Durga, hobli, Mallekavu. village, at the said address. It is hereby notify that whoever has interest or objection to obtain the death certificate of may appear in person or through your advocate on:- 26/04/2025 in the above case. Failing which the matter will be herd written mined in your absence.
By the order of Court
Shirastedar,
Civil Judge & JMFC AT KORATAGERE.
Advocate for petitioners,
Anantharaju K.V, Koratagere.

IN THE COURT OF THE CIVIL JUDGE AND J.M.F.C. AT KORATAGERE
C.MIS.No. 43/2025
Petitioner:- Kempamma W/o Late Hanumanthaiah Aged about 72 years, R/o Kurihalli Majare Borappanahalli Thovinakere Post, C.N.Durga Hobli, Koratagere Taluk, Tumkuru Dist.
V/S
Respondent:- The Deputy-Tahasildar, The Registar of Birth & death, Nadakacheri, Thovinakere, C.N.Durga Hobli, Koratagere Taluk, Tumkuru Dist.
PUBLIC NOTIFICATION
Whereas the petitioner have filed the above petition to obtain the death certificate of the petitioner Grand-father by name Hanumanthaiah S/o Thimmaiah died on 20-11-1977, Grand-mother by name Hanumakka w/o Hanumanthaiah died on 06-05-1980, father-in-law by name Rangaiah S/o Hanumanthaiah died on 10-10-1982 and Mother-in-law by name Doddakka W/o Rangaiah died on 09-04-1984 at Tumakuru Dist, Koratagere Taluk, C.N.Durga Hobli, Kurihalli Majare Borappanahalli at the said address the death cartificate of the appear in person or through your advocate on:-05/04/2025 in the above case. Failing which the matter will be herd written mined in your absence.
By the order of Court
Shirastedar,
Civil Judge & JMFC AT KORATAGERE.
Advocate/Notary for petitioner,
S.K.Madhusudana, Koratagere.

ಕಡಿಮೆ ಬೆಲೆಗೆ ಶುಂಠಿ ಮಾರದಂತೆ ಮನವಿ

ಹಾಸನ: ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ(ಎಂಐಎಸ್) ಧಾರಣೆ ಕುಸಿದಿರುವ ಶುಂಠಿ ಖರೀದಿಸಲು ರಾಜ್ಯ ಸರಕಾರದ ಪ್ರಸ್ತಾವನೆಗೆ ಕೇಂದ್ರ ಸಮ್ಮತಿ ಸೂಚಿಸಿದ್ದು, ಆ ಪ್ರಕ್ರಿಯೆ ಆರಂಭವಾಗುವವರೆಗೂ ಬೆಳೆಗಾರರು ಕಡಿಮೆ ಬೆಲೆ ಶುಂಠಿ ಮಾರಾಟ ಮಾಡಬಾರದು ಎಂದು ಸಂಘದ ಪದಾಧಿಕಾರಿಗಳು ಮನವಿ ಮಾಡಿದರು.

ಶ್ರೀನಿವಾಸ್ ಜಾವಗಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲ್ಲ ಕಡೆಗಳಲ್ಲಿ ಶುಂಠಿ ಧಾರಣೆ ಕೆಜಿಗೆ 10 ರೂ.ಗೆ ಇಳಿದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.70 ರಷ್ಟು ನಷ್ಟವಾಗಿದೆ.ಹಿಂದಿನ ವರ್ಷದ ಉತ್ಪಾದನೆಗಿಂತ ಶೇ.10 ರಷ್ಟು ಅಧಿಕ ಉತ್ಪಾದನೆ, ಅಥವಾ ಶೇ.10ರಷ್ಟು ಕುಸಿತ ಕಂಡರೆ ಸದರಿ ಬೆಳೆಯನ್ನು ಎಂಐಎಸ್ ಯೋಜನೆಯಡಿ ಬೆಂಬಲ ಬೆಲೆ ನಿಗದಿ ಪಡಿಸಲು ಅವಕಾಶ ಇದೆ.ನಾವು ಕಳೆದ ಜ.28 ರಂದು ಡಿಸಿ ಹಾಗೂ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದೆವು. ಇದೇ ರೀತಿ ರಾಜ್ಯದ 20 ಜಿಲ್ಲೆಗಳಲ್ಲೂ ಮನವಿ ಸಲ್ಲಿಸಲಾಗಿತ್ತು ಎಂದರು.

ಕೆಲವೇ ದಿನಗಳಲ್ಲಿ ಖರೀದಿ ಕೇಂದ್ರ ತೆರೆದು ಶುಂಠಿ ಕೊಂಡುಕೊಳ್ಳಲಾಗುತ್ತದೆ. ಹಾಗಾಗೀ ಎಲ್ಲರೂ ಕೂಡ ಹಾಲಿ ತಮ್ಮ ಬಳಿ ಇರುವ ಶುಂಠಿಯನ್ನು ಮಾರಾಟ ಬಾರದು ಎಂದು ಮನವಿ ಮಾಡಿದರು. ಸ್ಥಳೀಯ ಶಾಸಕರು, ಸಂಸದರೂ ಸಹಕಾರ ನೀಡಬೇಕು. ಸುದ್ದಿಗೋಷ್ಠಿಯಲ್ಲಿ ರುಕ್ಮಾಂಗದ, ಭೂಮೇಶ್ ,ದರ್ಶನ್, ಪುನೀತ್, ರಾಕೇಶ್ ಇದ್ದರು.

ಮೈಕ್ರೋ ಫೈನಾನ್ಸ್‌ಗಳ ಬಗ್ಗೆ ಜಾಗೃತರಾಗಿರಿ

ಮದ್ದೂರು : ಪಡೆದ ಸಾಲವನ್ನು ಮೂಲ ಉದ್ದೇಶಕ್ಕೆ ಸಕಾಲದಲ್ಲಿ ಬಳಕೆ ಮಾಡುವ ಜತೆಗೆ ಸಾಲ ಮರುಪಾವತಿಮಾಡಬೇಕೆಂದು ಮದ್ದೂರು ತಾಪಂ ಇಒ ರಾಮಲಿಂಗಯ್ಯ ಅಭಿಪ್ರಾಯ ಪಟ್ಟರು. ಪಟ್ಟಣದ ತಾಪಂ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ 'ಮೈಕ್ರೋ ಫೈನಾನ್ಸ್ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಸಾಧಕ ಬಾಧಕಗಳು' ಕುರಿತಾದ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಮೈಕ್ರೋ ಫೈನಾನ್ಸ್ ಅವಘಡಗಳ ಕುರಿತಾಗಿ ಮಹಿಳೆಯರು ಜಾಗೃತರಾಗಬೇಕಿದ್ದು ಸ್ಥಳೀಯವಾಗಿ ಸಂಘ ಸಂಸ್ಥೆಗಳ ಮೂಲಕ ದೊರೆಯುವ ಸಾಲ ಸೌಲಭ್ಯಗಳನ್ನು ಸೂಕ್ತ ರೀತಿ ಸದ್ವಿನಿಯೋಗಕ್ಕೆ ಮುಂದಾಗಿ ಅವಘಡಗಳ ಕಡಿವಾಣಕ್ಕೆ ಮುಂದಾಗಬೇಕೆಂದರು. ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳು ಸೇರಿದಂತೆ ಗ್ರಾಮೀಣ ಭಾಗದ ಮಹಿಳೆಯರಿಗೆ ದೊರೆಯುವ ಸಾಲ ಸೌಲಭ್ಯಗಳು ಮತ್ತು ಇವುಗಳ ಸದ್ಬಳಕೆ ರಾಷ್ಟ್ರೀಕೃತ ಬ್ಯಾಂಕುಗಳ ಬದ್ಧತೆ, ಕಾರ್ಯ ನಿರ್ವಹಣೆ, ಮಹಿಳಾ ಆರ್ಥಿಕ ಸಬಲೀಕರಣ ಕುರಿತಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಎಂ.ನಾಗರಾಜೇಗೌಡ ಸಲಹೆ ನೀಡಿದರು.ನಿವೃತ್ತ ಪ್ರಾಂಶುಪಾಲ ಎಂ.ವಿ.ಕೃಷ್ಣ ಮಾತನಾಡಿದರು.ಜಿಲ್ಲಾ ಪತ್ರಕರ್ತರ ಸಂಘದ ನಿರ್ದೇಶಕ ಶಿವನಂಜಯ್ಯ ಪ್ರಾಸ್ತಾವಿಕ ನುಡಿಗಳಾಡಿದರು. ತಾಲೂಕು ಅಧ್ಯಕ್ಷ ಎಂ.ಆರ್.ಚಕ್ರಪಾಣಿ, ಜಿಲ್ಲಾ ಉಪಾಧ್ಯಕ್ಷ ರವಿ ಸಾವಂದಿಪುರ, ತಾಲೂಕು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಪಿ.ವೆಂಕಟೇಶ್, ಉಪಾಧ್ಯಕ್ಷ ಸಿ.ಹರೀಶ್,, ಸಂಜೀವಿನಿ ಜೀವನೋಪಾಯ ಸಂವರ್ಧನ ಸಂಸ್ಥೆ ವ್ಯವಸ್ಥಾಪಕ ರವೀಂದ್ರಗೌಡ ಉಪಸ್ಥಿತರಿದ್ದರು.

ಸರಕಾರಿ ನೌಕರರ ಕ್ರೀಡಾಕೂಟ

ತುಮಕೂರು: ಜಿಲ್ಲೆಯಲ್ಲಿ ಏಪ್ರಿಲ್ 7, 8ರಂದು ಜಿಲ್ಲಾ ಮಟ್ಟದ ಸರಕಾರಿ ನೌಕರರ ಕ್ರೀಡಾಕೂಟ ನಡೆಯಲಿದ್ದು, ಕ್ರೀಡಾಕೂಟ ನಡೆಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸೂಚನೆ ನೀಡಿದರು. ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ನ್ಯಾಯಾಲಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲ ನೌಕರರು ಕ್ರೀಡಾಕೂಟದಲ್ಲಿ ತಪ್ಪದೆ ಭಾಗವಹಿಸಬೇಕು. ಕ್ರೀಡಾಕೂಟ ಜರುಗಲಿರುವ 2 ದಿನಗಳಂದು ನೌಕರರಿಗೆ ವಸತಿ, ಊಟದ ವ್ಯವಸ್ಥೆ ಮಾಡಬೇಕು ಎಂದು ನಿರ್ದೇಶನ ನೀಡಿದರು. ಮುನ್ನೆಚ್ಚರಿಕಾ ಕ್ರಮವಾಗಿ ತುರ್ತು ಚಿಕಿತ್ಸಾ ವಾಹನ, ಪ್ರಥಮ ಚಿಕಿತ್ಸಾ ಘಟಕ, ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಸೂಚನೆ ನೀಡಿದರು. ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎನ್. ನರಸಿಂಹರಾಜು ಮಾತನಾಡಿ, ಕ್ರೀಡಾಕೂಟದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ಆನ್‌ಲೈನ್ ಮುಖಾಂತರ ನೋಂದಣಿ ಮಾಡಿಕೊಳ್ಳಬೇಕು.

ಸಮಾಚಾರ ಸಣ್ಣದಲ್ಲ

ತೋಟದ ಮನೆಯಲ್ಲಿ ವೃದ್ಧ ದಂಪತಿ ಕೊಲೆ

ಹುಣಸೂರು: ಹಾಡ ಹಗಲೇ ಕಲ್ಲಿನಿಂದ ಜಜ್ಜಿ ವೃದ್ಧ ದಂಪತಿ ಕೊಲೆ ಮಾಡಿರುವ ಘಟನೆ ತಾಲೂಕಿನ ನಾಡಪ್ಪನಹಳ್ಳಿಯಲ್ಲಿ ಸಂಜೆ ನಡೆದಿದೆ. ಬಿಳಿಕೆರೆ ಹೋಬಳಿಯ ನಾಡಪ್ಪನಹಳ್ಳಿ ಗ್ರಾಮದ ರಂಗಸ್ವಾಮಿ ಗೌಡ(65) ಇವರ ಪತ್ನಿ ಶಾಂತಮ್ಮ (52)ಮೃತಪಟ್ಟವರು. ಇವರಿಗೆ ಗ್ರಾಪಂ ಸದಸ್ಯ ದೇವರಾಜ್ ಸೇರಿದಂತೆ ಇಬ್ಬರು ಪುತ್ರರು, ಒಬ್ಬಳು ಮಗಳಿದ್ದಾರೆ. ತೋಟದ ಮನೆಯಲ್ಲಿ ವಾಸವಿರುವ ದಂಪತಿಯನ್ನು ಯಾವ ಕಾರಣಕ್ಕೆ ಕೊಲೆ ಮಾಡಿದ್ದಾರೆಂಬುದು ತಿಳಿದು ಬಂದಿಲ್ಲ. ಸಂಜೆ ಇವರ ಪುತ್ರ ದೇವರಾಜ್ ಶುಂಠಿ ಜಮೀನಿನಲ್ಲಿ ಕೀಳುತ್ತಿದ್ದ ವೇಳೆ ಶುಂಠಿತುಂಬಲು ಕುಕ್ಕೆ ತರುವಂತೆ ಕಾರ್ಮಿಕ ಗಣೇಶನನ್ನು ತಂದೆಯ ತೋಟದ ಮನೆಗೆ ಕಳುಹಿಸಿದ ವೇಳೆ ಮನೆಯೊಳಗೆ ಶಾಂತಮ್ಮ ಹಾಗೂ ದನದ ಕೊಟ್ಟಿಗೆಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿರುವುದು ಪತ್ತೆಯಾಗಿದ್ದು. ತಕ್ಷಣವೇ ದೇವರಾಜ್ ಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಬಿಳಿಕೆರೆ ಪೊಲೀಸರಿಗೆ ಮಾಹಿತಿ ನೀಡಿದರು. ಪಿಎಸ್ಐ ಲೋಲಾಕ್ಷಿ ,ಡಿವೈಎಸ್ ಪಿ ಗೋಪಾಲಕೃಷ್ಣ ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮದಲ್ಲಿ ಆತಂಕ ಮನೆಮಾಡಿದೆ.

ಗುಂಡ್ಲುಪೇಟೆಯಲ್ಲಿ ವಿಚಾರ ಸಂಕಿರಣ

ಚಾಮರಾಜನಗರ: ಚಾಮರಾಜನಗರ ವಿಶ್ವವಿದ್ಯಾನಿಲಯ, ವಿವೇಕಸಿರಿ ಸೇವಾ ಸೌಹಾರ್ದ ಸಹಕಾರ ಸಂಘ ಮತ್ತು ಗುಂಡ್ಲುಪೇಟೆಯ ಜೆಎಸ್ಎಸ್ ಕಾಲೇಜ್ ಆಫ್ ಆರ್ಟ್ಸ್ ಮತ್ತು ಕಾಮರ್ಸ್ ಸಹಯೋಗದೊಂದಿಗೆ ಭಾರತೀಯ ಭಾಷಾ ಸಮಿತಿ, ಶಿಕ್ಷಣ ಸಚಿವಾಲಯ ಪ್ರಾಯೋಜಕತ್ವದಲ್ಲಿ ಭಾರತೀಯ ಭಾಷೆಗಳ ಮೂಲಕ ಭಾರತೀಯ ಜ್ಞಾನ ಪರಂಪರೆ ಸಾಹಿತ್ಯ ಮತ್ತು ವೈದ್ಯ ಪದ್ದತಿಗೆ ಅಗಸ್ತ್ಯ ಮುನಿಯವರ ಕೊಡುಗೆ ವಿಷಯ ಕುರಿತು ವಿಚಾರ ಸಂಕಿರಣವನ್ನು ಮಾ.4ರಂದು ಗುಂಡ್ಲುಪೇಟೆಯ ಜೆ.ಎಸ್.ಎಸ್. ಕಾಲೇಜ್ ಆಫ್ ಆರ್ಟ್ಸ್ ಮತ್ತು ಕಾಮರ್ಸ್ ನಲ್ಲಿ ಹಮ್ಮಿಕೊಳ್ಳಲಾಗಿದೆ. ಚಾವಿವಿ ಉಪಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಅಧ್ಯಕ್ಷತೆ ವಹಿಸುವರು. ಮೈಸೂರಿನ ಹಿರಿಯ ವಕೀಲ ಶಾಮ್ ಭಟ್ ಉದ್ಘಾಟಿಸುವರು. ಭಾಷಾ ಸಮಿತಿಯ ಮುಖ್ಯ ಸಂಯೋಜಕ ಪ್ರೊ. ಪವನ್‌ಕುಮಾರ್ ಶರ್ಮಾ ಅತಿಥಿಗಳಾಗಿ ಪಾಲ್ಗೊಳ್ಳುವರು.

ಗ್ರಾ.ಪತ್ರಕರ್ತರಿಗೆ ಬಸ್ ಪಾಸ್‌ಗೆ ಅರ್ಜಿ ಆಹ್ವಾನ

ಚಾಮರಾಜನಗರ: ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪತ್ರಕರ್ತರಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ಯೋಜನೆಗೆ ಅರ್ಹ ಪತ್ರಕರ್ತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಗೆ ಉಚಿತವಾಗಿ ಸಂಚರಿಸಬಹುದು. ತಹಸೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು. ದಿನಪತ್ರಿಕೆಗಳು ಹಾಗೂ ಉಪಗ್ರಹ ಸುದ್ದಿ ವಾಹಿನಿಗಳ ಸಂಪಾದಕರು ನೀಡುವ ನೇಮಕಾತಿ ಪತ್ರ ಹಾಗೂ ಶಿಫಾರಸ್ಸು ಆಧರಿಸಿ ಬಸ್ ಪಾಸ್‌ಗಳನ್ನು ನೀಡಲಾಗುವುದು. ಅರ್ಹ ಪತ್ರಕರ್ತರು ತಮ್ಮ ಸಮೀಪದ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಬೆಂಗಳೂರು ಒನ್ ಕೇಂದ್ರಗಳಿಗೆ ತೆರಳಿ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಜಿಲ್ಲೆಯ ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೆ ಸ್ವಯಂ ದೃಢೀಕರಿಸಿ ಸಲ್ಲಿಸಬೇಕು ಎಂದು ತಿಳಿಸಿದೆ.

ವೃದ್ಧ ಕಾಣೆ: ಪತ್ತೆಗೆ ಪೊಲೀಸರ ಮನವಿ

ಚಾಮರಾಜನಗರ: ತಾಲೂಕಿನ ಉತ್ತುವಳ್ಳಿ ಗ್ರಾಮದ ನಿವಾಸಿ ಅಲಗರ್ ಎಂಬ ವಯೋವೃದ್ದರೊಬ್ಬರು ಕಾಣೆಯಾಗಿದ್ದು, ಇವರ ಸುಳಿವಿಗೆ ಸಹಕರಿಸುವಂತೆ ಕೋರಲಾಗಿದೆ. 75 ವರ್ಷದ ಅಲಗರ್, 5.1 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕೋಲು ಮುಖ, ಗೋಧಿ ಮೈಬಣ್ಣ, ಬೋಳು ತಲೆ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಶರ್ಟ್ ಮತ್ತು ಬಿಳಿ ಪಂಚೆ ಧರಿಸಿದ್ದರು. ಇವರ ಸುಳಿವು ದೊರೆತಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಅಥವಾ ದೂ.ಸಂ 08226-222092 ಸಂಪರ್ಕಿಸುವಂತೆ ಗ್ರಾಮಾಂತರ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಉರುಕಾತೇಶ್ವರಿ ದರ್ಶನ ಇಂದು

ಚಾಮರಾಜನಗರ: ಜಿಲ್ಲೆಯ ಸಂತೇಮರಹಳ್ಳಿ ಹೋಬಳಿಯ ಉಮ್ಮತ್ತೂರು ಗ್ರಾಮದ ಉರುಕಾತೇಶ್ವರಿ ದೇವಸ್ಥಾನವನ್ನು ಮಾರ್ಚ್ 4ರ ಮೊದಲನೇ ಮಂಗಳವಾರ ಭಕ್ತರ ದರ್ಶನಕ್ಕಾಗಿ ತೆರೆಯಲಾಗುವುದು. ಉರುಕಾತೇಶ್ವರಿ ದೇವಸ್ಥಾನವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆ ದತ್ತಿಗಳ ಅಧಿನಿಯಮದಡಿ ಘೋಷಿತ ಸಂಸ್ಥೆ. ಹೀಗಾಗಿ ದೇವಸ್ಥಾನವನ್ನು ಮಾರ್ಚ್ 4ರಂದು ಭಕ್ತರ ದರ್ಶನಕ್ಕಾಗಿ ತೆರೆಯಲಾಗುತ್ತಿದೆ ಎಂದು ತಹಸೀಲ್ದಾರ್ ಬಿ. ಗಿರಿಜಾ ಅವರು ತಿಳಿಸಿದ್ದಾರೆ.

{ಡಿ.ಕೆ.ಶಿವಕುಮಾರ್ } ಡಿಸಿಎಂ

ಮಾರಿಗುಡಿ ದೇವಸ್ಥಾನದ ಶಿಲ್ಪಕಲೆ ಚೆನ್ನಾಗಿ ಮೂಡಿಬಂದಿದೆ. ಕೆತ್ತನೆ ಕೆಲಸ ಅಚ್ಚುಕಟ್ಟಾಗಿದೆ. ಇಳಕಲ್ಲಿನ ಕೆಂಪು ಕಲ್ಲನ್ನು ಬಳಸಲಾಗಿದೆ. ನಾನಾ ಭಾಗದ ಜನರು ಕೈ ಜೋಡಿಸಿ ತಾಯಿಯ ಆಶೀರ್ವಾದಕ್ಕೆ ಭಾಜನರಾಗಿದ್ದಾರೆ. ದೇವಸ್ಥಾನ ಇನ್ನೂ ಬೆಳೆಯಲಿ ಎಂದು ಆಶಿಸುತ್ತೇನೆ.

ಪ್ರೇರಣಾ ಫೌಂಡೇಷನ್ ರಜತ ಮಹೋತ್ಸವ | ಶಿಕ್ಷಣ ತಜ್ಞ ಗುರುರಾಜ ಕರ್ಜಗಿ

ವಿದ್ಯಾರ್ಥಿಗಳಿಗೆ ಭರವಸೆ ಮುಖ್ಯ

ಮೈಸೂರು: ಶಿಕ್ಷಣ ಸಂಸ್ಥೆ ಅಥವಾ ಪೋಷಕರು ಕೇವಲ ಅಂಕಗಳ ಹಿಂದೆ ಬೀಳುವ 'ಮಾರ್ಕ್ಸ್'ವಾದಿಗಳಾಗಬಾರದು. ವಿದ್ಯಾರ್ಥಿಗಳ ಸಾಮರ್ಥ್ಯ ವನ್ನು ಗುರುತಿಸಿ, ಅವರನ್ನು ಅರ್ಥ ಮಾಡಿಕೊಂಡು ಕಲಿಕೆಯಲ್ಲಿ ತೊಡಗಿಸ ಬೇಕು. ಆಗ ಮಾತ್ರ ಉನ್ನತ ಸಾಧನೆ ಯನ್ನು ಎದುರು ನೋಡಬಹುದು ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಹೇಳಿದರು.

ನಗರದ ಪ್ರೇರಣಾ ಫೌಂಡೇಷನ್ ನಿಂದ ಜೆ.ಕೆ. ಮೈದಾನದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಜತ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಪರೀಕ್ಷೆಯಲ್ಲಿ ಅನುತ್ತೀರ್ಣ ಎಂದರೆ ಜೀವನದಲ್ಲಿಯೂ ಫೇಲ್ ಎಂಬ ಅರ್ಥವಲ್ಲ. ಜೀವನ ಬಹಳ ದೊಡ್ಡದಿದ್ದು, ಅಲ್ಲಿ ನೂರಾರು ಪರೀಕ್ಷೆಗಳು ಎದುರಾಗುತ್ತವೆ. ಭರವಸೆಯನ್ನು ಯಾರೂ ಕಳೆದುಕೊಳ್ಳಬಾರದು ಎಂದು ಕಿವಿಮಾತು ಹೇಳಿದರು.

ಸಂಗೀತ ನಿರ್ದೇಶಕ ವಿ.ನಾಗೇಂದ್ರ ಪ್ರಸಾದ್ ಮಾತನಾಡಿ, ಸಾಂಪ್ರದಾಯಿಕ ಶಿಕ್ಷಣ ಸಂಸ್ಥೆಗಳ ವಿಫಲತೆಯು ಪ್ರೇರಣಾದಂಥ ಸಂಸ್ಥೆಯ ಉದಯಕ್ಕೆ ಕಾರಣವಾಗುತ್ತದೆ. ಮಕ್ಕಳನ್ನು ಸಂತೈಸುವ, ಅವರನ್ನು ಅರ್ಥ ಮಾಡಿಕೊಳ್ಳುವಲ್ಲಿ ಹಲವು ಸಂಸ್ಥೆಗಳು ಸೋಲುತ್ತಿವೆ. ಪ್ರೇರಣಾ ಯಾವುದೇ ಶಿಕ್ಷಣ ಸಂಸ್ಥೆಗೂ ಕಡಿಮೆಯಲ್ಲದ ಸಾಧನೆ ಮಾಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಸಿದ್ಧ ವಾಗ್ಮಿ ಪ್ರೊ. ಎಂ.ಕೃಷ್ಣಗೌಡ ಮಾತನಾಡಿದರು. ದಾರಿದೀಪ ಸಂಶೋಧನಾ ಕೇಂದ್ರದ ಮುಖ್ಯಸ್ಥ ಪ್ರೊ.ಬೋರ ಲಿಂಗಯ್ಯ ಹಾಗೂ ಪ್ರೊ.ಸರಸ್ವತಿ ಕಾರ್ಯಕ್ರಮ ಉದ್ಘಾಟಿಸಿದರು. ಸಂಸ್ಥೆ ನಡೆದು ಬಂದ ಹಾದಿಯನ್ನು ಸ್ಮರಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಸಂಗೀತ ನಿರ್ದೇಶಕ ಶ್ರೀಧರ್ ವಿ.ಸಂಭ್ರಮ್, ವ್ಯಕ್ತಿತ್ವ ವಿಕಸನ ಮತ್ತು ಕಲಿಕಾ ತರಬೇತುದಾರ ಆರ್.ಎ.ಚೇತನ್ ರಾಮ್ ಇದ್ದರು.

ಪ್ರೇರಣಾ ಫೌಂಡೇಷನ್ ಅಧ್ಯಕ್ಷ ಎಸ್.ಎಸ್.ಭಟ್, ಕಾರ್ಯದರ್ಶಿ ಕೆ.ಆರ್. ನಿರಂಜನ್ ರಾಜೇ ಅರಸ್ (ಕೋರಾನಿ) ಹಾಗೂ ಖಜಾಂಚಿ ಎನ್.ಬಿ.ಪ್ರದೀಪ್ ಕುಮಾರ್ ಅವರಿಂದ ಪಾಠ ಕಲಿತ ವಿದ್ಯಾರ್ಥಿಗಳು ಗುರುಗಳನ್ನು ಅಭಿನಂದಿಸಿ ಸಂಭ್ರಮಿಸಿದರು. 'ಪ್ರೇರಣಾ' ಹೆಸರಿನ ನಾಟಕವನ್ನು ಪ್ರದರ್ಶಿಸಿ ಸಂಸ್ಥೆ ಆರಂಭವಾದ ಸನ್ನಿವೇಶವನ್ನು, ಮಕ್ಕಳು ಅದರಿಂದ ಪಡೆದ ಪ್ರಯೋಜನವನ್ನು ಪ್ರಸ್ತುತಪಡಿಸಿದರು. ತಮ್ಮ ಬದುಕಿನಲ್ಲಿ 'ಪ್ರೇರಣಾ' ನೀಡಿದ ತಿರುವು ಸ್ಮರಿಸಿ ಭಾವುಕರಾದರು. ಲಕ್ನೋದಿಂದ ಬಂದಿದ್ದ ವಿಜ್ಞಾನಿ ಸಿ.ಡಿ.ಮೋಹನ್, ವಿಶೇಷಚೇತನರಾದ ಲತಾ ತಮ್ಮ ಅನುಭವ ಹಂಚಿಕೊಂಡರು.

ನಗರದ ಪ್ರೇರಣಾ ಫೌಂಡೇಷನ್ ನಿಂದ ಜೆ.ಕೆ.ಮೈದಾನದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಜತ ಮಹೋತ್ಸವವನ್ನು ಶಿಕ್ಷಣ ತಜ್ಞ ಗುರುರಾಜ ಕರಜಗಿ ಉದ್ಘಾಟಿಸಿದರು.

ಜೀವನದ ನೂರಾರು ಪರೀಕ್ಷೆಯ ಗೆಲ್ಲೋಣ..!

ಪರೀಕ್ಷೆಯಲ್ಲಿ ಅನುತ್ತೀರ್ಣ ಎಂದರೆ ಜೀವನದಲ್ಲಿಯೂ ಫೇಲ್ ಎಂಬ ಅರ್ಥವಲ್ಲ. ಜೀವನ ಬಹಳ ದೊಡ್ಡದಿದ್ದು, ಅಲ್ಲಿ ನೂರಾರು ಪರೀಕ್ಷೆಗಳು ಎದುರಾಗುತ್ತವೆ. ಭರವಸೆಯನ್ನು ಯಾರೂ ಕಳೆದುಕೊಳ್ಳಬಾರದು ಎಂದು ಕರ್ಜಗಿಯವರು ಕಿವಿಮಾತು ಹೇಳಿದರು.

ಹಸು- ಕರುಗಳ ದಾನ

ಚಾಮರಾಜನಗರ: ನಗರದ ಮಾರ್ಗದರ್ಶಿ ವಿಕಲಾಚೇತನ ಸೇವಾ ಸಂಸ್ಥೆ ಸಹಕಾರದೊಂದಿಗೆ ಬೆಂಗಳೂರಿನ ವಾಸವಿ ಚಾರಿಟಬಲ್ ಟ್ರಸ್ಟ್ ಕಳೆದ ಮೂರು ವರ್ಷಗಳಿಂದ ವಿಕಲಚೇತನ ಕುಟುಂಬಕ್ಕೆ ಜೀವನೋಪಾಯಕ್ಕಾಗಿ ಹಸು ಕರು ದಾನ ಮಾಡುವ ಜೊತೆಗೆ ಪಶು ಅಹಾರ, ಪರಿಕರ ವಿತರಣೆ ಮಾಡಿದರು.

ತಾಲೂಕಿನ ಲಿಂಗರಾಜಪುರದ ಮಹಾಲಕ್ಮೀ ಮತ್ತು ಕೆ. ಬಸವಣ್ಣ ಅವರು ಕುಟುಂಬಕ್ಕೆ ಹಾಗೂ ಸರಗೂರು ಮೋಳೆಯ ಲಕ್ಷ್ಮೀ ದೇವಿ ಮತ್ತು ಲಕ್ಷಣ ಕುಟುಂಬಕ್ಕೆ ಹಸು ಕರು ದಾನ ಮಾಡಿ, ಆರ್ಥಿಕ ಪ್ರಗತಿಯನ್ನು ಹೊಂದಲಿ ಶುಭ ಕೋರಿದರು. ಜೊತೆಗೆ ಪುರೋಹಿತರಾದ ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ಪೂಜೆ ಸಲ್ಲಿಸಿ, ದಾನಿಗಳಿಂದ ಹಸು ಕರುಗಳನ್ನು ದಾನ ಮಾಡಿಸಿದರು.

ಚಾರಿಟಬಲ್ ಟ್ರಸ್ಟ್ನ ಅಧ್ಯಕ್ಷ ಪೋತಣ್ಣ ಶೆಟ್ಟಿ, ಮಾತನಾಡಿ, ಮಾರ್ಗದರ್ಶಿ ಸಂಸ್ಥೆ ಹಾಗು ಹಾರೈಕೆದಾರರ ಸಂಘದ ಮೂಲಕ ವಿಕಲ ಚೇತನರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇಂಥ ಸಂಸ್ಥೆ ವಿಕಲಚೇತನರನ್ನು ಗುರುತಿಸಿ ಶಾಶ್ವತ ಪರಿಹಾರ ಯೋಜನೆ ರೂಪಿಸಿದೆ. ಈ ಯೋಜನೆ ಭಾಗವಾಗಿ ಬೆಂಗಳೂರಿನ ವಾಸವಿ ಚಾರಿಟಬಲ್ ಟ್ರಸ್ಟ್‌ಗೆ ಮನವಿ ಮಾಡಿದಾಗ ಅವರು ಸಹಾಯ ಹಸ್ತ ಮಾಡಿದ್ದಾರೆ ಎಂದರು.

ಮಾರ್ಗದರ್ಶಿ ಸೇವಾ ಸಂಸ್ಥೆಯ ನಿರ್ದೇಶಕ ಕೆ.ವಿ. ರಾಜಣ್ಣ, ವಾಸವಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಕೃಷ್ಣಯ್ಯ ಶೆಟ್ಟಿ, ದಾನಿಗಳಾದ ಗೀತಾ ಮಧುಸೂದನ್, ಶಕುಂತಲಾ ವೆಂಕಟರತ್ನ ಸಂಸ್ಥೆಯ ಲೆಕ್ಕಾಧಿಕಾರಿ ಕವಿತಾ, ಸಂಯೋಜಕರಾದ ಪುಷ್ಪ, ಗ್ರಾ.ಪಂ. ಸದಸ್ಯ ಬಸವಣ್ಣ, ಮುಖಂಡರಾದ ಕೃಷ್ಣಮೂರ್ತಿ ಇದ್ದರು.

ಕೆರೆಗಳ ಹೂಳೆತ್ತಿದರೆ ಅಂತರ್ಜಲ ವೃದ್ಧಿ

ನಾಗಮಂಗಲ: ಗ್ರಾಮೀಣ ಪ್ರದೇಶದ ಕೆರೆಗಳ ಹೂಳೆತ್ತುವುದರಿಂದ ಹೆಚ್ಚು ನೀರು ಸಂಗ್ರಹವಾಗಿ ಅಂತರ್ಜಲ ವೃದ್ಧಿಸಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಸಿಕ್ಕಂತಾಗುತ್ತದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೈಸೂರು ಪ್ರಾದೇಶಿಕ ನಿರ್ದೇಶಕ ಬಿ.ಜಯರಾಮ್ ನೆಲ್ಲಿತಾಯ ತಿಳಿಸಿದರು.

ಮಣ್ಣಹಳ್ಳಿ ಗ್ರಾಪಂ ವ್ಯಾಪ್ತಿಯ ಬುರುಡುಗುಂಟೆ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ 'ನಮ್ಮೂರು ನಮ್ಮ ಕೆರೆ ಯೋಜನೆಯಡಿ' ಹೂಳೆತ್ತಿದ್ದ ಕೆರೆಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಗ್ರಾಮದ ಮಹಿಳೆಯರ ಜೊತೆಗೂಡಿ ಬಾಗಿನ ಅರ್ಪಿಸಿ, ಕೆರೆಯನ್ನು ಗ್ರಾಮಸ್ಥರಿಗೆ ಹಸ್ತಾಂತರಿಸಿದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರಹೆಗ್ಗಡೆ ಅವರ ಆಶಯದಂತೆ ನಮ್ಮೂರು ನಮ್ಮ ಕೆರೆ ಯೋಜನೆಯಡಿ ರಾಜ್ಯವ್ಯಾಪಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೆರೆಗಳು ರೈತರ ಕೃಷಿ ಚಟುವಟಿಕೆಗೆ ಮೂಲ ಆಧಾರ ಮತ್ತು ಆಸರೆಯಾಗಿರುತ್ತವೆ ಎಂದರು.

ಸಂಸ್ಥೆ ಜಿಲ್ಲಾ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಕೋಣನೂರು ಹನುಮಂತಯ್ಯ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹಳ್ಳಿಗಾಡಿನ ಜನರಿಗೆ ಉತ್ತಮ ಸೇವೆ ನೀಡುತ್ತಿರುವುದು ಶ್ಲಾಘನೀಯ. ಜನರು ಸಂಸ್ಥೆಯ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಸ್ವಾವಲಂಬಿ ಜೀವನ ನಡೆಸಬೇಕು ಎಂದರು.

ಗ್ರಾಮದ ಮಹಿಳೆಯರ ಜೊತೆಗೂಡಿ ಬಾಗಿನ ಅರ್ಪಿಸಿ, ಕೆರೆಯನ್ನು ಗ್ರಾಮಸ್ಥರಿಗೆ ಹಸ್ತಾಂತರಿಸಿದರು.

ಯೋಜನೆಯ ಜಿಲ್ಲಾ ನಿರ್ದೇಶಕಿ ಎಂ.ಚೇತನ, ತಾಲೂಕು ಯೋಜನಾಧಿಕಾರಿ ಕೆ.ದಿವಾಕರ್, ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೃಷ್ಣಗೌಡ, ಗ್ರಾಪಂ ಅಧ್ಯಕ್ಷ ರವಿಕುಮಾರ್, ಉಪಾಧ್ಯಕ್ಷೆ ಲಕ್ಷ್ಮಿ, ಸಮಿತಿ ಕಾರ್ಯದರ್ಶಿ ಬೋರೇಗೌಡ, ಜನಜಾಗೃತಿ ವೇದಿ ಕೆ ಸದಸ್ಯರಾದ ರಾಧಾ, ಯೋಗೇಶ್, ಗ್ರಾಮದ ಮುಖ್ಯಸ್ಥರಾದ ಮಲ್ಲೇಗೌಡ, ಅಣ್ಣೆಗೌಡ, ನಂಜುಂಡೇಗೌಡ, ದೇವಲಿಂಗೇಗೌಡ, ಮಾದೇ ಗೌಡ, ಪ್ರಭುದೇವಗೌಡ, ಬಸವರಾಜೇಗೌಡ, ಮಲ್ಲೇಶ್ ಗೌಡ, ವಲಯ ಮೇಲ್ವಿಚಾರಕ ರಮೇಶ್, ಇದ್ದರು.

ಮಹಾತ್ಮರ ಸಂದೇಶ ಮುಟ್ಟಿಸುವ ಜಯಂತಿಗಳು

ಮೈಸೂರು: ಮಹಾತ್ಮರ ಸಂದೇಶಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ವಿವಿಧ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ನಗರದ ಡಿಸಿ ಕಛೇರಿ ಸಭಾಂಗಣದಲ್ಲಿ ವಿವಿಧ ಜಯಂತಿಗಳಾದ ರೇಣುಕಾಚಾರ್ಯ ಜಯಂತಿ, ಯೋಗಿನಾರೇಯಣ ಯತೀಂದ್ರರ ಜಯಂತಿ ಹಾಗೂ ಅಗ್ನಿ ಬನ್ನಿರಾಯ ಜಯಂತಿಗಳ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಾ.12ರಂದು ಸಂಜೆ 4 ಗಂಟೆಗೆ ರೇಣುಕಾಚಾರ್ಯ ಜಯಂತಿ ಕರ್ನಾಟಕ ಕಲಾಮಂದಿರದಲ್ಲಿ, ಮಾರ್ಚ್ 14 ರಂದು ಯೋಗಿನಾರೇಯಣ ಯತಿಂದ್ರರ ಜಯಂತಿ ಕಿರು ರಂಗಮಂದಿರದಲ್ಲಿ ಹಾಗೂ ಮಾರ್ಚ್ 28ರಂದು ಅಗ್ನಿ ಬನ್ನಿರಾಯ ಜಯಂತಿ ಕಿರು ರಂಗಮಂದಿರದಲ್ಲಿ ಆಚರಣೆ ಮಾಡಲಾಗುವುದು ಎಂದು ತಿಳಿಸಿದರು.

ಜಯಂತಿಗಳ ಆಚರಣೆಗೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ. ಎಲ್ಲಾ ಸಮುದಾಯದವರು ಸೇರಿ ಜಯಂತಿಗಳ ಆಚರಣೆ ಮಾಡಬೇಕು. ಜಯಂತಿಗಳ ಆಚರಣೆಯ ಉದ್ದೇಶ ಮಹನೀಯರ ಆದರ್ಶಗಳನ್ನು ಪಾಲನೆ ಮಾಡುವುದು ಆಗಿದೆ ಎಂದು ತಿಳಿಸಿದರು.

ನಗರದ ಡಿಸಿ ಕಛೇರಿ ಸಭಾಂಗಣದಲ್ಲಿ ವಿವಿಧ ಜಯಂತಿಗಳ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಿ.ಎಂ. ಸುದರ್ಶನ್ ಮಾತನಾಡಿ, ಜಯಂತಿಗಳ ಆಚರಣೆಗೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಜನಪ್ರತಿನಿಧಿಗಳಿಗೆ ಮುಖಂಡರಿಗೆ ಆಹ್ವಾನ ನೀಡಲಾಗುವುದು. ಮೆರವಣಿಗೆಗೆ ಕಲಾ ತಂಡಗಳನ್ನು ನೀಡಲಾಗುವುದು. ಕಲಾಮಂದಿರದಲ್ಲಿ ಗೀತಾ ಗಾಯನ ಏರ್ಪಡಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಆಯಾ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ಭವಿಷ್ಯದಲ್ಲಿ ಡಿಕೆಶಿ ಕೈಗೆ ಆಡಳಿತ

ಬೆಟ್ಟದಾಸನದೊಡ್ಡಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ.ಉದಯ ಗುದ್ದಲಿ ಪೂಜೆ ನೆರವೇರಿಸಿದರು.

ಮದ್ದೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಿನ ದಿನಗಳಲ್ಲಿ ನಾಯಕರಾಗುವ ಜತೆಗೆ ರಾಜ್ಯದ ಆಡಳಿತ ನಡೆಸಲಿದ್ದಾರೆಂದು ಶಾಸಕ ಕೆ.ಎಂ.ಉದಯ ಭವಿಷ್ಯ ನುಡಿದರು. ತಾಲೂಕಿನ ಬೆಟ್ಟದಾಸನದೊಡ್ಡಿ ಗ್ರಾಮದಲ್ಲಿ 5 ಕೋಟಿ ರೂ.ಗಳ ದುಂಡನಹಳ್ಳಿ ಕೆರೆಗೆ ಬರುವ ಚೆಕ್ ಡ್ಯಾಂ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಡಿ.ಕೆ.ಶಿವಕುಮಾರ್ ರಾಜ್ಯವನ್ನು ಸುತ್ತಾಡಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದು ವಿರೋಧ ಪಕ್ಷದವರು ಇಲ್ಲಸಲ್ಲದ ಟೀಕೆಗಳನ್ನು ಮಾಡುತ್ತಿದ್ದು ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ರಾಜ್ಯದ ಆಡಳಿತ ನಡೆಸಲಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಾಯಕತ್ವದ ಬಗ್ಗೆ ಯಾರಿಗೂ ಬೇಸರವಿಲ್ಲ. ಅದು ಕೇವಲ ವಿರೋಧ ಪಕ್ಷದವರ ಮಾತಿಗಷ್ಟೇ ಸೀಮಿತವಾಗಿದ್ದು ಉಪಮುಖ್ಯ ಮಂತ್ರಿಯವರ ಒಪ್ಪಿಗೆಯಂತೆ ಮುಖ್ಯಮಂತ್ರಿ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದಾರೆಂದರು.

ಡಿಕೆಶಿ ಬಿಜೆಪಿ ಸೇರುವರೇ ಎಂಬ ಪ್ರಶ್ನೆಗೆ ಉತ್ತರಿಸಿ, ಅವರು ಪಕ್ಷ ಬಿಟ್ಟು ಹೋಗಿದ್ದರೆ ಯಾವತ್ತೋ ಮುಖ್ಯಮಂತ್ರಿಯಾಗುತ್ತಿದ್ದರು. ಬಿ.ಜೆ.ಪಿ ಯವರು ಇಲ್ಲಸಲ್ಲದ ಹೇಳಿಕೆಗಳನ್ನು ನೀಡುತ್ತಿದ್ದಾರೆಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ರಾಜೀವ್ ಗಾಂಧಿಯವರ ಕಾಲದಿಂದ ಕಾಂಗ್ರೆಸ್ ಪಕ್ಷದಲ್ಲಿ ಇದ್ದು ಪಕ್ಷ ರಾಷ್ಟ್ರ ಮಟ್ಟದಲ್ಲಿ ದೊಡ್ಡ ಜವಾಬ್ದಾರಿಯನ್ನು ನೀಡುವ ಜತೆಗೆ ನಾಯಕತ್ವದ ಹೊಣೆಗಾರಿಕೆಯನ್ನು ನೀಡಿದೆ ಎಂದು ತಿಳಿಸಿದರು.

ಗುದ್ದಲಿ ಪೂಜೆ: ಬೆಟ್ಟದಾಸನದೊಡ್ಡಿ ಗ್ರಾಮದಲ್ಲಿ 5 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ದುಂಡನಹಳ್ಳಿ ಹಳ್ಳಕ್ಕೆ ಚೆಕ್‌ಡ್ಯಾಂ ಹಾಗೂ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದರು.ಈ ವೇಳೆ ಮಲ್ಲನಕುಪ್ಪೆ ಗ್ರಾ.ಪಂ. ಅಧ್ಯಕ್ಷ ಗಿರಿಯಪ್ಪ, ಸದಸ್ಯರಾದ ವಾಸು, ಬೋರಯ್ಯ, ಟಿ.ಎ.ಪಿ.ಸಿ.ಎಂ.ಎಸ್ ನಿರ್ದೇಶಕರಾದ ಚಂದ್ರನಾಯಕ್, ಶಂಕರಲಿಂಗಯ್ಯ, ಮುಖಂಡರಾದ ವೆಂಕಟೇಶ್, ರವಿ, ಮಧು, ಶಿವರಾಮು, ಹರೀಶ್, ಪುಟ್ಟಣ್ಣ, ನಾಗರಾಜು, ಕುಮಾರ್, ನಿವೃತ್ತ ಪ್ರಾಂಶುಪಾಲ ಪುಟ್ಟಲಿಂಗಯ್ಯ, ಡಾ.ವಿನುತ ಇದ್ದರು.

ಮನೆ ಮನಗಳಿಗೆ ಜ್ಞಾನದ ದೀವಿಗೆ ಹಚ್ಚೋಣ

ಕೆ.ಆರ್.ನಗರ: ಕ್ಷೇತ್ರದ ಪ್ರತಿ ಗ್ರಾಮಗಳಲ್ಲಿಯೂ ಗ್ರಂಥಾಲಯ ಆರಂಭಿಸಿ ಆ ಮೂಲಕ ಮನೆ ಮನಗಳಿಗೆ ಜ್ಞಾನದ ದೀವಿಗೆ ಹಚ್ಚಲು ನಿರ್ಧರಿಸಿದ್ದು ಈ ಯೋಜನೆಯನ್ನು ಶೀಘ್ರದಲ್ಲಿಯೇ ಅನುಷ್ಠಾನಗೊಳಿಸುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ತಾಲೂಕಿನ ಮಾವತ್ತೂರು ಗ್ರಾಮದಲ್ಲಿ ಡಿಜಿಟಲ್ ಗ್ರಂಥಾಲಯ ಉದ್ಘಾಟಿಸಿ ನಂತರ ನಡೆದ ಸಭೆಯಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳು ಮತ್ತು ನಾಗರೀಕರು ನಿಗದಿತ ಸಮಯದಲ್ಲಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗ್ರಂಥಾಲಯಗಳು ಇತ್ತೀಚಿಗೆ ಅರಿವಿನ ಕೇಂದ್ರಗಳಾಗಿದ್ದು ಅಲ್ಲಿಗೆ ಭೇಟಿ ನೀಡಿದರೆ ವ್ಯಕ್ತಿಯ ಜ್ಞಾನ ಭಂಡಾರ ಹೆಚ್ಚಲಿದ್ದು ಇದನ್ನು ಅರಿತು ಪೋಷಕರು ತಮ್ಮ ಮಕ್ಕಳು ಅಲ್ಲಿಗೆ ಹೋಗುವಂತೆ ಪ್ರೇರೇಪಣೆ ನೀಡಬೇಕು. ಕಾರ್ಯಕ್ರಮಗಳ ಹೆಸರಿನಲ್ಲಿ ಹಣ ಪೋಲು ಮಾಡುವ ಬದಲು ಮುಂದಿನ ದಿನಗಳಲ್ಲಿ ಗ್ರಂಥಾಲಯಗಳಿಗೆ ಪುಸ್ತಕ ನೀಡಬೇಕೆಂದು ನುಡಿದರು.

ಕೆ.ಆರ್.ನಗರ ತಾಲೂಕು ಮಾವತ್ತೂರು ಗ್ರಾಮದಲ್ಲಿ ಡಿಜಿಟಲ್ ಗ್ರಂಥಾಲಯ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಮಾವತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಈಗಾಗಲೇ ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದ್ದು ಮತ್ತಷ್ಟು ಹಣ ಕೊಡಿಸುವ ಭರವಸೆ ನೀಡಿದರಲ್ಲದೆ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ನಡೆಯಬೇಕಾದರ ಜನರೂ ಕೈ ಜೋಡಿಸಬೇಕೆಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಕನ್ಯಕೃಷ್ಣನಾಯಕ, ಉಪಾಧ್ಯಕ್ಷೆ ಭವ್ಯಶಂಕರ್, ಸದಸ್ಯರಾದ ಜ್ಯೋತಿಚನ್ನಕೇಶವ, ದೇವಯ್ಯ, ಕೇಬಲ್ ಮಹದೇವ್, ಲೋಹಿತ್, ಜಗದೀಶ್‌ರಾಜೇಅರಸ್, ಪಿಡಿಒ ಧನಂಜಯ್, ಗ್ರಂಥಾಲಯದ ರಂಗೇಶ, ಮುಖಂಡರಾದ ಮಹದೇವನಾಯಕ, ಮಹೇಶ್ ಅರಸ್, ಮಾಲೇಗೌಡ, ಆದರ್ಶರಾಜೇಅರಸ್, ರಾಮಯ್ಯ, ಹೇಮಂತ್‌ಕುಮಾರ್, ವೀರರಾಜೇ ಅರಸ್, ವೆಂಕಟೇಶ್, ರಾಮು, ಸೋಮಾಚಾರ್, ಧನರಾಜ್, ಕರಿಯಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ವಕ್ತಾರ ಸೈಯದ್‌ಜಾಬೀರ್, ಗುತ್ತಿಗೆದಾರ ಕೃಷ್ಣೇಗೌಡ, ಇಂಜಿನಿಯರ್ ರವಿಕುಮಾರ್ ಹಾಜರಿದ್ದರು.

ಬೌದ್ಧಗಯಾ ಆಡಳಿತ ಬುದ್ಧ ಭಕ್ತರಿಗೆ ಕೊಡಿ

ಮಂಡ್ಯ: ಬಿಹಾರದ ಬೌದ್ಧಗಯಾ ಕೇಂದ್ರದ ಸಂಪೂರ್ಣ ಆಡಳಿತವನ್ನು ಮೂಲ ಬುದ್ಧ ಅನುಯಾಯಿಗಳಿಗೆ ಬಿಡಿಸಿಕೊಡುಬೇಕು ಎಂದು ಬೆಂಗಳೂರಿನ ಸ್ಫೂರ್ತಿಧಾಮದ ಧಮ್ಮವೀರ ಬಂತೇಜಿ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಹಾರದ ಬೌದ್ಧಗಯಾ ಕೇಂದ್ರವು ಹಿಂದಿನಿಂದ ಬುದ್ಧರ ಅನುಯಾಗಿಗಳಾಗಿ ಬೌದ್ಧರ ಸಿದ್ಧಾಂತಗಳನ್ನು ಪಾಲಿಸುವವರಿಗೆ ನೀಡಬೇಕು ಎಂದರು. ಸದರಿ ಕೇಂದ್ರವನ್ನು ಬೌದ್ಧರಿಗೆ ವಹಿಸಬೇಕು ಎಂಬ ಜಾಗೃತಿಯನ್ನು ರಾಷ್ಟ್ರಾದ್ಯಂತ ಮೂಡಿಸಲಾಗುತ್ತಿದೆ. ಕೂಡಲೇ ಸಂಬಂಧಿತರು ಆಡಳಿತ ವ್ಯವಸ್ಥೆಯನ್ನು ವಹಿಸಿಕೊಟ್ಟು, ಸಂಘರ್ಷಗಳಿಗೆ ಪೂರ್ಣ ವಿರಾಮ ಹಾಕಲು ಮುಂದಾಗಬೇಕು ಎಂದು ಕೋರಿದರು. ಬೌದ್ಧ ಧಮ್ಮ ಸ್ವೀಕರಿಸಿ ಬುದ್ಧರ ಅನುಯಾಯಿಗಳಾದವರು ಎಸ್ಸಿ, ಎಸ್ಟಿ ಕಾಯಿದೆಯಡಿ ಸವಲತ್ತುಗಳನ್ನು ಸ್ವೀಕರಿಸುವುದು ಅಕ್ಷಮ್ಯ ಅಪರಾಧ ಎಂದು ಅಂಬೇಡ್ಕರ್ ವಾರಿಯರ್ಸ್‌ನ ಅಧ್ಯಕ್ಷ ಗಂಗರಾಜು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು. ಸುದ್ದಿಗೋಷ್ಠಿಯಲ್ಲಿ ಬುದ್ಧ ಭಾರತ ಫೌಂಡೇಷನ್‌ನ ಅಧ್ಯಕ್ಷ ಜೆ.ರಾಮಯ್ಯ, ಅಮ್ಜದ್ ಪಾಷ, ಡಾ.ಶ್ರೀನಿವಾಸ್, ಸಿದ್ದರಾಮು ಇದ್ದರು.

ಹಕ್ಕಿಜ್ವರ ಭೀತಿ: ಕೇರಳ ಗಡಿಯಲ್ಲಿ ಕಟ್ಟೆಚ್ಚರ

ಚಾಮರಾಜನಗರ: ಹಕ್ಕಿ ಜ್ವರ ಭೀತಿ ಹಿನ್ನೆಲೆ ಕರ್ನಾಟಕ- ಕೇರಳ ಗಡಿಯಲ್ಲಿ ಪಶು ಇಲಾಖೆಯು ಕಟ್ಟೆಚ್ಚರ ವಹಿಸಿದ್ದು ಕೇರಳದಿಂದ ಕರ್ನಾಟಕಕ್ಕೆ ಬರುವ ವಾಹನಗಳಿಗೆ ಸ್ಯಾನಿಟೈಜೇಷನ್ ಮಾಡಲಾಗುತ್ತಿದೆ.ಕೇರಳದಿಂದ ಕರ್ನಾಟಕಕ್ಕೆ ಕೋಳಿ ತುಂಬಿಕೊಂಡು ಬರುವ ವಾಹನಗಳಿಗೆ ಔಷಧ ಸಿಂಪಡಿಸಿ ಕರ್ನಾಟಕದ ಒಳಗೆ ಬಿಡಲಾಗುತ್ತಿದೆ.ಹಕ್ಕಿ ಜ್ವರ ಹರಡದಂತೆ ಮುನ್ನೆಚ್ಚರಿಕೆ ವಹಿಸಿರುವುದನ್ನು ಪಶು ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರಾದ ಡಾ.ಶಿವಣ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.ಇನ್ನು, ಭಾನುವಾರದಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಹಕ್ಕಿಜ್ವರ ನಿಯಂತ್ರಣಕ್ಕೆ ಎಲ್ಲಾ ರೀತಿಯ ಕ್ರಮಕೈಗೊಂಡಿದ್ದು ಸೋಂಕಿತ ಪಕ್ಷಿಗಳನ್ನು ಸೂಕ್ತ ವಿಲೇವಾರಿ ಮಾಡಲಾಗುತ್ತಿದೆ ಹೇಳಿದ್ದರು. ಹಕ್ಕಿ ಜ್ವರ ಬೇರೆ ಪ್ರದೇಶಗಳಿಗೆ ಹರಡದಂತೆ ಎಲ್ಲಾ ರೀತಿಯ ಕ್ರಮವನ್ನು ಇಲಾಖೆ ಕೈಗೊಂಡಿದೆ.ಸೋಂಕಿತ ಪಕ್ಷಿಗಳನ್ನು ಸೂಕ್ತ ವಿಲೇವಾರಿ ಮಾಡಿದ್ದು ಮುಂಜಾಗ್ರತೆ ವಹಿಸಿದ್ದೇವೆ, ಗಡಿಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚನೆ ನೀಡಲಾಗಿದೆ ಎಂದಿದ್ದರು.

ನೂತನ ಆಡಿಯೊ ಮೆಟ್ರಿ ಕೊಠಡಿ ಲೋಕಾರ್ಪಣೆ

ಚಾಮರಾಜನಗರ: ನಗರದ ಹೊರವಲಯದ ಯಡಬೆಟ್ಟದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋದನಾ ಆಸ್ಪತ್ರೆಯಲ್ಲಿ ಮೊಟ್ಟಮೊದಲ ಬಾರಿಗೆ ತೆರೆಯಲಾದ ನೂತನ ಕಿವಿ, ಮೂಗು, ಗಂಟಲು ವಿಭಾಗದ ಆಡಿಯೊಮೆಟ್ರಿ ಕೊಠಡಿಯನ್ನು ಸಂಸ್ಥೆಯ ನಿರ್ದೇಶಕ ಮಂಜುನಾಥ್ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಜಿಲ್ಲೆಯಲ್ಲಿ ಆಡಿಯೊಮೆಟ್ರಿ ಇಲ್ಲದ ಕಾರಣದಿಂದ ಜಿಲ್ಲೆಯಲ್ಲಿ ಶ್ರವಣದೋಷಯುಳ್ಳವರು ಮೈಸೂರಿನಲ್ಲಿರುವ ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆಗೆ ಹೋಗಿ ಪರೀಕ್ಷೆ ಮಾಡಿಸಿ ವರದಿ ತರಬೇಕಾಗಿತ್ತು. ಇದನ್ನು ಮನಗಂಡು ನೂತನ ಆಡಿಯೊಮೆಟ್ರಿ ಕೊಠಡಿ ತೆರೆಯಲಾಗಿದೆ. ಇಲ್ಲೆಯೇ ಪರೀಕ್ಷಿಸಿ ಪ್ರಮಾಣಪತ್ರ ವಿತರಿಸಲಾಗುತ್ತದೆ ಎಂದರು.

ಇಎನ್‌ಟಿ ತಜ್ಞ ಡಾ.ಷರೀಫ್ ಮಾತನಾಡಿ, ನಮ್ಮ ಆಸ್ಪತ್ರೆಯಲ್ಲಿ ' ಆಡಿಯೊಮೆಟ್ರಿ ಕೊಠಡಿ ಜನರಸೇವೆಗೆ ಸಮರ್ಪಣೆಗೊಂಡಿದೆ. ಜಿಲ್ಲೆಯಲ್ಲಿ ಶ್ರವಣದೋಷಯುಳ್ಳವರಿಗೆ ಪರೀಕ್ಷೆ ಮಾಡಿ ನೈಜ ವರದಿ ನೀಡಬಹುದಾಗಿದೆ. ಜಿಲ್ಲೆಯ ಜನತೆಗೆ ಅನುಕೂಲವಾಗಿದೆ ಎಂದರು.

ಇದೇ ಸಂದರ್ಭದಲ್ಲಿ 8 ಮಂದಿಗೆ ಶ್ರವಣ ಸಾಧನ ವಿತರಿಸಲಾಯಿತು. ನೌಕರರ ಸಂಘದ ಅಧ್ಯಕ್ಷೆ ಡಾ. ರೇಣುಕಾದೇವಿ. ಜಿಲ್ಲಾ ಶಸ್ತ್ರಚಿಕಿತ್ಸಕ ಕೆ. ಆರ್.ಮಹೇಶ್, ನಿವಾಸಿ ವೈದ್ಯಾಧಿಕಾರಿ ಡಾ.ಮಹೇಶ್, ಡಾ.ರಮೇಶ್, ಡಾ. ಸುಷ್ಮಾ ಇತರರು ಹಾಜರಿದ್ದರು.

ಚಾಮರಾಜನಗರದ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಆಡಿಯೊಮೆಟ್ರಿ ಕೊಠಡಿಯನ್ನು ಸಂಸ್ಥೆಯ ನಿರ್ದೇಶಕ ಮಂಜುನಾಥ್ ಲೋಕಾರ್ಪಣೆಗೊಳಿಸಿದರು.

ಹೊಸ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಿ

ಮಂಡ್ಯ: ನಗರಸಭೆ ವ್ಯಾಪ್ತಿಗೆ ಸೇರ್ಪಡೆಯಾಗದ ನಗರದ ಹೊರವಲಯಗಳ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡುವಂತೆ ಮಂಡ್ಯ ನಗರ ಹೊರವಲಯ ಬಡಾವಣೆಗಳ ಕ್ಷೇಮಾಭಿವೃದ್ಧಿ ಒಕ್ಕೂಟದ ಅಧ್ಯಕ್ಷ ಡಾ.ಹೆಚ್.ಆರ್.ಅಶೋಕ್ ಕುಮಾರ್ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯದಲ್ಲಿ ಹಲವು ಹೊಸ ಬಡಾವಣೆಗಳು ನಿರ್ಮಾಣಗೊಂಡಿದ್ದು, ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಇದ್ದರೂ ನಗರಸಭೆಗೂ ಸೇರ್ಪಡೆಯಾಗದೆ ಸವಲತ್ತುಗಳಿಂದ ವಂಚಿತವಾಗಿವೆ ಎಂದರು. ಬಹುತೇಕ ಬಡಾವಣೆಗಳು ಶ್ರೀರಂಗಪಟ್ಟಣ ಚುನಾವಣಾ ಕ್ಷೇತ್ರಗಳಿಗೆ ಒಳಪಟ್ಟಿದ್ದು, ಮಂಡ್ಯದ ಗ್ರಾಪಂಚಾಯಿಗಳಿಗೆ ಕಂದಾಯ ಪಾವತಿ ಮಾಡುವಂತಾಗಿದೆ. ಇದರಿಂದಾಗಿ ಯಾವ ಸೌಕರ್ಯಗಳಿರಲಿ, ಕಾವೇರಿ ನದಿ ನೀರು ಪೂರೈಕೆಯಾಗದ ಸ್ಥಿತಿಯಲ್ಲಿ ಬಡಾವಣೆಗಳಿವೆ ಎಂದು ವಿಷಾದ ವ್ಯಕ್ತಪಡಿಸಿದರು. ಸದರಿ ಬಡಾವಣೆಗಳಿಗೆ ಕಾವೇರಿ ನೀರು, ರಸ್ತೆ, ಚರಂಡಿ, ವಿದ್ಯುತ್, ಕಸ ವಿಲೇವಾರಿ, ಬಡಾವಣೆ ನಿವಾಸಿಗಳಿಗೆ ಆಯಾ ಪಂಚಾಯಿತಿ ವ್ಯಾಪ್ತಿಗೆ ಬರುವಂತೆ ಮತಗಟ್ಟೆ ಸ್ಥಾಪನೆ, ಉದ್ಯಾನ ಗಡಿ ಗುರುತಿಸುವಿಕೆ ಮಾಡಿ ನಗರಸಭೆ ವ್ಯಾಪ್ತಿಗೆ ಸೇರಿಸಿ ವಾರ್ಡ್‌ಗಳ ವಿಂಗಡನೆ ಮಾಡುವಂತೆ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಕೆ.ಮಹಾಂತಪ್ಪ, ಎನ್. ರಾಮಚಂದ್ರ, ಹೆಚ್.ಎಂ.ಬಸವರಾಜು, ಕಿಶೋರ್ ಇದ್ದರು.

ಪತ್ನಿ ಕೊಲೆಗೆ ಯತ್ನ: ಪತಿ ಸೆರೆ

ಕಲಬುರಗಿ: ಹೆಂಡತಿಯ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಲಾಗಿದ್ದು, ಬೆಂಗಳೂರು, ಹೈದರಾಬಾದ್, ತಮಿಳು ನಾಡು ಮುಂತಾದ ಕಡೆಗೆ ನಾನಾ ಹೆಸರುಗಳಿಂದ ತಲೆಮರಿಸಿ ಕೊಂಡಿದ್ದ ಆರೋಪಿ ಮೌಲಾಲಿ ಕಾನಾಗಡ್ಡನ 6 ವರ್ಷಗಳ ಬಳಿಕ ಬೆಂಗಳೂರಿನಲ್ಲಿ ಪೊಲೀಸರ ಬಲೆಗೆ ಬಿದ್ದಿದ್ದಾನೆ. ಹೆಸರು ಬದಲಿಸಿ ಸರ್ಜಾಪುರದ ಕಟ್ಟಡ ಕಾಮಗಾರಿ ಸ್ಥಳದಲ್ಲಿ ವಾಸ ವಾಗಿದ್ದ ಮೌಲಾಲಿಯನ್ನು ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ,
ಜಲಭವನ, ನಂ.ಪಿ–4, 10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ,
3ನೇ ಮಹಡಿ, ಸರಸ್ವತಿಪುರಂ, ಮೈಸೂರು – 570 009
Ph: 0821-2545894 Email: kwbcemys2014@gmail.com
IFT ಸಂಖ್ಯೆ: 1505/2024–25 ದಿನಾಂಕ: 27.02.2025

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ವಿವರ: "ಇಲವಾಲ ಮತ್ತು ಸುತ್ತಮುತ್ತಲ 52 ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯಿಂದ ಹೆಚ್ಚುವರಿ 20 ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯಡಿ ಜ್ಯಾಕ್‌ವೆಲ್, ಐಪಿಎಸ್ ಮತ್ತು ಜಲ ಶುದ್ಧೀಕರಣ ಘಟಕದಲ್ಲಿ ಪಂಪಿಂಗ್ ಯಂತ್ರಗಳ ಒದಗಿಸಿ, ಅಳವಡಿಸಿ, ವಿದ್ಯುದೀಕರಣ ಮತ್ತು ಕಾರ್ಯಾರಂಭ ಗೊಳಿಸುವುದು, ನಿಲಮಟ್ಟದ ಜಲಸಂಗ್ರಹಗಾರ ನಿರ್ಮಾಣ, ಐಪಿಎಸ್ ಹಾಗೂ ಜಲ ಶುದ್ಧೀಕರಣ ಘಟಕದಲ್ಲಿ ಪಂಪ್‌ಹೌಸ್ ನಿರ್ಮಾಣ, ಹಾಗೂ ಸಂಬಂಧಿತ ಕಾಮಗಾರಿಗಳು ಸೇರಿದಂತೆ ಡಿಸೈನ್, ಬಿಲ್ಡ್ & ಟ್ರಾನ್ಸ್ ಫರ್ (DBT) ಮಾದರಿ ಯಲ್ಲಿ ಟೆಂಡರ್‌ನ್ನು ರೂ.546.64 ಲಕ್ಷಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT314 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp. karnataka.gov.in ಸಂಪರ್ಕಿಸುವುದು.

DIPR/DDMYS/1377/KSMCA/1006/2024-25 ಸಹಿ/– ಮುಖ್ಯ ಅಭಿಯಂತರರು

ರಾಜ್ಯಪಾಲರಿಂದ ಗ್ಯಾರಂಟಿ ಗುಣಗಾನ

← ಮೊದಲಪುಟದಿಂದ

ಆರ್ಥಿಕತೆ ಸದೃಢ: ರಾಜ್ಯ ಸರಕಾರ 2024–25ನೇ ಸಾಲಿನಲ್ಲಿ ರಾಜ್ಯದ ಆರ್ಥಿಕ ಬೆಳವಣಿಗೆ ಉತ್ತೇಜಿಸುವುದರೊಂದಿಗೆ ವಿತ್ತೀಯ ನಿರ್ವಹಣೆ ಉತ್ತಮವಾಗಿ ನಿರ್ವಹಿಸಿದೆ. 2024–25ರ ಆರ್ಥಿಕ ವರ್ಷದ ಮೊದಲ 3 ತ್ರೈಮಾಸಿಕದಲ್ಲಿ ರಾಜ್ಯದ ರಾಜಸ್ವ ಸಂಗ್ರಹಣೆಯೂ 1,81,908 ಕೋಟಿ ರು. ತಲುಪಿರುತ್ತದೆ. ಕಳೆದ ಸಾಲಿಗೆ ಹೋಲಿಸಿದರೆ ಡಿಸೆಂಬರ್ ಅಂತ್ಯದವರೆಗೆ ರಾಜಸ್ವ ಸ್ವೀಕೃತಿಯು ಶೇ.13ರಷ್ಟು ಬೆಳವಣಿಗೆ ಸಾಧಿಸಿದೆ ಎಂದು ಹೇಳುವ ಮೂಲಕ ರಾಜ್ಯದ ಆರ್ಥಿಕ ಸ್ಥಿತಿ ಸದೃಢವಾಗಿದೆ ಎಂಬುದನ್ನು ಪ್ರತಿಪಾದಿಸಿದ್ದಾರೆ.

ಮೂಲ ಸೌಕರ್ಯ ಒದಗಿಸುವುದರಲ್ಲೂ ಕರ್ನಾಟಕ ಇಡೀ ದೇಶದಲ್ಲೇ ಮುಂಚೂಣಿ ರಾಜ್ಯವಾಗಿದೆ. ರಾಜ್ಯ ತನ್ನ ಬಜೆಟ್‌ನಲ್ಲಿ ಶೇ. 15.01 ರಷ್ಟು ಸಂಪತ್ತನ್ನು ಬಂಡವಾಳ ವೆಚ್ಚಗಳಿಗೆ ವಿನಿಯೋಗಿಸುತ್ತಿದೆ. ಇದು ಮಹಾರಾಷ್ಟ್ರ, ತಮಿಳುನಾಡು ಮತ್ತು ತೆಲಂಗಾಣ ಮುಂತಾದ ಪ್ರಗತಿಪರ ರಾಜ್ಯಗಳಿಗಿಂತ ಹೆಚ್ಚಿನ ಪ್ರಮಾಣದ್ದಾಗಿದೆ ಎಂದು ಹೇಳುವ ಮೂಲಕ ರಾಜ್ಯ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿಲ್ಲ ಎಂಬುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಪೊಲೀಸ್ ಠಾಣೆಗಳು ಜನಸ್ನೇಹಿಯಾಗಿ ಕೆಲಸ ಮಾಡುತ್ತಿವೆ. ಸೈಬರ್ ಅಪರಾಧಗಳಿಗೆ ಕಡಿವಾಣ ಹಾಕಲು ಸರಕಾರ ಆದ್ಯತೆ ನೀಡುತ್ತಿದೆ. ಸರಕಾರ ಬಂದಾಗಿನಿಂದ ಗ್ಯಾರಂಟಿ ಯೋಜನೆಗಳಿಗೆ 70,000 ಕೋಟಿ ರು. ಹಣ ಬಿಡುಗಡೆ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ವರ್ಷಕ್ಕೆ 90,000 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಲಾಗುತ್ತಿದೆ. ಸರಕಾರ ಅಭಿವೃದ್ಧಿ ವೇಗ ಸದೃಢಗೊಳಿಸಿದೆ. ಆಡಳಿತ ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸುವ ಅವಕಾಶವಾಗಿ ಬಳಕೆಗೆ ಬದ್ಧವಾಗಿದೆ ಎಂದು ವಿವರಿಸಿದರು.

ರಾಜ್ಯಪಾಲರ ಸಮಯವನ್ನು ಈ ಸರಕಾರ ವ್ಯರ್ಥ ಮಾಡಿದೆ. ಅಭಿವೃದ್ಧಿಯ ವೇಗ ಚುರುಕುಗೊಳಿಸುವುದರಲ್ಲಿ ಮತ್ತು ಸರಕಾರದ ಹಣಕಾಸಿನ ವ್ಯವಸ್ಥೆ ಇನ್ನಷ್ಟು ಸದೃಢಗೊಳಿಸುವಲ್ಲಿ ಯಶಸ್ವಿಯಾಗಿದೆ ಎಂಬ ಹಸಿ ಸುಳ್ಳನ್ನು ಈ ಕಾಂಗ್ರೆಸ್ ಸರಕಾರವು ಗೌರವಾನ್ವಿತ ರಾಜ್ಯಪಾಲರ ಬಾಯಲ್ಲಿ ಹೇಳಿಸಿದೆ.

– ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ಘೋಷಣೆ ಸಕ್ಸಸ್

ಕಳೆದ ಬಜೆಟ್‌ನಲ್ಲಿ ಮಾಡಿದ್ದ 334 ಘೋಷಣೆಗಳ ಪೈಕಿ 331 ಘೋಷಣೆಗಳಿಗೆ ಸರಕಾರಿ ಆದೇಶ ಆಗಿದೆ. ಸಾಮಾಜಿಕ ಪಿಂಚಣಿ ಯೋಜನೆ ಸೇರಿ ನೇರ ನಗದು, ಸಬ್ಸಿಡಿ ಪ್ರೋತ್ಸಾಹದಿಂದ 1.25 ಕೋಟಿಗೂ ಹೆಚ್ಚು ಕುಟುಂಬಗಳಿಗೆ ಅನುಕೂಲ ಆಗಿದೆ. 13 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗಿದೆ. ಉನ್ನತ ಶಿಕ್ಷಣದಲ್ಲಿ 1,088 ಸಹಾಯಕ ಪ್ರಾಧ್ಯಾಪಕರ ನೇಮಕ ಮಾಡಲಾಗಿದೆ. 8,311 ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಸರಕಾರದ ಸಾಧನೆಗಳನ್ನು ರಾಜ್ಯಪಾಲರು ವಿವರಿಸಿದರು. ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ತೀವ್ರರೂಪದ ಅತಿವೃಷ್ಟಿ, ಅನಾವೃಷ್ಟಿಗಳಿಲ್ಲದ ಕಾರಣ ರೈತರ ಕೈಗೆ ಉತ್ತಮ ಫಸಲು ಸಿಕ್ಕಿದೆ. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಂದ ಸುಮಾರು 149 ಲಕ್ಷ ಟನ್ನುಗಳಷ್ಟು ಕೃಷಿ ಉತ್ಪಾದನೆ ನಿರೀಕ್ಷಿಸಲಾಗಿದೆ. ಸರಕಾರ ತೆಗೆದುಕೊಂಡ ಕಲ್ಯಾಣ ಕಾರ್ಯಕ್ರಮಗಳಿಂದ ರಾಜ್ಯದ ರೈತ ಕುಟುಂಬಗಳಲ್ಲಿ ಆತ್ಮಹತ್ಯೆಗಳ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ನನ್ನ ಸರಕಾರ ರಚನೆಯಾದಾಗಿಂದಲೂ ತೊಗರಿ ಮತ್ತು ಕೊಬ್ಬರಿಗೆ ಬೆಲೆಗಳು ಕುಸಿದಾಗ ರೈತರ ನೆರವಿಗೆ ನಿಂತು ಪ್ರೋತ್ಸಾಹ ಧನ ನೀಡಿದೆ. ಕೃಷಿಭಾಗ್ಯ ಯೋಜನೆ ಮುಂದುವರಿಸುವ ಮೂಲಕ ಅಗತ್ಯ ಇರುವ ಕಡೆಗಳಲ್ಲೆಲ್ಲಾ ಕೃಷಿ ಹೊಂಡಗಳನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಗುತ್ತಿಗೆದಾರರಿಗೆ ಸಿಎಂ ಅಭಯ

← ಮೊದಲಪುಟದಿಂದ

ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್, ಕಳೆದ ಸರಕಾರಕ್ಕಿಂತ ಈ ಸರಕಾರದಲ್ಲಿ ಕಮಿಷನ್ ಹೆಚ್ಚಿದೆ. ಕಮಿಷನ್ ಇಲ್ಲ ಅಂತ ಹೇಳಲ್ಲ, ಇದೆ. ಕಳೆದ ಸರಕಾರಕ್ಕಿಂತ ಹೆಚ್ಚಿದೆ. ಶೇ.40 ಅಂತ ಅಲ್ಲ. ಒಟ್ಟಿನಲ್ಲಿ ಪರ್ಸಂಟೇಜ್ ಹೆಚ್ಚಿದೆ. ಸಿಎಂ, ಸಚಿವರ ಬಗ್ಗೆ ನಾವು ಆರೋಪಿಸಿಲ್ಲ. ಆದರೆ ಅಧಿಕಾರಿಗಳ ಹಂತದಲ್ಲಿ ಹೆಚ್ಚಾಗಿದೆ ಎಂದು ಆರೋಪಿಸಿದರು.

ರಾಹುಲ್, ಖರ್ಗೆ ಭೇಟಿಗೆ ಸಿದ್ಧತೆ

ಅಧಿಕಾರಿಗಳು ಪಡೆಯುತ್ತಿರುವ ಕಮಿಷನ್‌ಗೆ ಸಂಬಂಧಿಸಿದಂತೆ ಕ್ರಮವಹಿಸುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ. ಒಂದು ವೇಳೆ ಈ ವ್ಯವಸ್ಥೆ ಸರಿಹೋಗದಿದ್ದರೆ, ಮುಂದಿನ ದಿನಗಳಲ್ಲಿ ನಾವು ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಗುತ್ತಿಗೆದಾರರು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಅಗತ್ಯ ಕ್ರಮವಹಿಸುವ ಸ್ಪಷ್ಟ ಭರವಸೆ ನೀಡಲಾಗಿದೆ. ಆದರೂ ಹೈಕಮಾಂಡ್ ಭೇಟಿ ಮಾಡುವುದಾದರೆ, ಮಾಡಲಿ ನನ್ನ ಅಭ್ಯಂತರ ವಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ಎಲ್ಲ ವಿಷಯಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಅದನ್ನು ಸರಿಪಡಿಸುವ ಭರವಸೆಯನ್ನು ಸಿದ್ದರಾಮಯ್ಯ ಅವರು ನೀಡಿದ್ದಾರೆ. ಒಂದು ವೇಳೆ ಸರಿಪಡಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡಲಾಗುವುದು. ನಮಗೆ ಸಾಕಷ್ಟು ಆರ್ಥಿಕ ಸಮಸ್ಯೆಯಾಗಿದೆ. ಆದಷ್ಟು ಬೇಗ ಬಾಕಿ ಬಿಲ್ ಪಾವತಿಸುವಂತೆ ಮನವಿ ಮಾಡಿದ್ದೇವೆ. ಈ ಮಾರ್ಚ್‌ನಲ್ಲಿ ಸಾವಿರ ಕೋಟಿ ರು. ಬಿಡುಗಡೆ ಮಾಡಿ. ಏಪ್ರಿಲ್‌ನಲ್ಲಿ 15 ಸಾವಿರ ಕೋಟಿ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇವೆ. ಏನು ಮಾಡಲಿದ್ದಾರೆ ಎನ್ನುವುದನ್ನು ಕಾದು ನೋಡಬೇಕಿದೆ ಎಂದರು. ಅಧಿಕಾರಿಗಳ ಮಟ್ಟದಲ್ಲಿ ನಡೆಯುತ್ತಿರುವ ಕಮಿಷನ್ ಆರೋಪಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ಲಂಚ ಪಡೆಯುವುದು ಹಾಗೂ ಲಂಚ ನೀಡುವುದು ಸಹ ಅಪರಾಧ. ಈ ರೀತಿಯ ಕೃತ್ಯದಲ್ಲಿ ಯಾರೂ ತೊಡಗಬಾರದು. ನಾನು ಇದುವರೆಗೂ ಹಣ ಬಿಡುಗಡೆ ಮಾಡಲು ಯಾರಿಂದಲೂ ದುಡ್ಡು ಪಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಬಳ್ಳಾರಿ: 7 ಸಾವಿರ ಕೋಳಿಗಳ ಹತ್ಯೆ

ಬಳ್ಳಾರಿ: ಹಕ್ಕಿಜ್ವರ ಸೋಂಕಿನ ಶಂಕೆಯ ಹಿನ್ನೆಲೆಯಲ್ಲಿ ಬಳ್ಳಾರಿ ಹೊರವಲಯದ ಕಪ್ಪಗಲ್ಲು ಗ್ರಾಮದಲ್ಲಿನ ಖಾಸಗಿ ಫಾರಂನಲ್ಲಿದ್ದ ಇತರ ಏಳು ಸಾವಿರ ಕೋಳಿಗಳನ್ನೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಅಧಿಕಾರಿಗಳು ಹತ್ಯೆ ಮಾಡಿದ್ದಾರೆ. ರವಿ ಫಾರಂನಲ್ಲಿದ್ದ 15 ಸಾವಿರ ಕೋಳಿಗಳ ಪೈಕಿ ಶನಿವಾರ 8 ಸಾವಿರ ಕೋಳಿಗಳು ಸಾವಿಗೀಡಾಗಿದ್ದವು. ಅದೇ ದಿನ ಫಾರಂಗೆ ಬಂದು ಪರಿಶೀಲಿಸಿದ ಅಧಿಕಾರಿಗಳು, ನಿತ್ರಾಣ ಸ್ಥಿತಿಯಲ್ಲಿದ್ದ ಎಲ್ಲ ಕೋಳಿಗಳನ್ನೂ ವೈಜ್ಞಾನಿಕವಾಗಿ ವಿಲೇವಾರಿ ಮಾಡಿದ್ದಾರೆ. ಕೋಳಿಗಳ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ.

ಮರಳು ಅಕ್ರಮ ಸಾಗಣೆ: ಲಾರಿ ವಶ

ಕೊಳ್ಳೇಗಾಲ: ತಾಲೂಕಿನ ಸಿದ್ದಯ್ಯನಪುರದ ಮಹದೇಶ್ವರ ಬಡಾವಣೆಯಲ್ಲಿ ಮರಳನ್ನು ಅಕ್ರಮವಾಗಿ ಲಾರಿಯಲ್ಲಿ ಸಾಗಣೆ ಮಾಡುತ್ತಿದ್ದವರ ಮೇಲೆ ಪೊಲೀಸರು ದಾಳಿ ನಡೆಸಿ ವಾಹನ ಜಪ್ತಿ ಮಾಡಿದ್ದಾರೆ. ಆರೋಪಿಗಳು ಮರಳನ್ನು ತುಂಬಿಕೊಂಡು ಖಾಲಿ ನಿವೇಶನದಲ್ಲಿ ಇಳಿಸುತ್ತಿದ್ದರು. ಖಚಿತ ಮಾಹಿತಿಯ ಆಧರಿಸಿ ಪಿಎಸ್‌ಐ ವರ್ಷ ಮತ್ತು ಸಿಬ್ಬಂದಿ ದಾಳಿ ಮಾಡಿದರು. ಮರಳು ಇಳಿಸುತ್ತಿದ್ದ ವ್ಯಕ್ತಿಗಳು ಪೊಲೀಸ್ ಜೀಪು ಕಂಡ ಕೂಡಲೇ ಲಾರಿಯನ್ನು ಬಿಟ್ಟು ಪರಾರಿಯಾದರು. ನಂತರ ಬೇರೆ ಚಾಲಕನನ್ನು ಕರೆಸಿ ಲಾರಿಯನ್ನು ಪೊಲೀಸರು ವಶಕ್ಕೆ ಪಡೆದರು. ಈ ಸಂಬಂಧ ಕೊಳ್ಳೇಗಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪೊಲೀಸರು ವಶಪಡಿಸಿಕೊಂಡ ಮರಳು ತುಂಬಿದ ಲಾರಿ.

ಪತ್ನಿ ಕಿರುಕುಳ: ಪತಿ ಆತ್ಮಹತ್ಯೆ

ಕಲಬುರಗಿ: ಹೆಂಡತಿಯ ಕಿರುಕುಳಕ್ಕೆ ಬೇಸತ್ತ ಗಂಡನೊಬ್ಬ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಕಲಬುರಗಿಯ ಮಹಾದೇವ ಬಡಾವಣೆಯಲ್ಲಿ ಸೋಮವಾರ ನಡೆದಿದೆ. ಆಳಂದ ತಾಲೂಕಿನ ರಾಕೇಶ್ (30) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. 6 ತಿಂಗಳ ಹಿಂದೆ ಮೇಘಾ ಎಂಬ ಯುವತಿಯನ್ನು ಮದುವೆಯಾಗಿದ್ದ ರಾಕೇಶ್, ಬಳಿಕ ಮನೆ ಕೆಲಸ ಸೇರಿದಂತೆ ಇತರ ವಿಷಯಗಳ ಕಾರಣಕ್ಕೆ ಪತ್ನಿಯ ಕಿರುಕುಳದಿಂದ ನೊಂದಿದ್ದ. ಮೇಘಾ ಸೇರಿದಂತೆ ಹಲವರ ವಿರುದ್ಧ ಚೌಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಂಗಾರಪೇಟೆ ಬಳಿ ಭೀಕರ ದುರಂತ
ಬೈಕ್‌ಗೆ ಕಾರ್ ಡಿಕ್ಕಿ: 5 ಸಾವು

ಕೋಲಾರ: ಬಂಗಾರಪೇಟೆ ತಾಲ್ಲೂಕಿನ ಕುಪ್ಪನಹಳ್ಳಿ ಬಳಿ ಚೆನ್ನೈ–ಬೆಂಗಳೂರು ಕಾರಿಡಾರ್ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ಭೀಕರ ಅಪಘಾತ ಸಂಭವಿಸಿದ್ದು, ಎರಡು ವರ್ಷದ ಮಗು ಸೇರಿ ಐವರು ಮೃತಪಟ್ಟಿದ್ದಾರೆ.

ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಕೆಜಿಎಫ್ ತಾಲ್ಲೂಕಿನ ಕಮ್ಮಸಂದ್ರದ ಒಂದೇ ಕುಟುಂಬದ ನಾಲ್ವರು ಬಲಿಯಾಗಿದ್ದಾರೆ. ಕೋಟಿಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪಕ ಸಂತೋಷ್‌ರ ಮಾವ ಮಹೇಶ (45), ಮಗಳು ಉದ್ವಿತ (2), ತಾಯಿ ರತ್ನಮ್ಮ (60) ಹಾಗೂ ಬೈಕ್ ಸವಾರ ದೊಡ್ಡೂರು ಗ್ರಾಮದ ಶ್ರೀನಾಥ್ (30) ಮೃತರು.

ಸಂತೋಷ್ ಪತ್ನಿ ಸುಶ್ಮಿತಾ ತುಂಬು ಗರ್ಭಿಣಿಯಾಗಿದ್ದು, ಶಿಶು ಸಮೇತ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಸಂತೋಷ್‌ರ ಮಗ ವಿರಾಟ್, ಅತ್ತೆ ಸುಜಾತ ಮತ್ತು ಕಾರಿನ ಚಾಲಕ ಅರುಣ್ ಅವರನ್ನು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬೆಂಗಳೂರಿನಿಂದ ಕಾರಿನಲ್ಲಿ ಕಮ್ಮಸಂದ್ರಕ್ಕೆ ತೆರಳುವ ವೇಳೆ ಈ ಅವಘಡ ಸಂಭವಿಸಿದೆ. ಅಪಘಾತ ತಪ್ಪಿಸಲು ಕಾರು ಚಾಲಕ ಪ್ರಯತ್ನಿಸಿದ್ದು ನಿಯಂತ್ರಣ ಕಳೆದುಕೊಂಡಿದ್ದಾರೆ. ಕುಪ್ಪನಹಳ್ಳಿ ಗ್ರಾಮಸ್ಥರಿಂದ ಮಾಹಿತಿ ಪಡೆದ ಬಂಗಾರಪೇಟೆ ಪೊಲೀಸರು ತಕ್ಷಣವೇ ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ 21.03.2025 ರಂದು ಬೆಳಿಗ್ಗೆ 10.30ಕ್ಕೆ ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ www.janabank.com ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	49328730000012	ಇಂಪುಶ್ರೀ ಆರ್	235.7
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #ಎಂಐಜಿ–10, ಹಂತ–1 ಯಲಹಂಕ ನ್ಯೂ ಎಕ್ಸ್‌ಟೆನ್ಶನ್ ಬೆಂಗಳೂರು–560064		
2	31838730053144	ಲತಾ ಈರೇಗೌಡ	56.3
3	31838730053071	ರಾಜು ಹೆಚ್ ಎಮ್	3
4	31838730052996	ಚೆಲುವರಾಜು ಸಿ	4.1
5	31838730052829	ಸರೋಜ ಮಾದೇಶ್ ನಾಯ್ಕ್	3.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560061.		
6	32568730026057	ಜವೀದ್ ಪಾಶಾ ಎ	9.5
7	32568730025972	ಕಿರಣ್ ಆರ್	31.1
8	32568730025219	ಪ್ರಕಾಶ್ ಆರ್	29.7
9	32568160003896	ಸಿದ್ದರಾಜು ಸಿ	40.5
10	32568160003755	ಪ್ರವೀಣ್ ಕುಮಾರ್ ಎನ್	10.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಆನೇಕಲ್ ಬಸ್ ನಿಲ್ದಾಣ ಎದುರು, ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಹತ್ತಿರ ಬೆಂಗಳೂರು–562106.		
11	46448160001779	ರಾಜಯ್ಯ ಎಮ್ಎನ್	53.6
12	46448160001766	ಪದ್ಮರಾಜಪ್ಪ ಎಮ್ ಸಿ	51.9
13	46448160001753	ನಾಗರಾಜಯ್ಯ ಎಮ್ ಸಿ	54.4
14	46448160001575	ಮಾದೇಶ್ ಎಸ್	31.7
15	46448160001562	ಮಾದೇಶ್ ಎಸ್	41.3
16	46448160006703	ಮಹೇಶ್‌ನಾಯಕ ಆರ್	6.9
17	46448160006245	ಪ್ರಭಾ ಬಿ	11.69
18	46448160006232	ಶಶಿಕುಮಾರ್ ಸಿ	16.7
19	46448160006156	ಶಿವನಂಜಮ್ಮ ನಂಜಶೆಟ್ಟಿ	29.6
20	46448160006130	ಪುಟ್ಟರಾಜೇಗೌಡ ಎಸ್	8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.		
21	31878730044114	ನಾಗಮ್ಮ ಸಿ	3.4
22	31878730043982	ಫರ್ಹಾನ	4.8
23	31878730043927	ಕುಲ್ವೆಂದರ್‌ಸಿಂಗ್ ಗೌರವ	4.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273–ಬಿ, ಕೊ–ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು–560078.		
24	31138730030238	ಶಿವಾನಂದ್ ಹಿರೇಮಠ್	5
25	31138730057289	ಅನಿಲ್ ಬಿ ಕುಸನಾಲ್	3.8
26	31138730057135	ಗೀತಾ ಎ ಗುನ್ನಾಪುರ್	15.1
27	31138730056898	ಸೀಮಾ ರಾಠೋಡ್	4.7
28	31138730056872	ನಿಂಗಪ್ಪ ಕೊಲೂರ್	2.5
29	31138730056859	ಶೇಖರ್ ಶೆಲ್ಲನವರ್	3.2
30	31138730055244	ಕಿಸಾನ್ ಕೇಟು ಪವಾರ್	5.2
31	31138730055231	ಮಮ್ತಾಜ್ ಹುಸೇನ್ ಅವತಿ	4.8
32	31138730055103	ಶ್ರೀಧ್ಯ ಎಮ್ ಹಳೆಮನಿ	9.9
33	31138730054994	ರುಕ್ಸಾನ ಆಆಸಿಫ್ ಶೇಕ್	12
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಶಹಾಪೇಟೆ, ಬಿಜಾಪುರ–586101		
34	31128730035557	ಜಯಲಕ್ಷ್ಮಿ ಅಲರಾಜು	4.34
35	31128730035392	ಚಂದ್ರಮ್ಮ ತಿಮ್ಮಪ್ಪ	3.1
36	31128730035379	ಮಂಜುನಾಥ್ ಡಿ ಜಿ	4.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.		
37	31988730031380	ಝಾನ್ಸಿರಾಣಿ ಧರ್ಮಣ್ಣ	16.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಅಕ್ಷಯ ಚೌಕ, ಗಾಂಧಿ ನಗರ ಮುಖ್ಯ ರಸ್ತೆ, ಸರ್ಕಾರಿ ಆಸ್ಪತ್ರೆ ಎದುರು, ಬಳ್ಳಾರಿ–583103.		
38	33818730029729	ಅಭಿಲಾಷ್ ಎಮ್	7.9
39	33818730029410	ಕಾವ್ಯ ಬಿ ಎಮ್	4.7
40	33818730028179	ಕಲಮ್ಮ ಕೆ	5.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577004		
41	34018730024069	ದೇವ ಸಿಗಮಣಿ	3.4
42	34018730024020	ವಾಸು ಎಸ್	13.6
43	34018730024017	ಇಂದ್ರ ಸೌಂದರ್ ರಾಜ್	39.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092		
44	33878730042394	ಗೀತಾ ಮರಿಯಪ್ಪ	30.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14–23–33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು–560086.		
45	45358730014751	ಅಭಿಷೇಕ್ ಆರ್	11.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ಬೆಂಗಳೂರು–560060.		
46	32508730042932	ಬಾಲು	12
47	32508730042903	ಗಣೇಶ್ ಪ್ರಸಾದ್ ಡಿ	14.6
48	32508730042777	ಬಿ ನವೀನ್	17.1
49	32508730042702	ಹಸ್ನಾ ಖನುಮ್	6.7
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು, ಕರ್ನಾಟಕ, ಪಿನ್–560068		
50	30138730032179	ಮಹದೇವ್ ಕೆ	10.84
51	30138730032140	ಕನಿಕಮ್ಮ ಕೆ	30.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ–408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು–560016.		
52	33638730046942	ಗುರು ಎಸ್ ಕೆ	49.65
53	33638730057905	ಇಂದ್ರಮ್ಮ	5
54	33638730057881	ಆದಿತ್ಯ ವಿ	8.6
55	33638160000722	ಪಲ್ಲವಿ ಎನ್	15.17
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560023.		
56	33458730025140	ವರದರಾಜ ಎ	3.2
57	33458730025080	ಅಬ್ದುಲ್ ಖಸಿಫ್ ಎ	16.5
58	33458160004271	ಶಾರದಮ್ಮ ಎನ್	29.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು–570017.		
59	32018730006910	ಶ್ರೀನಿವಾಸ್ ಬಂಡಿವಡ್ಡರ್	5
60	32018730006907	ಸೋಮಪ್ಪ ಸೋಪ್ಪ ಮಾದಾರ್	3.5
61	32018730006818	ಸೆಮಿಲ್ಲ ಬೇಪರಿ	12.1
62	32018730006805	ರೂಪ ರಾಮಣ್ಣ ಮದಾರ್	3.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ್, ಬಾಗಲಕೋಟೆ–587101, ದೂ: 08354–225452		
63	30948730020425	ಪೂಜ ವಿ	4
64	30948730020375	ರಾಜೇಶ್ ಎನ್	5.96
65	30948730020300	ಅರ್ಪಿತ ಪ್ರಕಾಶ್	8.06
66	30948730020247	ರತ್ನ ರಾಜ	7.9
67	30948730020234	ಇಂದಿರ	6
68	30948730020208	ಅಂಬುಜ ವಿಜಯ್	6.3
69	30948730020197	ಶಿವರಾಜು ಎಮ್	25.3
70	30948730020184	ಶಿವರಾಜು ಎಮ್	7
71	30948730020119	ನಂದಿನಿ ವಿ	3
72	30948160002581	ಸಂತೋಷ್‌ಕುಮಾರ ಎಲ್	30
73	30948160002513	ನಳಿನಿ ಎನ್	32.5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009.		
74	30488730030854	ಉಮೇಶ್ ಬಸಪ್ಪ ಬಡಿಗೇರ್	5.2
75	30488730030831	ಶಾಂತಿನಾಥ ಸಂಗೊಳ್ಳಿ	24.55
76	30488730030692	ಜಯಶ್ರೀ ಮರಗಲ್	10.12
77	30488160000743	ಪ್ರತಿಭಾ ಗೋರ್ಕೆ	41.28
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಕಟ್ಟಡ ಸಂ. 14089/ಎ/3,, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ–580002		
78	31768730016632	ಬಸವರಾಜ್ ಎಸ್	19.9
79	31768160002387	ಪ್ರಭಾಕರ್ ಮದನ್ ರಾವ್	30.2
80	31768160002259	ಖಾದರ್ ಪಾಶಾ ಮೊಹಮ್ಮದ್ ವಜೀರ್ ಆಲಿ ಪಿ	45.7
81	31768160002121	ಅನಿತ ಮೈಪಾಲ್ ರೆಡ್ಡಿ	14.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಲಕ್ಷ್ಮಿ ಇಂಟರ್‌ನ್ಯಾಷನಲ್ ಹೋಟೆಲ್ ಕೆಳಭಾಗ, ಶಿವನಗರ, ಬೀದರ್–585401.		
82	31788730016432	ಮಂಜುಳ	8.52
83	31788730016356	ಗಿರೀಶ್ ಎಮ್ ಟಿ	5.14
84	31788730016330	ನಾಗರಾಜು ಎಸ್ ಟಿ	3.2
85	31788730016304	ದಸ್ತಗೀಸ್ ಪಾಶಾ	5.32
86	31788730016280	ದಸ್ತಗೀಸ್ ಪಾಶಾ	7.95
87	31788160012252	ಚಂದನ್ ಕುಮಾರ್ ಹೆಚ್ ಎನ್	40.56
88	31788160012242	ಬಸವರಾಜು	33.7
89	31788160012101	ಮಹಾಲಕ್ಷ್ಮಿ ಮಂಜುನಾಥ	10.67
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8–1–501–66, ವಾರ್ಡ್ ನಂ.8–ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ–573201, ಕರ್ನಾಟಕ.		
90	45488730014161	ಜಮಾಲಮ್ಮ ಬುಡ್ಡಪ್ಪ	5.8
91	45488730014085	ಕುಮಾರ ಆರ್	5.1
92	45488160006494	ಸೌಮ್ಯ ಎಸ್ ಎನ್	44.8
93	45488160006416	ಮಹೇಶ್ ಎಮ್	9.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101, ಭಾರತ		
94	45458730024565	ಸೈಯ್ಯದ್ ಇಮಾಮ್ ಅಕ್ಬರ್	12.8
95	45458730024440	ಚನ್ನವೀರ್ ಜೆ	5.6
96	45458730023500	ಸತೀಶ್ ಮುರಳೀಧರ್ ರಾವ್ ಪವಾರ್	59.8
97	45458730023447	ಶರಣಯ್ಯ ಹೆಚ್ ಹಸನಯ್ಯ	12.8
98	45458160004124	ಮುನಾವರ್ ಅಲಿ	25.5
99	45458160003440	ಹೀರಾಬಾಯಿ ನಾಯಕ್	30.8
100	45458160003249	ಸುನಿಲ್ ಶಂಕರ್	9.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003.		
101	45448730005319	ಕಸ್ತೂರಿ ಜಿ	3.6
102	45448160001534	ಬಸಪ್ ಬ್ರಹ್ಮಪ್ಪ ಛಲವಾದಿ	10.1
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ–580021		
103	45388730005991	ನಂದಿನಿನಿ ಎಸ್ ಆರ್ ಎಸ್	45.94
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #231, 2ನೇ ಮುಖ್ಯರಸ್ತೆ, ಸಂಪಿಗೆ ಮುಖ್ಯರಸ್ತೆ, ಬಿಬಿಎಂಪಿ ಹಳೆ ವಾರ್ಡ್ ಸಂ. 5, ಹೊಸ ನಂ. 35, ಮಲ್ಲೇಶ್ವರಂ, ಬೆಂಗಳೂರು–560003, ಭಾರತ		
104	30198730037269	ಜಯಶೀಲನ್	4.7
105	30198730037128	ಚೌಡಮ್ಮ ಬಾಲ	11.6
106	30198730036332	ಧನಪಾಲ್ ಎಸ್	28.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027.		
107	46658730023353	ಶಿವಕುಮಾರ್ ಎನ್	3.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735/5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.		
108	31888730026489	ನಿತ್ಯ ಎಮ್ ಅನುಶ್ ಕುಮಾರ್	5.7
109	31888730026437	ಹಸ್ನ ನಾಜ್ ಸಜೀದ್	4.3
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞ ನಗರ, ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.		

ಸ್ಥಳ: ಕರ್ನಾಟಕ
ದಿನಾಂಕ: 04-03-2025
ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಸರ್ಕಾರ
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ
ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ:–119, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562110 ಇ–ಮೇಲ್ ವಿಳಾಸ: egovbrural@gamil.com

ಸಂಖ್ಯೆ:ಸಿ2/ಸಶಿಕ/ಎ.ಆರ್.ಪಿ/Career Counselling-91/2024–25 ದಿನಾಂಕ:28.02.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 04 ಬ್ಲಾಕ್‌ಗಳಿಗೆ **Academic Resource for Career Counselling** ಕಾರ್ಯಕ್ರಮ ಅನುಷ್ಠಾನ ಸಂಬಂಧ ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಸರ್ಕಾರೇತರ ಸಂಘ/ಸಂಸ್ಥೆಗಳಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರನ್ನು ಕರೆದಿದ್ದು, ಅರ್ಹ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಿದೆ. ಆಸಕ್ತಿಯುಳ್ಳ ಸಂಘ/ಸಂಸ್ಥೆಗಳು https://kppp.karnataka.gov.in ವೆಬ್ ವಿಳಾಸದಲ್ಲಿ ಅರ್ಜಿಯನ್ನು ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಚೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೀರಸಂದ್ರ ಗ್ರಾಮ, ದೇವನಹಳ್ಳಿ, ದೂರವಾಣಿ ಸಂಖ್ಯೆ: 080–29566353/ ಮೊಬೈಲ್ ಸಂಖ್ಯೆ: 9448999384 ಇಲ್ಲಿಗೆ ಸಂಪರ್ಕಿಸುವುದು.

ಸಹಿ/- ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ, ಸ.ಶಿ.ಕ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ.

ವಾಸಸಂಇ/ಸಿಪಿ/ಎಎಎ/5410/2024–25

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ–1/2024–25/3060 ದಿನಾಂಕ : 01–03–2025

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ: 1. ಸೇಡಂ ತಾಲೂಕಿನ 04 ರಸ್ತೆ ಕಾಮಗಾರಿಗಳ ಇಂಡೆಂಟ್ ಸಂ, : **18886, 19397, 19734 & 19529,** 2. ಚಿತ್ತಾಪೂರ ತಾಲೂಕಿನ 01 ರಸ್ತೆ ಕಾಮಗಾರಿ ಇಂಡೆಂಟ್ ಸಂ : **19402,** 2) ಲೆಕ್ಕ ಶೀರ್ಷಿಕೆ: **2024–25ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿನ ಕಾಮಗಾರಿಗಳು,** 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ **ರೂ. 149.00 ಲಕ್ಷಗಳು, ಗರಿಷ್ಠ ರೂ. 810.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : **17–03–2025 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ: **19–03–2025 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **24–03–2025 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25–03–2025 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **27–03–2025 ರ ಸಾಯಂಕಾಲ 16:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ.: ಯಾವುದೇ ಮಾರ್ಪಾಡು ಬದಲಾವಣೆಗಳನ್ನು **www.kppp.karnataka.gov.in** ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ವಾ.ಸಾ.ಸಂ.ಇ/ಕಲಬುರಗಿ/1030/ಕೆ.ಎಸ್.ಎಂ.ಸಿ.&ಎ/2024–25 ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-336/3160/2024–25 ದಿನಾಂಕ: 01–03–2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ವಸುಂಧರ ರವರು ನಂ.23, (ಹಳೆ ನಂ.R/2), 1ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, 5ನೇ ಬ್ಲಾಕ್, ಬಿ.ಎಸ್.ಕೆ 3ನೇ ಹಂತ, ಬೆಂಗಳೂರು – 560085.	ಯಲಹಂಕ	ಜಾಲ	ಚಾಗಲಟ್ಟಿ	81/6 & 81/8	0ಎ – 13.75ಗುಂ	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿ ಕಾರ್ಯಕಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದು ಉತ್ತಮ ಮೂಲಭೂತ ಸೌಕರ್ಯಗಳು, ರಸ್ತೆಗಳು ಲಭ್ಯವಾಗುತ್ತದೆ, ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ, ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತವೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

‘ಕಲ್ಯಾಣ ಕಾರ್ಯಕ್ರಮಗಳಿಗಾಗಿ ವರ್ಷಕ್ಕೆ ಒಟ್ಟಾರೆ 90 ಸಾವಿರ ಕೋಟಿ ರು. ಹೆಚ್ಚಿನ ಹಣ ಖರ್ಚು ಮಾಡಲಾಗುತ್ತಿದೆ.ನೇರ ನಗದು ಯೋಜನೆ ಮತ್ತು ಸಬ್ಸಿಡಿ, ಪ್ರೋತ್ಸಾಹಧನಗಳಿಂದ 1.25 ಕೋಟಿಗೂ ಹೆಚ್ಚು ಕುಟುಂಬಗಳು ಅನುಕೂಲ ಪಡೆಯುತ್ತಿವೆ. ಅಭಿವೃದ್ಧಿಯಲ್ಲಿ ಕರ್ನಾಟಕದ ವಿಶಿಷ್ಟ ಮಾದರಿಯನ್ನು ಸರಕಾರ ರೂಪಿಸುತ್ತಿದೆ’

‘ನಗರ -ಪಟ್ಟಣ ಪ್ರದೇಶಗಳಲ್ಲಿ ಬಾಕಿ ಇದ್ದ 30 ಲಕ್ಷಕ್ಕೂ ಹೆಚ್ಚಿನ ಅನಧಿಕೃತ ಆಸ್ತಿಗಳಿಗೆ ಇ-ಖಾತಾ ನಮೂನೆ 3ಬಿ ನೀಡಲು ಪ್ರಾರಂಭಿಸಲಾಗಿದೆ. ರೈತರ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಸುರಕ್ಷಿತವಾಗಿಡಲು ಭೂಸುರಕ್ಷಾ ಎಂಬ ಗ್ಯಾರಂಟಿ ನೀಡಲಾಗುತ್ತಿದೆ. ಮೈಕ್ರೋ ಫೈನಾನ್ಸ್ ಕಿರುಕುಳ ತಡೆಯಲು ಸುಗ್ರೀವಾಜ್ಞೆ ಜಾರಿಗೆ ತರಲಾಗಿದ್ದು, ಸಾಲ ವಸೂಲಾತಿ ನೆಪದಲ್ಲಿ ತೊಂದರೆ ಕೊಡುವವರಿಗೆ 6 ತಿಂಗಳಿನಿಂದ 10 ತಿಂಗಳವರೆಗೆ ಶಿಕ್ಷೆ ಹಾಗೂ ಗರಿಷ್ಠ 5 ಲಕ್ಷ ರು. ಗಳವರೆಗೂ ದಂಡ ವಿಧಿಸಲಾಗುತ್ತದೆ.

-ಥಾವರ್ ಚಂದ್ ಗೆಹ್ಲೋಥ್

ವಿಧಾನ ಮಂಡಲ ಅಧಿವೇಶನ

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರ ಭಾಷಣ | ಸಿದ್ದರಾಮಯ್ಯ ನೇತೃತ್ವದ ಸರಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಮೆಚ್ಚುಗೆ

ಸಂವಿಧಾನದ ಆಶಯ ಪಾಲಿಸಿದ ಸರಕಾರ: ಗೆಹ್ಲೋಥ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಮಾಜವು ಸೋಷಿಯಲ್ ಡಾರ್ವಿನಿಸಮ್ ಕಡೆಗೆ ಹೋಗಬಾರದು ಎಂದು ನಮ್ಮ ಹಿರಿಯರು ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲಕ ಈ ದೇಶಕ್ಕೆ ಅತ್ಯಂತ ಮಾನವೀಯವಾದ ಸಂವಿಧಾನ ಕೊಟ್ಟಿದ್ದಾರೆ. ಸಂವಿಧಾನ ಅಸಮಾನತೆಯನ್ನು ತಗ್ಗಿಸಿ, ಆದಾಯದ ನ್ಯಾಯಯುತ ಪಾಲನ್ನು ಜನರಿಗೆ ಖಾತರಿಪಡಿಸಬೇಕು ಎಂದು ಹೇಳುತ್ತದೆ. ಈ ನಿಟ್ಟಿನಲ್ಲಿ ಪಂಚ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ರಾಜ್ಯಪಾಲರು ಹೇಳುವ ಮೂಲಕ ಗ್ಯಾರಂಟಿ ಯೋಜನೆಗಳ ಜಾರಿಯನ್ನು ತಮ್ಮ ಭಾಷಣದಲ್ಲಿ ಸಮರ್ಥಿಸಿಕೊಂಡಿದ್ದಾರೆ.

ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ , ಸಂವಿಧಾನದ ಆಶಯಗಳಿಗೆ ಪೂರಕವಾಗಿ ಜನಕಲ್ಯಾಣವನ್ನೇ ಪ್ರಧಾನ ಧ್ಯೇಯವಾಗಿಟ್ಟುಕೊಂಡು ಸರಕಾರ ಕೆಲಸ ಮಾಡುತ್ತಿದೆ. ಸರ್ವರ ಶಾಂತಿ, ಸರ್ವರ ಅಭ್ಯುದಯವೇ ಸಂವಿಧಾನದ ಆಶಯ. ಈ ಅಶಯ ಚಾಚೂತಪ್ಪದೇ ಪಾಲಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಚಿತ್ರ: ಸುಧಾಕರ್ ದೇವರಾಜ್

ಹೇಗಿದ್ದೀರಾ ಸಿಎಂ ಸಾಹೇಬ್ರೇ..?

ವಿಧಾನ ಮಂಡಲದ ಅಧಿವೇಶನಕ್ಕೆ ಕಾರಿನಲ್ಲಿ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರ ಕಾಲನ್ನು ಪರೀಕ್ಷಿಸಿ ಆರೋಗ್ಯ ವಿಚಾರಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್

1.25 ಕೋಟಿ ಕುಟುಂಬಗಳಿಗೆ ಅನುಕೂಲ: ಕಲ್ಯಾಣ ಕಾರ್ಯಕ್ರಮಗಳಿಗಾಗಿ ವರ್ಷಕ್ಕೆ ಒಟ್ಟಾರೆ 90 ಸಾವಿರ ಕೋಟಿ ರು. ಹೆಚ್ಚಿನ ಹಣ ಖರ್ಚು ಮಾಡಲಾಗುತ್ತಿದೆ. ಸಾಮಾಜಿಕ ಪಿಂಚಣಿಗಳು, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ಕೃಷಿ-ತೋಟಗಾರಿಕೆ, ರೇಷ್ಮೆ, ಪಶುಪಾಲನೆ, ಮೀನುಗಾರಿಕೆ, ಆಹಾರ ಮತ್ತು ನಾಗರಿಕ ಸರಬರಾಜು, ಕೈಮಗ್ಗ ಮತ್ತು ಜವಳಿ, ವಸತಿ, ಶಿಕ್ಷಣ, ಕೈಗಾರಿಕೆ, ಕೌಶಲ್ಯಾಭಿವೃದ್ಧಿ, ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪಂಗಡ, ಅಲ್ಪಸಂಖ್ಯಾತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸೇರಿದಂತೆ ಹಲವಾರು ಇಲಾಖೆಗಳ ವತಿಯಿಂದ ನೀಡುವ ನೇರ ನಗದು ಯೋಜನೆ ಮತ್ತು ಸಬ್ಸಿಡಿ, ಪ್ರೋತ್ಸಾಹಧನಗಳಿಂದ 1.25 ಕೋಟಿಗೂ ಹೆಚ್ಚು ಕುಟುಂಬಗಳು ಅನುಕೂಲ ಪಡೆಯುತ್ತಿವೆ. ಅಭಿವೃದ್ಧಿಯಲ್ಲಿ ಕರ್ನಾಟಕದ ವಿಶಿಷ್ಟ ಮಾದರಿಯನ್ನು ಸರಕಾರ ರೂಪಿಸುತ್ತಿದೆ ಎಂದು ಗೆಹ್ಲೋಥ್ ವಿವರಿಸಿದರು.

ಗೃಹಲಕ್ಷ್ಮಿ ಯೋಜನೆ ಲಿಂಗತ್ವ ಅಲ್ಪಸಂಖ್ಯಾತರಿಗೂ ವಿಸ್ತರಣೆ: ಶಕ್ತಿ ಯೋಜನೆಯಡಿ 376.70 ಕೋಟಿ ಮಹಿಳೆಯರು ಸಂಚಾರ ಮಾಡಿದ್ದಾರೆ. ಶಕ್ತಿ ಯೋಜನೆಗೆ ಸರಕಾರದಿಂದ ಇದುವರೆಗೆ 8,215 ಕೋಟಿ ರು. ಬಿಡುಗಡೆ ಮಾಡಲಾಗಿದೆ. 2024-25ರ ಬಜೆಟ್‌ನ ನಮ್ಮ ಸರಕಾರ ಶೇ.15.01 ರಷ್ಟು ಸಂಪತ್ತನ್ನು ಬಂಡವಾಳ ವೆಚ್ಚಗಳಿಗಾಗಿ ವಿನಿಯೋಗ ಮಾಡಲಾಗಿದೆ. ಗೃಹಲಕ್ಷ್ಮಿ ಯೋಜನೆಯನ್ನು ಲಿಂಗತ್ವ ಅಲ್ಪಸಂಖ್ಯಾತರಿಗೂ ವಿಸ್ತರಿಸಲಾಗಿದೆ. ತಿಂಗಳಿಗೆ 2 ಸಾವಿರ ರು. ನೀಡುವ ಗೃಹಲಕ್ಷ್ಮಿ ಯೋಜನೆಗೆ 1,26,24,547 ಮಹಿಳೆಯರು ನೋಂದಣಿಯಾಗಿದ್ದು ಈವರೆಗೂ 36 ಸಾವಿರ ಕೋಟಿ ರು.ಗಳನ್ನು ನೇರವಾಗಿ ಖಾತೆಗೆ ಜಮಾ ಮಾಡಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನವನ್ನು ಪ್ರೋತ್ಸಾಹಿಸುವ ಮತ್ತು ಲಿಂಗಾನುಪಾತವನ್ನು ಉತ್ತಮಗೊಳಿಸುವ ಉದ್ದೇಶದಿಂದ ಭಾಗ್ಯಲಕ್ಷ್ಮಿ ಸುಕನ್ಯ ಸಮೃದ್ಧಿ ಯೋಜನೆ ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಪ್ರತಿಯೊಬ್ಬ ಹೆಣ್ಣು ಮಗುವಿನ ಖಾತೆಗೆ ವರ್ಷಕ್ಕೆ 3 ಸಾವಿರ ರು.ನಂತೆ 15 ವರ್ಷದವರೆಗೆ ಹಣ ಜಮೆ ಮಾಡಲಾಗುತ್ತಿದ್ದು, 5,59,693 ಫಲಾನುಭವಿಗಳ ಖಾತೆಗೆ ಈವರೆಗೂ 168 ಕೋಟಿ ರು. ಜಮೆ ಮಾಡಲಾಗಿದೆ ಎಂದು ರಾಜ್ಯಪಾಲರು ಅಂಕಿ-ಅಂಶ ನೀಡಿದರು.

ಹಾಲು ಉತ್ಪಾದನೆಯಲ್ಲಿ ದಾಖಲೆ

ಕರ್ನಾಟಕವು ಹಾಲಿನ ಉತ್ಪಾದನೆಯಲ್ಲಿ ದಾಖಲೆ ಬರೆದಿದೆ. ಕೆಎಂಎಫ್ ಈ ಬಾರಿ ದಿನವೊಂದಕ್ಕೆ ಕೋಟಿ ಲೀಟರ್‌ಗಳಷ್ಟು ಹಾಲು ಸಂಗ್ರಹಿಸಿದೆ. ಹೈನೋದ್ಯಮಕ್ಕೆ ನೀಡುತ್ತಿರುವ ಪ್ರೋತ್ಸಾಹದ ಕಾರಣಕ್ಕಾಗಿಯೇ ಈ ಸಾಧನೆ ಸಾಧ್ಯವಾಗಿದೆ. ಸರಕಾರ ಇದುವರೆಗೆ ಪಶುಪಾಲಕರಿಗೆ 1500 ಕೋಟಿ ರು. ಗಳಷ್ಟು ಪ್ರೋತ್ಸಾಹಧನ ನೀಡಿದೆ. ಪಶುಪಾಲಕರ ನೆರವಿಗಾಗಿ ಅನುಗ್ರಹ ಯೋಜನೆ ಮುಂದುವರೆಸಿದೆ. ಪ್ರಸಕ್ತ ಸಾಲಿನಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದ 24934 ರಾಸುಗಳು ಹಾಗೂ 33373 ಕುರಿ ಮತ್ತು ಮೇಕೆಗಳಿಗೆ 26.60 ಕೋಟಿ ರು. ಪರಿಹಾರ ನೀಡಿದೆ. ರಾಜ್ಯದ ರೈತ ಮತ್ತು ರೈತ ಉತ್ಪಾದಕರ ಸಂಸ್ಥೆಯಿಂದ ಉತ್ಪಾದನೆಯಾಗುವ ಜೇನುತುಪ್ಪಕ್ಕೆ ‘ಝೇಂಕಾರ್’ ಹೆಸರಿನ ವಿಶೇಷ ಬ್ಯಾಂಡ್ ರೂಪಿಸಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ. ಜನವರ ಅಂತ್ಯಕ್ಕೆ 20.22 ಲಕ್ಷ ರೈತರಿಗೆ 16,942 ಕೋಟಿ ರು. ಬೆಳೆ ಸಾಲ ಮತ್ತು 46,000 ರೈತರಿಗೆ 1,442 ಕೋಟಿ ರು. ಮಧ್ಯಮ, ದೀರ್ಘಾವಧಿಯ ಕೃಷಿಸಾಲ ವಿತರಿಸಲಾಗಿದೆ. ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ ನೀಡಲು 1,451 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ನೀರಾವರಿ ಸಾಮರ್ಥ್ಯ ಹೆಚ್ಚಳ

ರಾಜ್ಯದಲ್ಲಿ 36,799 ಎಕರೆ ನೀರಾವರಿ ಸಾಮರ್ಥ್ಯ ಹೆಚ್ಚಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಲಸಂಪನ್ಮೂಲ ಇಲಾಖೆಗೆ 16,837 ಕೋಟಿ ರು. ಅನುದಾನ ಒದಗಿಸಲಾಗಿದ್ದು ಎತ್ತಿನಹೊಳೆ ಯೋಜನೆ ಲೋಕಾರ್ಪಣೆಗೊಂಡಿದೆ. ಬಾಕಿಯಿರುವ ನೀರಾವರಿ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರಕಾರ ಬದ್ಧವಾಗಿದೆ. ಕೆಲವು ಯೋಜನೆಗಳಿಗೆ ಕೇಂದ್ರದ ಅನುಮತಿ ಅಗತ್ಯವಿರುವುದರಿಂದ ಒತ್ತಡ ಹೇರುವ ಕೆಲಸ ಮುಂದುವರಿಸಲಾಗಿದೆ. ಸಣ್ಣ ನೀರಾವರಿ ಇಲಾಖೆಯಿಂದ 5,847 ಹೆಕ್ಟೇರ್ ನೀರಾವರಿ ಸಾಮರ್ಥ್ಯ ಸೃಷ್ಟಿಸಲಾಗಿದೆ. 165 ಬ್ಯಾರೇಜ್‌ಗಳನ್ನು ನಿರ್ಮಿಸಲಾಗಿದೆ ಎಂದು ರಾಜ್ಯಪಾಲರ ಗೆಹ್ಲೋಥ್ ಹೇಳಿದರು.

ಲೋಕೋಪಯೋಗಿ ಇಲಾಖೆಯಲ್ಲಿ 2491 ಕಿ.ಮೀ. ರಾಜ್ಯ ಹೆದ್ದಾರಿಗಳು 3103, ಕಿ.ಮೀ. ಜಿಲ್ಲಾ ಮುಖ್ಯರಸ್ತೆಗಳ ಅಭಿವೃದ್ಧಿ ಹಾಗೂ ನವೀಕರಣ, 199 ಸೇತುವೆಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ. ಎಚ್‌ಎಸ್‌ಡಿಪಿ ಹಂತ 5 ರಡಿಯಲ್ಲಿ ಒಟ್ಟು 9 ಸಾವಿರ ಕೋಟಿ ರು. ವೆಚ್ಚದಲ್ಲಿ 2500 ಕಿ.ಮೀ. ಹೆದ್ದಾರಿಗಳ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ. ರಾಜ್ಯವ್ಯಾಪಿ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ 4 ಸಾವಿರ ಕೋಟಿ ರು. ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಸಿಐಆರ್‌ಎಫ್ ಯೋಜನೆಯಡಿ 1385 ಕೋಟಿ ರು.ಗಳ ವೆಚ್ಚದಲ್ಲಿ 2,056 ಕಿ.ಮೀ. ರಾಜ್ಯದ 295 ರಸ್ತೆಗಳ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

10.91 ಕೋಟಿ ಮಾನವ ದಿನಗಳ ಉದ್ಯೋಗ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಜನವರಿ-2025ರ ಅಂತ್ಯದವರೆಗೆ 10.91 ಕೋಟಿ ಮಾನವ ದಿನಗಳ ಉದ್ಯೋಗ ಸೃಜಿಸಲಾಗಿದ್ದು, ಪ್ರಸ್ತುತ ಸಾಲಿನಲ್ಲಿ 5626.56 ಕೋಟಿ ರು. ಮೊತ್ತ ವೆಚ್ಚ ಮಾಡಲಾಗಿದೆ. ರಾಜ್ಯ ಸರಕಾರ ಗ್ರಾಮೀಣ ಮನೆಗಳಿಗೆ ನಳ (ನಲ್ಲಿ) ಸಂಪರ್ಕ ಕಲ್ಪಿಸುವ ಯೋಜನೆಯನ್ನು ಮುಂದುವರಿಸಿದೆ. 101.32 ಲಕ್ಷ ಮನೆಗಳ ಪೈಕಿ ಈವರೆಗೆ 83.94 ಲಕ್ಷ ಮನೆಗಳಿಗೆ ನಳ ಸಂಪರ್ಕ ಒದಗಿಸಲಾಗಿದೆ. 2024-25ನೇ ಸಾಲಿನಲ್ಲಿ 7.27 ಲಕ್ಷ ಮನೆಗಳಿಗೆ ಸಂಪರ್ಕ ಒದಗಿಸಲಾಗಿದೆ. ಬಾಹ್ಯ ನೆರವಿನ ಯೋಜನೆಯಡಿ 7,110 ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳನ್ನು 5,190 ಕೋಟಿ ರು. ಗಳಲ್ಲಿ ಅಭಿವೃದ್ಧಿ ಪಡಿಸಲು ಪ್ರಗತಿಪಥ ಕಾರ್ಯಕ್ರಮ ಅನುಷ್ಠಾನಗೊಳಿಸುತ್ತಿದೆ. ಜೊತೆಗೆ 1,150 ಕಿ.ಮೀ. ಉದ್ದದ ರಸ್ತೆಗಳನ್ನು ಕಲ್ಯಾಣ ಪಥ ಕಾರ್ಯಕ್ರಮದಡಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿ ಟೆಂಡರ್‌ಗಳನ್ನು ಕರೆಯಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 3867 ಕೂಸಿನ ಮನೆಗಳನ್ನು ಪ್ರಾರಂಭಿಸಲಾಗಿದ್ದು, 49,288 ಮಕ್ಕಳ ಪಾಲನೆ ಮಾಡಲಾಗುತ್ತಿದೆ. ಒಟ್ಟು ಅರಿವು 5,770 ಕೇಂದ್ರಗಳ ಪೈಕಿ 5,895 ಕೇಂದ್ರಗಳನ್ನು ಡಿಜಿಟಲೀಕರಣಗೊಳಿಸಿದ್ದು, 50.28 ಲಕ್ಷ ಮಕ್ಕಳನ್ನು ನೋಂದಣಿ ಮಾಡಲಾಗಿದೆ. ಇದಲ್ಲದೇ ಗ್ರಂಥಾಲಯ ಹೊಂದಿಲ್ಲದ ಗ್ರಾಮಗಳಲ್ಲಿ 6,599 ಹೊಸ ಗ್ರಂಥಾಲಯ ಪ್ರಾರಂಭಿಸಲಾಗುತ್ತಿದೆ ಎಂದು ಗೆಹ್ಲೋಥ್ ನುಡಿದರು.

ಪ್ರಾದೇಶಿಕ ಅಸಮಾನತೆ ನಿವಾರಣೆ: ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು 2002 ರಲ್ಲಿ ಡಾ. ಡಿ.ಎಂ.ನಂಜುಂಡಪ್ಪ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸರಕಾರ ರಚಿಸಿತ್ತು. ಸಮಿತಿಯ ವರದಿ ಆಧರಿಸಿ ಇದುವರೆಗೂ 32,662 ಕೋಟಿ ರು.ಗಳನ್ನು ಬಿಡುಗಡೆ ಮಾಡಲಾಗಿದೆ. ಇಲ್ಲಿಯವರೆಗೂ ಈ ದಿಸೆಯಲ್ಲಿ ಖರ್ಚು ಮಾಡಿದ ಸಂಪನ್ಮೂಲಗಳ ಪರಿಣಾಮ ಹಾಗೂ ಮುಂದುವರಿದ ಪ್ರಾದೇಶಿಕ ಅಸಮತೋಲನ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸಲು ಆರ್ಥಿಕ ತಜ್ಞ ಡಾ. ಗೋವಿಂದರಾವ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿ ಈ ವರ್ಷವೇ ತನ್ನ ವರದಿ ಸಲ್ಲಿಸಲಿದ್ದು, ವರದಿ ಆಧರಿಸಿ ಮುಂದಿನ ದಿನಗಳಲ್ಲಿ ಅಭಿವೃದ್ಧಿಯಲ್ಲಿ ಸಮತೋಲನ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯಪಾಲರು ಹೇಳಿದರು.

ವಿಮಾನ ನಿಲ್ದಾಣಗಳ ಹೆಚ್ಚಳ

ವಿದ್ಯುತ್ ಉತ್ಪಾದನೆ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ತ್ಯಾಜ್ಯದಿಂದ 11.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಸ್ಥಾವರ ಬಿಡದಿಯಲ್ಲಿ ಡಿಸೆಂಬರ್‌ನಿಂದ ಕಾರ್ಯಾರಂಭಗೊಂಡಿದೆ. ಪಿಎಂ ಕುಸುಮ್ ಯೋಜನೆಯಡಿ ರೈತರ ಪಂಪ್‌ಸೆಟ್‌ಗಳನ್ನು ಸೌರ ವಿದ್ಯುತ್‌ಗೆ ಸಂಪರ್ಕಿಸಲಾಗುತ್ತಿದೆ. ಗೃಹಜ್ಯೋತಿ ಯೋಜನೆಯಡಿ 1.62 ಕೋಟಿ ಗ್ರಾಹಕರು ಸೌಲಭ್ಯ ಪಡೆಯುತ್ತಿದ್ದು, 17,290 ಕೋಟಿ ರು.ಗಳನ್ನು ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗಿದೆ. ಶರಾವತಿ ಟಿಎಸ್‌ಟಿಯಲ್ಲಿ 2 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಕಾರ್ಯಾದೇಶ ನೀಡಲಾಗಿದೆ ಎಂದರು.

ವಿಜಯಪುರ ವಿಮಾನ ನಿಲ್ದಾಣ ಕಾಮಗಾರಿ ಇದೇ ವರ್ಷ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿದೆ. ಮೈಸೂರು ವಿಮಾನನಿಲ್ದಾಣದ ರನ್‌ವೇ ವಿಸ್ತರಣೆ ಮಾಡಲಾಗುವುದು. ರಾಯಚೂರಿನಲ್ಲಿ 119 ಕೋಟಿ ರು. ಬಳಕೆ ಮಾಡಿ ವಿಮನ ನಿಲ್ದಾಣ ಅಭಿವೃದ್ಧಿಪಡಿಸಲಾಗುವುದು. ಧರ್ಮಸ್ಥಳ, ಮಡಿಕೇರಿ, ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್‌ಗಳನ್ನು ನಿರ್ಮಿಸಲು ಭೂಮಿ ಗುರುತಿಸಲಾಗುತ್ತಿದೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣದ ಬಳಿ 407 ಎಕರೆಯಲ್ಲಿ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ನಿರ್ಮಿಸಲಾಗುವುದು. 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಪ್ರಕ್ರಿಯೆ ಆರಂಭಗೊಂಡಿದೆ. ಕಾರವಾರ ನೌಕಾನೆಲೆ ಬಳಿ ವಿಮಾನ ನಿಲ್ದಾಣಕ್ಕೂ ಭೂಸ್ವಾಧೀನ ಆರಂಭಿಸಲಾಗಿದೆ ಎಂದರು.

ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ 25 ಕೋಟಿ ರು. ವೆಚ್ಚ ಮಾಡಿ ಮುಂದಿನ 5 ವರ್ಷಗಳ ಅವಧಿಗೆ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ವೈಲ್ಡ್ ಅಂಡ್ ವೈರ್‌ಲೆಸ್ ತಂತ್ರಜ್ಞಾನ ಸಂಸ್ಥೆ ಸ್ಥಾಪಿಸಲಾಗುತ್ತಿದೆ. ಮೈಸೂರಿನ ಮಂಡಕಳ್ಳಿಯ ಕರ್ನಾಟಕ ಮುಮುಕ್ತ ವಿವಿಯಲ್ಲಿ 30 ಕೋಟಿ ರು. ವೆಚ್ಚದಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ ಅಭಿವೃದ್ಧಿಪಡಿಸಲಾಗುವುದು. ಮಹಿಳಾ ನವೋದ್ಯಮಗಳನ್ನು ಪ್ರೋತ್ಸಾಹಿಸಲು ಮಾರುಕಟ್ಟೆ ಪ್ರವೇಶ ಮತ್ತು ಕಾರ್ಯ ಚಟುವಟಿಕೆ ವಿಸ್ತರಿಸಲು ಅಗತ್ಯ ಬೆಂಬಲ ನೀಡಲಾಗುತ್ತಿದೆ. ಜೈವಿಕ ತಂತ್ರಜ್ಞಾನ ನೀತಿ 4.0 ಮತ್ತು ಕರ್ನಾಟಕ ಜಾಗತಿಕ ಸಾಮರ್ಥ್ಯ ಕೇಂದ್ರಗಳ ನೀತಿ ಪ್ರಕಟಿಸಲಾಗಿದೆ ಎಂದು ರಾಜ್ಯಪಾಲರು ತಿಳಿಸಿದರು.

ನಿರಂತರ ನೀರು ಸರಬರಾಜು ಯೋಜನೆ

ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನಿರಂತರ ನೀರು ಸರಬರಾಜು ಯೋಜನೆಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. 3,741 ಕೋಟಿ ರು. ವೆಚ್ಚದಲ್ಲಿ 5 ವರ್ಷಗಳ ಅವಧಿಗೆ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, 2025ರ ಜೂನ್ ವೇಳೆಗೆ ಪೂರ್ಣಗೊಳ್ಳಲಿದೆ. ಎಡಿಬಿ ಮತ್ತು ಅಮೃತ್ ಯೋಜನೆಯ ಅನುದಾನದಡಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮದಡಿ 2584 ಕೋಟಿ ರು. ವೆಚ್ಚದಲ್ಲಿ ರಾಜ್ಯದ 8 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ. ದುಡಿಯುವ ವರ್ಗದ ಜನರಿಗೆ ಗುಣಮಟ್ಟದ ಆಹಾರ ನೀಡಲು ಇಂದಿರಾ ಕ್ಯಾಂಟೀನ್ ಯೋಜನೆ ಮುಂದುವರಿಸಿದೆ. ಇಂದಿರಾ ಕ್ಯಾಂಟೀನ್ ಹಂತ-2 ರಡಿ 186 ಕ್ಯಾಂಟೀನ್ ನಿರ್ಮಾಣಗೊಳಿಸಲು ಅನುಮೋದನೆ ನೀಡಿದ್ದು 156 ಕ್ಯಾಂಟೀನ್ ಪೂರ್ಣಗೊಂಡಿವೆ. ರಾಜ್ಯದ 9 ರೈಲ್ವೆ ಯೋಜನೆಗಳಿಗೆ 600 ಕೋಟಿ ರು. ಒದಗಿಸಲಾಗಿದೆ. 66 ಕಿ.ಮೀ. ದ್ವಿಪಥ ಯೋಜನೆ ಕಾಮಗಾರಿ 2025ರ ಆಗಸ್ಟ್ ವೇಳೆಗೆ ಪೂರ್ಣಗೊಳ್ಳಲಿದೆ. ರೈಲ್ವೆ ಇಲಾಖೆ ಸಹಭಾಗಿತ್ವದಲ್ಲಿ 148.17 ಕಿ.ಮೀ. ಉದ್ದದ ಬೆಂಗಳೂರು ಉಪನಗರ ರೈಲ್ವೆ ಯೋಜನೆ 15,765 ಕೋಟಿ ರು.ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಸಂಚಾರದಟ್ಟಣೆ ನಿಯಂತ್ರಿಸಲು ಇದು ಮಹತ್ವದ ಉಪಕ್ರಮ ಎಂದು ಗೆಹ್ಲೋಥ್ ವಿಶ್ಲೇಷಿಸಿದರು.

ಊರುಗೋಲಿನ ನೆರವಿನಿಂದ ಅಧಿವೇಶನಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ

ಹೊಸ ಕೈಗಾರಿಕಾ ನೀತಿ: ಮೈಕ್ರೋ ಫೈನಾನ್ಸ್ ಕಿರುಕುಳ ತಡೆಯಲು ಸುಗ್ರೀವಾಜ್ಞೆ ಜಾರಿಗೆ ತರಲಾಗಿದ್ದು, ಸಾಲ ವಸೂಲಾತಿ ನೆಪದಲ್ಲಿ ತೊಂದರೆ ಕೊಡುವವರಿಗೆ 6 ತಿಂಗಳಿನಿಂದ 10 ತಿಂಗಳವರೆಗೆ ಶಿಕ್ಷೆ ಹಾಗೂ ಗರಿಷ್ಠ 5 ಲಕ್ಷ ರು.ಗಳವರೆಗೂ ದಂಡ ವಿಧಿಸಲಾಗುತ್ತದೆ. ಹೊಸ ಕೈಗಾರಿಕಾ ನೀತಿ ರೂಪಿಸಲಾಗಿದ್ದು, ಬಂಡವಾಳ ಹೂಡಿಕೆಯಲ್ಲಿ ದೇಶದಲ್ಲಿ 2ನೇ ಸ್ಥಾನದಲ್ಲಿದೆ. 2024 ರ ಏಪ್ರಿಲ್ ನಿಂದ ಸೆ. ಅಂತ್ಯದವರೆಗೆ 88,853 ಮಿಲಿಯನ್ ಡಾಲರ್ ಸರಕು ಸೇವೆಗಳನ್ನು ರಫ್ತು ಮಾಡುವ ಮೂಲಕ ದೇಶದಲ್ಲೇ ನಂ.1 ಸ್ಥಾನದಲ್ಲಿದ್ದೇವೆ. ಶೇ.11.17 ರಷ್ಟು ಪ್ರಗತಿ ಸಾಧಿಸಲಾಗಿದೆ. ಇತ್ತೀಚೆಗೆ ನಡೆದ ಜಾಗತಿಕ ಹೂಡಿಕೆದಾರರ ಬಂಡವಾಳ ಸಮಾವೇಶದಲ್ಲಿ 10.27 ಲಕ್ಷ ಹೂಡಿಕೆಯ ಒಡಂಬಡಿಕೆಯಾಗಿದ್ದು, ಶೇ.70ರಷ್ಟು ಬಂಡವಾಳ ಬೆಂಗಳೂರು ವ್ಯಾಪ್ತಿಯಿಂದ ಹೊರಗೆ ಹೂಡಿಕೆಯಾಗುತ್ತಿದೆ. ನಿರುದ್ಯೋಗ ನಿವಾರಣೆಗೆ ಇದು ಮಹತ್ವದ ಕ್ರಮ. ಉತ್ತರ ಕರ್ನಾಟಕ ಭಾಗದಲ್ಲಿ ಶೇ.45 ರಷ್ಟು ಹೂಡಿಕೆಗೆ ಉದ್ಯಮಿಗಳು ಆಸಕ್ತಿ ತೋರಿಸಿದ್ದಾರೆ ಎಂದು ರಾಜ್ಯಪಾಲರುತಿಳಿಸಿದರು

ಕಾರ್ಮಿಕರ ಕಲ್ಯಾಣ: ಕಲಬುರಗಿಯಲ್ಲಿ ಸಾವಿರ ಎಕರೆ ಜಾಗದಲ್ಲಿ ಜವಳಿ ಪಾರ್ಕ್ ಸ್ಥಾಪನೆಗೆ ಮೂಲಸೌಕರ್ಯಗಳಿಗಾಗಿ 390 ಕೋಟಿ ರು. ನೀಡಲಾಗಿದೆ. ಇದರಿಂದ 1 ಲಕ್ಷ ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ. ಎಂಎಸ್‌ಎಂಇ ವಲಯಗಳ ಅಭಿವೃದ್ಧಿಗೆ 687 ಕೋಟಿ ರು.ಗಳನ್ನು ಹಂಚಿಕೆ ಮಾಡಲಾಗಿದೆ. ಬೆಂಗಳೂರು ಹೊರವಲಯದಲ್ಲಿ 40 ಸಾವಿರ ಕೋಟಿ ರು. ಬಂಡವಾಳ ಹೂಡಿಕೆಯೊಂದಿಗೆ ಕ್ವಿನ್‌ಸಿಟಿ ಅಭಿವೃದ್ಧಿಪಡಿಸಲಾಗುತ್ತಿದ್ದು, 80 ಸಾವಿರ ಉದ್ಯೋಗವಕಾಶ ಸೃಷ್ಟಿಯಾಗಲಿದೆ ಎಂದಿದ್ದಾರೆ.

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ 10 ಲಕ್ಷ ಫಲಾನುಭವಿಗಳನ್ನು ನೋಂದಾಯಿಸಿ ವಿವಿಧ ಕಲ್ಯಾಣ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಹೆಲ್ತ್ ಕೇರ್ ಯೋಜನೆಯಡಿ ಮತ್ತಷ್ಟು ಸೌಲಭ್ಯ ವಿಸ್ತರಣೆಗಾಗಿ ರಾಜ್ಯಾದ್ಯಂತ 43 ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ 10.61 ಕೋಟಿ ರು. ಪಾವತಿಸಲಾಗಿದೆ. ಅಂಬೇಡ್ಕರ್ ಸಹಾಯಹಸ್ತ ಯೋಜನೆಯಲ್ಲಿ 25 ವರ್ಗದ 21 ಲಕ್ಷ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸವಲತ್ತು ನೀಡಲಾಗುತ್ತಿದೆ. ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯಡಿ 5.12 ಲಕ್ಷ ಕಾರ್ಮಿಕರನ್ನು ನೋಂದಾಯಿಸಲಾಗಿದೆ. ವಿವೇಕ ಯೋಜನೆಯಡಿ ಮತ್ತು ವಿಶೇಷ ಯೋಜನೆ ಅಡಿ 5,349 ಶಾಲಾ ಕೊಠಡಿಗಳು ಪೂರ್ಣಗೊಂಡಿವೆ. 784 ಕೊಠಡಿಗಳ ಕಾಮಗಾರಿ ಪ್ರಗತಿಯಲ್ಲಿವೆ. 522 ಕೆಪಿಎಸ್ ಶಾಲೆಗಳ ಪ್ರಾರಂಭಕ್ಕೆ ಕ್ರಮ ಕೈಗೊಳ್ಳಲಾಗಿದೆ. 1,953 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆ ಪ್ರಾರಂಭ ಮಾಡಲಾಗಿದೆ ಎಂದು ಗೆಹ್ಲೋಥ್ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು.

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹ್ಲೋಥ್ ಭಾಷಣ

ರಾಜ್ಯಕ್ಕೆ ಅಗ್ರಸ್ಥಾನ

ಮೀನುಗಾರಿಕೆ ದೋಣಿಗಳಿಗೆ ನೀಡಲಾಗುತ್ತಿದ್ದ ಡೀಸೆಲ್ ವಾರ್ಷಿಕ ಮಿತಿ 2 ಲಕ್ಷ ಲೀಟರ್‌ವರೆಗೆ ವಿತರಿಸಲಾಗಿದೆ. ಮೀನುಗಾರರಿಗೆ ಪೂರಕವಾಗಿ ಸಮುದ್ರದ ಆಂಬ್ಯುಲೆನ್ಸ್‌ಗಳನ್ನು ಖರೀದಿಸಲಾಗುತ್ತಿದೆ. ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯ ಅಗ್ರ ಸ್ಥಾನದಲ್ಲಿದ್ದು, ಪ್ರತಿವರ್ಷ 15.43 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿದೆ. ವಿವಿಧ ಭಾಗಿದಾರರಿಗೆ ಫಲಾನುಭವಿ ಆಧಾರಿತ ಕಾರ್ಯಕ್ರಮದಲ್ಲಿ 60 ಕೋಟಿ ರು.ಗಳ ಸಹಾಯಧನ ಒದಗಿಸಲಾಗಿದೆ. ಈ ವರ್ಷದ ಜನವರಿ ಅಂತ್ಯಕ್ಕೆ 22.2 ಲಕ್ಷ ರೈತರಿಗೆ 16,942 ಕೋಟಿ ರು.ಗಳ ಬೆಳೆಸಾಲ ಮತ್ತು 46 ಸಾವಿರ ರೈತರಿಗೆ 1,442 ಕೋಟಿ ರು.ಗಳ ಮಧ್ಯಮವರ್ತಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲಾಗಿದೆ. ಬಡ್ಡಿಸಹಾಯಧನಕ್ಕಾಗಿ ಸಹಕಾರ ಸಂಘಗಳಿಗೆ 1,451 ಕೋಟಿ ರು.ಗಳನ್ನು ಖರ್ಚು ಮಾಡಲಾಗಿದೆ. ಆರ್ಥಿಕ ಬಿಕ್ಕಟ್ಟಿನಲ್ಲಿದ್ದ ಮೈಸೂರು ಸಕ್ಕರೆ ಕಂಪನಿಗೆ ಮರುಜೀವ ನೀಡಲಾಗಿದೆ. ಕಬ್ಬಿನ ಬಾಕಿ ಬಿಲ್ 70.46 ಕೋಟಿ ರು.ಗಳನ್ನು ಪಾವತಿಸಲಾಗಿದೆ ಎಂದು ತಿಳಿಸಿದರು.

ಇ-ಖಾತಾ ಅಭಿಯಾನ

ಬೆಂಗಳೂರು- ನಗರ ಸ್ಥಳೀಯ ಸಂಸ್ಥೆಗಳಲ್ಲಿ ನ ಕ್ರಮಬದ್ಧವಲ್ಲದ ಆಸ್ತಿಗಳಿಗೆ ಇ-ಖಾತಾ ನೀಡುವ ನಮೂನೆ ಅಭಿಯಾನ ಜಾರಿಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸುವುದಾಗಿ ಎಂದು ರಾಜ್ಯಪಾಲರು ಪ್ರಕಟಿಸಿದರು.

ನಗರ -ಪಟ್ಟಣ ಪ್ರದೇಶಗಳಲ್ಲಿ ಬಾಕಿ ಇದ್ದ 30 ಲಕ್ಷಕ್ಕೂ ಹೆಚ್ಚಿನ ಅನಧಿಕೃತ ಆಸ್ತಿಗಳಿಗೆ ಇ-ಖಾತಾ ನಮೂನೆ 3ಬಿ ನೀಡಲು ಪ್ರಾರಂಭಿಸಲಾಗಿದೆ. ರೈತರ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಸುರಕ್ಷಿತವಾಗಿಡಲು ಭೂಸುರಕ್ಷಾ ಎಂಬ ಗ್ಯಾರಂಟಿ ನೀಡಲಾಗುತ್ತಿದೆ. ಸ್ಕ್ಯಾನಿಂಗ್, ಡಿಜಿಟಲೀಕರಣ, ಇಂಡೆಕ್ಸಿಂಗ್ ಮತ್ತು ಕೆಟಲಾಗಿಂಗ್ ಮಾಡಿ ಜನರಿಗೆ ಸುಲಭವಾಗಿ ದೊರೆಯುವಂತೆ ಮಾಡಲು ಈಗಾಗಲೇ 9 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗಿದೆ. ಮ್ಯುಟೇಷನ್ ಸಂಬಂಧಿಸಿದಂತೆ ಜನರು ಅನಗತ್ಯವಾಗಿ ಸುತ್ತಾಡುವುದನ್ನು ತಪ್ಪಿಸಲು ಖಾತೆ ಬದಲಾವಣೆ ಕಾಲಾವಧಿ ಚುರುಕುಗೊಳಿಸಲಾಗಿದೆ. ಕಂದಾಯ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಸಾವಿರಾರು ಪ್ರಕರಣಗಳಿಗೆ ಮುಕ್ತಿ ನೀಡಲಾಗಿದೆ. 11 ಇ ನಕ್ಷೆ ಪಡೆಯುವ ಸರಾಸರಿ ಕಾಲಾವಧಿಯನ್ನು 30 ದಿನಗಳಿಗೆ ಅಸ್ತುಬದ್ಧ ಪ್ರಕರಣಗಳನ್ನು 45 ದಿನಗಳಲ್ಲಿ ಇತ್ಯರ್ಥಪಡಿಸಲು ವ್ಯವಸ್ಥೆ ರೂಪಿಸಲಾಗಿದೆ. ನನ್ನ ಭೂಮಿ ಯೋಜನೆ ಮುಖಾಂತರ ದರಖಾಸ್ತು ಜಮೀನುಗಳ ದುರಸ್ತಿ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ಮುಂದಿನ 5 ವರ್ಷಗಳಲ್ಲಿ 5813 ದರಖಾಸ್ತು ಜಮೀನುಗಳ ಕೋಡಿ ದುರಸ್ತಿ ಮಾಡಲಾಗಿದೆ. ಸ್ವಾಮಿತ್ವ ಯೋಜನೆಯಡಿ ಡ್ರೋನ್ ಸರ್ವೆ ಮಾಡಿ 3,880 ಗ್ರಾಮಗಳಿಗೆ 10.05 ಕರಡು ಪಿಆರ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಎಂದರು.

ಬೆಳಗಾವಿಯಲ್ಲಿ ಉದ್ಯಮಿಯನ್ನು ಅಪಹರಿಸಿ 5 ಕೋಟಿಗೆ ಬೇಡಿಕೆ ಇಟ್ಟ ಪ್ರಕರಣ

ಉದ್ಯಮಿ ಅಪಹರಣ: ಜಾರಕಿಹೊಳಿ ಆಪ್ತೆ ಸೆರೆ

ಬೆಳಗಾವಿ: ಕೋಟ್ಯಾಧಿಪತಿ ಆಗುವ ಆಸೆಯಿಂದ ಉದ್ಯಮಿಯನ್ನು ಅಪಹರಿಸಿ ಐದು ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಸತೀಶ್ ಜಾರಕಿಹೊಳಿ ಆಪ್ತೆಯನ್ನು ಬಂಧಿಸಿ ಪೊಲೀಸರು ಹಿಂಡಲಗಾ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಗೋಕಾಕ್ ತಾಲೂಕಿನ ಕೊಣ್ಣೂರಿನ ಮಂಜುಳಾ ರಾಮನಗಟ್ಟಿ ಬಂಧಿತ ಆರೋಪಿ. ಫೆ. 18 ರಂದು ಮೂಡಲಗಿ ತಾಲೂಕಿನ ರಾಜಾಪುರದ ರಿಯಲ್ ಎಸ್ಟೇಟ್ ಉದ್ಯಮಿ ಬಸವರಾಜ ಅಂಬಿ ಎಂಬಾತನನ್ನು ಅಪಹರಿಸಿ ನಿಪ್ಪಾಣಿ ಹೊರವಲಯದಲ್ಲಿ ಕೂಡಿಟ್ಟು ಐದು ಕೋಟಿ ರು.ಗಳಿಗೆ ಬೇಡಿಕೆ ಇಟ್ಟ ಇಡೀ ಪ್ರಕರಣದಲ್ಲಿ ಮಂಜುಳಾ. ಪ್ರಮುಖ ಆರೋಪಿ.

ಅಮಾಯಕರಿಗೆ ವಂಚನೆ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಆಪ್ತ ಬಳಗದಲ್ಲಿ ಗುರುತಿಸಿಕೊಂಡಂತೆ ನಟನೆ ಮಾಡುತ್ತಿದ್ದ ಈಕೆ

ಸೋಶಿಯಲ್ ಮೀಡಿಯಾದಲ್ಲಿ ಫೋಟೋ ಹಾಕಿಕೊಂಡು ಅಮಾಯಕರನ್ನು ವಂಚಿಸುವ ಕೆಲಸ ಮಾಡುತ್ತಿದ್ದಳು. ಸದ್ಯ ಉದ್ಯಮಿ ಅಪಹರಣ ಪ್ರಕರಣದಲ್ಲಿ ಸಿಲುಕಿ ಪೊಲೀಸರ ಅತಿಥಿಯಾಗಿದ್ದಾಳೆ.

ಪ್ರಕರಣದ ಕುರಿತು ಸೋಮವಾರ ಬೆಳಗಾವಿ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೇದ್ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು. ಕಳೆದ ಫೆ.18 ರಂದು ಘಟಪ್ರಭಾ ಠಾಣೆಯಲ್ಲಿ ದಾಖಲಾಗಿದ್ದ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದ ಕೇವಲ 24 ಗಂಟೆಯಲ್ಲಿ ನಾಲ್ವರು ಆರೋಪಿಗಳ ಜತೆ ಅಪಹರಣಕ್ಕೆ ಒಳಗಾದ ಉದ್ಯಮಿ ಬಸವರಾಜ ಅಂಬಿಯನ್ನು ರಕ್ಷಿಸಲಾಗಿತ್ತು. ಬಂಧಿತ ಆರೋಪಿಗಳು ಇಡೀ ಪ್ರಕರಣದ ರೂವಾರಿ ಮಂಜುಳಾ ರಾಮನಗಟ್ಟಿ ಬಗ್ಗೆ ಬಾಯಿಬಿಟ್ಟಿದ್ದರು.

ಆರೋಪಿಗಳಿಗೆ ಬಲೆ ಬೀಸಿದ ಪೊಲೀಸರು ಶನಿವಾರ ಮಂಜುಳಾ ರಾಮನಗಟ್ಟಿ, ಯಲ್ಲೇಶ್ ವಾಲಿಕಾರ, ಪರಶುರಾಮ ಕಾಂಬಳೆಯನ್ನು ಬಂಧಿಸಿದ್ದರು. ಬಂಧಿತ ಆರೋಪಿಗಳ ಜತೆ ಇನ್ನೂ ನಾಲ್ವರು ಸೇರಿ ಉದ್ಯಮಿಯನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆದರೆ ಉದ್ಯಮಿ ಬಸವರಾಜ ಪತ್ನಿ ದೂರು ದಾಖಲಿಸಿದ ಹಿನ್ನೆಲೆಯಲ್ಲಿ ಇಡೀ ಪ್ರಕರಣ ಬೆಳಕಿಗೆ ಬಂದಿದ್ದು ಬಂಧಿತರಿಂದ ನಾಲ್ಕು ವಾಹನ , 40 ಗ್ರಾಂ ಬಂಗಾರ ಹಾಗೂ ಮೊಬೈಲ್ ವಶಕ್ಕೆ ಪಡೆದು ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ ಎಂದು ಭೀಮಾಶಂಕರ ಗುಳೇದ್ ಮಾಹಿತಿ ನೀಡಿದರು.

ನಮ್ಮ ಆಪ್ತರು ಇದ್ದರೆ ಇರಬಹುದು. ಇಲ್ಲ ಎಂದು ಹೇಳಲಾಗಲ್ಲ. ನಾವೇನು ಅಪಹರಣ ಮಾಡಲು ಹೇಳಿಲ್ಲ. ಆವರ ವೈಯಕ್ತಿಕ ಸಮಸ್ಯೆ. ಈ ರೀತಿಯ ಸಮಸ್ಯೆ ಬಂದಾಗ ಫೋಟೋಗಳು ಹರಿದಾಡುತ್ತವೆ. ಪ್ರತಿದಿನ ನೂರಾರು ಜನರು ಬಂದು ಫೋಟೋ ತೆಗೆಸಿಕೊಳ್ಳುತ್ತಾರೆ. ಅವರು ಯಾರು ಎಂದು ನೋಡಲು ಆಗದು. ಈಗಾಗಲೇ ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ

ಸತೀಶ್ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಯಾವುದೇ ಸಂಘಟನೆಯಲ್ಲಿ ಗುರುತಿಸಿಕೊಂಡು ಸರಕಾರಿ ಕೆಲಸ ಕೊಡುವುದಾಗಿ ಹೇಳುವವ ಬಣ್ಣದ ಮಾತಿಗೆ ಜನ ವಂಚನೆಗೆ ಒಳಗಾಗಬಾರದು. ಸದ್ಯ ಈ ಪ್ರಕರಣಕ್ಕೆ ಸಂಬಂಧ ಆರೋಪಿ ಮಂಜುಳಾ ಹಾಗೂ ಇನ್ನಿತರರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ.

ಭೀಮಾಶಂಕರ ಗುಳೇದ್, ಬೆಳಗಾವಿ ಎಸ್‌ಪಿ

ಸಾಹುಕಾರ್ ಹೆಸರು ದುರ್ಬಳಕೆ

ಅಪಹರಣ ಪ್ರಕರಣದ ಜತೆಗೆ ವಂಚಕಿ ಮಂಜುಳಾ ರಾಮನಗಟ್ಟಿ ಭಾಗಿಯಾದ ಇನ್ನೂ ಅನೇಕ ವಂಚನೆ ಪ್ರಕರಣಗಳು ಬೆಳಕಿಗೆ ಬಂದಿವೆ. ತಹಶೀಲ್ದಾರ ಕಚೇರಿಯಲ್ಲಿ ಸರಕಾರಿ ನೌಕರಿ ಕೊಡಿಸುವುದಾಗಿ ಐದು ಲಕ್ಷ ರು. ಪಡೆದ ಆರೋಪದ ಮೇಲೆ ಮಂಜುಳಾ ವಿರುದ್ಧ ಕುಲಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಗಾವಿ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಜತೆ ಫೋಟೋ ತೆಗೆಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹವಾ ಎಬ್ಬಿಸುವ ಮೂಲಕ ಜನಸಾಮಾನ್ಯರಿಂದ ದೋಚುವುದೇ ಆಕೆಯ ಮೂಲ ಕಾಯಕವಾಗಿತ್ತು ಎಂದು ತಿಳಿದುಬಂದಿದೆ.

ಉತ್ತರಪ್ರದೇಶದ ವ್ಯಕ್ತಿ ಮಂಗಳೂರಲ್ಲಿ ಆತ್ಮಹತ್ಯೆ

ಮಂಗಳೂರು: ಸಿಐಎಫ್ ಅಧಿಕಾರಿಯಾಗಿರುವ ಮಹಿಳೆಯೊಬ್ಬಳು ತನ್ನನ್ನು ಪ್ರೀತಿಸಿ, ಮೋಸ ಮಾಡಿದ್ದಾಳೆಂದು ಆರೋಪಿಸಿ ಉತ್ತರ ಪ್ರದೇಶ ಮೂಲದ ವ್ಯಕ್ತಿಯೊಬ್ಬ ಮಂಗಳೂರಿನ ಲಾಡ್ಜ್ ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಚೆನ್ನೈಯಲ್ಲಿ ಖಾಸಗಿ ಕಂಪನಿ ಉದ್ಯೋಗಿಯಾಗಿದ್ದ ಉತ್ತರ ಪ್ರದೇಶದ ಗಾಜಿಪುರದ ಅಭಿಷೇಕ್ ಸಿಂಗ್ (40) ಆತ್ಮಹತ್ಯೆ ಮಾಡಿಕೊಂಡವನು.

ಮಂಗಳೂರಿನ ರಾವ್ ಅಂಡ್ ರಾವ್ ವೃತ್ತದಲ್ಲಿರುವ ವಸತಿಗೃಹದಲ್ಲಿ ಎರಡು ದಿನಗಳ ಹಿಂದೆ ಸಿಂಗ್ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೃತ್ಯಕ್ಕೂ ಮುನ್ನ 20 ನಿಮಿಷಗಳ ವಿಡಿಯೊ ಮಾಡಿದ್ದು , ತನ್ನ ಸಾವಿಗೆ ಸಿಐಎಫ್ ಅಧಿಕಾರಿ ಮೋನಿಕಾ ಸಿಂಗ್ ಕಾರಣ ಎಂದು ಹೇಳಿ ವಿಡಿಯೊವನ್ನು ಇನ್‌ಸ್ಟಾಗ್ರಾಮಿನಲ್ಲಿ ಹಂಚಿಕೊಂಡಿದ್ದಾನೆ.

8 ಲಕ್ಷ ಚಿನ್ನಾಭರಣ ಪಡೆದು ಮೋಸ: ಗುಜರಾತಿನ ಅಹ್ಮದಾಬಾದ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮೋನಿಕಾ ಸಿಂಗ್ ತನ್ನನ್ನು ಮದುವೆಯಾಗುವುದಾಗಿ ನಂಬಿಸಿ ಸಂಬಂಧ ಬೆಳೆಸಿ ವಂಚಿಸಿದ್ದಾಳೆ. ತಾನು ವಿವಾಹಿತೆ ಎಂಬ ಸಂಗತಿ ಮುಚ್ಚಿಟ್ಟು ಪ್ರೀತಿಯ ನೆಪದಲ್ಲಿ ದೈಹಿಕ ಸುಖ ಮತ್ತು ಆರ್ಥಿಕ ಲಾಭ ಪಡೆದು ಮೋಸ ಮಾಡಿದ್ದಾಳೆ ಎಂದು ಅಭಿಷೇಕ್ ಆರೋಪಿಸಿದ್ದಾನೆ. ಅಲ್ಲದೆ, ಆಕೆ ಹಲವರ ಜೊತೆಗೆ ಇದೇ ರೀತಿ ಸಂಬಂಧ ಇಟ್ಟುಕೊಂಡಿರುವುದು ತಿಳಿದು ಬಂದಿದೆ. ಮೋನಿಕಾಗೆ ಎಂಟು ಲಕ್ಷ ರು.ಮೌಲ್ಯದ ಚಿನ್ನಾಭರಣ ತೆಗೆದುಕೊಟ್ಟಿದ್ದೇನೆ ಎಂದು ವಿಡಿಯೋದಲ್ಲಿ ದೂರಿದ್ದಾನೆ. ಘಟನೆ ಕುರಿತು ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಮೊದಲು ಸರಕಾರಿ ಆಸ್ತಿ ಜಪ್ತಿ ಆಗಲಿ

ಸೀಸರ ಹೆಂಡತಿ ಸಂಶಯಾತೀತಳಾಗಿರಬೇಕು ಎನ್ನುವುದು ರಾಜಕೀಯದಲ್ಲಿ ಆಗಾಗ ಕೇಳಿ ಬರುವ ಮಾತು. ರಾಜಕೀಯದಲ್ಲಿ ಆಯಕಟ್ಟಿನ ಜಾಗದಲ್ಲಿರುವವರ ನಡೆ ತಮ್ಮತ್ತ ಬೊಟ್ಟು ಮಾಡುವ ರೀತಿಯಲ್ಲಿ ಇರಬಾರದು ಎನ್ನಲು ಈ ಮಾತನ್ನು ಆಗಾಗ ಉಲ್ಲೇಖಿಸಲಾಗುತ್ತದೆ. ಇಂಥದ್ದೇ ಸನ್ನಿವೇಶದಲ್ಲಿ ಶ್ರೀರಾಮಚಂದ್ರ ಜನಸಾಮಾನ್ಯರ ಅಪವಾದದಿಂದ ಪಾರಾಗಲು ಸೀತೆಯನ್ನು ದೂರ ಮಾಡಿ ತಾನು ಸಂಕಟ ಅನುಭವಿಸುತ್ತಾನೆ. ಇದರ ಅರ್ಥ ಆಡಳಿತ ನಡೆಸುವವರ ನಡೆ, ನುಡಿ ಎಲ್ಲರಿಗೂ ಆದರ್ಶಪ್ರಾಯವಾಗಿರಬೇಕು. ಪ್ರಜಾಪ್ರಭುತ್ವವನ್ನು ಅಪ್ಪಿಕೊಂಡಿರುವ, ಎಲ್ಲೆಡೆ ಭ್ರಷ್ಟತೆ ಆವರಿಸಿಕೊಂಡಿರುವ ಈ ಜಮಾನದಲ್ಲಿ ಜನನಾಯಕರಲ್ಲಿ ಮೌಲ್ಯ, ಆದರ್ಶಗಳನ್ನು ಹುಡುಕುವುದು ಸಾವಿಲ್ಲದ ಮನೆಯಲ್ಲಿ ಸಾಸಿವೆ ಹುಡುಕಿದಂತಾಗಬಹುದು. ಆದರೆ ಕನಿಷ್ಠ ಪಕ್ಷ ಸರಕಾರದ ನಡೆ, ಧೋರಣೆಗಳು ಪ್ರಜೆಗಳಿಗೆ ಮಾದರಿಯಾಗಿರಬೇಕು. ಆದರೆ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಜನರಲ್ಲಿ ಇರುವ ಕನಿಷ್ಠ ನೈತಿಕತೆ, ಆದರ್ಶಗಳು ಸರಕಾರದ ಬಳಿ ಇಲ್ಲ ಎನ್ನುವುದು ಸದ್ಯದ ವಾಸ್ತವ. ಹಣಕಾಸಿನ ಅಡಚಣೆಯಿಂದಲೋ, ಮರೆವಿನಿಂದಲೋ ಒಂದು ತಿಂಗಳ ನೀರಿನ ಬಿಲ್, ವಿದ್ಯುತ್ ಬಿಲ್ ಕಟ್ಟಲು ತಡ ಮಾಡುವ ಜನಸಾಮಾನ್ಯರ ಮೇಲೆ ದಂಡ ಹೇರುವ ಸರಕಾರ, ಸ್ವತಃ ಹಲವು ವರ್ಷಗಳಿಂದ ಕೋಟಿಗಟ್ಟಲೆ ಮೊತ್ತದ ವಿದ್ಯುತ್ ಬಿಲ್, ನೀರಿನ ಬಿಲ್, ಆಸ್ತಿತೆರಿಗೆ ಉಳಿಸಿಕೊಂಡಿರುವುದು ಬಯಲಾಗಿದೆ. ರಾಜ್ಯದ 250ಕ್ಕೂ ಹೆಚ್ಚು ಸರಕಾರಿ ಕಟ್ಟಡಗಳ ಆಸ್ತಿ ತೆರಿಗೆ ಇದುವರೆಗೂ ಸರಕಾರಕ್ಕೆ ಪಾವತಿಯಾಗಿಲ್ಲ. ವಿಧಾನಮಂಡಲ ಅಧಿವೇಶನದ ಹೊತ್ತಿನಲ್ಲಿ ಬಿಬಿಎಂಪಿ ಇವಕ್ಕೆ ನೋಟಿಸ್ ಜಾರಿ ಮಾಡಿರುವುದು ಆಡಳಿತದ ದೃಷ್ಟಿಯಿಂದ ದಿಟ್ಟ ಬೆಳವಣಿಗೆ. ಆಸ್ತಿ ತೆರಿಗೆ ಬಾಕಿಗಳನ್ನು ಪಾವತಿಸುವಂತೆ ಸರಕಾರಿ ಕಚೇರಿಗಳಿಗೆ ಪದೇ ಪದೆ ಜ್ಞಾಪನಾ ಪತ್ರಗಳನ್ನು ಕಳುಹಿಸಿದರೂ ಪ್ರತಿಕ್ರಿಯೆ ಬಂದಿಲ್ಲ. ಬಾಕಿ ಮೇಲಿನ ಚಕ್ರಬಡ್ಡಿಯನ್ನು ಮನ್ನಾ ಮಾಡುವ, ದಂಡವನ್ನು ಶೇ.50ರಷ್ಟು ಕಡಿಮೆ ಮಾಡುವ ಮೂಲಕ ಪರಿಹಾರವನ್ನು ನೀಡುವ ಒನ್ ಟೈಂ ಸೆಟಲ್‌ಮೆಂಟ್ ಯೋಜನೆ ಸರಕಾರಿ ಕಚೇರಿಗಳಿಗೂ ಮುಕ್ತವಾಗಿತ್ತು. ಆದರೂ ಸರಕಾರಿ ಕಚೇರಿಗಳು ಇದರ ಪ್ರಯೋಜನ ಪಡೆದಿಲ್ಲ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ. ಆಸ್ತಿ ತೆರಿಗೆ ಪಾವತಿಸದವರ ಸ್ಥಿರಾಸ್ತಿಯ ಹರಾಜಿಗೆ ಮುಂದಾಗಿರುವ ಮಹಾನಗರಪಾಲಿಕೆ ಮೊದಲು ಸರಕಾರಿ ಕಚೇರಿಗಳನ್ನೇ ಹರಾಜಿಗಿಡುವ ಮೂಲಕ ತನ್ನ ನ್ಯಾಯತತ್ಪರತೆಯನ್ನು ಎತ್ತಿ ಹಿಡಿಯಬೇಕು. ಈ ಮೂಲಕ ಸರಕಾರ ಮತ್ತು ಜನಸಾಮಾನ್ಯರಿಗೆ ಎಚ್ಚರಿಕೆಯ ಸಂದೇಶ ರವಾನಿಸಬೇಕು.

ಸೊಂಪಾದಕೀಯ

ಮೆಕ್ಯಾನಿಕಲ್ ಅಲ್ಲ ಎಮೋಷನಲ್

ಸಿನಿಮಾರಂಗದ ಸ್ಟಾರ್ ನಟರ ಮೇಲೆ ದೂರುಗಳು ಇದ್ದದ್ದೇ. ಅವರು ತಮ್ಮ ಸಿನಿಮಾಗಳಿಗೆ ಅಷ್ಟೇ ಸಮಯ ಕೊಡ್ತಾರೆ, ಉಳಿದಂತೆ ಕನ್ನಡದ ನೆಲ, ಜಲದ ಹೋರಾಟಗಳಿಗೆ ಬರಲ್ಲ ಅನ್ನೋ ಮಾತು ಮೊದಲಿನಿಂದಲೂ ಇದ್ದದ್ದೇ ಮತ್ತು ಅದು ತಕ್ಕಮಟ್ಟಿಗೆ ನಿಜ ಕೂಡಾ. ಆದರೆ ಇತ್ತೀಚೆಗೆ ತಮ್ಮ ಹೋರಾಟದ ಕರೆಗೆ ಚಿತ್ರರಂಗದ ಘಟಾನುಘಟಿಗಳು ಸ್ಪಂದನೆ ಮಾಡಲಿಲ್ಲ ಅನ್ನೋ ಕಾರಣಕ್ಕೆ ಘಾಟಿನ ಮಾತನ್ನಾಡಿದ್ದಾರೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಮೊನ್ನೆ ಶುರುವಾದ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಸ್ಟಾರ್‌ಗಳು ಬರದೇ ಇದ್ದಿದ್ದು ಅವರ ಈ ಸಿಟ್ಟಿಗೆ ಕಾರಣ. 'ನಿಮಗೆ ಕೆಲಸ ಆಗಬೇಕಿದ್ದಾಗ ನಮ್ಮತ್ರ ಬರ್ತೀರಾ, ಆದ್ರೆ ನಾವು ಕರೆದ್ರೆ ಬರಲ್ಲ' ಅಂತ ಅಸಮಾಧಾನ ಹೊರಹಾಕಿದ್ದಾರೆ ಅವರು. ಸಿದ್ದರಾಮಯ್ಯ ಅವರ ಜತೆಗೂಡಿ ಮಾಡಿದ ಪಾದಯಾತ್ರೆಗೆ ಸಾಧು ಕೋಕಿಲಾ, ವಿಜಿ ಬಿಟ್ರೆ ಇನ್ಯಾರೂ ಹೆಜ್ಜೆ ಹಾಕಲಿಲ್ಲ ಎಂದಿರುವ ಅವರು ನಮ್ಮ ಕಷ್ಟಕ್ಕೆ ಆಗಿದ್ದಕ್ಕೇ ಸಾಧು ಕೋಕಿಲಾ ಅವರಿಗೆ ಸೂಕ್ತ ಪದವಿ ಕೊಟ್ಟಿದ್ದೇವೆ ಅಂತ ನೇರವಾಗಿಯೇ ಹೇಳಿದ್ದಾರೆ. ಆದರೆ ತಮ್ಮ ಜತೆ ಸಹಕರಿಸದ ಸ್ಟಾರ್‌ಗಳಿಗೆ ಎಲ್ಲೆಲ್ಲಿ ನಟ್ಟು ಬೋಲ್ಟು ಟೈಟ್ ಮಾಡಬೇಕು ಅಂತ ಗೊತ್ತು ಅಂತಲೂ ಸೇರಿಸಿದ್ದಾರೆ. ಉಪಮುಖ್ಯಮಂತ್ರಿ ಸ್ಥಾನದಲ್ಲಿ ಇದ್ದು, ನಟ್ಟು ಬೋಲ್ಟು ಟೈಟ್ ಮಾಡುವ ಮಾತು ಬೇಡವಾಗಿತ್ತು ಅನ್ನೋದು ಹಲವರ ಅಭಿಪ್ರಾಯ. ಆದರೆ ಮೆಕ್ಯಾನಿಕಲ್ ಆಗಿ ನಟ್ಟು ಬೋಲ್ಟು ಟೈಟ್ ಮಾಡುವ ಮೆಕ್ಯಾನಿಕಲ್ ವಿಷಯವನ್ನು ಅವರು ಎಮೋಷನಲ್ ಆಗಿ ಹೇಳಿದ್ದಾರೆ ಅನ್ನೋದು ಅವರ ಸಮರ್ಥಕರ ಮಾತು. ಅದೇನೇ ಇರಲಿ, ದೊಡ್ಡ ಸ್ಟಾರ್ ನಟರ ಬಗ್ಗೆ ಅವರು ಹೇಳಿರುವ ಮಾತು ಈಗ ಮಾತಿನ ಸಮರಕ್ಕೆ ದಾರಿ ಮಾಡಿದೆ ಮತ್ತು ಈ ನಟ್ಟು ಬೋಲ್ಟಿನ ವಿಷಯ ನಮ್ಮ ಸ್ಟಾರ್‌ಗಳ ಎದೆಗೆ ನೇರವಾಗಿಯೇ ನಾಟಿದೆ. ಇವರೇನು ನಮಗೆ ಬೆದರಿಕೆ ಹಾಕುತ್ತಿದ್ದಾರೆಯೇ ಅನ್ನೋ ಮಾತುಗಳೂ ಕೇಳಿಬರುತ್ತಿವೆ. ಒಟ್ಟಿನಲ್ಲಿ, ಇತ್ತೀಚೆಗೆ ಡಿಕೆಶಿ ಎಲ್ಲೇ ಹೋದರೂ ಏನೇ ಮಾಡಿದರೂ ಅದು ವಿವಾದಕ್ಕೆ ಎಡೆಮಾಡಿಕೊಡ್ತಾ ಇರೋದು ನೋಡಿದರೆ ಅತಿ ಶೀಘ್ರದಲ್ಲಿ ಅವರು ಮುಖ್ಯಮಂತ್ರಿ ಆಗೋ ಎಲ್ಲಾ ಲಕ್ಷಣಗಳಿವೆ ಎನ್ನಲಾಗುತ್ತಿದೆ.

ಸಂಪಾದಕರ ಸದ್ಯಶೋಧನೆ

ನೆಹರು-ವಾಜಪೇಯಿ ಸ್ನೇಹ

1957ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅಂದಿನ ಜನಸಂಘದ ಅಭ್ಯರ್ಥಿಯಾಗಿ ಮಥುರಾ ಮತ್ತು ಬಲರಾಮಪುರ ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಿದ್ದರು. ಮಥುರಾದಲ್ಲಿ ಕಾಂಗ್ರೆಸ್ಸಿನ ರಾಜ ಮಹೇಂದ್ರ ಪ್ರತಾಪ್ ವಿರುದ್ಧ ಸೋತುಹೋದರು. ಆದರೆ ಬಲರಾಮಪುರದಿಂದ ಆಯ್ಕೆಯಾದರು. ಮೊದಲ ಸಲ ಲೋಕಸಭೆಯನ್ನು ಪ್ರವೇಶಿಸಿದ ವಾಜಪೇಯಿ ಒಮ್ಮೆ ಭಾರತದ ವಿದೇಶಾಂಗ ನೀತಿಯ ಕುರಿತು ಸಂಸತ್ತಿನಲ್ಲಿ ಸುದೀರ್ಘವಾಗಿ ಮಾತಾಡಿದರು. ಆಗ ಸದನದಲ್ಲಿ ಪ್ರಧಾನಿ ನೆಹರು ಹಾಜರಿದ್ದರು. ವಾಜಪೇಯಿಯವರ ಮಾತುಗಳಿಂದ ನೆಹರು ಸಂತುಷ್ಟರಾಗಿ, ತಮ್ಮ ಸಂತಸವನ್ನು ಚೀಟಿಯಲ್ಲಿ ಬರೆದು ವಾಜಪೇಯಿಗೆ ತಿಳಿಸಿದರು. ಪ್ರತಿಪಕ್ಷದ ಒಬ್ಬ ಯುವ ಸಂಸದ ವಿದೇಶಾಂಗ ವಿಷಯದ ಬಗ್ಗೆ ಇಷ್ಟೊಂದು ಪ್ರಬುದ್ಧವಾಗಿ ಮಾತಾಡಿದ್ದು ನೆಹರುಗೆ ಖುಷಿಕೊಟ್ಟಿತ್ತು. 1960ರಲ್ಲಿ ಸೋವಿಯತ್ ಅಧ್ಯಕ್ಷ ನಿಕಿತಾ ಕ್ರುಶ್ಚೇವ್ ಭಾರತಕ್ಕೆ ಭೇಟಿ ನೀಡಿದರು. ಇದು ರಷ್ಯಾ ಅಧ್ಯಕ್ಷರ ಮಹತ್ವದ ಭಾರತ ಭೇಟಿಯಾಗಿತ್ತು. ಆ ಭೇಟಿಗೆ ಅತಿ ಮಹತ್ವವನ್ನು ನೀಡಲಾಗಿತ್ತು. ಕ್ರುಶ್ಚೇವ್ ಗೌರವಾರ್ಥ ಏರ್ಪಡಿಸಿದ ಭೋಜನಕೂಟದಲ್ಲಿ ಅತಿಗಣ್ಯ ವ್ಯಕ್ತಿಗಳನ್ನು ಖುದ್ದಾಗಿ ನೆಹರು ಅವರೇ ಪರಿಚಯಿಸುತ್ತಿದ್ದರು. ವಾಜಪೇಯಿ ಅವರ ಸರದಿ ಬಂದಿತು. ಆಗ ನೆಹರು ಕ್ರುಶ್ಚೇವ್ ಅವರಿಗೆ ವಾಜಪೇಯಿ ಅವರನ್ನು ಪರಿಚಯಿಸುತ್ತಾ, 'ಇವರು ನಮ್ಮ ದೇಶದ ಭವಿಷ್ಯದ ಪ್ರಧಾನಿ' ಎಂದು ಉದ್ಗರಿಸಿ, ಪರಿಚಯಿಸಿದರು. ನೆಹರು ಅವರಿಂದ ವಾಜಪೇಯಿ ಆ ಮಾತುಗಳನ್ನು ನಿರೀಕ್ಷಿಸಿರಲಿಲ್ಲ. ಆ ಮಾತುಗಳನ್ನು ಕೇಳಿ ಕ್ರುಶ್ಚೇವ್‌ಗೂ ಅಚ್ಚರಿಯಾಯಿತು. ಒಮ್ಮೆ ವಾಜಪೇಯಿ ಅಮೆರಿಕಕ್ಕೆ ಭೇಟಿ ನೀಡಿದಾಗ, ಆ ದೇಶದಲ್ಲಿನ ಭಾರತದ ರಾಯಭಾರಿಗೆ, ಅಲ್ಲಿನ (ಅಮೆರಿಕ) ನಾಯಕರಿಗೆ ವಾಜಪೇಯಿ ಅವರನ್ನು ಸರಿಯಾಗಿ ಪರಿಚಯಿಸಬೇಕು ಎಂದು ಸೂಚನೆ ನೀಡಿದ್ದರು. ನೆಹರು ಅವರ ಕಾರ್ಯವೈಖರಿ ಮತ್ತು ನೀತಿ-ನಿರ್ಧಾರಗಳನ್ನು ಆಗಾಗ ವಾಜಪೇಯಿ ಟೀಕಿಸಿದರೂ, ನೆಹರು ಮಾತ್ರ ವಾಜಪೇಯಿ ಬಗ್ಗೆ ವಿಶೇಷ ಪ್ರೀತಿ, ಆದರಗಳನ್ನು ಹೊಂದಿದ್ದರು. ಆ ದಿನಗಳಲ್ಲಿ ಇದು ಚರ್ಚೆಯ ವಿಷಯವಾಗಿತ್ತು. 1962ರ ಲೋಕಸಭಾ ಚುನಾವಣೆಯ ಪ್ರಚಾರದಲ್ಲಿ ನೆಹರು ಸ್ಪರ್ಧಿಸಿದ್ದ ಕ್ಷೇತ್ರದಲ್ಲಿ ವಾಜಪೇಯಿ ಹೋಗಿ ಪ್ರಧಾನಿ ಮತ್ತು ಕಾಂಗ್ರೆಸ್ಸಿನ ವಿರುದ್ಧ ಭಾಷಣ ಮಾಡಿದರು. ವಾಜಪೇಯಿ ಮಾತುಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಕ್ರುದ್ಧರಾಗಿದ್ದರು. ಈ ವಿಷಯ ನೆಹರು ಕಿವಿಗೂ ಬಿತ್ತು. ವಾಜಪೇಯಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಹರಿಹಾಯಲು ಮುಂದಾದಾಗ ನೆಹರು, 'ಆನೇ ದೋ ನ.. ವೊ ಅಚ್ಛಾ ಬೋಲ್ತಾ ಹೈ.. ಬೋಲ್‌ನೇ ದೋ ನ..' (ಅವರು ಬರಲಿ.. ಅವರು ಸೊಗಸಾಗಿ ಮಾತಾಡುತ್ತಾರೆ, ಮಾತಾಡಲಿ ಬಿಡಿ) ಎಂದು ತಮ್ಮ ಕಾರ್ಯಕರ್ತರನ್ನು ಸಮಾಧಾನಪಡಿಸಿದ್ದರು. 'ಮತದಾರರು ನನಗೆ ಮತ ನೀಡ ಬಯಸಿದರೆ ಒಳ್ಳೆಯದು. ಇಲ್ಲವೇ, ಬೇರೆಯವರಿಗೆ ಮತ ನೀಡಲು ಬಯಸಿದರೂ ಒಳ್ಳೆಯದೇ' ಎಂದು ನೆಹರು ಹೇಳಿದ್ದರು. ನೆಹರು ಅವರ ಈ ಮಾತುಗಳನ್ನು ವಾಜಪೇಯಿ ಅನೇಕ ಸಂದರ್ಭಗಳಲ್ಲಿ ಪುನರುಚ್ಚರಿಸಿದ್ದುಂಟು. 1996ರಲ್ಲಿ ಲಾತೂರು ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ಮಾಡುವಾಗ, ಕಾಂಗ್ರೆಸ್ಸಿನ ಅಭ್ಯರ್ಥಿ ಶಿವರಾಜ ಪಾಟೀಲ್ ಅವರನ್ನುದ್ದೇಶಿಸಿ, ವಾಜಪೇಯಿ ಅದೇ ಮಾತನ್ನು ಹೇಳಿದ್ದರು. ಅದನ್ನು ಕೇಳಿದ ಶಿವರಾಜ್ ಪಾಟೀಲ್ ಪತ್ನಿ ವಿಜಯಾ ಪಾಟೀಲ್ ತಮ್ಮ ಪತಿಗೆ, 'ವಾಜಪೇಯಿ ಅವರನ್ನು ನೀವು ಕರೆಯಿಸಿದ್ದೀರಾ ಅಥವಾ ಅವರ ಪಕ್ಷ ಕಳಿಸಿದೆಯಾ?' ಎಂದು ಚಟಾಕಿ ಹಾರಿಸಿದ್ದರು. ನೆಹರು ವಾಜಪೇಯಿ ಬಗ್ಗೆ ಯಾವ ಉದಾರಭಾವ ಹೊಂದಿದ್ದರೋ, ವಾಜಪೇಯಿ ಅವರು ತಮ್ಮ ರಾಜಕೀಯ ವಿರೋಧಿಗಳ ಬಗ್ಗೆಯೂ ಅದೇ ಉದಾರಭಾವವನ್ನು ಹೊಂದಿದ್ದರು. ಈ ವಿಷಯದಲ್ಲಿ ವಾಜಪೇಯಿ, ನೆಹರು ಅವರಿಂದ ಪ್ರಭಾವಿತರಾಗಿದ್ದರು. 'ಚುನಾವಣಾ ಅಖಾಡದಲ್ಲಿ ಮಾತ್ರ ಪ್ರತಿಸ್ಪರ್ಧಿಗಳು, ಅದು ಮುಗಿದ ಬಳಿಕ ರಾಜಕಾರಣವನ್ನು ಹಿಂದಿನ ಸೀಟಿಗೆ ಕಳಿಸಬೇಕು' ಎಂದು ವಾಜಪೇಯಿ ಅದೆಷ್ಟೋ ಬಾರಿ ಹೇಳಿದ್ದುಂಟು. ಅಷ್ಟೇ ಅಲ್ಲ, ಅವರು ಅದೇ ರೀತಿ ನಡೆದುಕೊಂಡರು ಕೂಡ.

ಅಷ್ಟಕ್ಕೂ ದೇವಾಲಯಕ್ಕೆ ಹೋದರೆ ತಪ್ಪೇನು?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಜಾತ್ಯತೀತ ರಾಷ್ಟ್ರವಾಗಿರುವ ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಾತಿ-ಧರ್ಮವೇ ಬಹುತೇಕ 'ಮೊದಲ ಆದ್ಯತೆ'ಯಾಗುತ್ತಿದೆ. ಯಾವ ವಿಷಯದ ಮೇಲೆ ದೇಶ ಕಟ್ಟಬಾರದೆಂದು ಈ ಹಿಂದಿನವರು ಜಾತ್ಯತೀತ ರಾಷ್ಟ್ರವೆಂದರೋ ಅದೇ 'ವಿಷಯ'ದ ಮೇಲೆ ದೇಶವನ್ನು ಮುನ್ನಡೆಸಬೇಕಿರುವ ಹಂತಕ್ಕೆ ರಾಜಕಾರಣ ಬಂದು ನಿಂತಿದೆ. ಇದು ಕಾಂಗ್ರೆಸ್, ಬಿಜೆಪಿ ಅಥವಾ ಇನ್ಯಾವುದೋ ಪಕ್ಷವೆಂದಲ್ಲ, ಎಲ್ಲ ಪಕ್ಷಗಳಲ್ಲಿಯೂ ಕಾಣಬರುವ ದೃಶ್ಯ; ಟಿಕೆಟ್ ಘೋಷಿಸುವುದರಿಂದ ಹಿಡಿದು, ಸಚಿವ ಸ್ಥಾನ ನೀಡುವ ತನಕ ಜಾತಿ-ಧರ್ಮದ ಮೇಲೆಯೇ ರಾಜಕಾರಣ ನಿಂತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಈ ಜಾತಿ-ಧರ್ಮ ಎನ್ನುವುದನ್ನು ಪೂರ್ಣವಾಗಿ ಹೊರಗಿಟ್ಟು ರಾಜಕೀಯ ಮಾಡಲು ಸಾಧ್ಯವಿಲ್ಲ ಎನ್ನುವುದು ಸತ್ಯ. ಆದರೆ ಒಂದು ಜಾತಿ-ಧರ್ಮವನ್ನು ಓಲೈಸುವ ಕಾರಣಕ್ಕೆ ಮತ್ತೊಬ್ಬರನ್ನು ಟೀಕಿಸುವ ಪರಿಪಾಠ ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿರುವ ಅಂಶ.

ಹೌದು, ದೇಶದಲ್ಲಿರುವ ಬಹುತೇಕ ರಾಜಕೀಯ ಪಕ್ಷಗಳು ತಮ್ಮದೇ ಆದ ಸೈದ್ಧಾಂತಿಕ ಕಾರಣಕ್ಕೆ ಒಂದೊಂದು ತತ್ವಗಳನ್ನು ಅಳವಡಿಸಿಕೊಂಡಿರುತ್ತವೆ. ಜಾತಿ, ಧರ್ಮಗಳು ಒಂದೊಂದು ಪಕ್ಷಕ್ಕೆ ಸೀಮಿತ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಆದರೆ ಯಾವ ಪಕ್ಷ ಸಂವಿಧಾನದಲ್ಲಿ 'ಜಾತ್ಯತೀತ' ಶಬ್ದವನ್ನು ಸೇರಿಸಿತ್ತೋ ಅದೇ ಪಕ್ಷದ ನಾಯಕರು ಇಂದು ಬಿಜೆಪಿಯನ್ನು ವಿರೋಧಿಸಬೇಕು ಎನ್ನುವ ಕಾರಣಕ್ಕೆ ಹಿಂದುತ್ವವನ್ನು ವಿರೋಧಿಸುವ ಮೂಲಕ ಜಾತ್ಯತೀತ ರಾಷ್ಟ್ರದ ಅರ್ಥವನ್ನೇ ತಲೆಕೆಳಗು ಮಾಡುವ ಪ್ರಯತ್ನ ಮಾಡುತ್ತಿರುವುದು ಹಲವರ ಆಕ್ಷೇಪಕ್ಕೆ ಕಾರಣವಾಗಿದೆ.

ಅದರಲ್ಲಿಯೂ ಕಳೆದೊಂದು ವಾರದಿಂದ ರಾಜ್ಯದಲ್ಲಿ ಭಾರಿ ಸದ್ದು ಮಾಡಿದ ಹಾಗೂ ರಾಷ್ಟ್ರ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾದ ವಿಷಯವೆಂದರೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸದ್ಗುರು ಜಗ್ಗಿ ವಾಸುದೇವ ಅವರ ಈಶಾ ಫೌಂಡೇಶನ್‌ನಲ್ಲಿ ನಡೆದ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು. ಮೊದಲಿಗೆ ಅಮಿತ್ ಶಾ ಜತೆ ವೇದಿಕೆ ಹಂಚಿಕೊಂಡಿದ್ದಕ್ಕೆ ಕೆಲ ನಾಯಕರು ವಿರೋಧಿಸಲು ಶುರು ಮಾಡಿದರು. ಬಳಿಕ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇ ತಪ್ಪು ಎನ್ನುವ ಅರ್ಥದಲ್ಲಿ ಕೆಲ ಕಾಂಗ್ರೆಸಿಗರು ವಾದ ಮಂಡಿಸಿದರು. ಕೊನೆಗೆ ಹೈಕಮಾಂಡ್ ವರೆಗೂ ಕೆಲವರು ಈ ವಿಷಯವನ್ನು ತೆಗೆದುಕೊಂಡು ಹೋಗಿದ್ದು ವಿಪರ್ಯಾಸ.

ಹಾಗೆ ನೋಡಿದರೆ, ಡಿ.ಕೆ.ಶಿವಕುಮಾರ್ ಅವರು ಮೊದಲಿನಿಂದಲೂ ಪೂಜೆ-ಪುನಸ್ಕಾರ, ಹವನ-ಹೋಮ, ದೇವಾಲಯಗಳಿಗೆ ಭೇಟಿ ನೀಡುವಿಕೆ ಇತ್ಯಾದಿ ಕಾರ್ಯದಲ್ಲಿ ಭಾಗಿಯಾಗುತ್ತಲೇ ಬಂದಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಮಹಾಕುಂಭಮೇಳವನ್ನು ಟೀಕಿಸಿದ್ದರೂ, ಡಿಕೆಶಿ ಕುಟುಂಬ ಸಮೇತರಾಗಿ ತೆರಳಿ ಪುಣ್ಯಸ್ನಾನದಲ್ಲಿ ಭಾಗವಹಿಸಿದ್ದರು. ಕುಂಭಮೇಳಕ್ಕೆ ಹೋಗುವಾಗಲೇ ವಿರೋಧ ವ್ಯಕ್ತವಾಗಿದ್ದರಿಂದ ''ಇದು ವೈಯಕ್ತಿಕ ವಿಷಯ. ಈ ಬಗ್ಗೆ ಮೇಲಿನವರ ಗಮನಕ್ಕೂ ತರಲಾಗಿದೆ'' ಎನ್ನುವ ಮೂಲಕ ವಿವಾದಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಿದ್ದರು. ಆದರೆ ಈಶಾ ಫೌಂಡೇಶನ್‌ಗೆ ಹೋಗುವ ಸುದ್ದಿಯಿಂದ ಈ ವಿವಾದಕ್ಕೆ ಹೊಸ ಅರ್ಥ ಶುರುವಾಯಿತು. ರಾಹುಲ್ ಗಾಂಧಿ ಅವರನ್ನು ಟೀಕಿಸಿದ್ದ ಸದ್ಗುರು ಅವರ ಆಶ್ರಮಕ್ಕೆ ಹೋಗುವ ಅಗತ್ಯವೇನಿತ್ತು ಎನ್ನುವ ಪ್ರಶ್ನೆಗಳನ್ನು ಕಾಂಗ್ರೆಸ್ಸಿನ ಹಲವರು ಕೇಳಿದರು.

ಆದರೆ ಈ ಎಲ್ಲ ಸಮಯದಲ್ಲಿಯೂ 'ವೈಯಕ್ತಿಕ ನಂಬಿಕೆ' ಎಂದ ಡಿಕೆ, ''ಕಾಂಗ್ರೆಸ್ ಎಲ್ಲಾ ಧರ್ಮಗಳ ಸಮಾಗಮ. ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವುದು ನಮ್ಮ ಸಿದ್ಧಾಂತ. ನಾವು ಅಧಿಕಾರ, ಸ್ಥಾನಮಾನ ನೀಡುವಾಗ ಎಲ್ಲರನ್ನು ಪರಿಗಣಿಸಿಯೇ ನೀಡುತ್ತೇವೆ. ನಮ್ಮ ಸಮಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯನ್ನು, ಬಿಜೆಪಿಯವರು ವಕ್ ಬೋರ್ಡ್ ಅನ್ನು ರದ್ದುಪಡಿಸಲಾಗುವುದೇ? ನಮ್ಮ ದೇಶದಲ್ಲಿ ಎಲ್ಲಾ ಧರ್ಮಕ್ಕೂ ಸಮಾನ ಅವಕಾಶ ನೀಡಲಾಗಿದೆ. ಅವರೆಲ್ಲ ಬೇರೆ ನೀರು ಕುಡಿಯಲು ಸಾಧ್ಯವೇ? ಈ ಭೂಮಿಗೆ, ಗಾಳಿಗೆ ಜಾತಿ, ಧರ್ಮದ ತಾರತಮ್ಯ ಇದೆಯೇ?'' ಎಂದು ಪ್ರಶ್ನಿಸುವ ಮೂಲಕ ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದರು. ಇದನ್ನು ಅಲ್ಲಿಗೇ ನಿಲ್ಲಿಸದೆ, ''ಹಿಂದೂ ಆಗಿ ಹುಟ್ಟಿದ್ದೇನೆ, ಹಿಂದೂ ಆಗಿ ಸಾಯುತ್ತೇನೆ'' ಎನ್ನುವ ಮೂಲಕ ತಮ್ಮ ವೈಯಕ್ತಿಕ ವಿಷಯಕ್ಕೆ ರಾಜಕೀಯ ಲೇಪ ಬೇಡ ಎನ್ನುವ ಸಂದೇಶವನ್ನು ನೀಡಿದ್ದರು.

ಆದರೂ ಎಐಸಿಸಿ ಕಾರ್ಯದರ್ಶಿ ಮೋಹನ್ ಅವರು, ಡಿಕೆಶಿ ಈಶಾ ಫೌಂಡೇಶನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನ್ನು ವಿರೋಧಿಸಿ, ಮುಂದೆ ಹೈಕಮಾಂಡ್ ಬಳಿ ವಿಷಯ ಪ್ರಸ್ತಾಪಿಸುವ ಮಾತುಗಳನ್ನು ಆಡಿದರು. ಆದರೆ ಇಲ್ಲಿರುವ ಪ್ರಶ್ನೆ ಏನೆಂದರೆ, ಡಿಕೆಶಿಯವರು ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಯಾವ ರೀತಿಯಲ್ಲಿ ತಪ್ಪಾಗುತ್ತದೆ? ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಎಲ್ಲರೂ ದೇವಾಲಯಗಳ ಮುಂದೆ ಹೋಗಿ ನಿಲ್ಲುವಾಗ, ಇವರು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಪಕ್ಷಕ್ಕೆ ಆದ ಅಪಚಾರವಾದರೂ ಏನು? ಒಂದು ವೇಳೆ ಕಾಂಗ್ರೆಸ್‌ನಲ್ಲಿರುವವರು ದೇವಾಲಯಗಳಿಗೆ ಭೇಟಿ ನೀಡುವುದು ಅಕ್ಷಮ್ಯ ಎನ್ನುವುದಾದರೆ, ಈ ಹಿಂದೆ ಚುನಾವಣೆಯ ಸಮಯದಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸಾಲು ಸಾಲು ದೇವಾಲಯಗಳಿಗೆ ಹೋದಾಗ ಅದನ್ನು ವಿರೋಧಿಸಲಿಲ್ಲವೇಕೆ? ಚುನಾವಣೆಯ ಸಮಯದಲ್ಲಿ ಮಠಗಳಿಗೆ, ದೇವಾಲಯಗಳಿಗೆ ಭೇಟಿ ನೀಡಿದಾಗ ಸ್ವಾಗತಿಸುವ ಮಂದಿ, ಈಗ ಡಿಕೆಶಿ ಅವರು ದೇವಾಲಯಕ್ಕೆ ಹೋದರೆ ವಿರೋಧಿಸುವುದು ಏಕೆ?

ದೇಶದಲ್ಲಿ ಬಿಜೆಪಿಯು ಹಿಂದುತ್ವದ ಮತಗಳನ್ನು 'ಸ್ಕೂಪ್' ಮಾಡಲು ಶುರು ಮಾಡಿದಾಗಿನಿಂದ ಹಲವು ಕಾಂಗ್ರೆಸ್ಸಿಗರಲ್ಲಿ ಈ ರೀತಿಯ ವಿಚಿತ್ರ ಮನಸ್ಥಿತಿ ನಿರ್ಮಾಣವಾಗಿದೆ. ಹಿಂದೂ ಧರ್ಮದಲ್ಲಿರುವ ಹಿಂದುಳಿದ, ದಲಿತ ಮತದಾರರನ್ನು ಒಪ್ಪಿಕೊಳ್ಳುವ ನಾಯಕರು ಹಿಂದುತ್ವವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಮುಸ್ಲಿಮರನ್ನು ಓಲೈಸುವುದಕ್ಕಾಗಿಯೇ ಈ ರೀತಿಯ ನಡೆ ಅನುಸರಿಸಲಾಗುತ್ತಿದೆಯೇ ಎಂಬ ಅನುಮಾನಗಳು ಅನೇಕರಲ್ಲಿವೆ.

ಆದರೆ ಡಿ.ಕೆ.ಶಿವಕುಮಾರ್ ಈಶಾ ಫೌಂಡೇಶನ್‌ಗೆ ಭೇಟಿ ನೀಡಿದ್ದನ್ನಾಗಲಿ, ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡಿದ್ದನ್ನಾಗಲೀ ವಿರೋಧಿಸುತ್ತಿರುವುದು ಹಿಂದುತ್ವದ ಆಚರಣೆಯನ್ನು ವಿರೋಧಿಸಬೇಕು ಎನ್ನುವ ಕಾರಣಕ್ಕಾಗಿ ಅಲ್ಲವೇ ಅಲ್ಲ. ಈ ಹಿಂದೆ ನಡೆದ ಕುಂಭಮೇಳದಲ್ಲಿ ಜವಾಹರಲಾಲ್ ನೆಹರು, 2001ರಲ್ಲಿ ನಡೆದ ಕುಂಭಮೇಳದಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಸೇರಿದಂತೆ ಪಕ್ಷದ ಬಹುತೇಕ ನಾಯಕರು ಪುಣ್ಯಸ್ನಾನದಲ್ಲಿ ಭಾಗವಹಿಸಿದ್ದರು. ಈ ಹಿಂದೆ ಕಾಂಗ್ರೆಸ್‌ನ ಅಧಿಕಾರಾವಧಿಯಲ್ಲಿ ನಡೆದ ಬಹುತೇಕ ಕುಂಭಮೇಳಗಳಲ್ಲಿ ಅಂದಿನ ಕಾಂಗ್ರೆಸ್ ಮುಖ್ಯಸ್ಥರು ಭಾಗವಹಿಸಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ನಗ್ನಸತ್ಯ. ಆದರೆ ಈ ಬಾರಿಯ ಮಹಾಕುಂಭಮೇಳ ನಡೆಯುವಾಗ ಕೇಂದ್ರ ಹಾಗೂ ಉತ್ತರ ಪ್ರದೇಶದಲ್ಲಿ ಬಿಜೆಪಿ ಆಡಳಿತದಲ್ಲಿರುವುದರಿಂದ, ಬಿಜೆಪಿಯನ್ನು ವಿರೋಧಿಸುವ ಭರದಲ್ಲಿ ಕುಂಭಮೇಳವನ್ನು ವಿರೋಧಿಸುವ ಸ್ಥಿತಿ ನಿರ್ಮಾಣವಾಗಿದೆ. ಕೇವಲ ಕುಂಭಮೇಳವೊಂದೇ ಅಲ್ಲ, ಈ ಹಿಂದೆ ಅಯೋಧ್ಯೆಯಲ್ಲಿ ಬಾಲರಾಮ ಮಂದಿರ ಸ್ಥಾಪನೆಯಾದಾಗ ವಿರೋಧಿಸಲೂ ಇದೇ ಕಾರಣವಾಗಿತ್ತು. ಆದರೆ ಅಯೋಧ್ಯೆಯ ರಾಮಮಂದಿರವನ್ನು ವಿರೋಧಿಸುತ್ತಿರುವ ಬಹುತೇಕ ಕಾಂಗ್ರೆಸ್ಸಿಗರಿಗೆ, ಬಾಲರಾಮನ ಪೂಜೆ ಶುರುಮಾಡಿಸಿದ್ದು ರಾಜೀವ್ ಗಾಂಧಿ ಎನ್ನುವುದು ಮರೆತುಹೋದಂತಿದೆ.

ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಹಿಂದುತ್ವದ ಪ್ರತಿ ಅಂಶವನ್ನೂ ವಿರೋಧಿಸಲು ಧರ್ಮಕ್ಕಿಂತ ಹೆಚ್ಚಾಗಿ ರಾಜಕೀಯ ಕಾರಣಗಳಿವೆ. ಹಿಂದೂ ಹಾಗೂ ಹಿಂದುತ್ವದ ಆಚರಣೆಗಳನ್ನು ವಿರೋಧಿಸುವ ಮೂಲಕ ಅಲ್ಪಸಂಖ್ಯಾತರ ಅದರಲ್ಲಿಯೂ ಮುಸ್ಲಿಮರ ಮತಗಳನ್ನು ಸೆಳೆಯಬಹುದು ಎನ್ನುವ ತಪ್ಪು ಲೆಕ್ಕಾಚಾರದಲ್ಲಿ ಪದೇಪದೆ ಕೆಟ್ಟ ಹೆಜ್ಜೆಗಳ ಮೂಲಕ ಅದು ಕೈಸುಟ್ಟುಕೊಳ್ಳುವ ಕೆಲಸ ಮಾಡುತ್ತಿದೆ. ಆದರೆ ಈ 'ಮಾಡೆಲ್'ನಿಂದ ಕಾಂಗ್ರೆಸ್ಸಿಗೆ ಆಗುತ್ತಿರುವ ಡ್ಯಾಮೇಜ್ ಸರಿಪಡಿಸುವ ಉದ್ದೇಶದಿಂದ ಡಿ.ಕೆ. ಶಿವಕುಮಾರ್ 'ಸಾಫ್ಟ್' ಹಿಂದುತ್ವದತ್ತ ಒಲವು ತೋರಿದ್ದರು.

ಹಾಗೆ ನೋಡಿದರೆ, ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಅಧಿಕಾರ ಸ್ವೀಕರಿಸಿದ ದಿನದಿಂದಲೂ 'ಹಿಂದುತ್ವ'ದ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆಯನ್ನು ಇಡುತ್ತಿದ್ದಾರೆ. ಹಿಂದುತ್ವದ ವಿಷಯದಲ್ಲಿ ಅವರು ಪಕ್ಷದ ಸಿದ್ಧಾಂತಗಳನ್ನು ಮೀರಿ ಕೆಲವೊಮ್ಮೆ ನಡೆದುಕೊಂಡಿರುವುದನ್ನು ಗಮನಿಸಿದ್ದೇವೆ. ಈ ಹಿಂದೆ ಬಿಜೆಪಿ ಸರಕಾರದ ಅವಧಿಯಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಹಿಜಾಬ್ ಧಾರಣೆ, ಅಜಾನ್ ಕೂಗುವುದಕ್ಕೆ ಸಂಬಂಧಿಸಿದ ನಿರ್ಬಂಧವಿರಬಹುದು, ದೇವಾಲಯಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಅವಕಾಶ ನೀಡದೇ ಇರುವ ವಿಷಯವಿರಬಹುದು ಹೀಗೆ ಹಲವು ವಿಷಯದಲ್ಲಿ 'ತಟಸ್ಥ' ನಿಲುವು ತಾಳುವ ಮೂಲಕ ಅವರು ಇತರೆ ಕಾಂಗ್ರೆಸ್ಸಿಗರಿಗಿಂತ ಭಿನ್ನವಾಗಿ ಕಂಡರು. ಚುನಾವಣಾ ಸಮಯದಲ್ಲಿಯೂ ತಮ್ಮ ಭಾಷಣದಲ್ಲಿ 'ಹಿಂದುತ್ವ'ದ ವಿಷಯಕ್ಕೆ ಹೋಗದೆ, ಬಿಜೆಪಿಗೆ ಸೀಮಿತಗೊಳಿಸಿ ಮಾತನಾಡಿದ್ದು ಕಾಣಬಹುದಾಗಿತ್ತು. 'ಹಿಂದೂ ಆಗಿ ಹುಟ್ಟಿದ್ದೇನೆ, ಹಿಂದೂ ಆಗಿಯೇ ಸಾಯುತ್ತೇನೆ' ಎನ್ನುವ ಮೂಲಕ ಹಿಂದೂ ಧರ್ಮದ ಕೆಲ ಮತಗಳನ್ನು ಸೆಳೆಯುವ ಪ್ರಯತ್ನವನ್ನು ಮಾಡಿದ್ದರು. ಡಿ.ಕೆ.ಶಿವಕುಮಾರ್ ಅವರ ಈ ಸಾಫ್ಟ್ ಹಿಂದುತ್ವ, 'ಕೋರ್' ಹಿಂದೂ ಮತಗಳನ್ನು ಸೆಳೆಯದಿದ್ದರೂ, ಪಕ್ಷಕ್ಕೆ ಹಿಂದೂ ಮತಗಳು ನಷ್ಟವಾಗದ ರೀತಿಯಲ್ಲಿ ಅದು ನೋಡಿಕೊಂಡಿತ್ತು ಎಂದರೆ ತಪ್ಪಾಗುವುದಿಲ್ಲ.

ಇದೀಗ ಈಶಾ ಫೌಂಡೇಶನ್‌ನಲ್ಲಿ ನಡೆದ ಶಿವರಾತ್ರಿ ಆಚರಣೆಯಲ್ಲಿ ಭಾಗವಹಿಸಿದ್ದು, ಅದಕ್ಕೂ ಮೊದಲು ಕುಂಭಮೇಳದಲ್ಲಿ ಭಾಗವಹಿಸಿದ್ದು ರಾಜಕೀಯವಾಗಿ ಕಾಂಗ್ರೆಸ್‌ನ ಸಿದ್ಧಾಂತಕ್ಕೆ ವಿರುದ್ಧವಾಗಿತ್ತು. ಆದರೆ ಇದನ್ನು ಕೆಲವರು ವಿರೋಧಿಸಿದ್ದು ಮಾತ್ರ ಗಾಂಧಿ ಕುಟುಂಬವನ್ನು ಹಾಗೂ ಹೈಕಮಾಂಡ್ ನಾಯಕರನ್ನು ಓಲೈಸುವ ಕಾರಣಕ್ಕೆ ಎನ್ನುವುದು ದಕ್ಷಿಣಕ್ಕೇ ಆಗಿತ್ತು ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಕಾಂಗ್ರೆಸ್‌ನಲ್ಲಿ ಗಾಂಧಿ ಕುಟುಂಬದ ಓಲೈಕೆ ಮಾಡಿಕೊಂಡು ಮುನ್ನೆಲೆಗೆ ಬರಬೇಕು ಎನ್ನುವ ಉತ್ಸಾಹವನ್ನು ಕೆಲವರು ತೋರುತ್ತಿರುವುದು ಇದೇ ಮೊದಲೇನಲ್ಲ. ಇಂದಿರಾ ಗಾಂಧಿ ಕಾಲದಿಂದಲೂ ನಡೆದು ಬಂದಿರುವ ಈ ಪರಂಪರೆಯನ್ನು ಈಗಲೂ ಕೆಲ ನಾಯಕರು ಮುಂದುವರಿಸಿದ್ದಾರೆ. 'ಗಾಂಧಿ' ಕುಟುಂಬದ ಹೊರತಾಗಿ ಯೋಚಿಸುವ ಶಕ್ತಿಯನ್ನೇ ಕೆಲ ಕಾಂಗ್ರೆಸ್ಸಿಗರು ಕಳೆದುಕೊಂಡಿರುವುದು ದುರಂತ. ದೇವಾಲಯ, ಮಠ-ಮಾನ್ಯಗಳಿಗೆ ಭೇಟಿ ನೀಡಿದ ಮಾತ್ರಕ್ಕೆ ಪಕ್ಷ ವಿರೋಧಿ ಎನ್ನುವ 'ನಿರ್ಧಾರ'ಕ್ಕೆ ಬರುವುದಾದರೆ ಚುನಾವಣೆಯ ಸಮಯದಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿಯಾದಿಯಾಗಿ ಟೆಂಪಲ್ ರನ್ ಮಾಡಿದ್ದ 'ಹೈಕಮಾಂಡ್' ನಾಯಕರ ನಡೆಯೂ ಪಕ್ಷ ವಿರೋಧಿ ಎನ್ನಬಹುದೇ? ಮತ್ತೊಂದು ಸಮುದಾಯದ ಓಲೈಕೆಯ ಕಾರಣಕ್ಕೆ, ಇನ್ನೊಂದು ಸಮುದಾಯದ ಯಾವ ಸಂಪ್ರದಾಯವನ್ನು ಅನುಸರಿಸುವುದು ತಪ್ಪು ಎಂದರೆ ಅಥವಾ ಹಿಂದೂವಾಗಿ ಹುಟ್ಟಿದ್ದರೂ, ಹಿಂದೂ ಆಚರಣೆಗಳನ್ನು ಆಚರಿಸಬಾರದು ಎನ್ನುವ ಮನಸ್ಥಿತಿ ಮುಂದುವರಿದರೆ, ಕಾಂಗ್ರೆಸ್ಸಿಗೆ ಮುಸ್ಲಿಮರ ಬೆಂಬಲವೆಷ್ಟು ಸಿಗುವುದೋ ಬಿಡುವುದೋ ಗೊತ್ತಿಲ್ಲ. ಆದರೆ ಕಾಂಗ್ರೆಸ್‌ನೊಂದಿಗೆ ಈಗಲೂ ಇರುವ ಹಿಂದೂ ಮತಗಳನ್ನು ಅದು ಕಳೆದುಕೊಳ್ಳುವ ಅಪಾಯವಂತೂ ಕಟ್ಟಿಟ್ಟಬುತ್ತಿ. ಇನ್ನಾದರೂ ಬಿಜೆಪಿಗರನ್ನು ಟೀಕಿಸುವ ಭರದಲ್ಲಿ ಹಿಂದೂಗಳನ್ನು ಅಥವಾ ಹಿಂದುತ್ವವನ್ನು ವಿರೋಧಿಸಿ ಮಾತನಾಡುವ ಮನಸ್ಥಿತಿಯಿಂದ ಕಾಂಗ್ರೆಸ್‌ನ ಕೆಲವರು ಹೊರಬರಲಿ. ಇಲ್ಲವಾದರೆ ಮುಂದಿನ ದಿನದಲ್ಲಿ ಕಾಂಗ್ರೆಸ್‌ನೊಂದಿಗೆ ಉಳಿದುಕೊಂಡಿರುವ ಹಿಂದೂಗಳೂ ಇನ್ನೊಬ್ಬರ ಪಾಲಾದರೂ ಅಚ್ಚರಿಯಿಲ್ಲ.

ಹಿಂದೂ ಪ್ರಭೇದಗಳ ಒಗ್ಗೂಡಿಸುವಿಕೆ ಒಡೆಯುವಿಕೆ!

ಬಸವ ಮಂಟಪ
ರವಿ ಹಂಜ್
vveditoped@gmail.com

ಕಾಲಚಕ್ರವು ಉರುಳಿದಂತೆ ಯಾವುದು ಮೇಲಿರುತ್ತದೋ ಅದು ಕೆಳಗೆ ಬರಲೇಬೇಕೆಂಬುದು ವಿಧಿನಿಯಮವೇ ಆಗಿರಬಹುದು! ಬೌದ್ಧಧರ್ಮ ಕೂಡಾ ಇದಕ್ಕೆ ಹೊರತಾಗಲಿಲ್ಲ. ಜ್ಞಾನಿಗಳಾಗಿದ್ದ ಬೌದ್ಧಭಿಕ್ಷುಗಳು ಕ್ರಮೇಣವಾಗಿ ಸೋಮಾರಿಗಳಾಗುತ್ತ ತಮ್ಮ ತಿಳಿವಳಿಕೆಯನ್ನು ಕೇವಲ ಕಂಠಪಾಠಕ್ಕೆ ಸೀಮಿತಗೊಳಿಸಿಕೊಂಡಿದ್ದರು ಎಂದು ಹುಯೆನ್ ತ್ಸಾಂಗ್ ದಾಖಲಿಸಿದ್ದಾನೆ. ಬೌದ್ಧಜ್ಞಾನವನ್ನು ಕಂಠಪಾಠ ಮಾಡಿಕೊಳ್ಳುತ್ತ, ಸೂತ್ರಗಳನ್ನು ಪಠಿಸುತ್ತ, ಸಮಾಜದಿಂದ ದೂರವಿರುವ ಬೌದ್ಧಮಠಗಳಲ್ಲಿರುತ್ತಿದ್ದ ಈ ಬೌದ್ಧಭಿಕ್ಷುಗಳಿಗೆ ಸಮಾಜದಲ್ಲಿನ ಆಗುಹೋಗುಗಳಿಗೆ ತಕ್ಕನಾಗಿ ವ್ಯವಹರಿಸುವ ಕುಶಲತೆ ಇರಲಿಲ್ಲ. ಸಾಕಷ್ಟು ಬ್ರಾಹ್ಮಣರು ಬೌದ್ಧರಾದರೂ ಹಿಂದೂ ದೇವತೆಗಳ ಪೂಜೆಯನ್ನೂ ಮಾಡುತ್ತಿದ್ದರು. ಈ ಮೊದಲೇ ಹೇಳಿದಂತೆ ಬುದ್ಧ, ಮಹಾವೀರರನ್ನು ಅಂದಿನ ಜನಾಂಗವು ದಾರ್ಶನಿಕರೆಂದು ಕಂಡಿತ್ತೇ ಹೊರತು ಬೇರೆ ಧರ್ಮ ಸಂಸ್ಥಾಪಕರೆಂದಲ್ಲ. ಹಾಗಾಗಿ ಬೌದ್ಧ ತತ್ವವನ್ನು ಒಪ್ಪಿದ್ದರೂ ಅವರೆಲ್ಲಾ ಹಿಂದೂ ದೇವತೆಗಳನ್ನೇ ಆರಾಧಿಸುತ್ತಿದ್ದರು.

ಹೀಗೆ ಬೌದ್ಧಧರ್ಮವು ಅಧೋಗತಿಯ ಹಾದಿಯಲ್ಲಿದ್ದ ಸಂದರ್ಭವನ್ನು ಬಳಸಿ ಶಂಕರಾಚಾರ್ಯರು ಬೌದ್ಧರನ್ನು ಸುಲಭವಾಗಿ ವಾದದಲ್ಲಿ ಸೋಲಿಸಿ ಹಿಂದೂ ಪಂಥಗಳನ್ನು ಒಗ್ಗೂಡಿಸಿದರು. ಹಾಗಾಗಿಯೇ ಶಂಕರರ ನಂತರದ ಕಾಲದ ವೈಷ್ಣವ ಪಂಥದ ಭಾಸ್ಕರಾಚಾರ್ಯ, ಯಮುನಾಚಾರ್ಯ ಮತ್ತು ರಾಮಾನುಜಾಚಾರ್ಯರು ಶಂಕರರನ್ನು ನೇರವಾಗಿ ಮತ್ತು ಪರೋಕ್ಷವಾಗಿ ಹೀಗಳೆದಿದ್ದಾರೆ. 'ಬುದ್ಧತತ್ವಗಳನ್ನೇ ಮಾಯಾವಾದ ಮತ್ತು ಅದ್ವೈತ ಸಿದ್ಧಾಂತದ ರೂಪದಲ್ಲಿ ಮಂಕು ಮಾಡಿದ ಚಾಣಾಕ್ಷ ಪ್ರಚ್ಛನ್ನಬುದ್ಧ' ಎಂದು ಶಂಕರರನ್ನು ಹೀಗಳೆದು ತಮ್ಮ ಪಂಥಶ್ರೇಷ್ಠತೆಯನ್ನು ಮೆರೆದಿದ್ದಾರೆ. ಭಾಸ್ಕರಾಚಾರ್ಯರು ''ಬೌದ್ಧಮತಾವಲಂಬಿ ಅದ್ವೈತದ ಮಾಯಾವಾದವನ್ನು ಒಂದು ಸಿದ್ಧಾಂತವೆಂದು ಕೇವಲ ಒಬ್ಬ ಕುಡುಕನಾದವನು ಮಾತ್ರ ವಾದಿಸಬಲ್ಲನು'' ಎಂದು ಶಂಕರಾಚಾರ್ಯರನ್ನು ಹೀಗಳೆಯುತ್ತಾ ತಮ್ಮ ಪಂಥವೇ ವೇದಾಂತದ ನಿಜ ಪಂಥವೆನ್ನುತ್ತಾರೆ. ಹದಿಮೂರನೇ ಶತಮಾನದ ವೇದಾಂತದೇಶಿಕನು, ''ಮಾಧ್ಯಮಿಕ ಬೌದ್ಧಶಾಲೆಯಲ್ಲಿ ವೇದವನ್ನು ಕಲಿತವನು ಛದ್ಮವೇಷಧಾರಿ ಶಂಕರಾಚಾರ್ಯ'' ಎನ್ನುತ್ತ ಮಾಯಾವಾದದ ನೂರು ತಪ್ಪುಗಳನ್ನೊಪ್ಪಿಸುವ 'ಶತದೂಷಿಣಿ' ಸೂತ್ರವನ್ನೇ ರಚಿಸಿದ್ದಾನೆ. ಕೇವಲ ಶತದೂಷಿಣಿಯನ್ನು ಗಿಳಿಪಾಠ ಮಾಡಿಕೊಂಡು ಈ ಅದ್ವೈತ ವೇಷಧಾರಿ ಬೌದ್ಧರನ್ನು ಸೋಲಿಸಬಹುದೆಂದು ಹೀಗಳೆದಿದ್ದಾನೆ. ಮಹಾಯಾನದ ಬೌದ್ಧಸೂತ್ರಗಳಿಗೂ, ಅದ್ವೈತಕ್ಕೂ ಸಾಕಷ್ಟು ಸಾಮ್ಯತೆಯಿರುವುದು ಸತ್ಯವೆಂದು ಸಾಕಷ್ಟು ತತ್ವಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಅಲ್ಲದೇ ಶಂಕರಾಚಾರ್ಯರ ಗುರುವಿನ (ಗೋವಿಂದ ಭಾಗವತ್ಪಾದ) ಗುರು ಗೌಡಪದಾಚಾರ್ಯರು ರಚಿಸಿದ ಗೌಡಪದಕಾರಿಕವು ಬೌದ್ಧಗುರು ನಾಗಾರ್ಜುನನು ರಚಿಸಿದ್ದ 'ಅಸಂಗ'ದ ತಿರುಚಿದ ರಚನೆಯಾಗಿದೆ ಎಂದು ಸಾಕಷ್ಟು ಇತಿಹಾಸಜ್ಞರು ಪ್ರಮಾಣಿಸಿದ್ದಾರೆ. ವಿಪರ್ಯಾಸವೆಂದರೆ ಶಂಕರರ ಅದ್ವೈತವನ್ನು ಬೌದ್ಧಧರ್ಮದ ನಕಲೆಂದು ಹೀಯಾಳಿಸುವ ವೈಷ್ಣವರು ತಮ್ಮ ಮೂಲ ಕೂಡಾ ಬೌದ್ಧಧರ್ಮವೇ ಆಗಿತ್ತೆಂಬುದನ್ನೇ ಮರೆತುಬಿಟ್ಟಿದ್ದರು. ಬೌದ್ಧಧರ್ಮದ ನಿರ್ದೇಶದಲ್ಲಿನ ಜಾತಕ ಕತೆಗಳಿಂದ ಮೈದಾಳಿದ ಯವನರ (ಗ್ರೀಕರ) ವೈಷ್ಣವ ಕೂಡಾ ಮೂಲದಲ್ಲಿ ಬೌದ್ಧವೇ ಆಗಿದ್ದಿತು.

ಒಟ್ಟಾರೆ ಶಂಕರರು ಒಗ್ಗೂಡಿಸಿದ್ದ ಹಿಂದೂ ಧರ್ಮ ಹೀಗೆ ಮತ್ತೊಮ್ಮೆ ಸಮಯಭೇದಕ್ಕೆ ಒಳಗಾಯಿತು. ಆದರೂ ಈ ಭೇದವು ತಾರ್ಕಿಕವಾಗಿದ್ದಿತೇ ಹೊರತು ಪರಸ್ಪರ ನಾಶ ಮಾಡುವ ಹಂತಕ್ಕೆ ಇರಲಿಲ್ಲ. ಆದರೆ ಶಂಕರರ ನಂತರ ಹಿಂದೂ ಧರ್ಮಕ್ಕೆ ಮರ್ಮಾಘಾತವೇ ಕಾದಿತ್ತು! ಮೊದಲ ಹಂತದಲ್ಲಿ ಪಾರ್ಶ್ವ, ಪಾರ್ಥೇನಿಯನ್, ಪಹಲ್ವರಾಗಿ ಬಂದಿದ್ದ ಇಲ್ಲಿನ ಅಗ್ನಿ ಆರಾಧಕರೇ ಶತಮಾನಗಳ ನಂತರದಲ್ಲಿ ಇಸ್ಲಾಮಿಗೆ ಪರಿವರ್ತಿತರಾಗಿ ಬಂಡುಕೋರರಾಗಿ ಆಗಮಿಸಿದರು. ನಂತರದ್ದು ಇತಿಹಾಸ!

ಇಸ್ಲಾಂ ಆಡಳಿತದಲ್ಲಿ ಮುಸ್ಲಿಮರಲ್ಲದವರನ್ನು ಎರಡನೇ ದರ್ಜೆಯ ನಾಗರಿಕರಂತೆ ಕಾಣುವ ಆಡಳಿತಾತ್ಮಕ ವ್ಯವಸ್ಥೆ ಜನಾಂಗೀಯ ದ್ವೇಷವನ್ನು ಹುಟ್ಟುಹಾಕಿತು. ಈ ಪಲ್ಲಟದಿಂದ 'ಹುಟ್ಟಿನಿಂದ ಜಾತಿ'ಯನ್ನು ಅಪ್ಪಿಕೊಂಡ ಹಿಂದೂಗಳಿಗೆ ಇಸ್ಲಾಂ ಆಡಳಿತದ ಮೊದಲ ದರ್ಜೆ/ಎರಡನೇ ದರ್ಜೆಯೆಂಬ ಭೇದವು ಗರ್ವದ ಸಂಕೇತವೆನಿಸಿತು. ತಮ್ಮ ಎರಡನೇ ದರ್ಜೆಯ ಅವಮಾನವನ್ನು ಮುಸ್ಲಿಮರ ಮೇಲೆ ತೋರಲಾಗದೆ ಅವರು ತಮ್ಮದೇ ಆದ ಕೆಳವರ್ಗಗಳ ಮೇಲೆ ಹೇರಲಾರಂಭಿಸಿದರು. ಕುಲೀನ ಹಿಂದೂಗಳು ತಮಗಿಂತ ಕೆಳಸ್ತರದ ಹಿಂದೂಗಳನ್ನು ಮೂರನೇ ದರ್ಜೆಯ, ನಾಲ್ಕನೇ ದರ್ಜೆಯ ನಾಗರಿಕರಂತೆ ಕಾಣಲಾರಂಭಿಸಿದರು. ಈ ದರ್ಪದ ಹೇರಿಕೆಗೆ ತಕ್ಕಂತೆ ಸಮಾಜ, ವೇದ, ಧರ್ಮ, ಆಚರಣೆ, ವರ್ಣಗಳೆಲ್ಲಾ ತಿರುಚಲ್ಪಟ್ಟವು. ಮುಸಲ್ಮಾನರು ತಮ್ಮ ಆಚರಣೆಗೆ ಕುರಾನ್ ಕಡೆ ಬೆರಳು ತೋರಿಸಿದಂತೆ, ಹಿಂದೂಗಳು ವೇದೋಪನಿಷತ್ತು, ವರ್ಣಗಳೆಡೆ ಬೆರಳು ತೋರಲಾರಂಭಿಸಿದರು. ಅಲ್ಲಿಯವರೆಗೆ ಆಳುವವರ ಮಟ್ಟದಲ್ಲಿದ್ದ ಅಸಮಾನತೆ, ಹೀಗೆ ಹಿಂದೂ ಸಮಾಜದ ಕಟ್ಟಕಡೆಯ ವರ್ಗದವರೆಗೆ ಹೇರಲ್ಪಟ್ಟಿತು. ಅದಲ್ಲದೇ ಈ ಎಲ್ಲಾ ವರ್ಗಗಳಲ್ಲಿ ಮಹಿಳೆಯು ಭೋಗವಸ್ತುವಾಗುತ್ತ ಅಸ್ತಿತ್ವವನ್ನು ಕಳೆದುಕೊಳ್ಳಲಾರಂಭಿಸಿದಳು. ಜಗತ್ತಿನ ಇಲ್ಲಿನವರೆಗಿನ ಕ್ರಾಂತಿಗಳನ್ನು ಗಮನಿಸಿದಾಗ ಯಾವಾಗ ಸಮಾಜದಲ್ಲಿ ಕ್ಷಿಪ್ರ ಬದಲಾವಣೆಗಳು ಆಗುತ್ತವೆಯೋ ಆಗಲೇ ಕ್ರಾಂತಿಗಳು ಸಂಭವಿಸಿರುವುದು ಎಂದು ತಿಳಿದುಬರುತ್ತದೆ. ಇಸ್ಲಾಂ ಆಡಳಿತ ತಂಡ ಕ್ಷಿಪ್ರ ಸಾಮಾಜಿಕ ಪಲ್ಲಟಗಳನ್ನು ಪೂರ್ವಗ್ರಹವಿಲ್ಲದೆ ತುಸು ಒರೆಹಚ್ಚಿ ವಾಸ್ತವದ ಹಿನ್ನೆಲೆಯಲ್ಲಿ ವಿಶ್ಲೇಷಣಾತ್ಮಕವಾಗಿ ನೋಡಿದಾಗ ಈ ಪಲ್ಲಟಗಳು ಸುಸ್ಪಷ್ಟವಾಗಿ ಗೋಚರಿಸುತ್ತವೆ.

ಸಮಾಜದಲ್ಲಿ ಕುಲೀನ-ಮಲಿನ, ಉಚ್ಚ-ನೀಚ, ಬಡವ-ಬಲ್ಲಿದ ಎಂಬ ವರ್ಗ ಜಾತಿ ಸಂಘರ್ಷಗಳನ್ನು ನಿಗ್ರಹಿಸಲು ಕ್ರಾಂತಿ ಅಂದು ಅವಶ್ಯವೆನಿಸಿತು. ಕೇವಲ ಕಿಚ್ಚು ರೊಚ್ಚಿನಿಂದ ಜನ ಸಂಘಟನೆಯ ಕ್ರಾಂತಿಯು ಅಂದಿನ ಆಡಳಿತಗಳಲ್ಲಿ ಕಷ್ಟವಾದ ಕಾರಣವೇ ಭಕ್ತಿ ಮಾರ್ಗ ಸುಲಭದ ಹಾದಿ ಎನಿಸಿತ್ತು. ಹಾಗಾಗಿ ಭಕ್ತಿಮಾರ್ಗದಲ್ಲಿ ಉದಯಗೊಂಡುದೇ ಸಮಾನತೆಯನ್ನು ಪ್ರತಿಪಾದಿಸುವ ಭಕ್ತಿಪಂಥವೆಂಬ ಕ್ರಾಂತಿ. ಇದರ ಪರಿಣಾಮವಾಗಿ ಶಾಸ್ತ್ರ, ಕ್ರಮ, ಕ್ಲಿಷ್ಟ ಪದ್ಧತಿಗಳನ್ನು ಸರಳೀಕರಿಸಿ ಭಾವನಾತ್ಮಕ ಸಾಹಿತ್ಯ ರಚನೆಗೊಂಡಿತು. ಕೆಲವು ಪಂಥಗಳು ವೇದೋಪನಿಷತ್ತುಗಳ ಸಾರವನ್ನೇ ಸರಳಗೊಳಿಸಿದರೆ, ಕೆಲವು ಪಂಥಗಳು ವೇದೋಪನಿಷತ್ತುಗಳನ್ನು ಧಿಕ್ಕರಿಸಿದವು. ಆದರೆ ತುಸು ವಾಸ್ತವದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಈ ಧಿಕ್ಕರಿಸುವಿಕೆಗೆ ಕಾರಣ ಇವುಗಳಲ್ಲಾದ ತಿದ್ದುಪಡಿಗಳು!

ಭಾಗ-1

ಹಾಗಾಗಿಯೇ ಬಸವಣ್ಣ 'ವೇದಕ್ಕೆ ಒರೆಯ ಕಟ್ಟುವೆ' ಎಂದಿರುವುದು. ಅಂದರೆ ವೇದವನ್ನು ಈ ತಿದ್ದುಪಡಿಗಳಿಂದ ಮುಕ್ತಗೊಳಿಸುವೆ ಎಂದು! ಇದನ್ನೇ ವಚನ ಚಳವಳಿಯಲ್ಲದೇ ಭಕ್ತಿಪಂಥದ ಎಲ್ಲಾ ಪ್ರಭೇದಗಳೂ ಅನುಸರಿಸಿದ್ದು. ಹೀಗೆ ಸಮಗ್ರವನ್ನು ಗ್ರಹಿಸದೆ ಸಂಕುಚಿತವ ವಿಶ್ಲೇಷಿಸಿ ಸಂಕಥನ ಕಟ್ಟಿ ಸಂಕುಚಿತ ಮನೋಭಾವವನ್ನು ಹೇರಿದ ಕಮ್ಯುನಿಸ್ಟ್ ಪ್ರಣೀತರು ಇಂದು ಉದಾರವಾದಿಗಳು ಎನಿಸಿರುವುದು ದೇಶದ ದುರಂತ.

ಇರಲಿ, ತರ್ಕವಿಲ್ಲದ ಕಂಠಪಾಠದ ತಾತ್ವಿಕತೆಯ ವಿರುದ್ಧ ಶಂಕರರು ಕಟ್ಟಿದ ಧರ್ಮ ಸಂಘಟನೆಯನ್ನು ಬ್ರಾಹ್ಮಣ ಭಕ್ತಿಪಂಥ ಎಂದರೆ, ಇಸ್ಲಾಂ ಆಡಳಿತದಲ್ಲಾದ ಸಾಮಾಜಿಕ ಪಲ್ಲಟದ ವಿರುದ್ಧದ ಭಕ್ತಿಪಂಥವನ್ನು ಶೂದ್ರ ಭಕ್ತಿಪಂಥ ಎನ್ನಬಹುದು. ಒಟ್ಟಾರೆ ಹಿಂದೂ ಧರ್ಮ ಯದಾಯದಾಹಿ ಸಂಕಷ್ಟ ಬಂದಾಗ ಹೀಗೆ ಒಗ್ಗೂಡಿದೆ ಎನ್ನುವುದು ಐತಿಹಾಸಿಕವಾಗಿ ದಾಖಲಾಗಿರುವ ಒಂದು pattern, ನಮೂನೆ. ಈ ಎರಡೂ ಭಕ್ತಿಪಂಥಗಳಲ್ಲಿ ವೀರಶೈವವು ಕೈಜೋಡಿಸಿತ್ತು. ಭಕ್ತಿಪಂಥದ ಜಂಗಮಪುರುಷ (ನವಲಿಂಗಾಯತರು ಕರೆಯುವ ವೀರಶೈವ ಆರಾಧ್ಯ ಬ್ರಾಹ್ಮಣ, ಲಿಂಗಿ ಬ್ರಾಹ್ಮಣ) ಬಸವಣ್ಣನ ಕ್ರಾಂತಿಯನ್ನು ಜಗತ್ತೇ ಬಲ್ಲದು. ಅದೇ ರೀತಿ ಶಂಕರರ ಕಾಲದ ಭಕ್ತಿಪಂಥದಲ್ಲಿ ಶಂಕರರಿಗೆ ವೀರಶೈವರ ರೇವಣಸಿದ್ಧ ಶಿವಯೋಗಿಯು ಚಂದ್ರಮೌಳೀಶ್ವರ ಲಿಂಗವನ್ನು ಕೊಟ್ಟು ಹರಸಿದ್ದನು. ಈ ಕುರಿತು ಶಂಕರ ಮಠದ ದಾಖಲೆಯೇ ಇದೆ. ಆದರೆ ನಂತರದ ಪಂಥ ಶ್ರೇಷ್ಠತೆಯ ವ್ಯಸನ ವೀರಶೈವವನ್ನೂ ಶಂಕರಮತವನ್ನು ವಿಭಜಿಸಿತು. ಹೇಗೆ ಎನ್ನುವ ಸತ್ಯಶೋಧನೆಯನ್ನು ಮೊದಲು ಇಂದಿನ ವಿಭಜಕ ಜಾಗತಿಕ ಲಿಂಗಾಯತ ಸಂಚಾಲಕರ ಅಭಿಪ್ರಾಯದಿಂದ ಆರಂಭಿಸೋಣ.

(ಮುಂದುವರಿಯುವುದು)

ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿಚಾರಪೂರ್ಣ ಬರಹ

ಡಾ. ಕೆ.ಪಿ.ಪುತ್ತೂರಾಯ ಅವರ 'ನದೀಸ್ನಾನದಿಂದ ಪುಣ್ಯಪ್ರಾಪ್ತಿ ಸಾಧ್ಯವೇ?' ಎಂಬ ಲೇಖನ (ವಿಶ್ವವಾಣಿ ಮಾ.3) ಸಾಂದರ್ಭಿಕವೂ ವಿಚಾರಪೂರ್ಣವೂ ಆಗಿತ್ತು. ಯಾವುದೇ ಧರ್ಮದಲ್ಲಿ ಇರುವ ಎಲ್ಲಾ ನಂಬಿಕೆಗಳನ್ನು ಸಾರಾಸಗಟಾಗಿ 'ಮೂಢನಂಬಿಕೆ' ಎಂದು ಹೇಳಲಾಗುವುದಿಲ್ಲ.

ಬೆಂಗಳೂರಿನ 'ಅಭಿನಯತರಂಗ' ಶಾಲೆಯ ವಿದ್ಯಾರ್ಥಿಗಳು 1993ರಲ್ಲಿ, ಪ್ರತಿಭಾವಂತ ನಾಟಕಕಾರ ಮತ್ತು ವಾಗ್ಮಿ ಎ.ಎಸ್.ಮೂರ್ತಿ ಅವರ 'ಮೂಢ ಇದು ನಂಬಿಕೆ' ಎಂಬ ನಾಟಕವನ್ನು ಅಭಿನಯಿಸಿದರು. ಇಲ್ಲಿ ಕೆಲವು ಮೂಢನಂಬಿಕೆಗಳ ಬಗ್ಗೆ (ಬೆಕ್ಕು ಅಡ್ಡ ಬಂದರೆ ಅಪಶಕುನ/ಮನೆಮುಂದೆ ಸಗಣಿ ಸಾರಿಸುವುದು/ರಾಕೆಟ್ ಉಡಾವಣೆಗೆ ರಾಹುಕಾಲ-ಗುಳಿಕಕಾಲ ನೋಡುವುದು/ಸತ್ತವರಿಗೆ ಪಿಂಡಪ್ರದಾನ ಮಾಡುವುದು ಇತ್ಯಾದಿ) ತಿಳಿಸಲಾಗಿತ್ತು. ನಾಟಕ ಮುಗಿದ ನಂತರ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುವ ಅವಕಾಶವಿತ್ತು. ವೇದಿಕೆಯ ಮೇಲೆ ನಾಟಕಕಾರರು, ಹೆಸರಾಂತ ಕಲಾವಿದರು, ನಿರ್ದೇಶಕರು, ಲೇಖಕರು ಇದ್ದರು. ಆಗ ನಾನು (ವಿದ್ಯಾರ್ಥಿ), 'ಮೂಢನಂಬಿಕೆ ಎಂದು ನಂಬಿ ಸತ್ತ ತನ್ನ ಅಪ್ಪನ ದೇಹವನ್ನು ತಿಪ್ಪೆಗುಂಡಿಗೆ ಎಸೆದರೆ?' ಎಂಬ ಪ್ರಶ್ನೆ ಕೇಳಿದೆ. ಆದರೆ ಅದಕ್ಕೆ ಸರಿಯಾದ ಉತ್ತರ ಇದುವರೆಗೆ ಸಿಗಲಿಲ್ಲ.

ನಾನು ಹೇಳಲು ಬಯಸುವುದೇನೆಂದರೆ, ಸತ್ತ ಅಪ್ಪನ ದೇಹಕ್ಕೆ ಸ್ನಾನ, ಮರಣೋತ್ತರ ಕ್ರಿಯೆ/ಅಪರಕರ್ಮ ಮಾಡುವ (ಇದು ಎಲ್ಲ ಧರ್ಮದಲ್ಲೂ ಇದೆ) ಅಗತ್ಯವಿದೆಯೇ? ಯಾಕೆಂದರೆ ಅದು ಕಸ ಅಲ್ಲವೇ? ನಾವು ಅದನ್ನು ಕಾರ್ಪೊರೇಷನ್ ತೊಟ್ಟಿಗೆ ಬಿಸಾಡಬೇಕಲ್ಲವೇ? ಆದ್ದರಿಂದ, ಎಲ್ಲ ನಂಬಿಕೆಗಳಿಗೂ ಅರ್ಥವನ್ನು ಹುಡುಕಲಾಗುವುದಿಲ್ಲ. ಕೆಲವು ನಂಬಿಕೆಗಳು ಮಾನಸಿಕ ಸ್ವರೂಪದವು (emotional feelings), ಅವು ಮೂಢನಂಬಿಕೆ ಅಲ್ಲ. ತೀರ್ಥಕ್ಷೇತ್ರಗಳಲ್ಲಿ ನದೀಸ್ನಾನ, ಸಮುದ್ರಸ್ನಾನ ಒಳ್ಳೆಯದು ಎಂಬುದು ಒಂದು ನಂಬಿಕೆ ಅಷ್ಟೇ. ಇದು ನನ್ನ ವೈಯಕ್ತಿಕ ಅಭಿಪ್ರಾಯ.

- ಪ್ರೇಮದಾಸ ಅಡ್ಯಂತಾಯ, ಬೆಂಗಳೂರು

ಯಾರು ಮಾತನಾಡಬೇಕು?

ವಾರದಲ್ಲಿ 80ರಿಂದ 90 ಗಂಟೆಗಳವರೆಗಿನ ಉದ್ಯೋಗಿಗಳ ಕೆಲಸವು ದೇಶದ ಅಭಿವೃದ್ಧಿಗೆ ಪೂರಕ ಎಂದು ಕೆಲವು ಉದ್ಯಮಪತಿಗಳು ಅಭಿಪ್ರಾಯ ಪಡುತ್ತಿದ್ದಾರೆ. ಈ ಕುರಿತು ಇತ್ತೀಚೆಗೆ ತುಂಬಾ ಚರ್ಚೆಯೂ ಆಗುತ್ತಿದೆ. ಇಲ್ಲಿ ಅರಿತುಕೊಳ್ಳಬೇಕಾದ ಇನ್ನೊಂದು ವಿಷಯವಿದೆ. ಬಹುತೇಕವಾಗಿ, ವೈಟ್‌ಕಾಲರ್ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಇಂಡಸ್ಟ್ರಿಗಳಲ್ಲಿ ಕಾರ್ಮಿಕರು ಈಗಾಗಲೇ ದಿನಕ್ಕೆ 10ರಿಂದ 12 ಗಂಟೆವರೆಗೆ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಅವರಿಗೆ ಸರಿಯಾದ ಹಣ (ಓವರ್‌ಟೈಮ್ ಭತ್ಯೆ), ಸೌಲಭ್ಯಗಳು ಸಿಗುತ್ತಿಲ್ಲ. ಈ ಕುರಿತು ಕಾರ್ಮಿಕ ಇಲಾಖೆ ಸೇರಿದಂತೆ ಯಾರೂ ತಲೆಕೆಡಿಸಿಕೊಂಡಿಲ್ಲ. ಹೀಗಾಗಿ ಒಂದು ರೀತಿಯಲ್ಲಿ ದೌರ್ಜನ್ಯದ ಜೀತಪದ್ಧತಿ ನಡೆಯುತ್ತಲೇ ಇದೆ. ಈ ಕುರಿತು ಯಾರು ಮಾತನಾಡಬೇಕು? ಪರಿಶ್ರಮಕ್ಕೆ ತಕ್ಕ ಫಲವು ಸಿಗುವಂತಿದ್ದರೆ, ಶ್ರಮಜೀವಿ ಭಾರತೀಯರು ಹೆಚ್ಚುವರಿ ಶ್ರಮಪಡಲು ಹಿಂಜರಿಯುವುದಿಲ್ಲ.

ಇನ್ನೊಂದು ವಿಚಾರ: ಈಗಾಗಲೇ ಮುಂದುವರಿದಿರುವ ಜಪಾನ್, ಜರ್ಮನಿಯಂಥ ದೇಶಗಳಲ್ಲಿ ವಾರಕ್ಕೆ 40 ಗಂಟೆ ಕೆಲಸದ ಮಿತಿ ಇದೆ. ಕೆಲವು ಉದ್ಯಮಗಳಲ್ಲಿ ಹೆಚ್ಚಿನ ಕಾರ್ಯಾವಧಿ ಇದ್ದರೂ, ಅಲ್ಲಿ ಅವರು ಬಳಸುತ್ತಿರುವ ಉತ್ತಮ ತಂತ್ರಜ್ಞಾನ ಮತ್ತು ನಾವೀನ್ಯ, ಕಾರ್ಮಿಕರಿಗೆ ಉತ್ತಮ ಸಾಮಾಜಿಕ ಭದ್ರತಾ ವ್ಯವಸ್ಥೆ, ಉತ್ತಮ ಆರೋಗ್ಯ, ಶಿಕ್ಷಣ ಮತ್ತು ನಿವೃತ್ತಿ ಸೌಲಭ್ಯಗಳು, ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಕಟ್ಟುನಿಟ್ಟಾದ ನಿಯಮಗಳು ಮುಂತಾದವು ಇವೆ. ಈ ಸೌಲಭ್ಯಗಳು ಆಯಾ ದೇಶದ ಅಭಿವೃದ್ಧಿಗೆ ಕಾರಣವಾಗಿವೆ.

ದೇಶದ ಅಭಿವೃದ್ಧಿಯು ಕೇವಲ ಉತ್ಪಾದಕತೆ, ಆಮದು, ರಫ್ತಿನಿಂದ ಮಾತ್ರವೇ ಆಗುವಂಥದ್ದಲ್ಲ. ದೇಶದ ಪ್ರಜೆಯ ಸಾಮಾಜಿಕ, ಬೌದ್ಧಿಕ, ದೈಹಿಕ ಅಭಿವೃದ್ಧಿಯನ್ನೂ ಅದು ಒಳಗೊಂಡಿರುತ್ತದೆ. ಇದನ್ನು ಸಂಬಂಧಪಟ್ಟವರು ಅರಿತು ಉತ್ತಮವಾದ ಕಾನೂನುಗಳನ್ನು ಜಾರಿಗೆ ತರಲಿ. ನಿಯಮಗಳ ಪಾಲನೆಯು ಕಟ್ಟುನಿಟ್ಟಾಗಿ ಆಗುವಂಥ ವ್ಯವಸ್ಥೆ ರೂಪುಗೊಳ್ಳಲಿ.

- ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಪಟ್ಟಿ ಬಿಡುಗಡೆಯಾಗಲಿ

ಇನ್ನು 25 ದಿನಗಳಲ್ಲಿ, 2024-25ರ ಬಜೆಟ್‌ನಲ್ಲಿ ಮಂಜೂರಾದ ಅನುದಾನಗಳ ಬಳಕೆಯಾಗ ಬೇಕು. ಎಲ್ಲ ವಲಯ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಕೊಳ್ಳಲು ಬಜೆಟ್‌ನಲ್ಲಿ ಹಣವು ಮಂಜೂರಾಗಿದ್ದು, 2021ರಲ್ಲಿ ಪ್ರಕಟವಾದ ಕೃತಿಗಳ ಆಯ್ಕೆಪಟ್ಟಿಯನ್ನು ಬಿಡುಗಡೆ ಮಾಡಿದರೆ, ವಲಯಗಳು ಅದರಲ್ಲಿ ಆಯ್ಕೆಯಾದ ಕೃತಿಗಳನ್ನು ಖರೀದಿಸಿ, ವಲಯ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡಬಹುದು. ಇದೆಲ್ಲವೂ ಈ ಮಾರ್ಚ್ ತಿಂಗಳ 21ರೊಳಗೆ ಆಗಬೇಕು. ಇದರಿಂದಾಗಿ, ಪ್ರಕಾಶಕರಿಗೆ/ಲೇಖಕರಿಗೆ ಈಗ ನಾಲ್ಕು ವರ್ಷದ ಹಿಂದೆಯೇ ಪ್ರಕಟಿಸಿದ್ದ ಕೃತಿಗಳನ್ನು ವಲಯ ಗ್ರಂಥಾಲಯಗಳಿಗೆ ಸರಬರಾಜು ಮಾಡಿ ಹಣ ಪಡೆಯಲು ಸಾಧ್ಯವಾಗುತ್ತದೆ. ಶಿಕ್ಷಣ ಇಲಾಖೆಯು ಇದನ್ನು ಗಂಭೀರವಾಗಿ ಪರಿಗಣಿಸಿ, ಆಯ್ಕೆಪಟ್ಟಿಯನ್ನು ಬಿಡುಗಡೆ ಮಾಡಲು ತಕ್ಷಣ ಕ್ರಮ ಕೈಗೊಳ್ಳಲಿ ಎಂದು ವಿನಂತಿ.

- ಸತ್ಯಬೋಧ, ಬೆಂಗಳೂರು

ಒಪ್ಪಿತ ಲೇಖನವಿದು

ಕಿರಣ್ ಉಪಾಧ್ಯಾಯ ಅವರ, 'ದುಡ್ಡೇ ದೊಡ್ಡಪ್ಪ; ಜಾಹೀರಾತು ಅದರಪ್ಪ' ಲೇಖನ (ವಿಶ್ವವಾಣಿ ಮಾ.3) ನಿಜಕ್ಕೂ ಒಪ್ಪಿತ. ದುಡ್ಡಿನ ಅಥವಾ ಜಾಹೀರಾತಿನ ಜಾತಿ-ಧರ್ಮಗಳನ್ನು ಯಾರೂ ಕೇಳುವುದಿಲ್ಲ. ಕಾರಣ ಅವುಗಳಿಗೆ ಅವೆರಡೂ ಇಲ್ಲವೇ ಇಲ್ಲ. ಆದರೆ ಒಂದು ಮಾತಂತೂ ಸತ್ಯ. ಜಾಹೀರಾತಿನ ಜಾತಿ-ಧರ್ಮಗಳೆರಡೂ ದುಡ್ಡು! ಅಂದರೆ ಒಂದಷ್ಟು ದುಡ್ಡು ಸುರಿದು ಮತ್ತಷ್ಟು ದುಡ್ಡು ಗಳಿಸು ಎಂಬುದು!

ಕೇವಲ ಪ್ರಚಾರವು ಜಾಹೀರಾತಲ್ಲ; ಅದು ಜಾಹೀರಾತು ಆಗಬೇಕು ಅಂದರೆ, ಅದಕ್ಕೆ ಮೊದಲು ದುಡ್ಡು ಕೊಡಲೇಬೇಕು. ಅದಕ್ಕೆಂದೇ, Advertisement is a paid publicity ಎನ್ನುತ್ತಾರೆ ಬಲ್ಲವರು. ಹೀಗಾಗಿ ಇಲ್ಲಿ 'ಅಗ್ಗ' ಎಂಬ ಪದಕ್ಕೆ ಅರ್ಥವೇ ಇಲ್ಲ; ಸಾಮಾನ್ಯವಾಗಿ ಕೇಳಿಬರುವ 'ಅಗ್ಗದ ಪ್ರಚಾರ' ಎಂಬ ಮಾತು ಜಾಹೀರಾತಿಗೆ ಅನ್ವಯವಾಗುವುದೇ ಇಲ್ಲ. ನೂರು ರುಪಾಯಿ ಖರ್ಚು ಮಾಡಿ, ಅದರಿಂದ ಸಾವಿರ ರುಪಾಯಿ ಬರುವಂತಿದ್ದರೇನೇ ಎಲ್ಲರೂ ಜಾಹೀರಾತಿಗೆ ಮುಂದಾಗುವುದು. ಈ ಅರ್ಥದಲ್ಲೂ ದುಡ್ಡೇ ದೊಡ್ಡಪ್ಪ ಅಂದರೆ, ಜಾಹೀರಾತು ಅದರಪ್ಪ! ಫಲಾಪೇಕ್ಷೆ ಇಲ್ಲದೆ ಯಾರೂ ಜಾಹೀರಾತು ಕೊಡುವುದಿಲ್ಲ (ಕೆಲವು ಸರಕಾರಿ ಜಾಹೀರಾತುಗಳನ್ನು ಬಿಟ್ಟರೆ). ಈ ಜಾಹೀರಾತು ಯಾವುದೇ ಇರಬಹುದು- ಪತ್ರಿಕೆ, ಟಿವಿ, ಹೋರ್ಡಿಂಗ್, ಕರಪತ್ರ ಇತ್ಯಾದಿ- ಇಲ್ಲೆಲ್ಲ ದುಡ್ಡು ಸುರಿ, ಹೆಚ್ಚುವರಿ ದುಡ್ಡು ಪಡೆ ಎಂಬುದೇ ಮೂಲಮಂತ್ರ!

- ಶಂಕರನಾರಾಯಣ ಭಟ್, ಮಾಡಗೇರಿ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಶಂಕ್ರಿ ರಾಮನಾಥ್, ಮೈಸೂರು**
ಭಟ್ರೇ, ಕೆಲವರ ಬಾಯಲ್ಲಿ ಬರೀ ಹೊಲಸು ಮಾತುಗಳೇ ಉದುರುತ್ತವೆ, ಅಂಥವರಿಗೆ ಯಾವ ಚಿಕಿತ್ಸೆ ಕೊಡಿಸೋಣ?
– **ಅಂಥವರ ನಾಲಿಗೆಯನ್ನು ಹಾರ್ಪಿಕ್‌ನಿಂದ ಶುದ್ಧಗೊಳಿಸಬೇಕಷ್ಟೆ!**

- **ಪ್ರದೀಪ ಬಟ್ಟೂರು, ಕೆಂಗೇರಿ**
ಭಟ್ರೇ, ನೀವು ಯಾರ ಬಗ್ಗೆಯೂ ಕೆಟ್ಟದ್ದನ್ನು ನುಡಿಯುವುದಿಲ್ಲವಲ್ಲ, ಹೇಗೆ?
– **ಕಾರಣ, ಯಾರ ಬಗ್ಗೆಯೂ ಕೆಟ್ಟದ್ದನ್ನು ಯೋಚಿಸುವುದಿಲ್ಲ!**

- **ಎಂ.ಷಡಕ್ಷರಯ್ಯ, ಗುಡಿಬಂಡೆ**
ಭಟ್ರೇ, ಪುಸ್ತಕಗಳ ಸಂಖ್ಯೆಗೂ, ಬುದ್ಧಿವಂತಿಕೆಗೂ ಸಂಬಂಧವಿದ್ದಿದ್ದರೆ ಏನಾಗುತ್ತಿತ್ತು?
– **'ಪುಸ್ತಕಮನೆ' ಹರಿಹರಪ್ರಿಯರಿಗೆ ನೊಬೆಲ್ ಪ್ರಶಸ್ತಿ ಕೊಡಬೇಕಾಗುತ್ತಿತ್ತು!**

- **ಸಂತೇಬೆನ್ನೂರು ಗೋಪು, ಸಂತೇಬೆನ್ನೂರು**
ಭಟ್ರೇ, ಈಗಿನ ಸಿನಿಮಾಗಳು ರಿಯಲ್ ಅಂತ ಅನಿಸುವುದಿಲ್ಲವಲ್ಲ, ಯಾಕೆ?
– **ಸಿನಿಮಾ ಹೀರೋಗೆ ಎಲ್ಲಿ ಬೇಕಾದರೂ ತಕ್ಷಣ ಪಾರ್ಕಿಂಗ್‌ಗೆ ಜಾಗ ಸಿಗುತ್ತದೆ!**

- **ಗಣೇಶ ಮೂಲಿಮನಿ, ಶಿವಮೊಗ್ಗ**
ಭಟ್ರೇ, ಊರಿಗೆ ಬಂದಳು, ಆದರೆ ನೀರಿಗೆ ಬರಲಿಲ್ಲವಲ್ಲ?
– **ಊರಿಗೆ ಬಂದವಳು ಬಿಯರಿಗೆ ಬರದೇ ಇರ್ತಾಳಾ ಅಂತ ಗಾದೆ ಬದಲಾಗಿ ಎಷ್ಟೋ ವರ್ಷಗಳಾಗಿವೆ, ಗಣೇಶ!**

- **ಸುರೇಶ ದೊಡ್ಡವಾದ, ಧಾರವಾಡ**
ಭಟ್ರೇ, ಬೆಂಗಳೂರಿನ ಜನರಿಗೆ ಸರಿಯಾಗಿ ಕನ್ನಡ ಬರುವುದಿಲ್ಲವಲ್ಲ?
– **'ಕನ್ನಡವ ಕಾಪಾಡು ಕನ್ನಡಿಗರಿಂದ' ಎಂದು ಹೇಳಿದ್ದು ಸುಮ್ಮನೆ ಅಲ್ಲ!**

- **ಮಲ್ಲಿಕಾ, (ಇಮೇಲ್ ಮೂಲಕ)**
ಭಟ್ರೇ, ನಿಮಗೆ ಫ್ರೆಂಡ್ ರಿಕ್ವೆಸ್ಟ್ ಕಳಿಸಿದರೂ ಅಕ್ಸೆಪ್ಟ್ ಮಾಡ್ತಾ ಇಲ್ಲವಲ್ಲ?
– **ಅವರು ಪಲ್ಲಂಗಕ್ಕೆ ಕರೆದರೆ ಮಾತ್ರ ಬರ್ತಾರೆ ಅಂತ ವಿರೋಧಿಗಳು ಅಪಪ್ರಚಾರ ಮಾಡೋದೊಂದು ಬಾಕಿ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಉಗ್ರಗಾಮಿಗಳಿಗೂ, ನಕ್ಸಲಿಯರಿಗೂ ಇರುವ ವ್ಯತ್ಯಾಸವೇನು?
– **ಒಬ್ಬ ಭಾವ ಹಾಗೂ ಮತ್ತೊಬ್ಬ ಕಜಿನ್ಸ್ ಬ್ರದರ್!**

- **ರಂಗೇಗೌಡ ವಿ., ಗಂಜಾಂ**
ಭಟ್ರೇ, ತಂದೆ ಕಣ್ಣು ಹಾಕಿದ ಹೆಂಗಸಿನ ಮೇಲೆ ಮಗನೂ ಕಣ್ಣು ಹಾಕಬಹುದಾ?
– **ತಂದೆಯ ದಾರಿಯಲ್ಲಿ ಮಗ ನಡೆಯಬಾರದೇ?!**

ನನ್ನ ತಾತ ಜಿಡಿಪಿಗೂ ದೇಣಿಗೆ ನೀಡಲಿಲ್ಲ!

ಖುಷಿಯಾಗಿರಲು ಮನಸ್ಸು ಸರಿಯಿರಬೇಕು. ಎಷ್ಟು ಹಣವಿದ್ದರೇನು? ಕೈ ಬಿಚ್ಚಿ ಖರ್ಚು ಮಾಡುವಷ್ಟು ಇದ್ದರೆ ಸಾಕು! ನಿಖರ ಮೊತ್ತ ಹೇಳುವುದು ಕಷ್ಟ. ನಮ್ಮ ಕುಟುಂಬದ ಖರ್ಚು, ನಮ್ಮನ್ನು ನಂಬಿದವರ ಬೇಡಿಕೆಗಳನ್ನು ಪೂರೈಸುವಷ್ಟು ಹಣ ಇದ್ದರೆ ಸಾಕು ಎಂಬುದು ಬಹುತೇಕರ ಅಭಿಮತ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಜನಕ್ಕೆ ಒಳ್ಳೆಯ ಊಟ ಹಾಕಿ ನೋಡಿ, ಹೊಟ್ಟೆ ತುಂಬುವ ಸಮಯದಲ್ಲಿ 'ಸಾಕಪ್ಪಾ' ಎಂದು ಕೈ ಅಡ್ಡ ತರುತ್ತಾರೆ. 'ಚಟ್ನಿಗೆ ಇನ್ನು ಹಾಕಬೇಡಿ' ಎನ್ನುತ್ತಾರೆ. ಇದೇ ಮಾತನ್ನ ನಾವು ಬೇರೆ ವಿಷಯಗಳಲ್ಲೂ ಹೇಳಬಹುದು. ಆದರೆ ಹಣದ ವಿಷಯದಲ್ಲಿ 'ನನಗಿನ್ನು ಸಾಕು' ಎಂದವರನ್ನ ನಾವು ಕಂಡಿದ್ದೇವೆಯೇ? 'ಎಲ್ಲವನ್ನೂ ತ್ಯಜಿಸಿದ' ಎಂದವರನ್ನೂ ಹಣದ ಮೋಹ ಬಿಟ್ಟಿಲ್ಲ. ಇನ್ನು ಜನಸಾಮಾನ್ಯರ ಪಾಡೇನು? ಹಣ ನೀಡುವ ಮನ್ನಣೆಯ ದಾಹವದು.

'ಪಂಚತಂತ್ರ'ದ ಮಿತ್ರಭೇದದಲ್ಲಿನ ಶ್ಲೋಕವೊಂದು ಹೀಗೆನ್ನುತ್ತದೆ: 'ಪೂಜ್ಯತೇ ಯದಪೂಜ್ಯೋಪಿ ಯದಗಮ್ಯೋಪಿ ಗಮ್ಯತೇ। ವಂದ್ಯತೇ ಯದವಂದ್ಯೋಪಿ ಸ ಪ್ರಭಾವೋ ಧನಸ್ಯ ಚ॥'- ಅಂದರೆ, ಪೂಜೆಗೆ ಅನರ್ಹನಾದವನನ್ನು ಪೂಜೆ ಮಾಡಿದರೆ, ಯಾರಲ್ಲಿಗೆ ಹೋಗಬಾರದೋ ಅವನಲ್ಲಿಗೆ ಹೋದರೆ, ಯಾರಿಗೆ ನಮಿಸಬಾರದೋ ಅವನಿಗೆ ನಮಿಸಿದರೆ ಅದಕ್ಕೆ ಹಣದ ಪ್ರಭಾವವೇ ಕಾರಣ ಎಂದರ್ಥ.

ಹಣವು ತಂದುಕೊಡುವ ಗೌರವ-ಮರ್ಯಾದೆಯ ಬಗ್ಗೆ ಮಹಾಭಾರತದ ಶಾಂತಿಪರ್ವದಲ್ಲಿನ ಉಲ್ಲೇಖವೊಂದು ಹೀಗೆನ್ನುತ್ತದೆ: 'ಯಸ್ಯಾರ್ಥಾಸ್ತಸ್ಯ ಮಿತ್ರಾಣಿ ಯಸ್ಯಾರ್ಥಾಸ್ತಸ್ಯ ಬಾಂಧವಾಃ। ಯಸ್ಯಾರ್ಥಾಃ ಸ ಪುಮಾನ್ ಲೋಕೇ ಯಸ್ಯಾರ್ಥಾಃ ಸ ಚ ಪಂಡಿತಃ॥'- ಅಂದರೆ, ಯಾರ ಬಳಿ ಹಣ ಇರುತ್ತದೆಯೋ ಅವನಿಗೆ ಸ್ನೇಹಿತರೂ ಇರುತ್ತಾರೆ, ಬಂಧುಗಳೂ ಇರುತ್ತಾರೆ. ಅಷ್ಟೇಕೆ, ಲೋಕದಲ್ಲಿ ಅವನು ಗಂಡಸು ಎನಿಸಿಕೊಳ್ಳುತ್ತಾನೆ; ಕೊನೆಗೆ ವಿದ್ವಾಂಸನೂ ಅವನೇ' ಎಂದರ್ಥ. ಈ ಎಲ್ಲ ಕಾರಣಗಳಿಂದ ಮನುಷ್ಯನಿಗೆ ಹಣದ ಮೇಲಿನ ವ್ಯಾಮೋಹ ಹೆಚ್ಚಾಗುತ್ತಾ ಹೋಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ.

ರಕ್ತದಲ್ಲಿನ ಸಕ್ಕರೆಯ ಅಂಶವು ಇಷ್ಟು ಮಟ್ಟಕ್ಕಿಂತ ಹೆಚ್ಚಾಗಬಾರದು ಕಡಿಮೆಯೂ ಆಗಬಾರದು ಅಂತಿದೆ, ಅಲ್ಲವೇ? ಹಾಗೆಯೇ ರಕ್ತದೊತ್ತಡವೂ. ಜತೆಗೆ, ದೇಹದಲ್ಲಿ ಇರಬೇಕಾದ ಪ್ರೋಟೀನ್, ವಿಟಮಿನ್ ಇತ್ಯಾದಿಗಳ ಪ್ರಮಾಣವು ನಿಖರವಾಗಿ ಇಷ್ಟಕ್ಕಿಂತ ಜಾಸ್ತಿ ಆಗಬಾರದು, ಕಡಿಮೆಯೂ ಆಗಬಾರದು ಅಂತ ವೈದ್ಯವಿಜ್ಞಾನವು ಒಂದಷ್ಟು ಮಾನದಂಡಗಳನ್ನು ಸೃಷ್ಟಿಸಿದೆ. ಇದು ನಮಗೆಲ್ಲಾ ತಿಳಿದಿರುವ ವಿಷಯ. ವಿತ್ತಜಗತ್ತಿನ ಪಂಡಿತರು, 'ವ್ಯಕ್ತಿಯ ಬಳಿ ಇಷ್ಟು ಹಣವಿದ್ದರೆ ಆತ ಖುಷಿಯಾಗಿರಲು ಸಾಧ್ಯ; ಈ ಪ್ರಮಾಣಕ್ಕಿಂತ ಹೆಚ್ಚಾಗಿದ್ದರೆ ಅಥವಾ ಕಡಿಮೆಯಾದರೂ ಆತ ಖುಷಿಯಾಗಿರಲು ಸಾಧ್ಯವಿಲ್ಲ' ಅಂತ ಏನಾದರೂ ಒಂದು ಮಾನದಂಡವನ್ನು ಇಟ್ಟಿದ್ದಾರೆಯೇ? ಹೌದಾದರೆ ಅದು ಸರಿ ಅಥವಾ ತಪ್ಪು ಎನ್ನಲು ಏನಾದರೂ ಪುರಾವೆ ಇದೆಯೇ? ಇಂಥ ಪ್ರಶ್ನೆಗಳು ಹುಟ್ಟುವುದು ಸಹಜ. ನಮ್ಮ ಸಮಾಜ, ನಮ್ಮ ವಾತಾವರಣ, ವ್ಯಕ್ತಿಯ ಹಿನ್ನೆಲೆಯ ಜತೆಗೆ ಹಣ ಬೇಕೇ ಬೇಡವೇ ಎನ್ನುವ ತತ್ವಜ್ಞಾನದವರೆಗೂ ಹಲವು ವಿಷಯಗಳು ಇದನ್ನ ನಿರ್ಣಯಿಸುತ್ತವೆ.

ಖುಷಿಯಾಗಿರಲು ಮನಸ್ಸು ಸರಿಯಿರಬೇಕು. ಎಷ್ಟು ಹಣವಿದ್ದರೇನು? ಕೈ ಬಿಚ್ಚಿ ಖರ್ಚು ಮಾಡುವಷ್ಟು ಇದ್ದರೆ ಸಾಕು! ನಿಖರ ಮೊತ್ತ ಹೇಳುವುದು ಕಷ್ಟ. ನಮ್ಮ ಕುಟುಂಬದ ಖರ್ಚು, ನಮ್ಮನ್ನು ನಂಬಿದವರ ಬೇಡಿಕೆಗಳನ್ನು ಪೂರೈಸುವಷ್ಟು ಇದ್ದರೆ ಸಾಕು. 'ಮನಸಿಕ ಪರಿತುಷ್ಟೇ ಕೋಟ್ಯಾಧಿಪತಿ ಕೋ ದರಿದ್ರಃ?', 'ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು' ವರ್ಕ್ ಆಗುತ್ತಾ? ಮೂಲಸೌಕರ್ಯಗಳಿಗೆ ಆಗುವಷ್ಟು ಇದ್ದರೆ ಸಾಕು!- ಹೀಗೆ ಹಣವನ್ನು ಕುರಿತು ನಮ್ಮ ಸಮಾಜದಲ್ಲಿ ಒಬ್ಬೊಬ್ಬರದು ಒಂದೊಂದು ನಿಲುವು. ತಪ್ಪು ಅಥವಾ ಸರಿ ಎನ್ನುವುದು ಇಲ್ಲಿನ ಉದ್ದೇಶವಲ್ಲ. ಇವುಗಳಲ್ಲಿ ಸಾಮ್ಯತೆ ಇರಲಿ ಬಿಡಲಿ, ಒಂದಂತೂ ಸತ್ಯ- ಹಣವು ಬದುಕಿಗೆ ಬೇಕು! ಎಷ್ಟು ಎನ್ನುವುದಷ್ಟೇ ಪ್ರಶ್ನೆಯಾಗಿ ಉಳಿಯುವುದು. ಯಾವ ರೀತಿಯ ಬದುಕು ಬೇಕು ಎನ್ನುವುದು, ಎಷ್ಟು ಹಣ ಬೇಕು ಎನ್ನುವುದಕ್ಕೆ ನೇರವಾಗಿ ಹೊಂದಿಕೊಂಡಿದೆ.

ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢವಾಗಿರಲು ಎಷ್ಟು ಹಣ ಬೇಕೋ ಅಷ್ಟು ಸಾಕು ಎನ್ನುತ್ತಾರೆ ಇದರ ಬಗ್ಗೆ ಹೆಚ್ಚು ಸಂಶೋಧನೆ ಮಾಡಿದ ವಿಜ್ಞಾನಿಗಳು. ಆ ಮೊತ್ತ ಎಷ್ಟು ಎನ್ನುವುದು ನೀವು ಎಲ್ಲಿ ವಾಸಿಸುತ್ತಿದ್ದೀರಿ ಎನ್ನುವುದರ ಮೇಲೆ ನಿರ್ಧಾರವಾಗುತ್ತದೆ. ನೀವು ಬೋಸ್ಟನ್‌ನಲ್ಲಿದ್ದರೆ ಆ ಮೊತ್ತವು ಒಂದು ತೆರನಾಗಿದ್ದರೆ, ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾಗ ಬೇಕಾಗುವ ಮೊತ್ತ ಬದಲಾಗಿರುತ್ತದೆ. ಅಲ್ಲದೆ, ಈ ಪ್ರಮಾಣವು ವ್ಯಕ್ತಿಯಿಂದ ವ್ಯಕ್ತಿಗೆ ಕೂಡ ಬದಲಾಗುತ್ತದೆ. ಅಮೆರಿಕದಲ್ಲಿ ಕೂಡ ನೀವು ಯಾವ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದೀರಿ ಎನ್ನುವುದರ ಮೇಲೆ ಈ ಮೊತ್ತ ಬದಲಾಗುತ್ತಾ ಹೋಗುತ್ತದೆ. ಭಾರತಕ್ಕೂ ಈ ನಿಯಮ ಲಾಗೂ ಆಗುತ್ತದೆ. ಉದಾಹರಣೆಗೆ, ಬೆಂಗಳೂರಿನಂಥ ನಗರದಲ್ಲಿ ತರಕಾರಿ ಬೆಲೆಯು ಕೆ.ಜಿ.ಗೆ ಐವತ್ತು ಅಥವಾ ಅರವತ್ತು ರುಪಾಯಿಯಷ್ಟಿದ್ದರೆ, ಅದೇ ತರಕಾರಿಯು ಹಳ್ಳಿಯಲ್ಲಿ ಹತ್ತು ರುಪಾಯಿಗೆ ಸಿಗುತ್ತದೆ. ಹೀಗಾಗಿ ಈ ಪ್ರಮಾಣವನ್ನು ಸಾರ್ವಜನಿಕವಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತೆ 'ಇಷ್ಟೇ' ಎಂದು ನಿಗದಿಪಡಿಸಲು ಬರುವುದಿಲ್ಲ. ಆದರೂ ಒಂದು ಮಟ್ಟ/ಪ್ರಮಾಣವನ್ನು ನಿಗದಿಪಡಿಸಬಹುದು. ಅದೊಂದು ಬೆಂಚ್‌ಮಾರ್ಕ್ ಇದ್ದಹಾಗೆ! ನಮ್ಮ ರಕ್ತದೊತ್ತಡವು ಹೇಗೆ ಮಾನದಂಡದಲ್ಲಿ ಹೇಳಿರುವಷ್ಟೇ ಇರುವುದಿಲ್ಲವೋ ಹಾಗೆಯೂ ಇದೂ. ಇದರ ಸುತ್ತಮುತ್ತ ಬದುಕು ಇದ್ದರೆ ಸೇಫ್ ಎನ್ನುವ ನಿರಾಳ ಭಾವನೆಯಷ್ಟೇ.

ಅಮೆರಿಕದಂಥ ದೇಶದಲ್ಲಿ 75,000 ಡಾಲರ್ ವಾರ್ಷಿಕ ಸಂಪಾದನೆಯಿದ್ದರೆ ಅವರು ಖುಷಿಯಾಗಿರಲು ಸಾಧ್ಯ ಎನ್ನುತ್ತದೆ ಅಲ್ಲಿ ನಡೆದ ಸಂಶೋಧನೆಯೊಂದು. ಇದು ಲಕ್ಷದವರೆಗೆ ಓಕೆ, ಆದರೆ ಅದಕ್ಕೂ ಮೀರಿದ ಹಣವನ್ನು ಸಂಪಾದನೆ ಮಾಡುತ್ತಾ ಹೋದಂತೆ ಮನುಷ್ಯರಲ್ಲಿ ಸಂತೋಷ ಕಡಿಮೆಯಾಗುತ್ತಾ ಹೋಗುತ್ತದೆ ಎನ್ನುವುದು ಕೂಡ ಸಂಶೋಧನೆಯಿಂದ ತಿಳಿದುಬಂದಿದೆ. ನೀವೀಗ ಪ್ರಶ್ನೆ ಕೇಳಬಹುದು- ಇದು ಹೇಗೆ ಸಾಧ್ಯ, ಎಷ್ಟು ಹಣ ಬಂದರೂ ಖುಷಿಯೇ ತಾನೇ? ಹೆಚ್ಚು ಹಣ ಬಂದರೆ ಅದಕ್ಕೆ ಬೇಜಾರೇ? ಅಸಂತೋಷವೇ? ಹೌದು, ಎಲ್ಲವೂ ಒಂದು ಮಿತಿಯಲ್ಲಿ ಇದ್ದರಷ್ಟೇ ಬದುಕಿನಲ್ಲಿ ಉತ್ಸಾಹ ಮತ್ತು ಸಂತೋಷ ಸಾಧ್ಯ. 'ಅತಿಯಾದರೆ ಅಮೃತವೂ ವಿಷ' ಎಂಬ ತತ್ವಜ್ಞಾನವನ್ನು ನಮ್ಮ ಹಿರಿಯರು ಬಹಳ ಹಿಂದೆಯೇ ಹೇಳಿದ್ದರು. ಇದನ್ನೇ ನಮ್ಮ ಇಕನಾಮಿಕ್ಸ್‌ನಲ್ಲಿ, The Law of diminishing marginal utility ಎನ್ನುತ್ತಾರೆ. ಈ ನಿಯಮದ ಪ್ರಕಾರ, ಯಾವುದೇ ವಸ್ತುವಿರಲಿ ಅದು ನಮಗೆ ಮೊದಲು ಕೊಟ್ಟ ಸುಖಾನುಭವ ಎರಡನೇ ಬಾರಿಗೆ ಕಡಿಮೆಯಾಗಿರುತ್ತದೆ. ಮೂರನೇ ಬಾರಿಗೆ ಅದು ಇನ್ನಷ್ಟು ಕುಸಿತವನ್ನು ಕಾಣುತ್ತದೆ. ಹೀಗೆ ಒಂದಷ್ಟು ಪುನರಾವರ್ತನೆಯಿಂದ ಅದು ಕೊಡುವ ಸುಖವು ಇಲ್ಲವೆನ್ನುವಷ್ಟು ಕಡಿಮೆಯಾಗುತ್ತದೆ. ಇದು ತಿನ್ನುವ ವಿಷಯದಲ್ಲಿ ಸರಿ, ಹಣದ ವಿಷಯದಲ್ಲೂ ಈ 'ಲಾ' ಲಾಗೂ ಆಗುತ್ತದೆಯೇ ಎನ್ನುವ ಸಂಶಯ ಹಲವರದು. ಆದರೆ ಒಂದು ಹಂತದ ನಂತರ ಹಣ ಅಥವಾ ಸಂಬಳವು ನೌಕರನನ್ನ ಅಥವಾ ಮನುಷ್ಯರನ್ನ ಮೋಟಿವೇಟ್ ಮಾಡುವಲ್ಲಿ ವಿಫಲವಾಗಿದೆ ಎನ್ನುವುದಕ್ಕೆ ಕಾರ್ಪೊರೇಟ್ ಕಂಪನಿಗಳಲ್ಲಿ ಇರುವ ಮಾಹಿತಿ ಪುರಾವೆ ಒದಗಿಸುತ್ತದೆ.

ಇನ್ನೊಂದು ಅಚ್ಚರಿಯ ಅಂಶವೆಂದರೆ, ತಾವು ಸಂಪಾದಿಸಿದ ಹಣವನ್ನೆಲ್ಲಾ ತಮಗೆ ಅಥವಾ ತಮ್ಮ ಕುಟುಂಬಕ್ಕೆ ಖರ್ಚುಮಾಡಿಕೊಂಡವರಲ್ಲಿ ಇರುವ

ಸಂತೋಷದ ಪ್ರಮಾಣಕ್ಕೂ, ಇತರರಿಗಾಗಿ ಖರ್ಚು ಮಾಡಿದ ಜನರ ಸಂತೋಷದ ಪ್ರಮಾಣಕ್ಕೂ ವ್ಯತ್ಯಾಸ ಕಂಡುಬಂದಿದೆ. ಬೇರೆಯವರಿಗೆ ಅಥವಾ ಸಮಾಜದ ಒಳಿತಿಗೆ ತಮ್ಮ ಹಣವನ್ನು ಖರ್ಚು ಮಾಡಿದ ವ್ಯಕ್ತಿಗಳ ಮಾನಸಿಕ ದೃಢತೆ ಹಾಗೂ ಸಂತೋಷದ ಪ್ರಮಾಣವು ಹೆಚ್ಚಾಗಿರುವುದನ್ನು ಅಧ್ಯಯನಗಳು ಸಾಬೀತುಪಡಿಸಿವೆ.

ಭಾರತದಂಥ ದೇಶದಲ್ಲಿ ನಗರ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ವಾರ್ಷಿಕ ಆದಾಯವು 10ರಿಂದ 15 ಲಕ್ಷ ರುಪಾಯಿಯಷ್ಟಿದ್ದರೆ ಅವರು ಖುಷಿಯಾಗಿರಲು ಸಾಧ್ಯ. ಹಳ್ಳಿ ಪ್ರದೇಶಗಳಲ್ಲಿ 2ರಿಂದ 5 ಲಕ್ಷವಿದ್ದರೆ ಅದೇ ಮಟ್ಟದ ಖುಷಿ ಅವರದಾದೀತು. ಇದೊಂದು ಮಾನದಂಡ, ಇಷ್ಟೇ ಸರಿ ಎಂದು ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ವರ್ಗೀಕರಣ ಮಾಡುವಾಗ ಇಷ್ಟಿದ್ದರೆ ಬಹುತೇಕವಾಗಿ ಚೆನ್ನಾಗಿ ಬದುಕಬಹುದು, ಖುಷಿಯಾಗಿರಬಹುದು ಎನ್ನುವ ಒಂದು ಕಾಲ್ಪನಿಕ ಮಟ್ಟವಿದು. ಆದರೆ ಮುಕ್ಕಾಲು ಪಾಲು ಜನರು ಈ ಕಾಲ್ಪನಿಕ ಮಟ್ಟದ ಆಜುಬಾಜಿನಲ್ಲಿ ಬರುತ್ತಾರೆ ಎಂಬುದು ಕಲ್ಪನೆಯನ್ನು ನಿಜವಾಗಿಸುತ್ತದೆ.

ಖುಷಿಯಾಗಿರಲು ನಿಗದಿಪಡಿಸಿರುವ ಹಣದ ಪ್ರಮಾಣದ ದುಪ್ಪಟ್ಟು ಅಥವಾ ಅದಕ್ಕೂ ಹೆಚ್ಚು ಸಂಪಾದಿಸುವ ಜನರಲ್ಲಿ ಖಿನ್ನತೆ, ಅಶಿಸ್ತು, ಬದುಕಿನಲ್ಲಿ ಆಸಕ್ತಿ ಇಲ್ಲದಿರುವಿಕೆ, ಏನು ಮಾಡಬೇಕು ಎನ್ನುವ ನಿಖರತೆಯ ಕೊರತೆ, ಸುಖಾಸುಮ್ಮನೆ ಬೇಜಾರು ಇಂಥ ಮಾನಸಿಕ ತುಮುಲಗಳು ಹೆಚ್ಚಾಗಿರುವುದನ್ನು ಅಧ್ಯಯನಗಳು ಬಹಿರಂಗಪಡಿಸಿವೆ. ಕೊನೆಗೆ ಇಂಥವರು ತಮ್ಮ ಬದುಕನ್ನು ಮಾದಕ ವಸ್ತುಗಳ ಸೇವನೆಯಂಥ ದಾರುಣ ಅಂತ್ಯಕ್ಕೆ ಕರೆದುಕೊಂಡು ಹೋದ ಸಾಕಷ್ಟು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಆದರೆ, ಮಜಾ ನೋಡಿ- ನಿಗದಿತ ಮೊತ್ತಕ್ಕಿಂತ ಕಡಿಮೆ ಹಣ ದುಡಿಯುವ ಜನರಲ್ಲಿ ಬದುಕಿನ ಬಗ್ಗೆ ಇನ್ನಷ್ಟು ಹೆಚ್ಚು ಪ್ರೀತಿ ಇರುವುದನ್ನು ಕಾಣುತ್ತೇವೆ. ಹೇಗಾದರೂ ಮಾಡಿ ಬದುಕನ್ನು ಇನ್ನಷ್ಟು ಹಸನಾಗಿಸಿಕೊಳ್ಳಬೇಕೆನ್ನುವ, ನಮ್ಮಂತೆ ನಮ್ಮ ಮುಂದಿನ ಪೀಳಿಗೆಯವರು ನೋವು ತಿನ್ನಬಾರದು ಎನ್ನುವ ಹಪಾಹಪಿ ಅವರಲ್ಲಿ ಕೆಲಸ ಮಾಡುತ್ತದೆ. ಇದು ಭಾರತದ ವೈಶಿಷ್ಟ್ಯ. ಮುಂದುವರಿದ ದೇಶಗಳಲ್ಲಿ ಹಾಗಲ್ಲ, ಅಲ್ಲಿ ಕಡಿಮೆಯಿದ್ದವರೂ ಅತಿಹೆಚ್ಚು ಇದ್ದವರೂ ನೋವಿನಲ್ಲಿ ಸಮಭಾಗಿಗಳು.

ಎಷ್ಟು ಹಣ ಬೇಕು ಎಂದು ಕೇಳಿದಾಗ, ಇಷ್ಟೇ ಎಂದು ಹೇಳಲು ಸಾಧ್ಯವಾಗದೆ ಹೋಗಬಹುದು. ಅದರಲ್ಲೂ, ಭಾರತದಂಥ ಅತ್ಯಂತ ವಿಭಿನ್ನ ಆರ್ಥಿಕ ಹಿನ್ನೆಲೆಯುಳ್ಳ ಸಮಾಜದಲ್ಲಿ ಅದು ಕಷ್ಟವೇ ಸರಿ. ಆದರೆ ದುಡ್ಡೇ ಬೇಡ ಎನ್ನುವ, ಆಸೆಗಳನ್ನು ಅಮುಕಿ ಇಷ್ಟು ಸಾಕು ಎನ್ನುವ ಅಭಾವ ವೈರಾಗ್ಯ ಕೂಡ ತಪ್ಪು. ಉತ್ತಮ ಬದುಕಿಗೆ ಹಣದ ಅವಶ್ಯಕತೆ ಇದೆ. ಇವತ್ತು ವಿದ್ಯಾಭ್ಯಾಸ, ಊಟ, ವಸತಿ ಜತೆಗೆ ಮನರಂಜನೆಯು ಕೂಡ ಸಾಕಷ್ಟು ಹಣವನ್ನ ಬಯಸುತ್ತದೆ. ಇಂದು ಕಾರು, ಫೋನು ಅಥವಾ ವರ್ಷಕ್ಕೊಂದು ಪ್ರವಾಸ ಅವಶ್ಯಕತೆಯಾಗಿ ಮಾರ್ಪಟ್ಟಿವೆ. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುತ್ತ, ಅದಕ್ಕೆ ಹೊಂದಿಕೊಂಡು ಹೋಗುವುದರಲ್ಲಿ ಖುಷಿಯಿದೆ. ಮನಸ್ಸು ಬಹಳ ಮುಖ್ಯ, ಆದರೆ ಹಣವೂ ಅಷ್ಟೇ ಮುಖ್ಯ. 'ಹೊಟ್ಟೆ ತುಂಬಿದೆ' ಎಂಬ ಭಾವನೆಯಿಂದ ಹೊಟ್ಟೆ ತುಂಬುತ್ತದೆಯೇ? ಹೊಟ್ಟೆ ತುಂಬಲು ಆಹಾರ ಬೇಕು, ಬರೀ ಭಾವನೆಯಿಂದ ಅದು ಸಾಧ್ಯವಿಲ್ಲ.

ಒಟ್ಟಾರೆ ಹೇಳಬೇಕೆಂದರೆ, ಸರಳವಾಗಿದ್ದ ಬದುಕು ಸಂಕೀರ್ಣವಾಗಿದೆ. ನನ್ನ ತಾತ, ಮುತ್ತಾತ ಯಾವ ಕಾರ್ಪೊರೇಟ್ ಸಂಸ್ಥೆಯಲ್ಲೂ ಕೆಲಸ ಮಾಡಲಿಲ್ಲ. ಇಂದು ನಾವು ನೋಡುತ್ತಿರುವಷ್ಟು ಹಣವನ್ನೂ ಅವರು ನೋಡಲಿಲ್ಲ. ಯಾರ ಹಂಗಿನಲ್ಲೂ ಕೆಲಸ ಮಾಡಲಿಲ್ಲ. ಆ ಲೆಕ್ಕಾಚಾರದಲ್ಲಿ ಆತ 'ನೆವರ್ ಎಂಪ್ಲಾಯ್ಡ್'! ಅವರು ಜಿಡಿಪಿ ಲೆಕ್ಕವನ್ನು ಹೆಚ್ಚಿಸಲಿಲ್ಲ. ಆದರೆ ನಮಗಿಂತ ಹೆಚ್ಚು ಆರೋಗ್ಯಕರವಾಗಿ, ನೆಮ್ಮದಿಯಾಗಿ ಬದುಕಿ ಹೋದರು, ಅಲ್ಲವೇ? ಇದೆಲ್ಲವನ್ನೂ ನಾವು ಮತ್ತೆ ಯೋಚಿಸಬೇಕಾದ ಸನ್ನಿವೇಶ ಸೃಷ್ಟಿಯಾಗುತ್ತದೆ. ಅದಕ್ಕೆ ಬಹಳ ಕಾಯುವ ಅವಶ್ಯಕತೆ ಕೂಡ ಇಲ್ಲ.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಐಟಂ ನಂಬರ್ರೇ ಬೆಸ್ಟು!

ರಜನಿಕಾಂತ್ ಅಭಿನಯದಲ್ಲಿ ಮೂಡಿಬರುತ್ತಿರುವ 'ಕೂಲಿ' ಎಂಬ ಚಲನಚಿತ್ರದಲ್ಲಿ ನಟಿ ಪೂಜಾ ಹೆಗ್ಡೆಯವರು ಕಾಣಿಸಿಕೊಳ್ಳುತ್ತಿದ್ದಾರಂತೆ. ಆದರೆ ಅವರು ಹೆಜ್ಜೆ ಹಾಕಲಿರುವುದು ಐಟಂ ಸಾಂಗಿಗೆ ಎಂಬುದು ಗಮನಿಸಬೇಕಾದ ಸಂಗತಿ. ಹಾಗಂತ ಇದು 'ಗೌರವ ನಟಿ', 'ಅತಿಥಿ ಕಲಾವಿದೆ' ವರ್ಗಕ್ಕೆ ಸೇರುವಂಥ ಪಾತ್ರವೇನೂ ಅಲ್ಲ; ಏಕೆಂದರೆ ಈ ಐಟಂ ಸಾಂಗಿನಲ್ಲಿ ಕುಣಿದು ಕುಪ್ಪಳಿಸಲು ಅವರು ಬರೋಬ್ಬರಿ ಐದು ಕೋಟಿ ರುಪಾಯಿ ಸಂಭಾವನೆಯನ್ನು ಪಡೆದಿದ್ದಾರಂತೆ. ಇದಕ್ಕೂ ಮುನ್ನ ರಜನಿಕಾಂತ್ ಅಭಿನಯದ 'ಜೈಲರ್' ಚಿತ್ರದಲ್ಲೂ 'ವಾ ನು ಕಾವಾಲಯ್ಯ' ಎಂಬ ಐಟಂ ಸಾಂಗಿಗೆ ಕುಣಿದು ಕೈತುಂಬಾ ದುಡ್ಡು ಎಣಿಸಿಕೊಂಡಿದ್ದರು ನಟಿ ತಮನ್ನಾ ಭಾಟಿಯಾ.

ಈ ಎರಡೂ ಸುದ್ದಿಗಳನ್ನು ಓದಿದ ಮಿಕ್ಕ ಕೆಲ ನಟೀಮಣಿಯರು, ತಿಂಗಳಾನುಗಟ್ಟಲೆ ಕಾಲ್‌ಶೀಟ್ ಕೊಟ್ಟು ಅಲ್ಪಸ್ವಲ್ಪ ಮೊತ್ತದ ಸಂಭಾವನೆ ಪಡೆಯುವುದಕ್ಕಿಂತ, ಕ್ಯಾಬರೆ ಸಾಂಗೋ ಐಟಂ ಸಾಂಗೋ ಅಂತ ನೋಡದೆ ಕುಣಿದು ದುಡ್ಡು ಎಣಿಸಿಕೊಳ್ಳೋದೇ ಬೆಟರ್ರು ಎಂಬ ತೀರ್ಮಾನಕ್ಕೆ ಬಂದಿದ್ದಾರಂತೆ. ಹಾಗೆ ನೋಡಿದರೆ, ತ್ರಿಲೋಕ ಸಂಚಾರಿಯೂ, ಕಲಹಪ್ರಿಯರೂ ಆಗಿರುವ ನಾರದರು ಇಂಥ 'ಐಟಂ ಸಾಂಗ್' ಕುರಿತಾದ ಸುದ್ದಿಯ ಕುರಿತು ಕಣ್ಣು ಹಾಯಿಸುವುದು ಕಮ್ಮಿಯೇ; ಆದರೆ ಕುತೂಹಲ ಕೆರಳಿಸುವ ವಿಷಯ ವಿದ್ದಲ್ಲಿ ಮತ್ತು ಅದು ಸುದ್ದಿಗೂ, ಗಾಳಿಸುದ್ದಿಗೂ ಕಾರಣವಾಗುವುದಾದಲ್ಲಿ ಯಾಕೆ 'ಒಂದ್ ದಪಾ' ಟ್ರೈ ಮಾಡ ಬಾರದು ಎಂಬ ಎಣಿಕೆಯಲ್ಲಿ ಹೀಗೊಂದು ವಿಶ್ಲೇಷಣೆಯನ್ನು ನೀಡಿದ್ದಾರೆ. ನೀವು ಮಾತ್ರ, 'ಗೋಲ್‌ಮಾಲ್ ರಾಧಾಕೃಷ್ಣ' ಚಿತ್ರದ ಸೀತಾಪತಿಯವರು ಹೇಳುವಂತೆ 'ಅಪಾರ್ಥ ಮಾಡ್ಕೋಬೇಡಿ...'!

ಮುಳುಗಿದರೂ ತೇಲಿದರೂ ಕಷ್ಟ!

ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರರು ಇತ್ತೀಚೆಗೆ ಶಾನೇ ಸುದ್ದಿಯಲ್ಲಿದ್ದಾರೆ; ಅದು 'ಮುಖ್ಯಮಂತ್ರಿ' ಪಟ್ಟವನ್ನು ಪಡೆಯುವುದಕ್ಕೆ ಸಂಬಂಧಿಸಿದ್ದಲ್ಲ, ಅದಕ್ಕೆ ಹೊರತಾದ ಎರಡು ಕಾರಣಗಳಿಗೆ. ಆದರೆ ಅವೆರಡೂ 'ಧಾರ್ಮಿಕ' ನೆಲೆಯವಾಗಿದ್ದು ಕ್ರಮೇಣ ರಾಜಕೀಯದ ಲೇಪಕ್ಕೂ ಒಳಗಾದವು ಅಥವಾ 'ರಾಜಕೀಯದ ಕನ್ನಡಕ'ದೊಳಗಿಂದ ಅವನ್ನು ನೋಡಲಾಯಿತು ಎಂಬುದು ಗಮನಿಸಬೇಕಾದ ಸಂಗತಿ.

ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭಮೇಳದಲ್ಲಿ ಡಿಕೆಶಿ ಪಾಲ್ಗೊಂಡು, ಅಲ್ಲಿನ ತ್ರಿವೇಣಿ ಸಂಗಮದಲ್ಲಿ ಮುಳುಗೆದ್ದು ಪುಣ್ಯಸ್ನಾನ ಮಾಡಿದ್ದು ಈ ಪೈಕಿ ಒಂದಾದರೆ, ಮತ್ತೊಂದು ಮೊನ್ನೆ ಸದ್ಗುರು ಜಗ್ಗಿ ವಾಸುದೇವ್ ಅವರ ಈಶಾ ಫೌಂಡೇಷನ್ ವತಿಯಿಂದ ಆಯೋಜಿಸಲಾಗಿದ್ದ ಶಿವರಾತ್ರಿ ಆಚರಣೆಯ ಸಂದರ್ಭದಲ್ಲಿ ಶಿವನಾಮ ಸ್ಮರಣೆಯಲ್ಲಿ ಅವರು ತೇಲಿದ್ದು. ಈ ಸಂದರ್ಭದಲ್ಲಿ ಬಿಜೆಪಿಯ ಚಾಣಕ್ಯ ಅಮಿತ್ ಶಾ ಅವರೂ ಇದ್ದರು ಎಂಬುದು ಅನೇಕ ಕಾಂಗ್ರೆಸ್ಸಿಗರ ಕಣ್ಣನ್ನು ಕೆಂಪಾಗಿಸಿದೆಯಂತೆ.

ಈ ಸುದ್ದಿಯನ್ನು ಅವರಿವರಿಂದ ಕೇಳಿ ತಿಳಿದುಕೊಂಡು ಡಿಕೆಶಿ ಅಭಿಮಾನಿಗಳು, ''ಹಂಗಾದ್ರೆ, ನಮ್ ಗುರು ತ್ರಿವೇಣಿ ಸಂಗಮದಲ್ಲಿ ಮುಳುಗಿದ್ರೂ ತಪ್ಪು, ಶಿವರಾತ್ರಿಯಂದು ಶಿವನಾಮ ಸ್ಮರಣೆಯ ಅಲೆಯಲ್ಲಿ ತೇಲಿದ್ರೂ ತಪ್ಪು ಅನ್ಕೋಬೇಕಾ ಗುರುವೇ?'' ಅಂತ ಪ್ರಶ್ನಿಸಿ ಶಾನೇ ಬೇಜಾರು ಮಾಡಿಕೊಂಡಿದ್ದಾರಂತೆ!

ವಿವಿಧತೆಯಲ್ಲಿ ಭಾರತದ ಆಧ್ಯಾತ್ಮಿಕ ಏಕತೆಯನ್ನು ಸಾರಿಹೇಳಿದ ಮಹಾಕುಂಭಮೇಳ

ಪ್ರತಿ 144 ವರ್ಷಗಳಿಗೊಮ್ಮೆ ಬರುವ ಮಹಾಕುಂಭಮೇಳದಂಥ ಅಪರೂಪದ ಸಂದರ್ಭವನ್ನು ತಪ್ಪಿಸಿಕೊಳ್ಳುವುದಕ್ಕೆ ಬಹುತೇಕರು ಸಿದ್ಧರಿರಲಿಲ್ಲ. ಇಷ್ಟಾಗಿಯೂ, ಹವಾನಿಯಂತ್ರಿತ ಕೋಣೆಗಳಲ್ಲೋ, ದಂತಗೋಪುರಗಳಲ್ಲೋ ಕುಳಿತಿದ್ದ ಒಂದಷ್ಟು ತಥಾಕಥಿತ ಬುದ್ಧಿಜೀವಿಗಳು ಈ ಕುಂಭಮೇಳವನ್ನು ಟೀಕಿಸಲೆಂದು ಏನಾದರೊಂದು ಮಾರ್ಗವನ್ನು ಹುಡುಕುವುದಕ್ಕೆ ಯತ್ನಿಸಿದ್ದು ನಗೆಯುಕ್ಕಿಸುವಂತಿತ್ತು! ಹಾಗೆಂದ ಮಾತ್ರಕ್ಕೆ, ಅಲ್ಲಿನ ವ್ಯವಸ್ಥೆಯಲ್ಲಿ ಏನೂ ಲೋಪಗಳೇ ಇರಲಿಲ್ಲ ಎಂದು ಹೇಳುತ್ತಿಲ್ಲ.

ಧರ್ಮಕ್ಷೇತ್ರ
ರಾಮ್ ಮಾಧವ್
vveditoped@gmail.com

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಸುದೀರ್ಘ ಆರು ವಾರಗಳವರೆಗೆ ನಡೆದ ಮಹಾಕುಂಭ ಮೇಳವು ಮುಕ್ತಾಯಗೊಂಡಿದೆ. ಇಷ್ಟಾಗಿಯೂ, 'ಮಳೆ ನಿಂತ ಮೇಲೂ ಮರದಿಂದ ನೀರು ಹನಿಯುವುದು ನಿಂತಿಲ್ಲ' ಎಂಬ ಮಾತಿನಂತೆ, ಅಲ್ಲಿ ನೆರೆದಿದ್ದ ಲಕ್ಷಾಂತರ ಜನರ ಭಕ್ತಿಯ ಬಗ್ಗೆ ಹಾಗೂ ಅಲ್ಲಿ ರೂಪುಗೊಂಡ ಜನದಟ್ಟಣೆ, ವ್ಯವಸ್ಥೆಗಳು, ನೀರಿನ ಗುಣಮಟ್ಟ ಇತ್ಯಾದಿಗಳ ಕುರಿತಾಗಿ ಒಂದಷ್ಟು ಮಂದಿ ವಿಶ್ಲೇಷಕರು ಈಗಲೂ ಪ್ರತಿಕ್ರಿಯಿಸುತ್ತಲೇ ಇದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕೂಡ ತಮ್ಮ ಹೃದಯಾಂತರಾಳದ ಭಾವನೆಗಳಿಗೆ ಅಕ್ಷರ ರೂಪವನ್ನು ನೀಡಿದ್ದುಂಟು, ಈ ಬೃಹತ್ ಜನ-ಜಮಾವಣೆಯನ್ನು 'ಏಕತೆಯ ಮಹಾಕುಂಭ' ಎಂದು ಕರೆದಿದ್ದುಂಟು.

ಹಾಗೆ ನೋಡಿದರೆ, ಈ ಮಹಾಕುಂಭಮೇಳಕ್ಕೆ ಭೇಟಿ ನೀಡಿ, ಗಂಗಾ-ಯಮುನಾ-ಸರಸ್ವತಿ ನದಿಗಳು ಸಂಗಮಗೊಂಡು ರೂಪುಗೊಳ್ಳುವ ಈ ಪವಿತ್ರ ನೀರಿನಲ್ಲಿ ಪುಣ್ಯಸ್ನಾನ ಮಾಡಿದಂಥ ಜನರ ನಿಖರ ಸಂಖ್ಯೆಯನ್ನು ಲೆಕ್ಕಿಸುವುದು ನಿಜಕ್ಕೂ ಹರಸಾಹಸದ ಕೆಲಸವೇ. ಆದರೆ, ಈ ಬಾರಿ ಭಾಗವಹಿಸಿದ ಜನರ ಸಂಖ್ಯೆಯು ನಿಜಕ್ಕೂ ಅಸಾಧಾರಣವಾಗಿತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಪ್ರಯಾಗ್‌ರಾಜ್‌ನಲ್ಲಿ ಘಟಿಸಿದ ಈ ಮಹಾಕುಂಭ ಮೇಳವು, ಸಾಮಾಜಿಕ ಮಾಧ್ಯಮಗಳಂಥ 'ಸರ್ವಾಂತರ್ಯಾಮಿ'ಯ ರೆಕ್ಕೆಯು ಅಗಾಧ ವ್ಯಾಪ್ತಿಗೆ ಹರಡಿರುವ ಈ ಕಾಲಘಟ್ಟದಲ್ಲಿ ನಡೆದ ಮೊದಲ ಕುಂಭವಾಗಿತ್ತು ಎನ್ನಬೇಕು. ಯೂಟ್ಯೂಬ್, ಇನ್‌ಸ್ಟಾಗ್ರಾಂ ಮತ್ತು 'ಎಕ್ಸ್'ನಂಥ ಜನಪ್ರಿಯ ಸಂವಹನ ಮಾಧ್ಯಮಗಳು ಈ ನಿಟ್ಟಿನಲ್ಲಿ ನೀಡಿದ ಕೊಡುಗೆ ನಿಜಕ್ಕೂ ಅಮೋಘವೇ; ಏಕೆಂದರೆ, ಈ ಅಪರೂಪದ ಕಾರ್ಯಕ್ರಮದ ಭವ್ಯತೆ ಮತ್ತು ಪವಿತ್ರತೆಯ ಬಗ್ಗೆ ಹೆಚ್ಚಿನ ಜನರು ತಿಳಿಯುವಂತಾಗುವುದಕ್ಕೆ ಈ ಮಾಧ್ಯಮಗಳು ಪರಿಪೂರ್ಣ ವೇದಿಕೆಗಳಾಗಿದ್ದವು ಮತ್ತು ಈ ಕಾರಣದಿಂದಾಗಿಯೇ ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಮೇಳದಲ್ಲಿ ಭಾಗವಹಿಸುವಂತಾಯಿತು ಎಂಬುದರಲ್ಲಿ ಎರಡು ಮಾತಿಲ್ಲ.

ಇಲ್ಲಿನ ಈ ಮಹತ್ತರ ಸಂದರ್ಭದಲ್ಲಿ ಯಾವೊಂದು ಕ್ಷಣವೂ ಕೈತಪ್ಪಿಹೋಗುವುದಕ್ಕೆ/ಕಳೆದುಹೋಗುವುದಕ್ಕೆ ಆಸ್ಪದವೇ ಇರಲಿಲ್ಲ; ಏಕೆಂದರೆ ಜನರು ಪುಣ್ಯಸ್ನಾನ ಮಾಡುತ್ತಿರುವಾಗಿನ ಫೋಟೋಗಳು ಮತ್ತು ವಿಡಿಯೋಗಳು ಸಾಮಾಜಿಕ ಮಾಧ್ಯಮಗಳು ಹಾಗೂ ಸುದ್ದಿ ವಾಹಿನಿಗಳ ಮೂಲಕ ಕ್ಷಣಮಾತ್ರದಲ್ಲಿ ದೇಶದ ಮೂಲೆಮೂಲೆಯನ್ನು ತಲುಪಿಬಿಡುತ್ತಿದ್ದವು. ದೇಶದ ಅನೇಕ ಜನರು ಹೀಗೊಂದು ತೀರ್ಥಯಾತ್ರೆಯನ್ನು ಕೈಗೊಳ್ಳುವುದಕ್ಕೆ ಈ ಅಂಶವೂ ಉತ್ತೇಜಿಸಿತು ಎನ್ನಲಡ್ಡಿಯಿಲ್ಲ. ಹಾಗಾಗಿ ಈ ಬೆಳವಣಿಗೆಯನ್ನು 'ಒಂದು ಸದವಕಾಶವನ್ನು ತಪ್ಪಿಸಿಕೊಳ್ಳಬಾರದು' ಎಂಬ ಭಯದ ಭಾವವಾಗಿ ನೋಡುವ ಬದಲು, ಹಿಂದೂಗಳ ಹೃದಯಾಂತರಾಳದಲ್ಲಿ ಆಳವಾಗಿ ಬೇರೂರಿರುವ ಆಧ್ಯಾತ್ಮಿಕ ಹಂಬಲದ ಒಂದು ಪ್ರದರ್ಶನವಾಗಿ ಪರಿಗಣಿಸಬೇಕು. ಹಿಂದಿನ ಸಂದರ್ಭಗಳಲ್ಲಿ, ಕುಂಭಮೇಳವು ಅಂತ್ಯವಾಗುವ ಹೊತ್ತಿಗೆ ಭಕ್ತಾದಿಗಳ ಸಂಖ್ಯೆಯಲ್ಲಿ ಇಳಿಕೆಯ ಕಂಡುಬರುತ್ತಿತ್ತು. ಆದರೆ, ಈ ಬಾರಿ ಕಂಡುಬಂದಿದ್ದು ಇದಕ್ಕೆ ವ್ಯತಿರಿಕ್ತವಾದ ಬೆಳವಣಿಗೆ; ಮಹಾಕುಂಭವು ಇನ್ನೇನು ಸಂಪನ್ನಗೊಳ್ಳುತ್ತಿದೆ ಎನ್ನುವಾಗ ಪ್ರಯಾಗ್‌ರಾಜ್‌ನತ್ತ ಜನಸಾಗರವೇ ಹರಿದುಬಂದಿದ್ದಕ್ಕೆ ವಿಶ್ವವೇ ಸಾಕ್ಷಿಯಾಗಿದೆ.

ಪ್ರತಿ 144 ವರ್ಷಗಳಿಗೊಮ್ಮೆ ಬರುವ ಈ ಅಪರೂಪದ ಸಂದರ್ಭವನ್ನು ತಪ್ಪಿಸಿಕೊಳ್ಳುವುದಕ್ಕೆ ಬಹುತೇಕರು ಸಿದ್ಧರಿರಲಿಲ್ಲ. ಇಷ್ಟಾಗಿಯೂ, ಹವಾನಿಯಂತ್ರಿತ ಕೋಣೆಗಳಲ್ಲೋ, ದಂತಗೋಪುರಗಳಲ್ಲೋ ಕುಳಿತಿದ್ದ ಒಂದಷ್ಟು ತಥಾಕಥಿತ ಬುದ್ಧಿಜೀವಿಗಳು ಈ ಕುಂಭಮೇಳವನ್ನು ಟೀಕಿಸಲೆಂದು ಏನಾದರೊಂದು ಮಾರ್ಗವನ್ನು ಹುಡುಕುವುದಕ್ಕೆ, ನೆಪಗಳನ್ನು ತಡಕುವುದಕ್ಕೆ ಯತ್ನಿಸಿದ್ದು ನಗೆಯುಕ್ಕಿಸುವಂತಿತ್ತು! ಹಾಗೆಂದ ಮಾತ್ರಕ್ಕೆ, ಅಲ್ಲಿನ ವ್ಯವಸ್ಥೆಯಲ್ಲಿ ಏನೂ ಲೋಪಗಳೇ ಇರಲಿಲ್ಲ ಎಂದು ಹೇಳುತ್ತಿಲ್ಲ. ಕುಂಭಮೇಳ ಪ್ರದೇಶದಲ್ಲಿ ಸಂಭವಿಸಿದ ಎರಡು ದುರಂತಗಳಿಂದಾಗಿ ಸಾಕಷ್ಟು ಸಾವು-ನೋವುಗಳಾಗಿದ್ದು ಖರೆ. ಆದರೆ, ಏಕಕಾಲಕ್ಕೆ ಕೋಟ್ಯಂತರ ಜನರು ದಾಂಗುಡಿಯಿಟ್ಟಾಗ ಅವರನ್ನು ನಿರ್ವಹಿಸುವ ಕಾರ್ಯಭಾರವಿದೆಯಲ್ಲಾ ಅದು ಹುಡುಗಾಟದ ಮಾತಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ತೊಡಗಿಸಿಕೊಂಡ ಪರಿಯನ್ನು ನಿಜಕ್ಕೂ ಪ್ರಶಂಸಿಸಬೇಕು. ಭಾರತೀಯ ಮೂಲದ ಜನರು ಭಾರಿ ಸಂಖ್ಯೆಯಲ್ಲಿ ನೆಲೆಯೂರಿರುವ ಹತ್ತು ಹಲವು ದೇಶಗಳಿಂದ ಬಂದ ಆಳುಗ ವಲಯದ ಗಣ್ಯರಿಗೆ, ವಿವಿಧ ಕ್ಷೇತ್ರಗಳ ಘಟಾನುಘಟಿಗಳಿಗೆ ಈ

ಘಟ್ಟದಲ್ಲಿ ನಮ್ಮವರಿಂದ ಆತಿಥ್ಯ ಸಿಕ್ಕಿತು. ಹೀಗೆ ಬಂದವರ ಪಾಲಿಗೆ ಪ್ರಯಾಗ್‌ರಾಜ್‌ನಲ್ಲಿ ಕಂಡ ದೃಶ್ಯ, ಜನಸಂದಣಿ ಅವರ ಊಹೆಗೂ ಮೀರಿದ್ದಾಗಿತ್ತು. ಹೀಗೆ ಬಂದ ಪ್ರಭಾವಿಗಳ ಪೈಕಿ ಒಬ್ಬರು, ''ನನ್ನ ಇಡೀ ದೇಶದ ಜನಸಂಖ್ಯೆಗೆ ಸಮನಾದ ಜನಸಂಖ್ಯೆ ನನ್ನ ಮುಂದೆ ಈಗ ಜಮಾವಣೆಗೊಂಡಿರುವಂತಿದೆ'' ಎಂದು ಪ್ರತಿಕ್ರಿಯಿಸಿದ್ದುಂಟು.

ಹೀಗೆ ಅನ್ಯದೇಶಗಳಿಂದ ಬಂದ ಹಲವರಿಗೆ ಪ್ರಯಾಗ್‌ರಾಜ್‌ನಲ್ಲಿ ಕಂಡ ದೃಶ್ಯಾವಳಿ ಆಕರ್ಷಕವಾಗಿದ್ದರೆ, ಮತ್ತೆ ಕೆಲವರಿಗೆ ಭಯ ಹುಟ್ಟಿಸಿದ್ದೂ ನಿಜ. ಅಲ್ಲಿ ಆಳುಗರು ಮಾಡಿದ್ದ ವ್ಯವಸ್ಥೆಗಳನ್ನು ಕಣ್ತುಂಬಿಕೊಂಡ ಕೆಲವರು, ನಗರ ನಿರ್ವಹಣೆಗೆ ಸಂಬಂಧಿಸಿದ ಪರಿಪೂರ್ಣ ಪಾಠಗಳನ್ನು ಈ ವೇಳೆ ಕಲಿತಿದ್ದುಂಟು. ಬಹುತೇಕರಿಗೆ ಗೊತ್ತಿರುವಂತೆ ಸುಮಾರು 1.4 ದಶಲಕ್ಷ ಜನರಿಂದ ತುಂಬಿರುವ ನಗರ ಪ್ರಯಾಗ್‌ರಾಜ್. ಮಹಾಕುಂಭದ ಘಟ್ಟದಲ್ಲಿ, ವಿಶ್ವದ ವಿವಿಧಡೆಯಿಂದ ಗಂಟೆ ಗಂಟೆಗೂ ಆಗಮಿಸುತ್ತಲೇ ಇದ್ದ ಅಸಂಖ್ಯ ಯಾತ್ರಿಗಳನ್ನು ಮಡಿಲಿಗೆ ಸೇರಿಸಿಕೊಂಡ ನಗರವಿದು. ಇಷ್ಟಾಗಿಯೂ ಅಲ್ಲಿನ ಪೌರಾಡಳಿತ ವ್ಯವಸ್ಥೆ ಕುಸಿಯಲಿಲ್ಲ. ಮಹಾಕುಂಭ ಕಾರ್ಯಕ್ರಮವನ್ನು ಸಮರ್ಥವಾಗಿ ನಿರ್ವಹಿಸಲಾಯಿತು ಎಂಬುದನ್ನು ಇದು ಸಾಬೀತುಪಡಿಸುತ್ತದೆ. ಇಷ್ಟಾಗಿಯೂ ಕೆಲವರ ಅಪಸ್ವರ ನಿಲ್ಲಲೇ ಇಲ್ಲ. ಒಬ್ಬ ಅಂಕಣಕಾರರಂತೂ, ''ಈ ಕುಂಭಮೇಳವು ಹಿಂದುತ್ವದ ಕ್ರೋಡೀಕರಣವಾಗಿದ್ದರ ಜತೆಗೆ ಅದರ ವಿವಿಧತೆಯ ಚೈತನ್ಯವು ನಾಶವಾಗಿದ್ದರ ಸಂಕೇತವೂ ಆಗಿತ್ತು'' ಎಂದು ಹಲುಬಿಬಿಟ್ಟಿದ್ದು ಈ ಮಾತಿಗೆ ಸಾಕ್ಷಿ!

ಪುಣ್ಯನದಿಗಳೆನಿಸಿಕೊಂಡ ನೆಲೆಗಳಲ್ಲಿ ಪವಿತ್ರ ಸ್ನಾನ ಮಾಡುವುದು ಹಿಂದೂ ಧರ್ಮದ ಮುಖ್ಯವಾಹಿನಿಯಲ್ಲಿ, ಅದರ ಒಂದೊಂದು ಶಾಖೆಗಳಲ್ಲೂ ಅನೂಚಾನವಾಗಿ ಬೆಳೆದು ಬಂದಿರುವಂಥ ಸಂಪ್ರದಾಯ ಅಥವಾ ಆಚರಣೆ. ದೇಶ-ವಿದೇಶಗಳ ಜನರು ಪ್ರಯಾಗ್‌ರಾಜ್‌ನಲ್ಲಿ ಮಾಡಿದ್ದೂ ಅದನ್ನೇ. ಹೀಗಿರುವಾಗ, ಮಹಾಕುಂಭದ ವೇಳೆ ಜರುಗಿದ ಈ ಘಟನಾವಳಿಯನ್ನು 'ಇದೊಂದು ಪ್ರದರ್ಶನವಾಗಿಬಿಟ್ಟಿತು' ಎಂದೋ ಅಥವಾ 'ಯಾರದೋ ಮಾತಿಗೆ ಕಟ್ಟುಬಿದ್ದು ಅನಿವಾರ್ಯವಾಗಿ ಮಾಡಬೇಕಾಗಿ ಬಂದ ಕಾರ್ಯನಿರ್ವಹಣೆ' ಎಂದೋ ಯಾರಾದರೂ ಬಣ್ಣಿಸಿದರೆ, ಮತ್ತು ಇದನ್ನು 'ಹಿಂದೂ ಧರ್ಮದ ಸೆಮಿಟೈಸೇಷನ್' ಎಂದು ಆರೋಪಿಸಿದರೆ ಅದು ಅಪ್ರಬುದ್ಧ ನಡೆಯಾಗುತ್ತದೆ, ಅರಿವಿಲ್ಲದವರ ಅಪಾಲಾಪವಾಗುತ್ತದೆ.

ಬಹುತ್ವಕ್ಕೆ ಮತ್ತು ವೈವಿಧ್ಯಕ್ಕೆ ಹೆಸರಾಗಿರುವಂಥದ್ದು ಹಿಂದೂ ಧರ್ಮ. ಇಷ್ಟಾಗಿಯೂ ಈ ಧರ್ಮದಲ್ಲಿ ಏಕತೆಗೆ ಕೊರತೆಯೇನೂ ಇಲ್ಲ; ಏಕತೆಯ ಛಾಯೆಯು ಇದರಲ್ಲಿ ದಟ್ಟವಾಗಿ ಅಂತರ್ಗತವಾಗಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, 'ವಿವಿಧತೆಯಲ್ಲಿ ಏಕತೆ' ಎಂಬ ಪರಿಕಲ್ಪನೆಯ ಸಾಕಾರರೂಪವೇ ಹಿಂದೂ ಧರ್ಮ. 'ಸರ್ವಪಂಥ ಸಮಾದರ' ಅಂದರೆ ಎಲ್ಲಾ ಪೂಜಾ ವಿಧಾನಗಳಿಗೆ ಮತ್ತು ಧಾರ್ಮಿಕ ನಂಬಿಕೆಗಳಿಗೆ ಸಮಾನವಾದ ಗೌರವವನ್ನು ನೀಡುವ ಪರಿಕಲ್ಪನೆ ಈ ಧರ್ಮದಲ್ಲಿ ಕೆನೆಗಟ್ಟಿದೆ. ಇಷ್ಟಾಗಿಯೂ ಇದು ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನ ದಿವ್ಯವಾಣಿಯ ಮೂಲಕ, 'ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' (ಎಲ್ಲಾ ಧಾರ್ಮಿಕ ಸಿದ್ಧಾಂತಗಳನ್ನು/ಕರ್ತವ್ಯಗಳನ್ನು ಬದಿಗಿಟ್ಟು, ನನ್ನಲ್ಲಿ ಶರಣಾಗಿ ಸಮಾಧಾನವನ್ನು ಕಂಡುಕೊಳ್ಳಿ) ಎಂದು ಕೂಡ ಜನರಿಗೆ ಕರೆನೀಡಿದೆ. ಇಂಥ ಎರಡೂ ಆಧ್ಯಾತ್ಮಿಕ ತತ್ವಗಳ ಪ್ರಚಾರಕ್ಕೆ-ಪ್ರವರ್ತನೆಗೆ ಕುಂಭಮೇಳದಂಥ ಸಂದರ್ಭಗಳು ವಿನ್ಯಾಸಗೊಳಿಸಲ್ಪಟ್ಟವು ಎಂಬುದನ್ನು ನೆನಪಿನಲ್ಲಿಡಬೇಕು.

ಒಟ್ಟಿನಲ್ಲಿ, ಈ ಬಾರಿ ಪ್ರಯಾಗ್‌ರಾಜ್‌ನಲ್ಲಿ ವಿಭಿನ್ನ ಧಾರ್ಮಿಕ ನಂಬಿಕೆಗಳೊಂದಿಗೆ ಗುರುತಿಸಿಕೊಂಡಿರುವ ಗುರುಗಳು, ಸಾಧು-ಸಂತರುಗಳ ಭರಪೂರ ಜಮಾವಣೆ ಕಂಡುಬಂತು. ಈ ದೃಶ್ಯಾವಳಿಯನ್ನು ಕಣ್ತುಂಬಿಕೊಂಡಾಗ, 'ಹಿಂದೂ ಧರ್ಮದ ಅಥವಾ ಹಿಂದುತ್ವದ ವೈವಿಧ್ಯಕ್ಕೆ ಅಪಾಯವಿದೆ' ಎಂಬ ಚಿಂತೆಗೆ ಅರ್ಥವಿಲ್ಲ, ಆಧಾರವಿಲ್ಲ ಎಂಬ ನಂಬಿಕೆ ಗಟ್ಟಿಯಾಗಿದ್ದು ನಿಜ. ನಮ್ಮ ಪೂರ್ವಜರೆನಿಸಿದ ಮಹಾನ್ ಋಷಿಗಳು ಕೂಡ ಭಾರತದ ರಾಷ್ಟ್ರೀಯ ಸಮಾಜದ ಆಧ್ಯಾತ್ಮಿಕ ಏಕತೆಗೆ ಒತ್ತುನೀಡಿದ್ದರು. ರಾಷ್ಟ್ರವೊಂದರಲ್ಲಿ ಹಾಸುಹೊಕ್ಕಾಗಿರಬೇಕಾದ 'ಸಹಜ ಏಕತೆ'ಯ ಪರಿಕಲ್ಪನೆಯನ್ನು ಪ್ರವರ್ತಿಸುವುದೇ ಇಂಥ ಮೇಳಗಳ ಮತ್ತು ತೀರ್ಥಯಾತ್ರೆಗಳ ಉದ್ದೇಶವಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಹಿಂದೂ ಧರ್ಮವು ಕಂಡ ಮಹೋನ್ನತ ಆಚಾರ್ಯರಲ್ಲಿ ಒಬ್ಬರೆನಿಸಿಕೊಂಡ ಶ್ರೀ ಆದಿಶಂಕರರು, ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದ್ದು ನಿಮಗೆ ಗೊತ್ತಿರುವ ಸಂಗತಿಯೇ; ಶಿವ, ವಿಷ್ಣು, ಶಕ್ತಿ, ಗಣೇಶ, ಸೂರ್ಯ ಹೀಗೆ ಬಗೆಬಗೆಯ ದೇವರುಗಳನ್ನು ಪೂಜಿಸುತ್ತಿದ್ದ/ಆರಾಧಿಸುತ್ತಿದ್ದ ಹಿಂದೂಗಳ ವಿಭಿನ್ನ ಪಂಥಗಳ ನಡುವೆ 'ಏಕತೆಯ ಮಾದರಿ'ಯೊಂದನ್ನು ಹಾಸುಹೊಕ್ಕಾಗಿಸಲೆಂದು ಶಂಕರರು ಇಟ್ಟ ಹೆಜ್ಜೆಯಾಗಿತ್ತು ಅದು. ಜೀವಾತ್ಮ ಮತ್ತು ಪರಮಾತ್ಮರು ಎರಡೂ ಒಂದೇ ಎಂಬ ಗ್ರಹಿಕೆಗೆ ಒತ್ತುನೀಡುವ, ದ್ವಂದ್ವಕ್ಕೆ ಆಸ್ಪದವಿಲ್ಲದ ತತ್ವಶಾಸ್ತ್ರವಾದ ಅದ್ವೈತ ಸಿದ್ಧಾಂತವನ್ನು ಅವರು ಪ್ರತಿಪಾದಿಸಿ ಪ್ರಚಾರ ಮಾಡಿದರು. ಕುಂಭಮೇಳದ ರೀತಿಯಲ್ಲಿ, ಆದಿಶಂಕರರ ಅದ್ವೈತ ಸಿದ್ಧಾಂತ ಕೂಡ ಹಿಂದೂಗಳ ಧಾರ್ಮಿಕ ಆಚರಣೆಗಳಲ್ಲಿ ಕಾಣಬರುವ ವಿವಿಧತೆಯನ್ನು ನಾಶಪಡಿಸುವ ಯತ್ನವೇನೂ ಆಗಿರಲಿಲ್ಲ. ಬೌದ್ಧಮತೀಯರು ಮತ್ತು ಸನಾತನಿಗಳಲ್ಲಿ ಬಳಕೆಯಲ್ಲಿರುವುದೂ ಸೇರಿದಂತೆ, ಬಗೆಬಗೆಯ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳನ್ನು ಸಮನ್ವಯಗೊಳಿಸುವಂಥ ಒಂದು ಚೌಕಟ್ಟನ್ನು ಅವರ ಬೋಧನೆಗಳು ಕಟ್ಟಿಕೊಟ್ಟವು. ಮೊನ್ನಿನ ಪ್ರಯಾಗರಾಜ್ ಕುಂಭಮೇಳದಲ್ಲಿ ಕಂಡುಬಂದಿದ್ದೂ ಇದೇ ಏಕತೆಯೇ!

ಪ್ರಧಾನಿ ನರೇಂದ್ರ ಮೋದಿಯವರು ಈ ಸಂದರ್ಭವನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಬಣ್ಣಿಸಿದ್ದು ಹೀಗೆ: ''ಈ ಏಕತೆಯ ಕುಂಭಮೇಳದಲ್ಲಿ, ಪ್ರತಿಯೊಬ್ಬ ಯಾತ್ರಾರ್ಥಿಯೂ- ಅವನು ಬಡವನಿರಲಿ ಅಥವಾ ಶ್ರೀಮಂತನಿರಲಿ, ನಗರಿಗನಿರಲಿ ಅಥವಾ ಹಳ್ಳಿಗನಿರಲಿ, ಭಾರತದವನಾಗಿರಲಿ ಅಥವಾ ವಿದೇಶಿಯಾಗಿರಲಿ, ಪೂರ್ವ-ಪಶ್ಚಿಮ-ಉತ್ತರ-ದಕ್ಷಿಣ ಹೀಗೆ ಪ್ರಪಂಚದ ಯಾವುದೇ ಭೂಭಾಗಕ್ಕೆ ಸೇರಿದವನಾಗಿರಲಿ, ಆತನ ಜಾತಿ-ಮತ-ಸಿದ್ಧಾಂತಗಳು ಯಾವುದೇ ಆಗಿರಲಿ- ಅವರು ಯಾವ ಭೇದಭಾವವಿಲ್ಲದೆ ಒಗ್ಗೂಡಿದರು, ಒಗ್ಗಟ್ಟನ್ನು ಪ್ರದರ್ಶಿಸಿದರು. ಇದು ಕೋಟ್ಯಂತರ ಜನರಲ್ಲಿ ಆತ್ಮವಿಶ್ವಾಸವನ್ನು ತುಂಬಿದ 'ಏಕ ಭಾರತ, ಶ್ರೇಷ್ಠ ಭಾರತ' ಎಂಬ ದೃಷ್ಟಿಕೋನದ ಒಂದು ಸಾಕಾರರೂಪವಾಗಿತ್ತು''.

ಹಾಗೆ ನೋಡಿದರೆ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿ ಕೂಡ ಬೃಹತ್ ಧಾರ್ಮಿಕ ಸಭೆ-ಸಮಾವೇಶಗಳು, ಯಾತ್ರೆಗಳನ್ನು ಆಯೋಜಿಸಲಾಗುತ್ತದೆ. ಈ ಪೈಕಿ ಶಿಯಾ ಮುಸ್ಲಿಮರ ಪಾಲಿಗೆ, ಪ್ರವಾದಿ ಮೊಹಮ್ಮದರ ಮೊಮ್ಮಗ ಹಾಗೂ ಮೂರನೇ ಶಿಯಾ ಇಮಾಮ್ ಎನಿಸಿಕೊಂಡಿರುವ ಹುಸೇನ್ ಇಬ್ನ್ ಅಲಿ ಮಂದಿರಕ್ಕೆ ತೆರಳುವ ಬಹುದಿನಾವಧಿಯ 'ಅರ್ಬೈನ್ ವಾರ್ಷಿಕ ತೀರ್ಥಯಾತ್ರೆ'ಯು, ಒಂದು ಬೃಹತ್ ಧಾರ್ಮಿಕ ಚಟುವಟಿಕೆ ಎನಿಸಿಕೊಂಡಿದೆ. ಇದು ಹುಸೇನ್ ಅವರ ಹುತಾತ್ಮತೆಯನ್ನು ಗುರುತಿಸುವ ಒಂದು ಪರಿಕ್ರಮವಾಗಿದ್ದು, ಇರಾಕ್‌ನಲ್ಲಿರುವ ಕರ್ಬಲಾದಲ್ಲಿ ಪ್ರತಿವರ್ಷ ಜರುಗುತ್ತದೆ. ಈ ತೀರ್ಥಯಾತ್ರೆಯಲ್ಲಿ ಏನಿಲ್ಲವೆಂದರೂ 20 ದಶಲಕ್ಷ ಜನರು ಪಾಲ್ಗೊಳ್ಳುತ್ತಾರೆ. ಮುಸ್ಲಿಮರಿಗೆ ಇದರಷ್ಟೇ ಮುಖ್ಯವಾಗಿರುವ ಮತ್ತು ತುಲನಾತ್ಮಕವಾಗಿ ಕೊಂಚ ಚಿಕ್ಕದಿರುವ ತೀರ್ಥಯಾತ್ರೆಯೆಂದರೆ, ಮೆಕ್ಕಾ ಕ್ಷೇತ್ರಕ್ಕೆ ಅವರು ಕೈಗೊಳ್ಳುವ 'ಹಜ್ ಯಾತ್ರೆ'; ವಿಶ್ವದೆಲ್ಲೆಡೆಯಿಂದ ಸುಮಾರು 3ರಿಂದ 4 ದಶಲಕ್ಷ ಜನರು ಆ ಪವಿತ್ರ ನಗರಿಗೆ ತೆರಳುವ ಸಂದರ್ಭವಿದು. ಇನ್ನು ಕ್ರೈಸ್ತ ಬಾಂಧವರಲ್ಲೂ ಧಾರ್ಮಿಕ ಸಮಾವೇಶ/ಯಾತ್ರೆಗಳು ನಡೆಯುವುದಿದೆ. ಸ್ಪೇನ್‌ನಲ್ಲಿ ನಡೆಯುವ 'ಸೆಮನಾ ಸಾಂಟಾ' ಮತ್ತು ಫಿಲಿಪ್ಪೀನ್ಸ್‌ನಲ್ಲಿ ನಡೆಯುವ 'ಸಿನುಲೋಗ್' ನಂಥ ಉತ್ಸವಗಳು/ಹಬ್ಬಗಳು ಲಕ್ಷಾಂತರ ಕ್ರೈಸ್ತ ಬಾಂಧವರನ್ನು ಸೆಳೆಯುತ್ತವೆ ಎಂಬುದು ಗಮನಾರ್ಹ.

ಒಟ್ಟಿನಲ್ಲಿ, ಕುಂಭಮೇಳವು ಈ ಎಲ್ಲಾ ಉತ್ಸವಗಳಿಗಿಂತ ನಿಸ್ಸಂದೇಹವಾಗಿ ಸಾಕಷ್ಟು ದೊಡ್ಡದಾಗಿರುವಂಥದ್ದು ಮತ್ತು ಹೆಚ್ಚೆಚ್ಚು ಜನರನ್ನು ಒಳಗೊಳ್ಳುವಂಥದ್ದು. ಮುಖ್ಯವಾಗಿ, ಪ್ರಧಾನಿ ಮೋದಿಯವರು ಉಲ್ಲೇಖಿಸಿದಂತೆ, ಅದು ಈಗ ಒಂದು 'ಜಾಗತಿಕ ಕಾರ್ಯಕ್ರಮ'ದ ಸ್ಥಾನಮಾನವನ್ನು ಪಡೆದುಕೊಂಡುಬಿಟ್ಟಿದೆ. ಇದು ಹತ್ತು ಹಲವು ದೇಶಗಳ ಮತ್ತು ಎಲ್ಲಾ ಧರ್ಮಗಳ ಜನರನ್ನೂ ಆಕರ್ಷಿಸುತ್ತದೆ. ಹೀಗಾಗಿ, ಮುಂಬರುವ ಕುಂಭಮೇಳಗಳ ನಿರ್ವಹಣೆಯನ್ನು ಒಂದು ರಾಷ್ಟ್ರೀಯ ಸಂಸ್ಥೆಗೆ ಹಸ್ತಾಂತರಿಸುವುದನ್ನು ಪ್ರಧಾನಿಯವರು ಪರಿಗಣಿಸುವುದಕ್ಕೆ ಇದು ಸೂಕ್ತ ಸಮಯ; ಹೀಗೆ ಮಾಡಿದಲ್ಲಿ, ಈ ಮೇಳದ ಜಾಗತಿಕ ಸ್ಥಾನಮಾನವು ಮತ್ತಷ್ಟು ವರ್ಧಿಸುತ್ತದೆ ಹಾಗೂ ಭಾರತೀಯ ಆಧ್ಯಾತ್ಮಿಕ ಸಂಪ್ರದಾಯಗಳು ಯಥೋಚಿತ ರೀತಿಯಲ್ಲಿ ಜಾಗತಿಕ ಸಮುದಾಯದ ಸಮ್ಮುಖದಲ್ಲಿ ಪ್ರದರ್ಶಿಸಲ್ಪಡುವುದಕ್ಕೆ ಅದು ಅನುವುಮಾಡಿಕೊಡುತ್ತದೆ.

(ಲೇಖಕರು ಇಂಡಿಯಾ ಫೌಂಡೇಷನ್‌ನ ಅಧ್ಯಕ್ಷರು ಮತ್ತು ಬಿಜೆಪಿಯ ವಕ್ತಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 49

ಸಮಾಚಾರ ಸಣ್ಣದಲ್ಲ

3.17 ಲಕ್ಷ ಕೋಟಿ ರು. ಬಿಹಾರ ಬಜೆಟ್

ಪಟನಾ: ಬಿಹಾರದಲ್ಲಿನ ಮುಖ್ಯಮಂತ್ರಿ ನಿತಿಶ್ ಕುಮಾರ್ ನೇತೃತ್ವದ ಎನ್‌ಡಿಎ ಸರಕಾರದ ವಿತ್ತ ಸಚಿವ ಚೌಧರಿ ಅವರು ಸೋಮವಾರ 2025-26ನೇ ಹಣಕಾಸು ವರ್ಷಕ್ಕೆ 3.17 ಲಕ್ಷ ಕೋಟಿ ರು.ಗಳ ಬೃಹತ್ ಬಜೆಟ್ ಮಂಡಿಸಿದರು. ಅದರಲ್ಲಿ 60,964 ಕೋಟಿ ರು.ಗಳನ್ನು ಶಿಕ್ಷಣ ಇಲಾಖೆಗೆ, ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದ ಅಭಿವೃದ್ಧಿಗೆ 20,335 ಕೋಟಿ ರು. ಮೀಸಲಿಟ್ಟಿರುವುದು ವಿಶೇಷ. ಬೆಗುಸರಾಯ್‌ನಲ್ಲಿ ಕ್ಯಾನ್ಸರ್ ಆಸ್ಪತ್ರೆ ತೆರೆಯಲಾಗುವುದೆಂದೂ ಘೋಷಿಸಿದ್ದಾರೆ. ಇದು ಸದ್ಯದಲ್ಲೇ ವಿಧಾನಸಭೆ ಚುನಾವಣೆ ಎದುರಾಗಲಿರುವ ಹಿನ್ನೆಲೆಯಲ್ಲಿ ಮಂಡನೆಯಾದ 'ಜನಪ್ರಿಯ' ಬಜೆಟ್ ಎಂಬುದು ಉಲ್ಲೇಖಾರ್ಹ.

ಮೀನು ಗಂಟಲಿಗೆ ಚಿಮ್ಮಿ ಕೇರಳ ಯುವಕ ಸಾವು

ಆಲಪ್ಪುಳ: ಕೇರಳದ ಆಲಪ್ಪುಳ ಸಮೀಪದ ಕಾಯಂಕುಲಂನಲ್ಲಿ ಭತ್ತದ ಗದ್ದೆಯಲ್ಲಿದ್ದ ಮೀನುಗಳನ್ನು ಹಿಡಿಯುತ್ತಿದ್ದಾಗ ಒಂದು ಮೀನು ಮೇಲಕ್ಕೆ ಪುಟಿದ ಯುವಕನ ಗಂಟಲೊಳಗೆ ಹೋಗಿ ಸಿಲುಕಿಕೊಂಡಿದ್ದರಿಂದ ಉಸಿರುಗಟ್ಟಿ ಯುವಕ ಸಾವಿಗೀಡಾಗಿದ್ದಾನೆ. ಮೃತನನ್ನು ಪುತ್ತುಪ್ಪಲ್ಲಿಯ ಆದರ್ಶ್ ಅಲಿಯಾಸ್ ಉನ್ನಿ (25) ಎಂದು ಗುರುತಿಸಲಾಗಿದೆ. ಘಟನೆ ಭಾನುವಾರ ಸಂಜೆ 4.30ರಲ್ಲಿ ನಡೆದಿದೆ. ಉನ್ನಿ ತನ್ನ ಸ್ನೇಹಿತರ ಜತೆಗೂಡಿ ಗದ್ದೆಗೆ ನೀರು ಹಾಯಿಸಿ ಮೀನು ಹಿಡಿಯುತ್ತಿದ್ದಾಗ ಅವಘಡವಾಗಿದೆ. ಯುವಕನನ್ನು ತಕ್ಷಣವೇ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಆತನ ಪ್ರಾಣ ಉಳಿಸಲಾಗಲಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ (ಬಿಎನ್‌ಎಸ್‌ಎಸ್) ಸೆಕ್ಷನ್ 194ರಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೂಟ್‌ಕೇಸ್‌ನಲ್ಲಿ ಶವ: ಒಬ್ಬ ಆರೋಪಿ ಸೆರೆ

ಚಂಡೀಗಢ: ರೋಹ್ಟಕ್‌ನಲ್ಲಿ ಸೂಟ್‌ಕೇಸ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತೆ ಹಿಮಾನಿ ನರ್ವಾಲ್ ಶವ ಪತ್ತೆಯಾದ ಪ್ರಕರಣ ಸಂಬಂಧ ಒಬ್ಬ ಆರೋಪಿಯನ್ನು ಹರಿಯಾಣ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಹಿಮಾನಿ ಹತ್ಯೆ ತನಿಖೆಗಾಗಿ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಲಾಗಿದೆ. ಒಬ್ಬ ಆರೋಪಿ ಸೆರೆ ಸಿಕ್ಕಿದ್ದಾನೆ. ತನಿಖೆ ತ್ವರಿತಗಡಿಯಲ್ಲಿ ನಡೆಯುತ್ತಿದೆ ಎಂದು ಹರಿಯಾಣ ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಗಾರರಿಗೆ ಸೋಮವಾರ ತಿಳಿಸಿದ್ದಾರೆ. ಹಂತಕರ ಬಂಧನವಾಗುವವರೆಗೂ ಪುತ್ರಿಯ ಅಂತ್ಯಸಂಸ್ಕಾರ ಮಾಡುವುದಿಲ್ಲ ಎಂದು ನರ್ವಾಲ್ ಕುಟುಂಬ ಪಟ್ಟು ಹಿಡಿದಿದೆ. ಕಾನೂನು ಪದವಿ ಪಡೆದಿದ್ದ ನರ್ವಾಲ್, ಕಾಂಗ್ರೆಸ್ ಕಾರ್ಯಕರ್ತೆಯಾಗಿದ್ದರು. ಭಾರತ್ ಜೋಡೋ ಯಾತ್ರೆಯಲ್ಲಿ ರಾಹುಲ್ ಗಾಂಧಿ ಜತೆಗೂ ಪಾಲ್ಗೊಂಡಿದ್ದರು ಎಂದು ಹರಿಯಾಣ ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ನರ್ವಾಲ್ ರಾಜಕೀಯ ಬೆಳವಣಿಗೆ ಬಗ್ಗೆ ಕಾಂಗ್ರೆಸ್ ಪಕ್ಷದ ಕೆಲ ಸ್ಥಳೀಯ ನಾಯಕರೇ ಅಸೂಯೆಪಟ್ಟಿದ್ದರು. ಆಕೆಯ ಏಳಿಗೆ ಸಹಿಸದ ಸ್ವಪಕ್ಷದವರೇ ಕೊಲೆ ಮಾಡಿಬರಹುದು ಎಂದು ಹಿಮಾನಿ ತಾಯಿ ಆರೋಪಿಸಿದ್ದಾಗಿ ವರದಿಯಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಹರಿಯಾಣದ ಫರಿದಾಬಾದ್‌ನಲ್ಲಿ ಸೆರೆ | ಗ್ರೇನೆಡ್ ಸಹಿತ 19 ವರ್ಷದ ಆರೋಪಿ ಸೆರೆ

ಮಂದಿರ ಸ್ಫೋಟ ಸಂಚು: ಉಗ್ರ ಸೆರೆ

ಅಹಮದಾಬಾದ್: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದ ಮೇಲೆ ದಾಳಿ ನಡೆಸಿ ಸ್ಫೋಟಿಸಲು ಸಂಚು ರೂಪಿಸಿದ್ದ ಉಗ್ರ, 19 ವರ್ಷದ ಅಬ್ದುಲ್ ರೆಹಮಾನ್‌ನನ್ನು ಭಾನುವಾರ ಹರಿಯಾಣದ ಫರಿದಾಬಾದ್‌ನಲ್ಲಿ ತಡರಾತ್ರಿ, ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ.

ಕೇಂದ್ರೀಯ ಗುಪ್ತಚರ ಸಂಸ್ಥೆ ನೀಡಿದ ಖಚಿತ ಮಾಹಿತಿ ಮೇರೆಗೆ ಗುಜರಾತ್ ರಾಜ್ಯದ ಭಯೋತ್ಪಾದನಾ ನಿಗ್ರಹ

ದಳ(ಎಟಿಎಸ್) ಮತ್ತು ಫರಿದಾಬಾದ್ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಉಗ್ರನನ್ನು ಬಂಧಿಸಿವೆ. 19 ವರ್ಷದ ಯುವಕ ನಿಷೇಧಿತ ಭಯೋತ್ಪಾದಕ ಸಂಘಟನೆಗಳ ಜತೆ ಸಂಬಂಧ ಹೊಂದಿದ್ದ ಎಂದು ವಿಚಾರಣೆ ವೇಳೆ ದೃಢಪಟ್ಟಿದೆ.

ಎಟಿಎಸ್ ತಂಡ ಖಚಿತ ಮಾಹಿತಿ ಆಧರಿಸಿ ಅಬ್ದುಲ್ ರೆಹಮಾನ್ ನೆಲೆಸಿದ್ದ ಪಾಳುಬಿದ್ದ ಮನೆ ಮೇಲೆ ದಾಳಿ ನಡೆಸಿದಾಗ ಎರಡು ಹ್ಯಾಂಡ್ ಗ್ರನೇಡ್‌ಗಳು ಪತ್ತೆಯಾಗಿವೆ. ದಾಳಿಗೆ ಸಹಕಾರ ಪಡೆಯಲಾಗಿತ್ತು. ಎಟಿಎಸ್ ಸಿಬ್ಬಂದಿ ಗ್ರನೇಡ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಆ ಮೂಲಕ ಸಂಭಾವ್ಯ ಭಯೋತ್ಪಾದಕ ದಾಳಿಯನ್ನು ವಿಫಲಗೊಳಿಸಿದ್ದಾರೆ.

ಅಬ್ದುಲ್ ರೆಹಮಾನ್ ಉತ್ತರ ಪ್ರದೇಶದ ಫೈಜಾಬಾದ್‌ನ ಮಿಲ್ಕಿಪುರ ನಿವಾಸಿಯಾಗಿದ್ದಾನೆ. ಅಬ್ದುಲ್ ರೆಹಮಾನ್ ಅಪರಾಧ ಹಿನ್ನೆಲೆ, ಭಯೋತ್ಪಾದಕ ಸಂಘಟನೆಗಳ ಜತೆಗಿನ ಸಂಪರ್ಕ, ಸ್ಥಳೀಯರ ನೆರವು ಮೊದಲಾದ ಅಂಶಗಳ ಕುರಿತು ತನಿಖೆ ಮುಂದುವರೆದಿದೆ. ರೆಹಮಾನ್ ವಿರುದ್ಧ ಹರಿಯಾಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅಬ್ದುಲ್ ರೆಹಮಾನ್ ಸಾಮಾಜಿಕ ಮಾಧ್ಯಮ ಮೂಲಕ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದ, ಆತನ ಚಲನವಲನ ಪತ್ತೆಗೆ ಹರಿಯಾಣ ಪೊಲೀಸರು ನಿಗಾ ಇಟ್ಟಿದ್ದರು. ಉಗ್ರ ಸಂಘಟನೆಗಳ ಜತೆಗಿನ ಆತನ ಸಂಪರ್ಕವನ್ನು ಗುಪ್ತಚರ ಇಲಾಖೆ ದೃಢಪಡಿಸಿದ ನಂತರ ಅಬ್ದುಲ್ ರೆಹಮಾನ್‌ನನ್ನು ಬಂಧಿಸಿ ವಶಕ್ಕೆ ಪಡೆಯಲಾಗಿದೆ. ಬಂಧಿಸುವ ಸಂದರ್ಭ ಆತನ ಬಳಿ ಗ್ರನೇಡ್‌ಗಳು, ಅನುಮಾನಾಸ್ಪದ ವಿಡಿಯೋಗಳೂ ಇದ್ದವು. ಅವನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಗುಜರಾತ್ ಎಟಿಎಸ್ ಅಧಿಕಾರಿಗಳು ತಿಳಿಸಿದ್ದಾರೆ.

> ಅಬ್ದುಲ್ ರೆಹಮಾನ್ ಹಲವಾರು ದಿನಗಳಿಂದ ಪಾಲಿ ಗ್ರಾಮದಲ್ಲಿ ನಕಲಿ ಹೆಸರು, ಗುರುತು ಹೇಳಿಕೊಂಡು ನೆಲೆಸಿದ್ದ. ಗುಜರಾತ್ ಎಟಿಎಸ್ ಮತ್ತು ಹರಿಯಾಣದ ಫರೀದಾಬಾದ್‌ನ ಜಂಟಿ ತಂಡ ಅವನಿದ್ದ ಸ್ಥಳವನ್ನು ಸುತ್ತುವರಿಯುತ್ತಿದ್ದಂತೆಯೇ ಆತ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ಆದರೆ, ಜಂಟಿ ಕಾರ್ಯಾಚರಣೆಯಲ್ಲಿ ಆತನನ್ನು ಬಂಧಿಸಲಾಯಿತು.
> -ಹಿರಿಯ ಅಧಿಕಾರಿ ಗುಜರಾತ್ ಎಟಿಎಸ್

ಗುಜರಾತ್-ಹರಿಯಾಣ ಜಂಟಿ ಕಾರ್ಯಾಚರಣೆ

ಗುಜರಾತ್ ಎಟಿಎಸ್ ಮತ್ತು ಹರಿಯಾಣ ಪೊಲೀಸ್ ಇಲಾಖೆಯ ಜಂಟಿ ಪಡೆಗಳು ಫರೀದಾಬಾದ್‌ನ ಸೋಹ್ನಾ ರಸ್ತೆಯ ಪಾಲಿ ಪ್ರದೇಶದಲ್ಲಿ ಬಹಳ ಶಿಥಿಲಗೊಂಡ ಮನೆಯಲ್ಲಿ ಅಡಗಿಕೊಂಡಿದ್ದ ಅಬ್ದುಲ್

ರೆಹಮಾನ್‌ನನ್ನು ಪತ್ತೆ ಹಚ್ಚಿವೆ. ಇದಕ್ಕೂ ಮುನ್ನ ಆ ಪ್ರದೇಶದಲ್ಲಿ ಸತತ ನಾಲ್ಕು ಗಂಟೆಗಳ ಕಾಲ ಜಂಟಿ ಪಡೆಗಳು ತೀವ್ರ ಹುಡುಕಾಟ ನಡೆಸಿದ್ದವು. ಉಗ್ರ ಯುವಕ ಪಾಳು ಬಿದ್ದ ಮನೆಯಲ್ಲಿ ಅಡಗಿರುವುದು ತಿಳಿದ ಬಳಿಕ ಜಾಗ್ರತೆ ವಹಿಸಿ ದಾಳಿ ನಡೆಸಿ ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹರಿಯಾಣದ ಫರೀದಾಬಾದ್‌ನಲ್ಲಿ ಇಬ್ಬರು ಭಯೋತ್ಪಾದಕರು ಅಡಗಿದ್ದಾರೆ ಎಂಬ ಮಾಹಿತಿ ಗುಪ್ತಚರ ಇಲಾಖೆಯಿಂದ ಬಂದಿತ್ತು. ಅದನ್ನು ಆಧರಿಸಿಯೇ ಯೋಜಿತ ರೀತಿ ದಾಳಿ ನಡೆಸಲಾಗಿತ್ತು. ಆದರೆ, ಒಬ್ಬ ಯುವಕ(ಅಬ್ದುಲ್ ರೆಹಮಾನ್) ಮಾತ್ರ ಸೆರೆ ಸಿಕ್ಕಿದ. ಆತನ ಬಳಿ ಇದ್ದ ಗ್ರನೇಡ್‌ಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಆದರೆ, ಮತ್ತೊಬ್ಬ ಉಗ್ರ ಪರಾರಿಯಾಗಿದ್ದಾನೆ. ಆತನಿಗಾಗಿ ಶೋಧ ಮುಂದುವರಿಸಲಾಗಿದೆ ಎಂದು ಗುಜರಾತ್ ಎಟಿಎಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಎನ್‌ಬಿಡಬ್ಲ್ಯುಎಲ್ 7ನೇ ಸಭೆ | ಮೇನಲ್ಲಿ ಭಾರತದಲ್ಲಿನ ಏಷಿಯಾಟಿಕ್ ಸಿಂಹಗಳ ಗಣತಿ

ಗಿರ್ ಅಭಯಾರಣ್ಯದಲ್ಲಿ ಪ್ರಧಾನಿ ಮೋದಿ ಸಫಾರಿ

ಗಾಂಧಿನಗರ: 'ವಿಶ್ವ ವನ್ಯಜೀವಿ ದಿನ'ದ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬೆಳಗ್ಗೆ ಗುಜರಾತ್ ರಾಜ್ಯದ ಜುನಾಗಢದ 'ಗಿರ್ ವನ್ಯಜೀವಿ ಅಭಯಾರಣ್ಯ'ದಲ್ಲಿ ಸಿಂಹ ಸಫಾರಿ ನಡೆಸಿದರು.

'ನಮ್ಮ ಗ್ರಹದ ಅದ್ಭುತ ಜೀವವೈವಿಧ್ಯವನ್ನು ಕಾಪಾಡೋಣ-ಸಂರಕ್ಷಿಸೋಣ. ಜೀವ ವೈವಿಧ್ಯದಲ್ಲಿ ಈ ಭೂಮಿಯ ಮೇಲಿನ ಪ್ರತಿಯೊಂದು ಪ್ರಾಣಿ ಪ್ರಭೇದದ್ದೂ ಪ್ರಮುಖ ಪಾತ್ರವಿರುತ್ತದೆ. ಮುಂದಿನ ಪೀಳಿಗೆಗಾಗಿ ಅವುಗಳನ್ನು ರಕ್ಷಿಸೋಣ. ವನ್ಯಜೀವಿಗಳನ್ನು ಸಂರಕ್ಷಿಸುವ ಸಲುವಾಗಿ ಭಾರತ ಕೈಗೊಂಡ ಕೊಡುಗೆಗಳ ಬಗ್ಗೆ ನಾವು ಹೆಮ್ಮೆಪಡುತ್ತೇವೆ' ಎಂದೂ ಪ್ರಧಾನಿ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ. ಗಿರ್ ಸಫಾರಿ ಸಂದರ್ಭದಲ್ಲಿನ ಕೆಲ ಫೋಟೋಗಳನ್ನೂ ಹಂಚಿಕೊಂಡಿದ್ದಾರೆ.

ಸಫಾರಿ ವೇಳೆ ಪ್ರಧಾನಿ ಮೋದಿ ಅವರು ಸಿಂಹಗಳ ಹಲವು ಭಂಗಿಗಳ ಚಿತ್ರಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದರು. ಪ್ರಧಾನಿ ಜತೆ, ಕೇಂದ್ರದ ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆ ಖಾತೆ ಸಚಿವ ಭೂಪೇಂದರ್ ಯಾದವ್ ಹಾಗೂ ಗುಜರಾತ್ ರಾಜ್ಯದ ಕೆಲ ಸಚಿವರು ಮತ್ತು ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳಿದ್ದರು.

ವಿಶ್ವ ವನ್ಯಜೀವಿ ದಿನದ ಪ್ರಯುಕ್ತ ಗುಜರಾತ್‌ನ ಸಸಾನ್‌ನಲ್ಲಿ 'ನ್ಯಾಷನಲ್ ಬೋರ್ಡ್ ಫಾರ್ ವೈಲ್ಡ್‌ಲೈಫ್'(ಎನ್‌ಬಿಡಬ್ಲ್ಯುಎಲ್)ನ 7ನೇ ಸಭೆ ನಡೆಸಿದ ಪ್ರಧಾನಿ ಮೋದಿ, ಏಷ್ಯಾಖಂಡ ಮೂಲದ ಸಿಂಹಗಳು ಭಾರತದಲ್ಲಿ ಎಷ್ಟಿವೆ ಎಂಬ ಗಣತಿಯನ್ನು ಮುಂಬರುವ ಮೇ ತಿಂಗಳಲ್ಲಿ ನಡೆಸಲಾಗುವುದು. ಅದು ಏಷಿಯಾಟಿಕ್ ಲಯನ್ಸ್‌ನ 16ನೇ ಗಣತಿಯಾಗಿರಲಿದೆ ಎಂದು ಪ್ರಕಟಿಸಿದರು. ದಕ್ಷಿಣ ಭಾರತದಲ್ಲಿ ವನ್ಯಪ್ರಾಣಿ-ಮಾನವ ಸಂಘರ್ಷ ಇತ್ತೀಚೆಗೆ ಹೆಚ್ಚುತ್ತಿರುವುದರಿಂದ ಅದರ ನಿರ್ವಹಣೆಗಾಗಿ ತಮಿಳುನಾಡಿನ ಕೊಯಮತ್ತೂರಿನಲ್ಲಿ 'ವನ್ಯಪ್ರಾಣಿ-ಮಾನವ ಸಂಘರ್ಷ ನಿರ್ವಹಣೆಗೆ ತಜ್ಞರನ್ನೊಳಗೊಂಡ ಕೇಂದ್ರವನ್ನು (ಎಸ್‌ಎಸಿಒಎನ್) ಸ್ಥಾಪಿಸಲಾಗುವುದು ಎಂದು ಪ್ರಧಾನಿ ಘೋಷಿಸಿದರು. ಇದೇ ವೇಳೆ, 'ರಿವರ್ ಡಾಲ್ಫಿನ್ಸ್' ಕೃತಿ ಬಿಡುಗಡೆ ಮಾಡಿದರು.

> ಸಾಮೂಹಿಕ ಪ್ರಯತ್ನಗಳಿಂದಾಗಿ ಏಷ್ಯಾಟಿಕ್ ಸಿಂಹಗಳ ಸಂಖ್ಯೆ ಸ್ಥಿರವಾಗಿ ಏರಿಕೆ ಕಾಣುತ್ತಿದೆ. ಏಷ್ಯಾಟಿಕ್ ಸಿಂಹಗಳ ಆವಾಸ ಸ್ಥಾನ ಸಂರಕ್ಷಿಸುವಲ್ಲಿ ಸುತ್ತಲಿನ ಪ್ರದೇಶಗಳ ಬುಡಕಟ್ಟು ಜನಾಂಗ ಮತ್ತು ಮಹಿಳೆಯರ ಕೊಡುಗೆ ಅಪಾರ. ಗಿರ್ ಪ್ರದೇಶ ಏಷ್ಯಾಟಿಕ್ ಸಿಂಹಗಳ ಪಾಲಿಗೆ ಅನುಕೂಲಕಾರಿ ನೆಲೆ. ಗಿರ್‌ನ ಈ ಭೇಟಿ ನಾನು ಗುಜರಾತ್ ಸಿಎಂ ಆಗಿದ್ದಾಗಿನ ದಿನಗಳು, ಸಾಮೂಹಿಕವಾಗಿ ಮಾಡಿದ ಕೆಲಸಗಳನ್ನು ನೆನಪಿಸುತ್ತಿದೆ.
> -ನರೇಂದ್ರ ಮೋದಿ ಪ್ರಧಾನಿ

ಸಿಂಹಗಳ ಸಂಖ್ಯೆ ಹೆಚ್ಚಳ

ಏಷ್ಯಾಟಿಕ್ ಸಿಂಹಗಳ ಸಂರಕ್ಷಣೆಗಾಗಿ ಕೇಂದ್ರ ಸರಕಾರ ಗುಜರಾತ್‌ನ ಗಿರ್ ಅರಣ್ಯಧಾಮದಲ್ಲಿ 'ಪ್ರಾಜೆಕ್ಟ್ ಲಯನ್' ಜಾರಿಗೆ ತಂದಿದೆ. ಅದಕ್ಕಾಗಿ 2900 ಕೋಟಿ ರು.ಗಳ ಅನುದಾನವನ್ನೂ ಪ್ರಕಟಿಸಿದೆ. ಅಲ್ಲದೇ, ಗಿರ್ ಸಿಂಹಧಾಮದ ವ್ಯಾಪ್ತಿಯನ್ನು ಗುಜರಾತ್‌ನ 9 ಜಿಲ್ಲೆಗಳ 53ತಾಲೂಕುಗಳಲ್ಲಿನ 30 ಸಾವಿರ ಚದರ ಕಿಮೀಗಳಷ್ಟು ವಿಸ್ತಾರಕ್ಕೆ ಹರಡುವಂತೆ ಮಾಡಲಾಗಿದೆ. ಇದೆಲ್ಲದರ ಪರಿಣಾಮವಾಗಿ ಇತ್ತೀಚೆಗೆ ಗುಜರಾತ್ ಭಾಗದಲ್ಲಿ ಏಷ್ಯಾಟಿಕ್ ಸಿಂಹಗಳ ಸಂಖ್ಯೆಯಲ್ಲಿಯೂ ಹೆಚ್ಚಳವಾಗುತ್ತಿದೆ. 2010ನೇ ಸಾಲಿನಲ್ಲಿ ಏಷ್ಯಾಟಿಕ್ ಸಿಂಹಗಳ ಸಂಖ್ಯೆ 411ರಷ್ಟಿದ್ದುದು 2015ರ ವೇಳೆಗೆ 523ಕ್ಕೆ ಏರಿಕೆಯಾಗಿತ್ತು. 2020ರ ಜೂನ್‌ನಲ್ಲಿ ಏಷ್ಯಾಖಂಡ ವಿಶಿಷ್ಟ ಸಿಂಹಗಳ ಸಂಖ್ಯೆ 674ಕ್ಕೆ ಮುಟ್ಟಿದೆ ಎಂದು ಕೇಂದ್ರ ಸರಕಾರ ಅಂಕಿ ಅಂಶ ಪ್ರಕಟಿಸಿದೆ.

97ನೇ ಅಕಾಡೆಮಿ ಪ್ರಶಸ್ತಿ ಪ್ರದಾನ

ಸ್ಥಳ: ಲಾಸ್‌ಏಂಜಲೀಸ್‌ನ ಡಲ್ಬಿ ಥಿಯೇಟರ್
ಯಾವಾಗ: ಮಾ.2ರ ಭಾನುವಾರ ರಾತ್ರಿ (ಭಾರತದ ಸಮಯ ಸೋಮವಾರ ಬೆಳಗ್ಗೆ)
ನಿರೂಪಣೆ: ಕೋನನ್ ಒಬ್ರಿಯನ್
ಸಂತಾಪ: ಲಾಸ್‌ಏಂಜಲೀಸ್ ಕಾಡ್ಗಿಚ್ಚಿಗೆ ಬಲಿಯಾದವರಿಗೆ ನಮನ-ಸಂತಾಪ
ವಿಶೇಷ: ವೇದಿಕೆಯಲ್ಲಿ ಹಿಂದಿ ಸಂದೇಶ. 'ನಮಸ್ಕಾರ್, ನಾಷ್ಟೇ ಕೆ ಸಾಥ್ ಆಸ್ಕರ್ ದೇಖ್ನಾ' ಎಂದ ನಿರೂಪಕ ಒಬ್ರಿಯನ್.
ಅತ್ಯುತ್ತಮ ಚಿತ್ರ: ಅನೋರಾ
ನಿರ್ಮಾಣ: ಸೀನ್ ಬೇಕರ್ಸ್
ಅತ್ಯುತ್ತಮ ನಟಿ: ಮಿಕೆ ಮ್ಯಾಡಿಸನ್
ಚಿತ್ರ: ಅನೋರಾ



ಅತ್ಯುತ್ತಮ ನಟ: ಆಡ್ರಿಯನ್ ಬ್ರೋಡಿ
ಚಿತ್ರ: ದಿ ಬ್ರೂಟಲಿಸ್ಟ್

ಅತ್ಯುತ್ತಮ ನಿರ್ದೇಶಕ: ಚಿತ್ರ ಅನೋರಾ
ಅತ್ಯುತ್ತಮ ಮೂಲ ಚಿತ್ರಕಥೆ: ಅನೋರಾ
ಅತ್ಯುತ್ತಮ ಸಂಕಲನ: ಚಿತ್ರ ಅನೋರಾ
ಅತ್ಯುತ್ತಮ ಸಹನಟ: ಕೈರನ್ ಕಲ್ಕಿನ್
ಚಿತ್ರ: ಎ ರಿಯಲ್ ಪೇನ್
ಅತ್ಯುತ್ತಮ ಸಹನಟಿ: ಜೋ ಸಲ್ಡಾನಾ
ಚಿತ್ರ: ಎಮಿಲಿಯಾ ಪೆರೇಜ್
ಅತ್ಯುತ್ತಮ ಚಿತ್ರಗೀತೆ: ಎಮಿಲಿಯಾ ಪೆರೇಜ್
ಚಿತ್ರಕಥೆ ಅತ್ಯುತ್ತಮ ಅಳವಡಿಕೆ: ಚಿತ್ರ ಕಾನ್‌ಕ್ಲೇವ್

ಅನೋರಾ ಸಾಧನೆ

ಭಾರೀ ನಿರೀಕ್ಷೆಗಳನ್ನು ಹುಟ್ಟು ಹಾಕಿದ್ದ 'ಎಮಿಲಿಯ ಪೆರೇಜ್' ಚಿತ್ರವನ್ನು ಪಕ್ಕಕ್ಕೆ ದೂಡಿರುವ 'ಅನೋರಾ' ಐದು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಎಮಿಲಿಯ ಚಿತ್ರ ತಂಡದ ಮಡಿಲಿಗೆ 2 ಪ್ರಶಸ್ತಿಗಳಷ್ಟೇ ಸಂದಿವೆ.

ಭಾರತಕ್ಕೆ ಕಡೆಕ್ಷಣ ನಿರಾಶೆ

ಕಿರುಚಿತ್ರ ವಿಭಾಗದಲ್ಲಿ ಭಾರತದಿಂದ ಆಸ್ಕರ್ ಪ್ರಶಸ್ತಿಗೆ ನಾಮಿನೇಟ್ ಆಗಿದ್ದ, ನಟಿ-ನಿರ್ಮಾಪಕಿ ಪ್ರಿಯಾಂಕಾ ಚೋಪ್ರಾ ತಂಡದ ನಿರ್ಮಾಣದ 'ಅನುಜಾ'ಗೆ ಪ್ರಶಸ್ತಿ ದಕ್ಕಲಿಲ್ಲ. ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿ 'ಐಯಾಮ್ ನಾಟ್ ರೋಬೊ' ಪಾಲಾಯಿತು. ಹಾಗಾಗಿ ಈ ವರ್ಷ ಒಂದೂ ಆಸ್ಕರ್ ಪ್ರಶಸ್ತಿ ಭಾರತಕ್ಕೆ ಸಂದಿಲ್ಲ.

ಕಿಡ್ನಿ ಕಸಿ ಶಸ್ತ್ರಚಿಕಿತ್ಸಕ ಅಬ್ರಹಾಂ ಆತ್ಮಹತ್ಯೆ

ಎರ್ನಾಕುಲಂ: ಕೇರಳದ ಹೆಸರಾಂತ ಮೂತ್ರಪಿಂಡ ಶಸ್ತ್ರ ಚಿಕಿತ್ಸಾ ತಜ್ಞ ಡಾ. ಜಾರ್ಜ್ ಪಿ. ಅಬ್ರಹಾಂ(74) ಎರ್ನಾಕುಲಂ ಜಿಲ್ಲೆಯಲ್ಲಿರುವ ಅವರದೇ ತೋಟದ ಮನೆಯಲ್ಲಿ ಸೋಮವಾರ ಶವವಾಗಿ ಪತ್ತೆಯಾಗಿದ್ದಾರೆ. ಅಬ್ರಹಾಂ 25 ವರ್ಷಗಳಲ್ಲಿ 2,500 ಕ್ಕೂ ಹೆಚ್ಚು ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆ ಮಾಡಿ ಹೆಸರು ಮಾಡಿದ್ದರು. ಲ್ಯಾಪ್ರೊಸ್ಕೋಪಿಕ್ ಮೂತ್ರಪಿಂಡ ಕಸಿಯನ್ನೂ ಮಾಡಿದ್ದರು. ಕೊಚ್ಚಿಯ ಖಾಸಗಿ ಆಸ್ಪತ್ರೆ ನೆಫ್ರಾಲಜಿ ವಿಭಾಗದ ಹಿರಿಯ ಶಸ್ತ್ರಚಿಕಿತ್ಸಕರಾಗಿದ್ದ ಅಬ್ರಹಾಂ ಭಾನುವಾರ ಸಂಜೆ ಸೋದರನೊಂದಿಗೆ ನೆಡುಂಬಸ್ಸೆರಿ ಸಮೀಪದ ತುರುತಿಸ್ಸೆರಿಯಲ್ಲಿನ ತೋಟದ ಮನೆಗೆ ತೆರಳಿದ್ದರು. ನಂತರ ಸೋದರನನ್ನು ಮನೆಗೆ ಬಿಟ್ಟು ವಾಪಸ್ ತೋಟದ ಮನೆಗೆ ಬಂದು ತಡರಾತ್ರಿ ನೇಣು ಹಾಕಿಕೊಂಡಿದ್ದಾರೆ ಎನ್ನಲಾಗಿದೆ. ಆತ್ಮಹತ್ಯೆ ಮುನ್ನ 'ಹಿಂದಿನದೇ ಪ್ರಾವೀಣ್ಯತೆ ಬೇಕಿದೆ. ಆ ನೈಪುಣ್ಯದಲ್ಲೇ ವೈದ್ಯಕೀಯ ವೃತ್ತಿ ಮುಂದುವರಿಸಲು ಶ್ರಮಿಸುತ್ತಿರುವೆ' ಎಂದು ಬರೆದಿರುವ ಪತ್ರ ಘಟನೆ ಸ್ಥಳದಲ್ಲಿ ಸಿಕ್ಕಿದೆ. 6 ತಿಂಗಳ ಹಿಂದೆ ಬೆನ್ನುಮೂಳೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರಿಂದ ಡಾ.ಅಬ್ರಹಾಂ ಅವರ ಕೈಗಳು ನಡುಗಲು ಆರಂಭಿಸಿದ್ದವು. ಹಾಗಾಗಿ ಬೇಸರಗೊಂಡಿದ್ದರು ಎಂದು ವರದಿಗಳು ಹೇಳಿವೆ.

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯ
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ-571433
e-mail: k.honnalagere.mdr.mdy@gmail.com
Mob :9480872253
ಸಂ:ಕೆ.ಹೊ.ಗ್ರಾ.ಪಂ.ನಂ/ಪಿ.ಡಿ.ಓ/2024-25 ದಿ:17-02-2025

ಟೆಂಡರ್ ಪ್ರಕಟಣೆ - (ಇ-ಪ್ರಕ್ಯೂರ್ ಮೆಂಟ್ ಮೂಲಕ)

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿಯ 2024-25ನೇ ಮಿನಿ ಹೈಮಾಸ್ಕ್ ದೀಪಗಳನ್ನು ಸೋಲಾರ್ ಬೀದಿ ದೀಪಗಳನ್ನು ಖರೀದಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಸರಬರಾಜುದಾರರು ಟೆಂಡರ್ ಸಲ್ಲಿಸಬಹುದಾಗಿದೆ.
ಇ-ಪ್ರೋಕ್ಯುರ್‌ಮೆಂಟ್ ಪ್ರಕಟಣೆ ಸಂಖ್ಯೆ ಮತ್ತು ವಿವರ : ಆರ್‌ಡಿಪಿಆರ್/2024-25/ಐಎನ್ ಡಿ7842(ಮಿನಿ ಹೈಮಾಸ್ಕ್ ದೀಪಗಳ). ಆರ್‌ಡಿಪಿಆರ್/2024-25/ಐಎನ್ ಡಿ7812(ಸೋಲಾರ್ ಬೀದಿ ದೀಪಗಳು). ಇ-ಟೆಂಡರ್ (e-procument) ಗೆ ಸಂಬಂಧಿಸಿದ ದಾಖಲೆಗಳನ್ನು ಜಾಲಕ್ಕೆ ರವಾನಿಸಲು (upload) ಮಾಡಲು ಪ್ರಾರಂಭ ಮತ್ತು ಅಂತಿಮ ದಿನಾಂಕ ಮತ್ತು ಸಮಯ : ದಿನಾಂಕ:20.02.2025 ರಿಂದ ದಿನಾಂಕ : 06.03.2025 ಸಂಜೆ 05.30 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ಸ್ಥಳ, ದಿನಾಂಕ ಮತ್ತು ವೇಳೆ : ದಿನಾಂಕ: 10.03.2025 ಬೆಳಿಗ್ಗೆ 11-00 ಗಂಟೆಯ ನಂತರ. ಆರ್ಥಿಕ ಬಿಡ್ ತೆರೆಯುವ ಸ್ಥಳ, ದಿನಾಂಕ ಮತ್ತು ವೇಳೆ : ತಾಂತ್ರಿಕ ಬಿಡ್‌ನ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ತೆರೆಯಲಾಗುವುದು. ಸಂಪರ್ಕಿಸಬೇಕಾದ ವಿಳಾಸ ಮತ್ತು ದೂರವಾಣಿ/ಮೊಬೈಲ್ ನಂಬರ್ : ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮೊ ಸ.8971605153
ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆ ಇದ್ದಲ್ಲಿ / ಸಾರ್ವತ್ರಿಕ ರಜೆ ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಶೀಲಿಸುವುದು ಹಾಗೂ ಹೆಚ್ಚಿನ ವಿವರವನ್ನು (e-procurement) KTPP ವೆಬ್ ಸೈಟ್ ನಲ್ಲಿ ಪಡೆಯಬಹುದು, ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆ ಇದ್ದಲ್ಲಿ/ಸಾರ್ವತ್ರಿಕ ರಜೆ ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರೀಶೀಲಿಸುವುದು. ಹಾಗೂ ಹೆಚ್ಚಿನ ವಿವರಗಳನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.
ಸಹಿ/-ಅಧ್ಯಕ್ಷರು, ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು
ಸಹಿ/-ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೆ.ಹೊನ್ನಲಗೆರೆ ಗ್ರಾಮ ಪಂಚಾಯಿತಿ, ಮದ್ದೂರು ತಾಲ್ಲೂಕು
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/714/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ-591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)
ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2024-25/3924 ದಿನಾಂಕ: 25.02.2025
ಅಲ್ಪಾವಧಿ ಟೆಂಡರ ಅಧಿಸೂವನೆ ಕರೆ-5
(ಕೆ.ಪಿ.ಪಿ. ಪ್ರೋಟಲ್-ಸಂಗ್ರಹಣಾ ಕೋಶದ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್-2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.
ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.
ಟೆಂಡರಗಿಟ್ಟ ಅಂದಾಜು ಮೊತ್ತ 1) ರೂ. 490.62 ಲಕ್ಷ
1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:04.03.2025 ರ 10.30 ಬೆಳಿಗ್ಗೆ ರಿಂದ 12.03.2025 ರ ಸಾಯಂಕಾಲ 4.00 ಗಂಟೆ ವರಗೆ,2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:11.03.2025 ರ ಸಾಯಂಕಾಲ 4.00 ವರೆಗೆ,3:ಪ್ರಿ ಬಿಡ್ ಮಿಟಿಂಗ್ ದಿನಾಂಕ:(ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):10.03.2025ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 04.03.2025 ರ 10.30 ಬೆಳಿಗ್ಗೆ ರಿಂದ 12.03.2025 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):14.03.2025 ರ ಬೆಳಿಗ್ಗೆ 11.00 ಗಂಟೆಗೆ. 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:17.03.2025 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:15.03.2025 ಬೆಳ್ಳಿಗ್ಗೆ 11.00 ಗಂಟೆಗೆ.
ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka. gov.in/kpp-protal/index. seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ
DIPR/BGM/RO-NO-1819/KSMCA/2024-25

ಉ.ಭಾರತದಲ್ಲಿ ಕಲಿಕೆಗೆ 3ನೇ ಭಾಷೆ ಯಾವುದು?

ಚೆನ್ನೈ: ಕೇಂದ್ರ ಸರಕಾರದ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, 'ಉತ್ತರ ಭಾರತದ ಶಾಲಾ ವಿದ್ಯಾರ್ಥಿಗಳಿಗೆ 2 ಭಾಷೆ ಕಲಿಸಿ, ದಕ್ಷಿಣದ ವಿದ್ಯಾರ್ಥಿಗಳಿಗೆ 3ನೇ ಭಾಷೆಯನ್ನೇಕೆ ಹೇರಲಾಗುತ್ತಿದೆ? 2 ಭಾಷೆಗಳನ್ನು ಸರಿಯಾಗಿ ಕಲಿಸಿದ ಮೇಲೆ 3ನೇ ಭಾಷೆ ಕಲಿಯಬೇಕಾದ ಅಗತ್ಯವೇನಿದೆ?' ಎಂದು ಪ್ರಶ್ನಿಸಿದ್ದಾರೆ. ತಮಿಳುನಾಡು ಶಾಲೆ ವಿದ್ಯಾರ್ಥಿಗಳಿಗೆ 3ನೇ ಭಾಷೆ ಕಲಿಯುವ ಅವಕಾಶವನ್ನೇಕೆ ನೀವು ಅಡ್ಡಿಪಡಿಸುತ್ತಿದ್ದೀರಿ? ಎಂದು ಕೆಲವು ಪೋಷಕರು ಪ್ರಶ್ನಿಸುತ್ತಿದ್ದಾರೆ. ಆದರೆ, ಉತ್ತರ ಭಾರತದಲ್ಲಿನ ಶಾಲಾ ವಿದ್ಯಾರ್ಥಿಗಳಿಗೆ 3ನೇ ಭಾಷೆಯಾಗಿ ಯಾವ ಭಾಷೆ ಕಲಿಸಲಾಗುತ್ತಿದೆ ಎಂಬುದನ್ನು ಕೇಂದ್ರ ಸರಕಾರ ಮೊದಲು ಹೇಳಲಿ ಎಂದೂ ಸ್ಟಾಲಿನ್ ಸೋಮವಾರ 'ಎಕ್ಸ್' ಸಂದೇಶದಲ್ಲಿ ಆಗ್ರಹಿಸಿದ್ದಾರೆ. ತಮಿಳು ನಾಡು ಡಿಸಿಎಂ ಆಗಿರುವ ಸ್ಟಾಲಿನ್ ಪುತ್ರ ಉದಯನಿಧಿ ಕೂಡಾ, ಕೇಂದ್ರ ಸರಕಾರ ರಾಜ್ಯದ ಮೇಲೆ ಹಿಂದಿ ಹೇರಲು ಪ್ರಯತ್ನಿಸುತ್ತಿದೆ ಎಂದು ಕಿಡಿಕಾರಿ, ಕೇಂದ್ರ ಸರಕಾರಕ್ಕೇ ಎಚ್ಚರಿಕೆ ನೀಡುವ ಮಾತನಾಡಿದ್ದಾರೆ.

ನಗರಸಭಾ ಕಾರ್ಯಾಲಯ ಕನಕಪುರ
ರಾಮನಗರ ಜಿಲ್ಲೆ. ದೂರವಾಣಿ : 080-2752 2428.
ಇಮೇಲ್: kanakapura_tmc@yahoo.co.in ವೆಬ್‌ಸೈಟ್: www.kanakapuratown.mrc.gov.in
ಸಂಖ್ಯೆ : ಕ.ನ.ಸ./ತಾಂ.ಶಾ./ಸಿ.ಆರ್/ಟೆಂ-30/2024-25 ದಿನಾಂಕ : 27-02-2025
ಮರು ಟೆಂಡರ್ ಪ್ರಕಟಣೆ
ಕನಕಪುರ ನಗರಸಭೆಯ 2018-19 ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನ ಮತ್ತು 2024-25 ನೇ ಸಾಲಿನ ನಗರಸಭಾ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ಸಿವಿಲ್ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳು ಸಾಮಾನ್ಯ ವರ್ಗದ ಕಾಮಗಾರಿಗಳಾಗಿರುತ್ತವೆ.
1) DMA/2024-25/EL/WORK_INDENT33881/CALL-3, ಅಂದಾಜು ಮೊತ್ತ : ರೂ. 1.24 ಲಕ್ಷ. 2) DMA/2024-25/OW/WORK_INDENT33684/CALL-3, ಅಂದಾಜು ಮೊತ್ತ ರೂ. 4.90 ಲಕ್ಷ, 3) DMA/2024-25/RD/WORK_INDENT30218/CALL-3, ಅಂದಾಜು ಮೊತ್ತ : ರೂ. 30.00 ಲಕ್ಷ. 4) DMA/2024-25/RD/WORK_INDENT32246/CALL-3, ಅಂದಾಜು ಮೊತ್ತ : ರೂ. 20.00 ಲಕ್ಷ. 5) DMA/2024-25/OW/WORK_INDENT32247/CALL-3, ಅಂದಾಜು ಮೊತ್ತ : ರೂ. 25.00 ಲಕ್ಷ. 6) DMA/2024-25/RD/WORK_INDENT32288/CALL-3, ಅಂದಾಜು ಮೊತ್ತ ರೂ. 15.00 ಲಕ್ಷ. 7) DMA/2024-25/OW/WORK_INDENT33751/CALL-3, ಅಂದಾಜು ಮೊತ್ತ : ರೂ. 95.00 ಲಕ್ಷ. 8) DMA/2024-25/RD/WORK_INDENT32441/CALL-3, ಅಂದಾಜು ಮೊತ್ತ : ರೂ. 25.00 ಲಕ್ಷ.
ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 14-03-2025 ರ ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17-03-2025 ರ ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 19-03-2025 ರ ಬೆಳಿಗ್ಗೆ 11.00 ಗಂಟೆಗೆ, ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು ಯಾವುದೇ ವಾರ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.
ಸಹಿ/- ಪೌರಾಯುಕ್ತರು, ನಗರಸಭೆ, ಕನಕಪುರ.
ಡಿಐಪಿಆರ್/ರಾಮನಗರ/625/ಮಣಿಪಾಲ್/2024-25

ಸುಪ್ರೀಂ ಕೋರ್ಟ್ ಮಹತ್ವದ ಆದೇಶ

ದೃಷ್ಟಿದೋಷ ಉಳ್ಳವರಿಗೆ ನ್ಯಾಯಾಂಗ ನೇಮಕ ಅವಕಾಶ

ದೆಹಲಿ: ಭಾರತದಲ್ಲಿನ ನ್ಯಾಯಾಂಗ ಇಲಾಖೆಗೆ ನೇಮಕ ಮಾಡುವಾಗ ಯಾವುದಾದರೂ ವ್ಯಕ್ತಿ ದೈಹಿಕ ಅಂಗವೈಕಲ್ಯ ಹೊಂದಿದ್ದ ಮಾತ್ರಕ್ಕೆ ಅವರ ನೇಮಕವನ್ನು ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಮಹತ್ವದ ಆದೇಶ ಹೊರಡಿಸಿದೆ. ಕೆಲವು ರಾಜ್ಯಗಳ ನ್ಯಾಯಾಂಗ ಸೇವೆಗಳಲ್ಲಿ

ದೃಷ್ಟಿದೋಷವುಳ್ಳ ಅಭ್ಯರ್ಥಿಗಳಿಗೆ ನೇಮಕ ಅವಕಾಶ ನಿರಾಕರಿಸಿದ್ದಕ್ಕಾಗಿ ಮಧ್ಯಪ್ರದೇಶದ ನೇತ್ರದೋಷ ಅಭ್ಯರ್ಥಿಯ ತಾಯಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಜೆ.ಬಿ.ಪಾರದಿವಾಲಾ ಮತ್ತು ನ್ಯಾ. ಆರ್.ಮಹಾದೇವನ್ ಅವರ ದ್ವಿಸದಸ್ಯ ಪೀಠ ಈ ಆದೇಶ ಹೊರಡಿಸಿತು. ಮಧ್ಯಪ್ರದೇಶದ ನೇತ್ರದೋಷದ ಅಭ್ಯರ್ಥಿಯ ತಾಯಿ 2024ರಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದು, ರಾಜ್ಯ ನ್ಯಾಯಾಂಗ ಸೇವೆಗಳಲ್ಲಿ ದೃಷ್ಟಿಹೀನ ಅಭ್ಯರ್ಥಿಗಳನ್ನು ನೇಮಿಸುವುದನ್ನು ತಡೆಯುವ ಮಧ್ಯಪ್ರದೇಶ ನ್ಯಾಯಾಂಗ ಸೇವೆಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳಲ್ಲಿನ ನಿಬಂಧನೆಯನ್ನು ಪ್ರಶ್ನೆ ಮಾಡಿದ್ದರು. ಸುಪ್ರೀಂಕೋರ್ಟ್ ಆ ಪತ್ರವನ್ನೇ ಅರ್ಜಿಯಾಗಿ ಪರಿಗಣಿಸಿ ವಿಚಾರಣೆಗೆ ಅಂಗೀಕರಿಸಿತ್ತು.

ಮಹತ್ವದ ಆದೇಶ: ಅಂಗಾಂಗಗಳಲ್ಲಿನ ದೌರ್ಬಲ್ಯದ ಕಾರಣಕ್ಕೆ ನ್ಯಾಯಾಂಗ ಸೇವೆಯ ನೇಮಕಗಳಲ್ಲಿ ಅಭ್ಯರ್ಥಿಗಳಲ್ಲಿ ತಾರತಮ್ಯ ಮಾಡಬಾರದು. ಅಂಗಾಂಗಗಳಲ್ಲಿ ತೊಂದರೆ ಇರುವವರನ್ನೂ ನೇಮಕ ಪ್ರಕ್ರಿಯೆಗೆ ಪರಿಗಣಿಸಲು ರಾಜ್ಯ ಸರಕಾರಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಯಾವುದೇ ವ್ಯಕ್ತಿಯನ್ನು ಅಂಗಾಂಗ ದೋಷದ ಕಾರಣಕ್ಕೆ ನ್ಯಾಯಾಂಗ ನೇಮಕ ಪ್ರಕ್ರಿಯೆಯಿಂದ ದೂರ ಇಡುವಂತಿಲ್ಲ ಎಂದು ನ್ಯಾ. ಮಹದೇವನ್ ಅವರು ಮಹತ್ವದ ಈ ಆದೇಶದಲ್ಲಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಂಬೇಡ್ಕರ್ ಪ್ರತಿಮೆಗೆ ಅಗೌರವ: ಪ್ರತಿಭಟನೆ

ಬಾಗೇಪಲ್ಲಿ: ಚಿಂತಾಮಣಿಯ ಸರಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸ್ಥಾಪಿಸಿರುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಅಗೌರವ ತೋರಲಾಗಿದೆ.ಇದನ್ನು ಖಂಡಿಸಿ ಮಾ.6ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಂ.ಜಿ.ಕಿರಣ್ ಕುಮಾರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಅಂಬೇಡ್ಕರ್ ಪ್ರತಿಮೆಗೆ ಸುಮಾರು 6 ತಿಂಗಳಿಂದ ಕೊಳಕು ಬಟ್ಟೆ ಸುತ್ತಿ ಮುಚ್ಚಿರುವುದು ಸರಿಯಲ್ಲ ಕೂಡಲೇ ಅಂಬೇಡ್ಕರ್ ಪುತ್ಥಳಿಯನ್ನು ಅನಾವರಣಗೊಳಿಸಬೇಕು.ಈ ಸಮಸ್ಯೆಯನ್ನು ತಕ್ಷಣ ಪರಿಹರಿಸದಿದ್ದರೆ ತೀವ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಜಿಲ್ಲೆಯ ಎಲ್ಲಾ ಅಂಬೇಡ್ಕರ್ ವಾದಿಗಳು ಪ್ರಗತಿ ಪರ ಚಿಂತಕರು, ಸಂಘಟನೆಯ ಕಾರ್ಯಕರ್ತರು, ಮಹಿಳೆಯರು, ವಿದ್ಯಾರ್ಥಿಗಳು, ಕಾರ್ಮಿಕರು ಭಾಗವಹಿಸಿ ಧರಣಿ ಯಶಸ್ವಿಗೊಳಿಸಲು ಮನವಿ ಮಾಡಿದರು. ದಸಂಸ ಪದಾಧಿಕಾರಿಗಳಾದ ಎಸ್.ಎನ್.ನರಸಿಂಹಪ್ಪ, ಈಶ್ವರಪ್ಪ, ವೆಂಕಟೇಶ್, ಗಂಗಾಧರ, ನರಸ ರಾಮಪ್ಪ, ಸುರೇಶ್, ರಮೇಶ್, ಬಾಬು, ವೆಂಕಟೇಶ್, ರಾಮಾಂಜಿಬಾಬು ಇದ್ದರು.

ಅಮ್ಮನಘಟ್ಟ ಗ್ರಾಪಂಗೆ ನೂತನ ಅಧ್ಯಕ್ಷರ ಆಯ್ಕೆ

ಗುಬ್ಬಿ: ತಾಲೂಕಿನ ಕಸಬ ಹೋಬಳಿ ಅಮ್ಮನಘಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ವರದೇನಹಳ್ಳಿ ಜಯಣ್ಣ ಅವಿರೋಧ ಆಯ್ಕೆಯಾದರು. ಪಂಚಾಯಿತಿ ಕಚೇರಿಯಲ್ಲಿ ತಾಪಂ ಇಒ ಶಿವಪ್ರಕಾಶ್ ಚುನಾವಣಾಧಿಕಾರಿಯಾಗಿ ಪ್ರಕ್ರಿಯೆ ನಡೆಸಿಕೊಟ್ಟರು. ಒಬಿಸಿಗೆ ಮೀಸಲಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಯಣ್ಣ ಒಬ್ಬರೇ ನಾಮ ಪತ್ರ ಸಲ್ಲಿಸಿದ ಕಾರಣ ಅವಿರೋಧ ಆಯ್ಕೆ ಘೋಷಣೆ ಮಾಡಲಾಯಿತು. ನೂತನ ಅಧ್ಯಕ್ಷ ಜಯಣ್ಣ ಮಾತನಾಡಿ, ಎಲ್ಲಾ ಗ್ರಾಮಗಳಿಗೂ ಅಗತ್ಯ ಮೂಲ ಸೌಕರ್ಯ ಒದಗಿಸುವಲ್ಲಿ ಎಲ್ಲಾ ಸದಸ್ಯರ ವಿಶ್ವಾಸ ಗಳಿಸಿ ಕೆಲಸ ಮಾಡುತ್ತೇನೆ. ಮಾದರಿ ಗ್ರಾಮ ಪಂಚಾಯಿತಿ ಮಾಡಲು ಪ್ರಯತ್ನ ಮಾಡುತ್ತೇನೆ. ರಸ್ತೆ, ನೀರು, ಬೀದಿ ದೀಪ ಒದಗಿಸುವುದಾಗಿ ಭರವಸೆ ನೀಡಿದರು.ಅಧ್ಯಕ್ಷರ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಗ್ರಾಪಂ ಉಪಾಧ್ಯಕ್ಷ ಪ್ರೇಮಾ, ಸದಸ್ಯರಾದ ರಮೇಶ್, ಯತೀಶ್, ದೇವ ರಾಜ್, ಲಕ್ಷ್ಮೀದೇವಿ, ಶ್ರೀನಿವಾಸಮೂರ್ತಿ, ಲೀಲಾ, ಮುಮ್ತಾಜ್ ಬೇಗಂ, ಅನುಸೂಯಮ್ಮ, ಮುದ್ದಯ್ಯ, ಶಿವನಂಜಪ್ಪ, ದೊಡ್ಡಿರಮ್ಮ, ಕವಿತಾ, ಯತೀಶ್ ಕುಮಾರ್, ಗಾಯತ್ರಮ್ಮ, ಭದ್ರಯ್ಯ, ದಿನೇಶ್, ಪ್ರೇಮಲತಾ, ಮಂಗಳ, ಪಿಡಿಒ ರವಿ ಇದ್ದರು.

ತಳಗವಾರ ಗ್ರಾಪಂ ಉಪಾಧ್ಯಕ್ಷರಾಗಿ ಆಯ್ಕೆ

ಚಿಂತಾಮಣಿ: ತಾಲೂಕಿನ ತಳಗವಾರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಂಪತ್ ಕುಮಾರ್. ಎಸ್ ಆಯ್ಕೆಯಾಗಿದ್ದಾರೆ. ಚುನಾವಣಾ ಅಧಿಕಾರಿ ಅಮರ ನಾರಾಯಣರೆಡ್ಡಿ ಚುನಾವಣೆ ನಡೆಸಿ ಕೊಟ್ಟರು. ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಂಪತ್ ಕುಮಾರ್.ಎಸ್ ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರಮೇಶ್‌ಸ್ವಾಮಿ ನಾಮಪತ್ರ ಸಲ್ಲಿಸಿದ್ದು ಇಬ್ಬರೂ ತಮ್ಮ ನಾಮಪತ್ರಗಳನ್ನು ಹಿಂಪಡೆಯದೆ ಇರುವ ಕಾರಣ ಚುನಾವಣೆ ನಡೆಯಿತು.ಸಂಪತ್ ಕುಮಾರ್.ಎಸ್ 9 ಮತಗಳನ್ನು ಪಡೆದರೆ,ಕಾಂಗ್ರೆಸ್‌ನ ರಮೇಶ್‌ಸ್ವಾಮಿ 8 ಮತಗಳನ್ನು ಪಡೆದರು. ಒಂದು ಮತದ ಅಂತರದಿಂದ ಸಂಪತ್ ಜಯಗಳಿಸಿದರು. ಗ್ರಾಪಂ ಅಧ್ಯಕ್ಷೆ ಸಮೀನಾ ಸುಲ್ತಾನ,ಗ್ರಾಪಂ ಸದಸ್ಯ ರಾದ ವೆಂಕಟೇಶ್, ಪಾರ್ವತಮ್ಮ, ನರಸಿಂಹ ಮೂರ್ತಿ,ಅನಿಲ್ ಕುಮಾರ್,ರವಿಕುಮಾರ್,ನಾರಾ ಯಣಸ್ವಾಮಿ,ಕೃಷ್ಣಪ್ಪ, ಮುಖಂಡರಾದ ಚಾಂದ್ ಪಾಷಾ ಇದ್ದರು.

ಪಿಎಲ್‌ಡಿ ಬ್ಯಾಂಕ್‌ಗೆ ನಿರ್ದೇಶಕರ ಆಯ್ಕೆ

ಕುಣಿಗಲ್: ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿಗೆ ಐದು ವರ್ಷಗಳ ಅವಧಿಗೆ ಎನ್ ಡಿ ಎ ಮೈತ್ರಿ ಕೂಟದಿಂದ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಡಿ ಕೃಷ್ಣಕುಮಾರ್ ಯಡಿಯೂರು ಹೋಬಳಿಯ ಸುರೇಶ್ ಎ ಎಸ್ ಅಮೃತೂರ್, ಶಿವಣ್ಣ ಬಿ ಆರ್, ಕಸಬಾ ಹೋಬಳಿಯ ರಂಗಯ್ಯ, ಎಚ್‌ಜಿ ಉತ್ರಿದುರ್ಗ, ನಂಜಪ್ಪ ಹುತ್ರಿದುರ್ಗ, ರೇಣುಕಪ್ಪ ಕೊತ್ತಗೆರೆ ಹೋಬಳಿ ಬೋರೇಗೌಡ, ಯುಕೆ ಹುಲಿಯೂರುದುರ್ಗ ಹೋಬಳಿಯಿಂದ ಚುನಾಯಿತ ರಾಗಿದ್ದಾರೆ. ಯಡಿಯೂರು ಹೋಬಳಿಯಿಂದ ರಂಗಸ್ವಾಮಿ, ಮಂಜುನಾಥ್, ಮಾಯಮ್ಮ, ಅಮೃತೂರು ಹೋಬಳಿಯ ನಂದಿನಿ ಬಿ ಆರ್., ಕೊತ್ತಗೆರೆ ಹೋಬಳಿಯ ರವಿ, ಹುಲಿಯೂರು ದುರ್ಗದಿಂದ ಜೋಗಯ್ಯ, ಕಸಬಾ ಹೋಬಳಿಯ ಧನುಷ್ ಗಂಗಟಕಾರ್ ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ ಎಂದು ಚುನಾವಣಾಧಿಕಾರಿ ಓಬಳೇಶ್ ತಿಳಿಸಿದರು.

{ಯದುವೀರ್ ಒಡೆಯರ್} ಸಂಸದರು

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಬಗ್ಗೆ ಕೇಳಿದ ಪ್ರಶ್ನೆಗೆ, ಕಾಂಗ್ರೆಸ್, ಅವರನ್ನು ಕೇಳಬೇಕು, ಅವರ ಪಕ್ಷದ ಒಳಗಡೆ ಏನು ನಡೆಯುತ್ತಿದೆ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ, ವಿರೋಧ ಪಕ್ಷವಾಗಿ ಅದರಲ್ಲಿ ನಮ್ಮ ಕೆಲಸವಿಲ್ಲ, ಸಿಎಂ ಕುರ್ಚಿಗಾಗಿ ಕಿತ್ತಾಟ ನಡೆಸುತ್ತಿರುವುದು ಕಾಂಗ್ರೆಸ್‌ನವರು.

ವಿವಿಧ ಬೇಡಿಕೆ ಈಡೇರಿಕೆಗೆ ಪಾಲಿಕೆ ಎದುರು ಅನಿರ್ದಿಷ್ಟಾವಧಿ ಧರಣಿ

ನೀರು ಸರಬರಾಜು ನೌಕರರ ಮುಷ್ಕರ

ತುಮಕೂರು: ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಪದ್ಧತಿ ರದ್ದುಪಡಿಸಿ ನೇರ ನೇಮಕಾತಿ, ಸಮಾನ ಕೆಲಸಕ್ಕೆ ಸಮಾನ ವೇತನ, ಖಾಲಿ ಹುದ್ದೆ ಭರ್ತಿ, ಗೃಹ ಭಾಗ್ಯ ಯೋಜನೆ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜಿಲ್ಲಾ ನೀರು ಸರಬರಾಜು ನೌಕರರ ಸಂಘದ ವತಿಯಿಂದ ನಗರದ ಮಹಾನಗರ ಪಾಲಿಕೆ ಕಚೇರಿ ಆವರಣದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲಾಗಿದೆ.

ಬಿರು ಬೇಸಿಗೆಯ ಝಳ ನೆತ್ತಿ ಸುಡುತ್ತಿದ್ದು, ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಮುನ್ಸೂಚನೆಗಳು ಕಂಡು ಬರುತ್ತಿರುವ ಬೆನ್ನಲ್ಲೆ ಮಹಾನಗರ ಪಾಲಿಕೆಯ ವಾಲ್‌ಮನ್‌ಗಳ ಮುಷ್ಕರ ನಡೆಸುತ್ತಿರುವುದು ನಗರದ ನಾಗರಿಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಮಹಾನಗರ ಪಾಲಿಕೆಯಲ್ಲಿ 210 ಜನ ವಾಲ್‌ಮನ್‌ಗಳು ನೀರು ಸರಬರಾಜು ನಿರ್ವಹಣೆ ಮಾಡಿಕೊಂಡು ಬರುತ್ತಿದ್ದು, ಇದರೊಂದಿಗೆ ಬುಗುಡನಹಳ್ಳಿ ಕೆರೆ ಮತ್ತು ಪಿ.ಎನ್.ಆರ್.ಪಾಳ್ಯ ಕೆರೆ ಸ್ವಚ್ಛಗೊಳಿಸುವುದು, ಪಿಐಡಿ ನಂಬರ್‌ಗಳನ್ನು ಪ್ರತಿ ಮನೆ ಮನೆಗೂ ಬರೆಯುವುದು ಕಂದಾಯ ವಸೂಲಾತಿ ಮಾಡುವುದು, ಚುನಾವಣಾ ಕಾರ್ಯಕ್ಕೆ ಬಳಸಿಕೊಳ್ಳುವುದು, ಬಿಎಲ್‌ಒ ಕೆಲಸ ನಿರ್ವಹಿಸುವುದು ಸೇರಿದಂತೆ ಇತರೆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಆದರೂ ನಮ್ಮ ಸೇವೆಯನ್ನು ಕಾಯಂಗೊಳಿಸುತ್ತಿಲ್ಲ ಎಂದು ಮುಷ್ಕರ ನಿರತ ವಾಲ್‌ಮನ್‌ಗಳು ಆಕ್ರೋಶ ಹೊರ ಹಾಕಿದರು.

ಜಿಲ್ಲಾ ನೀರು ಸರಬರಾಜು ನೌಕರರ ಸಂಘದ ಅಧ್ಯಕ್ಷ ಕುಮಾರ್ ಮಾತನಾಡಿ, ಮಹಾನಗರ ಪಾಲಿಕೆಯಲ್ಲಿ ಕಳೆದ 25 ವರ್ಷಗಳಿಂದ ನಿರಂತರವಾಗಿ ನಾಗರಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೀರು ಸರಬರಾಜು ಮಾಡಿಕೊಂಡು ಬರುತ್ತಿದ್ದೇವೆ. 210 ಜನ ನೌಕರರು ಪಂಪ್ ಹೌಸ್, ವಾಟರ್‌ಮನ್ ಕೆಲಸ ಮಾಡುತ್ತಿದ್ದೇವೆ. ಹಾಗಾಗಿ 210 ಜನರ ಸೇವೆ ಖಾಯಂ ಮಾಡಬೇಕು. ನೇರ ನೇಮಕಾತಿ, ನೇರ ಪಾವತಿ ಮಾಡಬೇಕು. ಪಾಲಿಕೆಯಲ್ಲಿ ಖಾಲಿ ಇರುವ 110 ನೌಕರರ ಹುದ್ದೆಗೆ ಹಾಲಿ ನೌಕರರನ್ನೇ ತುಂಬಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕರ ಸಹಕಾರ ಸಂಘ ಪ್ರಾರಂಭಿಸಲು ನಮ್ಮ ವಿರೋಧವಿದೆ. ಇದನ್ನು ಕೈಬಿಟ್ಟು ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ವಾಲ್‌ಮನ್ ನೌಕರರಿಗೆ ಗೃಹ ಭಾಗ್ಯ ನೀಡಬೇಕು. ಕಾರ್ಮಿಕರ ಪಿಎಫ್ ಖಾತೆ ಬಾಕಿ ಇರುವ 55 ಲಕ್ಷ ರೂ.ಗಳನ್ನು ತುರ್ತಾಗಿ ಜಮಾ ಮಾಡಬೇಕು ಎಂದು ಆಗ್ರಹಿಸಿದರು. ಮುಷ್ಕರದಲ್ಲಿ ಸಂಘದ ಉಪಾಧ್ಯಕ್ಷ ನಟರಾಜು, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಚಂದ್ರಯ್ಯ, ನಂದೀಶ್, ಮಂಜುನಾಥ್, ರಮೇಶ್, ಇತರೆ ವಾಟರ್‌ಮನ್‌ಗಳು ಭಾಗವಹಿಸಿದ್ದರು.

ತುಮಕೂರಿನಲ್ಲಿ ನೀರು ಸರಬರಾಜು ನೌಕರರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಹಾನಗರ ಪಾಲಿಕೆ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಿದರು.

ಈ ಬಜೆಟ್‌ನಲ್ಲಿ ನೇರ ನೇಮಕ ಘೋಷಣೆ ಮಾಡಲಿ

ಹೈಕೋರ್ಟ್ ಆದೇಶವಿದ್ದರೂ ನೇಮಕಾತಿ ಮಾಡಿಕೊಂಡಿಲ್ಲ. ಈ ಎಲ್ಲ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸುತ್ತಿದ್ದೇವೆ. ನಮ್ಮ ಹೋರಾಟದ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಆಗಮಿಸಿ ನಮ್ಮ ಸಮಸ್ಯೆ ಆಲಿಸಬೇಕು. ಈ ಬಜೆಟ್‌ನಲ್ಲಿ ನೇರ ನೇಮಕ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ನಕಲಿ ವೈದ್ಯರಿಗೆ ಕಡಿವಾಣ ಹಾಕಿ

ತುಮಕೂರು: ಜಿಲ್ಲೆಯಾದ್ಯಂತ ನಕಲಿ ವೈದ್ಯರುಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಹಲವು ಸಾವು ನೋವಿಗೆ ಕಾರಣವಾಗುತ್ತಿರುವ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮಹಾನಾಯಕ ಡಾ.ಬಿ.ಆರ್.ಅಂಬೇಡ್ಕರ್ ಪ್ರಜಾಸೇನೆ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದ ಡಿಸಿ ಕಚೇರಿ ಬಳಿ ಕೆಲ ಕಾಲ ಪ್ರತಿಭಟನೆ ನಡೆಸಿ, ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ ಮನವಿಯನ್ನು ಸಲ್ಲಿಸಿದರು.

ನಂತರ ಮಾತನಾಡಿದ ಪ್ರಜಾಸೇನೆಯ ಅಧ್ಯಕ್ಷ ಕೆಂಪರಾಜು.ಎ.ಸಿ, ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದೆ.ಅದರಲ್ಲಿ ಗಡಿ ಪ್ರದೇಶವಾದ ಪಾವಗಡದಲ್ಲಿ ಗಲ್ಲಿಗೊಂದು ನಕಲಿ ಕ್ಲಿನಿಕ್‌ಗಳಿದ್ದು, ಇತ್ತೀಚಗೆ ನಡೆದ ಮೂವರು ಬಾಣಂತಿಯರ ಸಾವಿಗೆ ನಕಲಿ ವೈದ್ಯರು ನೀಡಿದ ಚಿಕಿತ್ಸೆಯೇ ಕಾರಣ ಎನ್ನಲಾಗುತ್ತಿದೆ.ಈ ಬಗ್ಗೆ ರೋಗಿಗಳ ಸಂಬಂಧಿಕರು ಮತ್ತು ವೈದ್ಯರ ನಡುವಿನ ಮಾತಿನ ವಿಡಿಯೋ ಎಲ್ಲೆಡೆ ಹರಿದಾಡುತ್ತಿದೆ ಎಂದರು.

ರೋಗಿಗಳ ಪಾಲಿಗೆ ಕಂಟಕ ಪ್ರಾಯರಾಗಿರುವ ನಕಲಿ ವೈದ್ಯರ ವಿರುದ್ಧ ಜಿಲ್ಲಾಡಳಿತ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ದಾಳಿ ನಡೆಸಿ, ಅವರ ಕ್ಲಿನಿಕ್‌ಗಳನ್ನು ಮುಚ್ಚಿಸಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಸಾಹಿತಿಗಳಾದ ರವಿ ತೊಂಡಗೆರೆ, ರಾಮಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅಂಬೇಡ್ಕರ್ ಪ್ರಜಾಸೇನೆ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಸಾಹಿತಿ ರವಿ ತೊಂಡಗೆರೆ, ರಾಮಯ್ಯ ಉಪಸ್ಥಿತರಿದ್ದರು.

ಕೃಷಿ ಪರಿಕರ ಉತ್ಪಾದನಾ ಕೇಂದ್ರ ಸ್ಥಾಪಿಸಿ

ಕೋಲಾರದ ಪ್ರಗತಿ ಆಗ್ರೋ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

ಕೋಲಾರ: ಕೃಷಿಗೆ ಅಗತ್ಯವಾದ ಕೃಷಿ ಯಂತ್ರೋಪಕರಣಗಳ ಮಾರಾಟ ಮತ್ತು ಸೇವಾ ಕೇಂದ್ರದ ಜತೆಗೆ ಪರಿಕರಗಳ ಉತ್ಪಾದನಾ ಕೇಂದ್ರವನ್ನು ತೆರೆಯುವ ಮೂಲಕ ರೈತರಿಗೆ ಸವಲತ್ತುಗಳನ್ನು ಸ್ಥಳೀಯವಾಗಿ ದೊರಕಿಸಲು ಮುಂದಾಗಬೇಕೆಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀಮಂಗಳಾನಂದನಾಥ ಸ್ವಾಮಿ ಹೇಳಿದರು.

ತಾಲೂಕಿನ ಕೋಡಿಕಣ್ಣೂರು ಗ್ರಾಮದಲ್ಲಿ ನಡೆದ ಪ್ರಗತಿ ಆಗ್ರೋ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಿ ಮಾತನಾಡಿದರು.

ರೈತರಿಗೆ ಒಂದೇ ಸೂರಿನಲ್ಲಿ ಎಲ್ಲ ಬಗೆಯ ಉಪಕರಣಗಳು ಸಿಕ್ಕರೆ ಅನುಕೂಲ ಆಗುತ್ತದೆಂದರು. ಡಿಸಿಪಿ ದೇವರಾಜ್ ಅವರು ಹಿರಿಯ ಪೊಲೀಸ್ ಅಧಿಕಾರಿಯಾದರೂ ರಜೆ ದಿನಗಳಂದು ಮಣ್ಣಿನ ಮಗವಾಗಿ ಕೃಷಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಮಣ್ಣಿನ ಸೇವೆ ಮಾಡುತ್ತಿದ್ದು ಯುವ ಜನರಿಗೆ ಇದು ಆದರ್ಶ ಆಗಬೇಕೆಂದು ನುಡಿದರು.

ಬೆಂಗಳೂರು ಪೂರ್ವ ಡಿಸಿಪಿ ಡಿ.ದೇವರಾಜ್ ಮಾತನಾಡಿ, ರೈತರನ್ನು ಉತ್ತೇಜಿಸಲು ಸಮಗ್ರ ಕೃಷಿ ಪರಿಕರಗಳು, ಕೃಷಿ ಉಪಕರಣಗಳು, ರೇಷ್ಮೆ-ಹೈನುಗಾರಿಕೆಗೆ ಸಂಬಂಧಿಸಿದ ಎಲ್ಲ ಸಾಮಗ್ರಿಗಳ ನೂತನ ಮಳಿಗೆ ಆರಂಭ ಆಗಿದ್ದು ಇದನ್ನು ಉತ್ತೇಜಿಸುವ ದೆಸೆಯಲ್ಲಿ ತಮ್ಮ ತೋಟಕ್ಕೆ ಅಗತ್ಯವಾದ 5.30 ಲಕ್ಷ ರೂ. ಕೃಷಿ ಪರಿಕರಣಗಳನ್ನು ಖರೀದಿ ಮಾಡುತ್ತಿರುವುದಾಗಿ ಹೇಳಿದರಲ್ಲದೆ ಇನ್ನು ಮುಂದೆ ಯಂತ್ರೋಪಕರಣಗಳ ಸರ್ವೀಸ್‌ಗಾಗಿ ಬೆಂಗಳೂರಿಗೆ ಹೋಗುವುದು ತಪ್ಪಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ವಡಗೂರು ಡಿ.ಎಲ್.ನಾಗರಾಜ್, ಜಿಲ್ಲಾ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಬಿಸಪ್ಪಗೌಡ, ಹಿರಿಯ ವಕೀಲ ಕೆ.ವಿ.ಶಂಕರಪ್ಪ, ರೇಷ್ಮೆ ಇಲಾಖೆ ಉಪ ನಿರ್ದೇಶಕ ಶ್ರೀನಿವಾಸ್, ಹಿರಿಯ ತೋಟಗಾರಿಕಾ ನಿರ್ದೇಶಕ ಡಾ.ಎನ್.ಶಿವಾರೆಡ್ಡಿ, ಸಿಬಿ ಎಂಜಿನಿಯರಿಂಗ್ ಕಾಲೇಜಿನ ಕಾರ್ಯದರ್ಶಿ ಕೃಷ್ಣಾರೆಡ್ಡಿ, ಕೃಷಿ ವಿಜ್ಞಾನಿ ಅನಿಲ್ ಕುಮಾರ್, ಪ್ರಗತಿ ಆಗ್ರೋ ಎಂಡಿ ಬಿ.ಕೆ.ದೇವರಾಜ್, ಇನ್ಸ್‌ಪೆಕ್ಟರ್ ಸುಮಾ, ಇದ್ದರು.

ಅಳಲು ತೋಡಿಕೊಂಡ ವ್ಯಾಪಾರಸ್ಥರು | ಹೆಚ್ಚು ವಸೂಲಿ ಮಾಡಿಲ್ಲ:ಗುತ್ತಿಗೆದಾರ

ಭೋಗನಂದೀಶ್ವರ ಜಾತ್ರೆ ಸುಂಕದ ಹೆಸರಲ್ಲಿ ಸುಲಿಗೆ

ಮುನಿರಾಜು ಅರಿಕೆರೆ,

ಚಿಕ್ಕಬಳ್ಳಾಪುರ: ದಕ್ಷಿಣ ಕಾಶಿಯೆಂದೇ ಪ್ರಸಿದ್ದಿಯಾಗಿರುವ ನಂದಿಗ್ರಾಮದ ಶ್ರೀಭೋಗ ನಂದೀಶ್ವರ ಜಾತ್ರೆಯು ಜೋಡಿ ರಥೋತ್ಸವಕ್ಕೆ ಖ್ಯಾತಿಯಾಗಿದ್ದರೆ, ಈ ಬಾರಿ ಗುತ್ತಿಗೆದಾರರ ದುಬಾರಿ ಸುಂಕದ ವಿಚಾರದಲ್ಲಿ ಕುಖ್ಯಾತಿಗೆ ಒಳಗಾಗಿದೆ.

ನಂದಿ ಜಾತ್ರೆ ಇವತ್ತು ನಿನ್ನೆಯಿಂದ ನಡೆಯುತ್ತಿಲ್ಲ. ನೂರಾರು ವರ್ಷದಿಂದ ಜಾತ್ರೆಯಲ್ಲಿ ಗುತ್ತಿಗೆ ಪಡೆಯುವ ಪದ್ಧತಿ ನಡೆಯುತ್ತಿದೆ. ನಿಯಮದ ಪ್ರಕಾರ ನಾನೂ ವಸೂಲಿ ಮಾಡಿದ್ದೇನೆ. 25 ದಿನಗಳಿಗೆ ಸುಂಕ ಪಡೆಯಲು ಗುತ್ತಿಗೆ 8 ಲಕ್ಷಕ್ಕೆ ಪಡೆದಿದ್ದೇನೆ. ಅಂಗಡಿಯಿಟ್ಟರುವ ವ್ಯಾಪಾರಸ್ಥರ ಬಳಿ 25ದಿನದ್ದು ಮುಂಗಡವಾಗಿಯೇ ಪಡೆಯುತ್ತಿದ್ದೇನೆ.ನಾನು ತಪ್ಪು ಮಾಡಿಲ್ಲ, ತಪ್ಪಾಗಿದ್ದರೆ ಸಂಬಂಧಪಟ್ಟವರು ಕ್ರಮವಹಿಸಲಿ.

-ಹಿತೇಶ್‌ಗೌಡ, ನಂದಿಜಾತ್ರೆ ಗುತ್ತಿಗೆದಾರ

ಈ ಬಾರಿ ನಂದಿ ಜಾತ್ರೆಯ ಅಂಗಡಿಗಳ ಗುತ್ತಿಗೆ ಹಿತೇಶ್‌ಗೌಡ ಎಂಬುವರು ಪಡೆದಿದ್ದಾರೆ. ನಮ್ಮ ನಿಯಮಗಳ ಪ್ರಕಾರ ಒಂದು ಅಡಿಗೆ 10 ರೂಪಾಯಿ ಪಡೆಯಬೇಕಿದೆ.ಆದರೆ ಈತ ಇದನ್ನು ಮೀರಿ ವಸೂಲಿ ಮಾಡಿರುವ ಬಗ್ಗೆ ನಮಗೂ ದೂರುಗಳು ಬಂದಿವೆ. ನೋಟೀಸು ಜಾರಿ ಮಾಡುತ್ತೇವೆ. ಉತ್ತರ ನೋಡಿ ಕ್ರಮ ಜರುಗಿಸುತ್ತೇವೆ. ಒಂದು ವೇಳೆ ತಪ್ಪು ಮಾಡಿದ್ದರೇ ಕಪ್ಪುಪಟ್ಟಿಗೆ ಸೇರಿಸಲಾಗುವುದು.

-ರುಕ್ಮಿಣಿ, ಮುಜರಾಯಿ ತಹಸೀಲ್ದಾರ್

ನಂದಿ ಗ್ರಾಮದ ಭೋಗನಂದೀಶ್ವರ ಜಾತ್ರೆಯಲ್ಲಿ ಸುಂಕ ಕಟ್ಟಿರುವ ರಸೀದಿ ತೋರಿಸಿದ ವ್ಯಾಪಾರಿ.

ತಾಲೂಕಿನ ನಂದಿ ಗ್ರಾಮದ ಭೋಗನಂದೀಶ್ವರ ದೇವಾಲಯದ ಸುತ್ತ ಮುತ್ತ ಊ ರಸ್ತೆಬದಿಯಲ್ಲಿ ಅಂಗಡಿಯಿಟ್ಟು ಕೊಂಡು ಬುರುಗು ಬತ್ತಾಸು,ಮಕ್ಕಳ ಆಟಿಕೆ,ಜಾಯಿಂಟ್‌ವೀಲ್,ಜರಡಿ ಮೊರ,ಏರ್‌ಪಿನ್ ರಬ್ಬರ್, ಮಣಿಸರ ಹೀಗೆ ವ್ಯಾಪಾರ ಮಾಡುವ ಹವ್ಯಾಸಿ ವ್ಯಾಪಾರಿಗಳಿಂದ ಸುಂಕ ವಸೂಲಿ ಮಾಡುವ ವಿಚಾರ ಈಗ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಮಹಾಶಿವರಾತ್ರಿ - ರಥೋತ್ಸವವನ್ನು ಕಣ್ತುಂಬಿ ಕೊಳ್ಳಲು ಇಲ್ಲಿಗೆ ಲಕ್ಷಾಂತರ ಮಂದಿ ಭೇಟಿ ನೀಡಿ ದೇವರ ದರ್ಶನ ಪಡೆದರು. ಜಾತ್ರೆಗೆ ಬಂದ ನೆನೆಪಿನಲ್ಲಿ ಏನಾದರೂ ಕೊಂಡುಕೊಂಡು ಮನೆಗೆ ತರಳುವುದು ಈಭಾಗದಲ್ಲಿ ನೂರಾರು ವರ್ಷದಿಂದ ನಡೆದುಕೊಂಡು ಬಂದಿರುವ ವಾಡಿಕೆ.ಅದಕ್ಕಾಗಿಯೇ ನೂರಾರು ಅಂಗಡಿಗಳು ಟೆಂಟುಗಳನ್ನು ಹಾಕಿಕೊಂಡು ಜಾತ್ರೆಯನ್ನು ಗುತ್ತಿಗೆ ಪಡೆದವರಿಗೆ ಸುಂಕಕಟ್ಟಿ ಒಂದೆರಡು ವಾರಗಳ ವ್ಯಾಪಾರ ಮಾಡಿಕೊಂಡು ಹೋಗುತ್ತಾರೆ.

ಆದರೆ ಈಬಾರಿ ಇದೇ ಸುಂಕದ ವಿಚಾರದಲ್ಲಿ ವ್ಯಾಪಾರಿಗಳ ಸುಲಿಗೆ ಮಾಡಲಾಗಿದೆ ಎಂಬ ಆರೋಪಗಳು ಕೇಳಿಬಂದಿದೆ.

ಒಲೆಗೆ ಕಂಟಕವಾದ ಸುಂಕ

7ಅಡಿಯ ಪುಟ್ಟ ಅಂಗಡಿಯ ಜಾಗಕ್ಕೆ ಗುತ್ತಿಗೆದಾರ 7ಸಾವಿರ ಸುಂಕ ನಿಗದಿ ಮಾಡಿದ್ದಾನೆ. ಹಣ ನೀಡಲು 5000ಕ್ಕೆ ಕಿವಿ ಒಲೆ ಅಡ ಇಟ್ಟು ಸುಂಕ ಕಟ್ಟಿದ್ದೇನೆ.ಸುಂಕ ಜಾಸ್ತಿ ಮಾಡಿದ್ದೀರಲ್ಲ ಸ್ವಾಮಿ ಕಡಿಮೆ ಮಾಡಿ ಎಂದರೆ 7 ಸಾವಿರ ಕೊಟ್ಟು ಇಟ್ರೇ ಇಡಿ, ಇಲ್ಲ ಅಂದ್ರೆ ಅಂಗಡಿ ಎತ್ತುವಂತೆ ಅವಾಜ್ ಹಾಕಿದ ಎಂದು ಪುಟ್ಟ ಅಂಗಡಿ ಇಟ್ಟುಕೊಂಡಿರುವ ಅಜ್ಜಿ ಅಳಲು ತೋಡಿಕೊಂಡರು.

1000 ರು.ಸುಂಕ: ಜಾತ್ರೆಯಲ್ಲಿ ಸುಂಕ ವಸೂ ಲಿಯ ಗುತ್ತಿಗೆಯನ್ನು ಹರಾಜು ಪ್ರಕ್ರಿಯೆ ಯಲ್ಲಿ ತನ್ನದಾಗಿಸಿಕೊಂಡಿರುವ ನಂದಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರ ಮಗ ಹಿತೇಶ್ ಗೌಡ ಹರಾಜು ನಿಬಂಧನೆಗಳ ಪ್ರಕಾರ 1 ಅಡಿಗೆ 10 ರೂ.ಸುಂಕ ವಸೂಲಿ ಮಾಡಬೇಕು ಎಂದಿದೆ. ಆದರೆ ನಿಯಮಗಳನ್ನು ಗಾಳಿಗೆ ತೂರಿದ ಈತ 1 ಅಡಿಗೆ 10 ರೂಪಾಯಿ ಬದಲು 1000 ರೂಪಾಯಿ ವಸೂಲಿ ಮಾಡಿದ್ದಾರೆ ಎಂಬುದು ವ್ಯಾಪಾರಸ್ಥರು ಆಕ್ರೋಶ ಹೊರಹಾಕಿದ್ದಾರೆ. ಈತನ ಸುಂಕದ ಪರಿ ಹೇಗಿದೆ ಎಂದರೆ ಹೇಳಿದ್ದೇ ರೇಟ್ ಮಾಡಿದ್ದೇ ಕಾನೂನು ಎಂಬಂತಾಗಿದೆ.ಬಡಪಾಯಿ ವ್ಯಾಪಾರಿಗಳ ಬಳಿ ಒಂದೊಂದು ಅಂಗಡಿಗೆ 7000 ದಿಂದ 50000 ದವರೆಗೂ ವಸೂಲಿ ಮಾಡಿದ್ದಾನೆ. ನಿಯಮಗಳನ್ನು ಗಾಳಿಗೆ ತೂರಿರುವ ಈತ ಒಬ್ಬೊಬ್ಬರಿಗೆ ಒಂದೊಂದು ರೀತಿ ವಸೂಲಿ ಮಾಡಿದ್ದಾನೆಂದು ದೂರಲಾಗಿದೆ.

ಒಳ ಮೀಸಲು ಜಾರಿಗೊಳಿಸದ ಕಾಂಗ್ರೆಸ್ ಸರಕಾರ

ತುಮಕೂರು: ಮೂವತ್ತು ವರ್ಷಗಳ ಮಾದಿಗರ ಒಳಮೀಸಲು ಜಾರಿಗೆ ಸುಪ್ರೀಂಕೋರ್ಟ್‌ನಿಂದ ಅನುಮೋದನೆ ಸಿಕ್ಕರೂ ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಒಳ ಮೀಸಲಾತಿಯನ್ನು ಜಾರಿ ಮಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಸಂಸದ ಹಾಗೂ ಮಾಜಿ ಸಚಿವ ಗೋವಿಂದ ಎಂ ಕಾರಜೋಳ ಆಪಾದಿಸಿದ್ದಾರೆ.

ನಗರದ ಎಂಪ್ರೆಸ್ ಕಾಲೇಜು ಸಭಾಂಗಣದಲ್ಲಿ ಕರ್ನಾಟಕ ಮಾದಿಗ ದಂಡೋರ (ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿ) ಮಾದಿಗ ವಿದ್ಯಾರ್ಥಿ ಯುವ ಪರಿಷತ್ ಇವರ ಆಶ್ರಯದಲ್ಲಿ ಆದಿ ಜಾಂಬವ ಜಯಂತಿ, 7ನೇ ಶೈಕ್ಷಣಿಕ ಜಾಗೃತಿ ಸಮಾವೇಶ, ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ, ಜಿಲ್ಲೆಯ ಮಾದಿಗ ಸಮುದಾಯದ ಜನಗಣತಿ ಅಭಿಯಾನ ಹಾಗೂ ಮಾದಿಗ ಸಮುದಾಯದ ವಧು-ವರರ ಸಮಾವೇಶ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಅಂಬೇಡ್ಕರ್ ಅವರು ನೀಡಿದ ಶಿಕ್ಷಣ, ಸಂಘಟನೆ, ಹೋರಾಟದ ಹಾದಿಯಲ್ಲಿ ತಮಗೆ ಬರಬೇಕಾದ ಒಳ ಮೀಸಲು ಕೇಳಿ ಸಂಘರ್ಷ ಹೋರಾಟ ನಡೆದಿವೆ. ಕೇಂದ್ರ ಸರಕಾರ ಒಳ ಮೀಸಲು ಜಾರು ಮಾಡುವಲ್ಲಿ ಬದ್ಧವಾಗಿದೆ ಎಂದರು.

ಶಾಸಕ ಸುರೇಶ್‌ಗೌಡ ಮಾತನಾಡಿ, ಜಗಜೀವನ್ ರಾಮ್,ಅಂಬೇಡ್ಕರ್ ಅವರ ಆದರ್ಶ ಗುಣಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕಿದ್ದು,ಮಾದಿಗ ಸಮುದಾಯದಲ್ಲಿ ಐಎಎಸ್, ಕೆಎಎಸ್ ಓದುವವರ ಸಂಖ್ಯೆ ಕಡಿಮೆ ಇದ್ದು,ಮಾದಿಗ ಸಮುದಾಯ ಸುಶಿಕ್ಷಿತರಾಗಬೇಕು ಎಂದರು.

ಕಿದ್ವಾಯಿ ಆಸ್ಪತ್ರೆ ಮಾಜಿ ನಿರ್ದೇಶಕಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ.ವಿಜಯಲಕ್ಷ್ಮಿ ಮಾತನಾಡಿ, ನಮ್ಮ ದೇಶದಲ್ಲಿ ತುಳಿತಕ್ಕೆ ಒಳಗಾದ ಮಾದಿಗ ಸಮುದಾಯವನ್ನು ಗೌರವಿಸುವಂತಹ ಕೆಲಸ ಕೇಂದ್ರ ಸರಕಾರದಿಂದ ಆಗುತ್ತಿದೆ. ನಮ್ಮಂಥ ಸಾಧಕರನ್ನ ಗುರುತಿಸಿ ದೇಶದ ಅತ್ಯುನ್ನತ ಗೌರವ ಪ್ರಶಸ್ತಿಗಳನ್ನು ನೀಡುತ್ತಿದ್ದಾರೆ ಎಂದು ತಿಳಿಸಿದರು.

ಮಾದಿಗ ವಿದ್ಯಾರ್ಥಿ ಯುವ ಪರಿಷತ್‌ನ ರಾಜ್ಯಾಧ್ಯಕ್ಷ ರವಿವರ್ಮ ಮಾತನಾಡಿದರು. ಮಾದಿಗ ದಂಡೋರದ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಂ.ಶಂಕ್ರಪ್ಪ, ಪ್ರಧಾನ ಕಾರ್ಯದರ್ಶಿ ಆರ್. ಪ್ರಕಾಶ್,ಮಾಜಿ ಶಾಸಕ ಗಂಗಹನುಮಯ್ಯ, ಬಿಜೆಪಿ ಎಸ್ಸಿ ಘಟಕ ಜಿಲ್ಲಾಧ್ಯಕ್ಷರಾದ ಅಂಜಿನಪ್ಪ, ಯುವ ಮುಖಂಡರಾದ ಪ್ರಕಾಶ್, ನವೀನ್ ಕುಮಾರ್, ಕಿರಣ್ ಕುಮಾರ್ ಉಪಸ್ಥಿತರಿದ್ದರು.

ಕರ್ನಾಟಕ ಮಾದಿಗ ದಂಡೋರ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಗೋವಿಂದ ಎಂ ಕಾರಜೋಳ ಅವರನ್ನು ಸನ್ಮಾನಿಸಲಾಯಿತು.

ಸೊಂಡೆಕೊಪ್ಪ ಗ್ರಾಪಂ ಗ್ರಾಮ ಸಭೆ

ಬೆಂಗಳೂರು ಉತ್ತರ: ಗ್ರಾಮ ಪಂಚಾಯಿತಿಯ ಕ್ರಿಯಾ ಯೋಜನೆಗಳ ಸಂಕ್ಷಿಪ್ತ ವರದಿ ಮಂಡನೆಯೊಂದಿಗೆ ದಾಸನಪುರ ಹೋಬಳಿ ಸೊಂಡೆಕೊಪ್ಪ ಗ್ರಾಪಂ ಗ್ರಾಮ ಸಭೆ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆಯಿತು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಮುನಿ ಲಕ್ಷ್ಮಮ್ಮ ಕುಮಾರ್ ಜ್ಯೋತಿ ಬೆಳಗಿಸಿ ಸಭೆಗೆ ಚಾನೆ ನೀಡಿದರು. ಇದರೊಂದಿಗೆ ಪಂಚಾಯತಿಯ ಕ್ರಿಯಾ ಯೋಜನೆ ವರದಿಯನ್ನು ಪಂಚಾಯತಿ ಕಾರ್ಯದರ್ಶಿ ದೇವರಾಜ್ ಕುಮಾರ್ ಮಂಡನೆ ಮಾಡಿದರು. ವಿವಿಧ ಇಲಾಖೆಯ ಸವಲತ್ತುಗಳ ಯೋಜನೆಗಳ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸುವ ಬಗ್ಗೆ ಚರ್ಚೆ ನಡೆಯಿತು.ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಶೀಲಾ.ಕೆ, ಗ್ರಾಪಂ ಸದಸ್ಯರಾದ ಎಸ್.ಎನ್.ಜಗದೀಶ್, ಲತಾ, ಮಂಗಳ, ಸುಜಾತಾ, ನಾಗರಾಜ್, ಯೋಗರಾಜ್, ಲಕ್ಷ್ಮಿ, ಜಗದೀಶ್, ಪುಟ್ಟಯ್ಯ, ಚೈತ್ರ, ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪಿ ಆರ್ ಸುಮತಿ ಇದ್ದರು.

ವೇತನ ಹೆಚ್ಚಳಕ್ಕಾಗಿ ಬಿಸಿಯೂಟ ನೌಕರರ ಧರಣಿ

ಬಾಗೇಪಲ್ಲಿ: ಮುಖ್ಯಮಂತ್ರಿ ಮಾರ್ಚ್ 7 ರಂದು ಮಂಡಿಸುವ ಬಜೆಟ್‌ನಲ್ಲಿ ಬಿಸಿಯೂಟ ನೌಕರರ ವೇತನ ಹೆಚ್ಚಳ ಮಾಡುವಂತೆ ಒತ್ತಾಯಿಸಿ ಇದೇ ಮಾ.4 ಮತ್ತು 5ರಂದು ರಾಜ್ಯಾದ್ಯಂತ ಅಹೋರಾತ್ರಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷ ಮುಸ್ತಫಾ ತಿಳಿಸಿದರು. ತಾಪಂ ಸಭಾಂಗಣದಲ್ಲಿ ಇಒ ರಮೇಶ್ ಅವರಿಗೆ ಅಹೋರಾತ್ರಿ ಧರಣಿ ನಡೆಸಿ ಮನವಿ ಪತ್ರ ಸಲ್ಲಿಸಿ ತದನಂತರ ಮಾತನಾಡಿದರು. ಬಿಸಿಯೂಟ ನೌಕರರು ಹಲವು ವರ್ಷಗಳಿಂದ ವೇತನ ಹೆಚ್ಚಳಕ್ಕಾಗಿ ಒತ್ತಾಯಿಸುತಿದ್ದರೂ ಈವರೆಗೆ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ಹೀಗಾಗಿ ಮಾ.4 ಮತ್ತು 5 ರಂದು ಬಿಸಿಯೂಟ ನೌಕರರ ರಾಜ್ಯ ಮಟ್ಟದ ಅಹೋರಾತ್ರಿ ಹೋರಾಟಕ್ಕೆ ನಿಶ್ಚಯಿಸಲಾಗಿದೆ ಎಂದು ಹೇಳಿದರು. ಬಿಸಿಯೂಟ ನೌಕರರು ತಮ್ಮ ಕೆಲಸ ಸ್ಥಗಿತಗೊಳಿಸಿ ಬೆಂಗಳೂರಿನಲ್ಲಿ ಮಾ.4 ಮತ್ತು 5ರಂದು ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದು ಎಲ್ಲರೂ ಸಹಕಾರ ನೀಡಬೇಕು ಎಂದು ಹೇಳಿದರು.ಬಿಸಿಯೂಟ ನೌಕರರಾದ ಶಾಂತಮ್ಮ, ಅಮರಾವತಿ, ರತ್ನಮ್ಮ, ನಾಗಮಣಿ,ಭಾರತಮ್ಮ,ಸುಬ್ಬಮ್ಮ, ನಾಗರತ್ನಮ್ಮ ರಾಮಾಂಜನಮ್ಮ ಹಾಜರಿದ್ದರು.

ಶ್ರೀ ಜಡೆ ಮುನೇಶ್ವರನ ಅಗ್ನಿಕುಂಡ ಉತ್ಸವ

ಕುಣಿಗಲ್: ಮಹಾಶಿವರಾತ್ರಿ, ಜಾತ್ರೆ ನಿಮಿತ್ತ ಅವರಗೆರೆ ಶ್ರೀಜಡೆ ಮುನೇಶ್ವರ ಕ್ಷೇತ್ರದಲ್ಲಿ ಅಗ್ನಿಕುಂಡ, ದೇವರ ಉತ್ಸವಗಳು ವೈಭವವಾಗಿ ಜರಗಿದವು. ಯಡಿಯೂರು ಹೋಬಳಿ ಅವರಗೆರೆ ಗ್ರಾಮದ ಜಡೇಮುನೇಶ್ವರ ಸ್ವಾಮಿ, ಶ್ರೀಶನೈಶ್ಚರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಧರ್ಮಾಧಿಕಾರಿ ಶ್ರೀಶಂಕರಪ್ಪ ಸ್ವಾಮೀಜಿ ನೇತೃತ್ವದಲ್ಲಿ ವೈಭವವಾಗಿ ಭಕ್ತರ ಸಮ್ಮುಖದಲ್ಲಿ ಗಣಪತಿ ಹೋಮ, ,ಪ್ರಧಾನ ನವಗ್ರಹ ಹೋಮ ಹಾಗೂ ಪೂರ್ಣಾವತಿ,ಮಹಾ ಮಂಗಳಾರತಿ ಧೂಪ ಸೇವೆ,ಹರಕೆಗಳ ಸೇವೆಗಳು ನೆರವೇರಿದವು.ಮಾ.2 ರಂದು ಮಹಾಮಂಗಳಾರತಿ ಗೋಪೂಜೆ ಬಲಿ ಅನ್ನ ಸೇವೆ ನೆರವೇರಿದವು. ನಂತರ ಅನ್ನ ಸಂತರ್ಪಣೆ ಮುನಿರಾಜು ದಣಿಸಂದ್ರ ನಡೆಸಿಕೊಟ್ಟರು. ನಂತರ ಶ್ರೀಶಂಕರಪ್ಪ ಸ್ವಾಮೀಜಿ ಮಾತನಾಡಿ, ಹಿಂದಿನಿಂದ ಕ್ಷೇತ್ರದಲ್ಲಿ ಮಹಾಶಿವರಾತ್ರಿ ಹಬ್ಬ ಕಳೆದ ಒಂದು ವಾರದ ನಂತರ ಅಗ್ನಿಕುಂಡ ದೇವರ ಉತ್ಸವಗಳು ವಿವಿಧ ಧಾರ್ಮಿಕ ವಿಧಿ ವಿಧಾನಗಳು ಜರುಗುತ್ತಿದ್ದು ಯಾವುದೇ ಜಾತಿ ಧರ್ಮ ಭೇದ ಭಾವವಿಲ್ಲದೆ ಶಿವನ ಆರಾಧನೆ ನಡೆಯುತ್ತಿದೆ ಎಂದರು. ಗುಬ್ಬಿ ಎಪಿಎಂಸಿ ಮಾಜಿ ಅಧ್ಯಕ್ಷ ಜೆ.ಟಿ.ತಿಮ್ಮರಾಜು, ಶಾಸಕರಾದ ಡಾ.ಎಚ್ ಡಿ ರಂಗನಾಥ್, ಮಾಜಿ ಸಚಿವರಾದ ಡಿ ನಾಗರಾಜಯ್ಯ, ಮಾಜಿ ಸಂಸದ ಎಸ್.ಪಿ.ಮುದ್ದ ಹನುಮೇಗೌಡ, ಮಾಜಿ ಶಾಸಕ ಬಿ.ಬಿ.ರಾಮಸ್ವಾಮಿಗೌಡ, ಮಸಾಲೆ ಜಯರಾಮ್, ಹಾಲು ಒಕ್ಕೂಟದ ನಿರ್ದೇಶಕ ಡಿ ಕೃಷ್ಣಕುಮಾರ್, ಡಾ.ಜಯ ರಾಮಯ್ಯ ಮತ್ತಿತರರು ಇದ್ದರು.

ಯುಜಿಡಿ ಸಂಪರ್ಕವೇ ಇಲ್ಲದ ಕಚೇರಿಗಳು!

ಸೋಮನಾಥ ಸಂಜೀವ,

ತಿಪಟೂರು: ತುಮಕೂರು ಜಿಲ್ಲಾ ಕೇಮದ್ರದ ಸಿಟಿಗೆ ಪರ್ಯಾಯವಾಗಿ ಬೆಳೆಯುತ್ತಿರುವ ಕಲ್ಪತರು ನಾಡು ತಿಪಟೂರಿನ ಬಹುತೇಕ ಸರಕಾರಿ ಕಚೇರಿಗಳಿಗೆ ಯುಜಿಡಿ ಸಂಪರ್ಕವೇ ಇಲ್ಲ. ಹೀಗಾಗಿ ಪದೇ ಪದೇ ತುಂಬುತ್ತಿರುವ ಪಿಟ್ಟು ಗುಂಡಿ ನೋಡಿ ಅಧಿಕಾರಿಗಳು ರೋಸಿ ಹೋಗಿದ್ದಾರೆ...!

ನಗರದ ಹೃದಯ ಭಾಗದಲ್ಲಿರುವ ಸರಕಾರಿ ಕಚೇರಿಗಳಲ್ಲಿ ಕೆಲಸ ಮಾಡುವ ನೌಕರರಿಗೂ ಮತ್ತು ಕೆಲಸ ನಿಮಿತ್ತ ಆಗಮಿಸುವ ಸಾರ್ವಜನಿಕರು ಈ ಯುಜಿಡಿ ಸಮಸ್ಯೆಯಿಂದಾಗಿ ಬಯಲು ಶೌಚ ಬಳಸುವ ಸ್ಥಿತಿ ಬಂದಿದೆ. ಪಿಟ್ ಗುಂಡಿಗಳು ಪದೇಪದೇ ತುಂಬುತ್ತಿರುವ ಕಾರಣ ನಗರಸಭೆಗೆ ಮೊರೆ ಹೋದರೂ ಸಮಸ್ಯೆ ಬಗೆಹರಿದಿಲ್ಲ.

ಇನ್ನು ತಾಲೂಕು ಮಟ್ಟದ ಸರಕಾರಿ ಕಚೇರಿಗಳು ಬಹುತೇಕ ಬಿಎಚ್ ರಸ್ತೆಗೆ ಹೊಂದಿಕೊಂಡಿದೆ. ಇದಕ್ಕೆ ಹೊಂದಿಕೊಂಡಂತೆ ರಾಜ್ಯ ಸರಕಾರಿ ನೌಕರರ ಸಮುದಾಯ ಭವನವಿದೆ. ವರ್ಷಪೂರ್ತಿ ಮದುವೆ, ನಾಮಕರಣ ಹೀಗೆ ಹಲವಾರು ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ, ಸಾವಿರಾರು ಜನ ಆಗಮಿಸುವ ಸಮುದಾಯ ಭವನದ ಪಿಟ್ ಗುಂಡಿಯು ಪದೇ ಪದೇ ತುಂಬುತ್ತಿದೆ.ಸಂಬಂಧಪಟ್ಟವರು ಟಾಯ್ಲೆಟ್ ಗುಂಡಿ ಕ್ಲೀನ್ ಮಾಡಿಸಿ ಸುಸ್ತಾಗಿ ಹೋಗಿದ್ದಾರೆ. ನಗರದ ಎಸಿ ಕಚೇರಿ ಪಕ್ಕದಲ್ಲಿ ಸರಕಾರಿ ಆಯುರ್ವೇದ ಆಸ್ಪತ್ರೆ ಇದ್ದು, ಪ್ರತಿ ದಿನಾಲು 50ಕ್ಕೂ ಹೆಚ್ಚು ರೋಗಿಗಳು ಆಗಮಿಸುತ್ತಾರೆ. ಯುಜಿಡಿ ಸಂಪರ್ಕವೂ ಇಲ್ಲ. ನೀರಿನ ಪೈಪ್ ಲೈನ್ ಅಳವಡಿಸಿದ್ದರೂ ನೀರಿಲ್ಲ. ಆಸ್ಪತ್ರೆಗೆ ಸರಿಯಾದ ರಸ್ತೆ ಇಲ್ಲ. ಯುಜಿಡಿಗೆ ಸರಕಾರಿ ಅಧಿಕಾರಿಗಳು ಕೂಡ ಒತ್ತಾಯಿಸುವ ಸ್ಥಿತಿ ಒದಗಿಬಂದಿದೆ..!

ತಿಪಟೂರು ನಗರದ ಎಸಿ ಕಚೇರಿ ಪಕ್ಕದಲ್ಲಿರುವ ಸರಕಾರಿ ಆಯುರ್ವೇದ ಆಸ್ಪತ್ರೆ.

ಶೀಘ್ರದಲ್ಲೇ ಟೆಂಡರ್ ಕರೆದು ಯುಜಿಡಿ ಸಂಪರ್ಕವಿಲ್ಲದ ಕಚೇರಿಗಳಿಗೆ ಸಂಪರ್ಕ ಕಲ್ಪಿಸುವ ವ್ಯವಸ್ಥೆ ನೀಡುತ್ತೇವೆ. ಸರಕಾರಿ ಅಧಿಕಾರಿಗಳು ಸ್ವಲ್ಪ ಸಹಕರಿಸಬೇಕಾಗಿದೆ.

-ವಿಶ್ವೇಶ್ವರಯ್ಯ ಬದರಗಡೆ, ಪೌರಾಯುಕ್ತರು

ನಮ್ಮಲ್ಲಿ ಪಂಚಕರ್ಮ ಚಿಕಿತ್ಸೆ ನಡೆಯುತ್ತಿದೆ. ನೀರು ಬರದ ಕಾರಣ ಟ್ಯಾಂಕರ್ ಮೊರೆ ಹೋಗುತ್ತಿದ್ದೇವೆ. ಯುಜಿಡಿ ಸಮಸ್ಯೆ ಕೂಡ ಹೆಚ್ಚಿದೆ.

-ಡಾ. ತಸ್ಲಿಮ್ ತಾಜ್, ಆಯುರ್ವೇದ ವೈದ್ಯಾಧಿಕಾರಿ.

ರೈತರ ರಾಗಿ ಚೀಲ ಕದ್ದ ಕಳ್ಳರ ಬಂಧನ

ಗುಬ್ಬಿ: ಮನೆಯ ಮುಂದೆ ಇಟ್ಟಿದ್ದ ರಾಗಿ ಚೀಲಗಳನ್ನು ಕಳ್ಳತನ ಮಾಡಿದ್ದ ಇಬ್ಬರು ಕಳ್ಳರನ್ನು ಒಂದು ತಿಂಗಳಲ್ಲಿ ಮಾಲು ಸಮೇತ ಬಂದಿಸಿ ಆರೋಪಿಗಳಿಂದ ಸುಮಾರು 1.55 ಲಕ್ಷ ರೂ ಬೆಲೆಯ 3,713 ಕೆಜಿ ರಾಗಿ ಮತ್ತು ಗೂಡ್ಸ್ ವಾಹನವನ್ನು ಗುಬ್ಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೇರೂರು ಗ್ರಾಮದ ರೈತ ರಾಜೇಶ್ ಎಂಬಾತ ತನ್ನ ಮನೆಯ ಮುಂದೆ ಇಟ್ಟಿದ್ದ 30 ರಾಗಿ ಚೀಲವನ್ನು ಕಳ್ಳರು ಕೈ ಚಳಕ ತೋರಿ ಕದ್ದೊಯ್ದಿದ್ದ ಬಗ್ಗೆ ಗುಬ್ಬಿ ಪೊಲೀಸರು ಕಳೆದ ತಿಂಗಳು ಪ್ರಕರಣ ದಾಖಲಿಸಿದ್ದರು. ಖಚಿತ ಮಾಹಿತಿ ಆಧರಿಸಿ ಪಟ್ಟಣದ ಮಹಾಲಕ್ಷ್ಮಿನಗರ ಬಡಾವಣೆಯ ಪ್ರಶಾಂತ್ ಕುಮಾರ್(30) ಹಾಗೂ ಚೇಳೂರು ಹೋಬಳಿ ಸಾತೇನಹಳ್ಳಿ ಗೇಟ್ ಬಳಿಯ ರಾಜು(25) ಅವರನ್ನು ಬಂಧಿಸಿದ್ದಾರೆ. ತನಿಖೆ ಕೈಗೊಂಡ ಸಮಯದಲ್ಲೇ ಸದರಿ ಆರೋಪಿಗಳಿಂದ ಮತ್ತೊಂದು ಕಳ್ಳತನ ಕಲ್ಲೂರು ಕ್ರಾಸ್ ಬಳಿ ನಡೆದಿದ್ದ ರಾಗಿ ಚೀಲ ಕಳ್ಳತನದ ಪ್ರಕರಣ ಬೆಳಕಿಗೆ ಬಂದಿದೆ. ಮಾಲು ಸಮೇತ ಆರೋಪಿಗಳ ಎಡೆಮುರಿ ಕಟ್ಟುವಲ್ಲಿ ಪೊಲೀಸರು ಯಶಸ್ವಿಯಾದರು.ಉಪವಿಭಾಗದ ಡಿವೈಎಸ್ಪಿ ಬಿ.ಕೆ ಶೇಖರ್ ಮಾರ್ಗದರ್ಶನದಲ್ಲಿ ಗುಬ್ಬಿ ವೃತ್ತ ನಿರೀಕ್ಷಕ ರಾಘವೇಂದ್ರ, ರವರ ನೇತೃತ್ವದ ತಂಡ ಗುಬ್ಬಿ ಪಿಎಸ್ಐ ಸುನಿಲ್ ಕುಮಾರ್ ಮತ್ತು ಸಿಬ್ಬಂದಿ ನವೀನ್ ಕುಮಾರ್, ವಿಜಯ್, ಪ್ರಶಾಂತ್, ರಬ್ಬಾನಿ ಇದ್ದರು.

ಆರಾಮ

ಶ್ರೀಕೃಷ್ಣ ದೇಹತ್ಯಾಗ ಮಾಡಿದ ಸ್ಥಳ

ಮಹಾಭಾರತ ಯುದ್ಧ ಮುಗಿದು 36 ವರ್ಷಗಳ ನಂತರ **ಶ್ರೀಕೃಷ್ಣನು ದೇಹತ್ಯಾಗ** ಮಾಡಿದ ಸ್ಥಳವೇ ಭಾಲ್ಕ ತೀರ್ಥ.

• ವೀಣಾ ಭಟ್

ಇಂತಹ ಒಂದು ದೇವಾಲಯ ಇದೆಯೆಂದು ನಿಮಗೆ ತಿಳಿದಿದೆಯೇ? ಗುಜರಾತಿನ ಸೋಮನಾಥ ಜ್ಯೋತಿರ್ಲಿಂಗದ ಸಮೀಪದಲ್ಲಿರುವ ಈ ಭವ್ಯವಾದ ದೇವಾಲಯವೇ ಭಾಲ್ಕ ತೀರ್ಥ. ಭಾಲ್ಕ ತೀರ್ಥವು ಸೋಮನಾಥ ನಗರದ ಭವ್ಯವಾದ ದೇವಾಲಯಗಳಲ್ಲಿ ಒಂದಾಗಿದೆ. ಭಾಲ್ಕ ತೀರ್ಥದಲ್ಲಿರುವ ದೇವಾಲಯವನ್ನು ಮಹಾಪ್ರಭುಜಿಯ ಬೇತಕ್ ಎಂದು ಕರೆಯಲಾಗುತ್ತದೆ ಮತ್ತು ಶ್ರೀಕೃಷ್ಣನ ಗೌರವಾರ್ಥವಾಗಿ ತುಳಸಿ ಮರವನ್ನು ನೆಡಲಾಗಿದೆ. ಮರಳುಗಲ್ಲಿನಲ್ಲಿ ನಿರ್ಮಿಸಲಾದ ಅದ್ಭುತವಾದ ಕೃಷ್ಣ ದೇವಾಲಯದ ಅಂಗಳದಲ್ಲಿ ಆಲದ ಮರಗಳು ಸುತ್ತುವರಿದಿವೆ. ಸುಂದರ ಕೆತ್ತನೆಯ ಕಂಬಗಳಿವೆ. ಒಂದು ಸುಂದರ ಕೊಳವೂ ಇದೆ. ದೇಗುಲದ ಒಳಗೆ ಅರ್ಧ ಒರಗಿರುವ ಭಂಗಿಯಲ್ಲಿರುವ ಸುಂದರವಾದ ಶ್ರೀಕೃಷ್ಣನ ವಿಗ್ರಹವು ನಮ್ಮನ್ನು ಮಂತ್ರಮುಗ್ಧಗೊಳಿಸುತ್ತದೆ. ಈ ದೇವಾಲಯವು ಶ್ರೀಕೃಷ್ಣನ ಕೊಳಲು ನುಡಿಸುವ ಸುಂದರವಾದ ತ್ರಿಭಂಗಿಯ ವಿಗ್ರಹವನ್ನೂ ಹೊಂದಿದೆ.

ಕುರುಕ್ಷೇತ್ರ ಯುದ್ಧವು ಗಾಂಧಾರಿಯ ನೂರು ಪುತ್ರರ ಮರಣಕ್ಕೆ ಕಾರಣವಾಯಿತು. ದುರ್ಯೋಧನನ ಮರಣದ ಹಿಂದಿನ ರಾತ್ರಿ, ಕೃಷ್ಣನು ಗಾಂಧಾರಿಗೆ ಸಂತಾಪ ಸೂಚಿಸಲು ಭೇಟಿ ನೀಡಿದನು. ಕೃಷ್ಣನು ತಿಳಿದೂ ಯುದ್ಧವನ್ನು ಕೊನೆಗೊಳಿಸಲಿಲ್ಲ ಎಂದು ಗಾಂಧಾರಿ ಭಾವಿಸಿದಳು ಮತ್ತು ಕೋಪ ಮತ್ತು ದುಃಖದ ಭರದಲ್ಲಿ, ಗಾಂಧಾರಿಯು ಯದುವಂಶದ ಎಲ್ಲರೊಂದಿಗೆ ಕೃಷ್ಣನು 36 ವರ್ಷಗಳ ನಂತರ ನಾಶವಾಗಲೆಂದು ಶಪಿಸುತ್ತಾಳೆ. ಕೃಷ್ಣನು ಸ್ವತಃ ಇದನ್ನು ತಿಳಿದಿದ್ದನು ಮತ್ತು ಬಯಸಿದ್ದನು. ಆದ್ದರಿಂದ ಅವನು ತಥಾಸ್ತು ಎಂದು ಗಾಂಧಾರಿಯ ಮಾತನ್ನು ಕೊನೆಗೊಳಿಸಿದನು.

36 ವರ್ಷಗಳ ನಂತರ, ಒಂದು ಉತ್ಸವದಲ್ಲಿ ಯಾದವರ ನಡುವೆ ಕಾಳಗ ನಡೆದು ಒಬ್ಬರನ್ನೊಬ್ಬರು ಕೊಂದರು. ಅವನ ಹಿರಿಯ ಸಹೋದರ ಬಲರಾಮ ಯೋಗದ ಮೂಲಕ ದೇಹವನ್ನು ತೊರೆದನು. ಒಂದು ಮರದ ಕೆಳಗೆ, ಕೃಷ್ಣನು ಒರಗಿಕೊಂಡು ಯೋಗ ಸಮಾಧಿಯನ್ನು ಪ್ರವೇಶಿಸಿದನು. ಆ ಸಮಯದಲ್ಲಿ, ಜರಾ ಎಂಬ ಬೇಟೆಗಾರನು ಆ ಕಾಡಿಗೆ ಭೇಟಿ ನೀಡುತ್ತಾನೆ ಮತ್ತು ಜಾರನು ಭಾಗಶಃ ಗೋಚರಿಸುತ್ತಿದ್ದ ಕೃಷ್ಣನ ಎಡ ಪಾದವನ್ನು ಜಿಂಕೆಯೆಂದು ತಪ್ಪಾಗಿ ಭಾವಿಸಿ ಬಾಣವನ್ನು ಬಿಡುತ್ತಾನೆ. ಜರಾನು ತಕ್ಷಣ ಕೃಷ್ಣನ ಬಳಿಗೆ ಬಂದು ಕ್ಷಮೆಗಾಗಿ ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಶ್ರೀಕೃಷ್ಣನು ಅವನನ್ನು ಸಾಂತ್ವನಗೊಳಿಸುತ್ತಾನೆ. ಇನ್ನೂ ರಕ್ತಸ್ರಾವವಾಗುತ್ತಿದ್ದಂತೆ, ಕೃಷ್ಣನು ಜಾರನಿಗೆ ಹೇಳಿದನು, 'ಓ ಜರಾ, ನೀನು ನಿನ್ನ ಹಿಂದಿನ ಜನ್ಮದಲ್ಲಿ ವಾಲಿಯಾಗಿದ್ದೆ, ತ್ರೇತಾಯುಗದಲ್ಲಿ ರಾಮನಾಗಿ ನಾನೇ ನಿನ್ನನ್ನು ಕೊಂದಿದ್ದೆ. ಇಲ್ಲಿ ನಿನಗೊಂದು ಅವಕಾಶ ಸಿಕ್ಕಿತು ಮತ್ತು ಈ ಪ್ರಪಂಚದ ಎಲ್ಲಾ ಕ್ರಿಯೆಗಳು ನಾನು ಬಯಸಿದಂತೆ ಮಾಡಲಾಗುತ್ತದೆ, ಇದಕ್ಕಾಗಿ ನೀವು ಚಿಂತಿಸಬೇಕಾಗಿಲ್ಲ.'

ನಂತರ ಕೃಷ್ಣನು ತನ್ನ ದೇಹವನ್ನು ತೊರೆದನು. ಈ ಘಟನೆಯ ಸ್ಥಳವು ಸೋಮನಾಥ ದೇವಾಲಯದ ಬಳಿಯಿರುವ ಭಾಲ್ಕಾ ಎಂದು ನಂಬಲಾಗಿದೆ. ಪುರಾಣದ ಮೂಲಗಳ ಪ್ರಕಾರ ಕೃಷ್ಣನ ಕಣ್ಮರೆಯು ದ್ವಾಪರ ಯುಗದ ಅಂತ್ಯವನ್ನು ಮತ್ತು ಕಲಿಯುಗದ ಪ್ರಾರಂಭವನ್ನು ಸೂಚಿಸುತ್ತದೆ. ಕಲಿಯುಗದ ಆರಂಭವನ್ನು ಕೃಷ್ಣ ಪರಮಾತ್ಮನು ತೀರಿಹೋದ ಕ್ಷಣವೆಂದು ಪರಿಗಣಿಸಲಾಗಿದೆ.



ಪ್ರಸ್ತುತ ಈ ದೇವಾಲಯವನ್ನು ಪ್ರಮುಖ ಪ್ರವಾಸಿ ಆಕರ್ಷಣೆಯನ್ನಾಗಿ ಅಭಿವೃದ್ಧಿಪಡಿಸಲು ಸರಕಾರ ಯೋಜಿಸಿದೆ. ಸೋಮನಾಥ್, ವೆರಾವಲ್ ನಗರ, ಭಾಲ್ಕಾ ರಸ್ತೆ ಮತ್ತು ರೈಲು ಮಾರ್ಗದ ಮೂಲಕ ಉತ್ತಮ ಸಂಪರ್ಕ ಹೊಂದಿದೆ. ಹತ್ತಿರದ ರೈಲು ನಿಲ್ದಾಣವೆಂದರೆ ವೆರಾವಲ್ ಮತ್ತು ಹತ್ತಿರದ ವಿಮಾನ ನಿಲ್ದಾಣಗಳು ದಿಯು ಮತ್ತು ರಾಜ್‌ಕೋಟ್.

ಚಿತ್ತವಿಹಾರ

ಪಲಾಯನವಾದ

ಬದುಕಿನ ಹಾದಿಯಲ್ಲಿ ಏರಿಳಿತಗಳು ಸಾಮಾನ್ಯವಾದರೂ ಒಂದಷ್ಟು ಅಡತಡೆಗಳನ್ನು, ಸಂಕಷ್ಟದ ಸಮಯವನ್ನು ಎದುರುಗೊಂಡಾಗ ತೀರ ಭಯಭೀತರಾಗುತ್ತೇವೆ. ಯಾತನೆ, ಹೆಣಗಾಟಗಳು, ನೋವು ದುಃಖಗಳು ನೆರಳಿನಂತೆ ಹಿಂಬಾಲಿಸುತ್ತಲೇ ಇವೆ. ಇವುಗಳಿಂದ ಬಿಡುಗಡೆ ಹೊಂದಬೇಕಾದರೆ ಪಲಾಯನವೊಂದೇ ಉಳಿದಿರುವ ಏಕೈಕ ಮಾರ್ಗವೆಂದು ನಿರ್ಧರಿಸಿಬಿಡುತ್ತೇವೆ. ಆ ಕ್ಷಣಕ್ಕೆ ಪಲಾಯನ ಮಾಡುವುದು ಭದ್ರತೆಯನ್ನು ಒದಗಿಸುವ ಭಾವನೆಯನ್ನು ಬಲವಾಗಿ ಪ್ರತಿಪಾದಿಸುವುದರಿಂದ ಅದು ಅತ್ಯಂತ ಸುರಕ್ಷಿತ ಎಂದು ನಮ್ಮ ಮನಸ್ಸು ಭ್ರಮಿಸುವುದೇ ಇವೆಲ್ಲ ಆವಾಂತರಗಳಿಗೆ ಕಾರಣವಾಗುತ್ತದೆ. ಅನುಭವಿಸುವಿಕೆಯಲ್ಲಿಯೇ ಪರಿವರ್ತನೆಯಿದೆ ಎಂಬುದನ್ನು ನಾವು ಮರೆತುಬಿಡುತ್ತೇವೆ. ಇದರಿಂದ ನಾವು ತೀರ ಜಡಗೊಳ್ಳುತ್ತೇವೆ. ಮಿ. ರಾವ್ ತನ್ನ ಉದ್ಯಮದಲ್ಲಿ ಒಂದೊಮ್ಮೆ ತೀರ ನಷ್ಟವನ್ನು ಅನುಭವಿಸಿದ. ಅವರ ಜೊತೆಯಲ್ಲಿ ಇಂಥದೇ ಉದ್ಯಮದಲ್ಲಿ ಕೆಲಸ ಮಾಡುವವರ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿರಲಿಲ್ಲ. ಅವರೆಲ್ಲರೂ ಇನ್ನು ಇದರಲ್ಲಿ ಮುಂದುವರೆಯುವುದು ಮೂರ್ಖತನವೇ ಸರಿ. ನಾವು ಈ ಉದ್ಯಮದಲ್ಲಿ ಮೊದಲಿನ ಲಯಕ್ಕೆ ಮರಳುವುದು ತೀರ ಅಸಾಧ್ಯವೆಂದು ತಿಳಿದು ಅವರೆಲ್ಲರೂ ಅದರಿಂದ ದೂರ ಸರಿದರು. ರಾವ್ ಅವರಿಗೂ ಕೂಡ ಅದೇ ಸಲಹೆ ನೀಡಿದರು. ಅದೇಕೋ ರಾವ್ ಮತ್ತೆ ಮತ್ತೆ ಯೋಚಿಸಿದರು. ಅವರ ಮನಸ್ಸು ತಮ್ಮ ಉದ್ಯಮದಿಂದ ಹಿಂದೆ ಸರಿಯಲು ಸುತಾರಾಂ ಒಪ್ಪಲಿಲ್ಲ. ಅಜ್ಜಿಯೊಬ್ಬಳು ತನ್ನ ಗುಡಿಸಿಲಿಲ್ಲಿ ಕಳೆದುಕೊಂಡ ಸೂಜಿಯನ್ನು ಸೂಜಿಯನ್ನು ಹುಡುಕಲು ಗುಡಿಸಲಿನಲ್ಲಿಯ ಬೆಳಕು ಸಾಲದು ಎಂದು ಭಾವಿಸಿ ಬೀದಿ ದೀಪದ ಕೆಳಗೆ ಹುಡುಕಿದ ವ್ಯರ್ಥ ಪ್ರಯತ್ನದ ಕಥೆ ಅವರ ಕಣ್ಮುಂದೆ ಸುಳಿದು ಹೋಯಿತು. ಹೊಸದರಲ್ಲಿ ಹುಡುಕುವದಕ್ಕಿಂತ ಕಳೆದು ಹೋದಲ್ಲಿಯೇ ಹುಡುಕುವುದೇ ಸೂಕ್ತ ಎಂದೆನಿಸಿತು. ತಮ್ಮ ನಿರ್ಧಾರಕ್ಕೆ ಬದ್ಧರಾದರು. ಕೆಲವೇ ದಿನಗಳಲ್ಲಿ ತುಂಬ ಯಶಸ್ಸು ಗಳಿಸಿದರು. ಅವರ ನಂಬಿಕೆ ನಿಜವಾಗಿತ್ತು. ಬದುಕಿನಲ್ಲಿ ಬರುವ ಬಿಕ್ಕಟ್ಟುಗಳನ್ನು ನಾವು ಹೇಗೆ ಎದುರುಗೊಳ್ಳುತ್ತೇವೆ ಮತ್ತು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದು ನಮಗೆ ಬಹಳಷ್ಟು ಮುಖ್ಯವಾಗುತ್ತದೆ. ರಾವ್ ಅವರು ಉಳಿದವರಿಗಿಂತ ಭಿನ್ನವಾಗಿ ಯೋಚಿಸಿದ್ದರ ಫಲ ಅವರ ಮರು ಯಶಸ್ಸಿಗೆ ಕಾರಣವಾಗಿತ್ತು. ಭಾವೋದ್ರಕತೆಗೆ ಒಳಗಾಗಿ ಬಿಕ್ಕಟ್ಟುಗಳನ್ನು ಗ್ರಹಿಸಿದರೆ ಖಂಡಿತ ನಾವು ಸರಿಯಾದ ನಿರ್ಧಾರ ತಗೆದುಕೊಳ್ಳವುಲ್ಲಿ ಸೋಲುತ್ತೇವೆ. ಬಿಕ್ಕಟ್ಟುಗಳು ನಿರ್ಮಾಣವಾಗಲು ಕಾರಣಗಳನ್ನು ಮತ್ತು ಅವುಗಳಿಂದ ಹೊರಬರುವ ಪರಿಹಾರಗಳತ್ತ ನಮ್ಮ ಗಮನವನ್ನು ಕೇಂದ್ರೀಕರಿಸಬೇಕೆ ವಿನಃ ಭಯದಿಂದ ವಿಚಲಿತರಾಗಬಾರದು. ಅನಿಶ್ಚಿತತೆಯಿಂದ ಅವುಗಳನ್ನು ಕಾಣಬಾರದು. ಸಮತೋಲವನ್ನು ಕಳೆದುಕೊಳ್ಳದೆ ಸಮಚಿತ್ತವನ್ನು ನಮ್ಮದಾಗಿಸಿಕೊಳ್ಳಬೇಕು. ಪಲಾಯನ ಮಾಡದೇ ಪರಿಣಿತಿ ಯಿಂದ ಪ್ರತಿಕ್ರಿಯಿಸಬೇಕು. ಅಡತಡೆಗಳಲ್ಲಿಯೇ ಅವಕಾಶಗಳನ್ನು ಹುಡುಕಬೇಕು.

• ಮಹಾದೇವ ಬಸರಕೋಡ

ಹನಿಮಳೆ

ಹುಲಿ ಸವಾರಿ!

ಗ್ಯಾರಂಟಿ ಎಂಬುದು
ಒಂದು ಹುಲಿ ಸವಾರಿ
ಕೆಳಗಿಳಿಯಲಾಗದು
ಮುಂದೆ ಹೋಗಲಾಗದು
ಎಲ್ಲರಲ್ಲೀಗ ಅದೇ ದಳ್ಳುರಿ!

• ಹೆಚ್.ಕೆ.ಮಧು, ದೋಹಾ, ಕತಾರ್

ನೀವೂ ಬರೆಯಬಹುದು

ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್
vishwavanimagazine@gmail.com

ಅದಾಲಜ್ ಕಿ ವಾವ್

• ವಿಲಾಸ ನಾ ಹುದ್ದಾರ

ವಾವ್ ಅಂದರೆ ಬಾವಿ. ರುದಾಬಾಯಿ ವಾವ್ ಇರುವದು ಗುಜರಾತಿನ ಗಾಂಧಿನಗರ ಹತ್ತಿರ ಇರುವ ಅದಾಲಜ್‌ನಲ್ಲಿ. ಈ ಬಾವಿಯನ್ನು ವೀರಸಿಂಹನ ರಾಣಿಯಾದ ರುದಾಬಾಯಿ ಕಟ್ಟಿಸಿದಳು. ಐದು ಅಂತಸ್ತಿನ ಈ ಬಾವಿ ಯನ್ನು 1498 ರಲ್ಲಿ ನಿರ್ಮಿಸಲಾಗಿದೆ. ಐದು ಅಂತಸ್ತಿನ ಈ ಬಾವಿಗೆ 82 ಮೆಟ್ಟಿಲುಗಳಿವೆ. ಎಲ್ಲ ಎತ್ತರದ ಕಂಬಗಳ ಮೇಲೂ ಚೆಂದದ ಕೆತ್ತನೆ ರಾರಾಜಿಸುತ್ತದೆ. ಈ ಬಾವಿಯಲ್ಲಿ ನೀರು ಎರಡು ಭಾಗಗಳಲ್ಲಿರುವದು ಕಂಡುಬರುತ್ತದೆ. ನೀವು ಮೆಟ್ಟಲುಗಳನ್ನು ಇಳಿದು ಹೋದಾಗ ಕಾಣುವ ಒಂದು ಭಾಗವಾದರೆ ಅದರ ಹಿಂದೆ ಇರುವ ಭಾಗದಲ್ಲೂ ನೀರು ಇದ್ದು ಅದನ್ನು ಮೇಲಿರುವ ಎರಡು ಗಡಗಡೆಗಳಿಂದ ನೀರೆತ್ತಬಹುದು. ಮೇಲಿನಿಂದಲೂ ನೀರಿರುವ ಹಿಂದಿನ ಭಾಗಕ್ಕೆ ಇಳಿ ಯಲು ಸಣ್ಣ ವರ್ತುಲಾಕಾರದ ಮೆಟ್ಟಿಲುಗಳಿರುವದನ್ನು ನೋಡಿದೆ. ಈ ಬಾವಿಯ ಕಟ್ಟಡವು ವಿಸ್ತಾರವಾದ ಪ್ರದೇಶ ದಲ್ಲಿದ್ದು ಇದರ ಆವರಣವು ಹಸಿರಿನಿಂದ ಕೂಡಿದ ಗಿಡಗಳಿಂದ, ಕೂಡಲು ಹುಲ್ಲಿನ ಹಾಸಿಗೆಗಳಿಂದ ಕಣ್ಣಿಗೆ ತಂಪನ್ನೆರೆಯು ತ್ತದೆ. ಈ ಕಟ್ಟಡದ ಉದ್ದ ಸುಮಾರು 200 ಅಡಿ ಇದ್ದು ಅದರ ವಿಸ್ತೀರ್ಣವನ್ನು ನೀವು ಅಂದಾಜಿಸಬಹುದು. ಈ ಬಾವಿಯ ನೀರು ಸದಾಕಾಲ ಇರುವದಂತೆ. ನೀವು ಅಹಮದಾಬಾದಕ್ಕೆ ಪ್ರವಾಸಕ್ಕೆಂದು ಹೋದರೆ ಈ ಬಾವಿಯನ್ನು ನೋಡಲೇ ಬೇಕು.

ಆಲೆಮನೆ ಹಬ್ಬ ಗೋವಿನ ಮಹತ್ವ

• ಮೋಹನ ಭಟ್ಟ, ಅಗಸೂರು

ಶಿರಸಿ ಸನಿಹದ ಹೊಸಾಡಿನ ಅಮೃತಧಾರಾ ಗೋಶಾಲೆಯ ಆವರಣದಲ್ಲಿ ನಾಲ್ಕು ದಿನಗಳ ಕಾಮದೇನು ದರ್ಶನ, ಆಲೆಮನೆ ಹಬ್ಬ, ಹಾಗೂ ಪಂಚಗವ್ಯ ಪ್ರಾತ್ಯಕ್ಷಿಕೆಗೆ ಅಭೂತಪೂರ್ವ ಸಾರ್ವಜನಿಕ ಸ್ಪಂದನೆ ದೊರೆತಿದೆ. ಒಂದೋ ಎರಡೋ ದಿನಕ್ಕೆ ಸಾಮಾನ್ಯವಾಗಿ ಮುಗಿದು ಬಿಡುವ ಆಲೆಮನೆ ಹಬ್ಬ ಇನ್ನೆರಡು ದಿನ ಮುಂದುವರೆದು ಅದರೊಂದಿಗೆ ಕಾಮಧೇನುವಿನ ಮಹತ್ವವನ್ನು ಸಾರುವ ಅಭಿಷೇಕ, ಯಾಗ, ಗೋವಿಗೆ ಸಂಭಂದಿಸಿದ ವಿವಿಧ ಕಾರ್ಯಕ್ರಮಗಳಿಗೆ ಜನರ ಸಹಕಾರ, ಭಾಗವಹಿಸುವಿಕೆಯ ರೀತಿ ನಿಜಕ್ಕೂ ಕಾಲ ಬದಲಾಗುವ ದಿಕ್ಸೂಚಿ ಎಂದೇ ಹೇಳ ಬಹುದು. ಇದಲ್ಲದೆ ಗೋವಿನ ಮಹತ್ವಸಾರುವ ವಿವಿಧ ಕಾರ್ಯಕ್ರಮ ಗಳು ನೆರೆದವರಿಗೆ ಇದರ ಮಹತ್ವವನ್ನು ತಿಳಿಸುವ, ಚರ್ಚಿಸುವ ವೇದಿಕೆಯಾಗಿತ್ತು. ಖ್ಯಾತ ವೈದ್ಯ ಡಾ.ಡಿ.ಪಿ.ರಮೇಶ ಅವರು ಪಂಚಗವ್ಯದ ಮಹತ್ವ ಕುರಿತು ಉಪನ್ಯಾಸ, ಪ್ರಾತ್ಯಕ್ಷಿಕೆ ನೀಡಿ, ಕ್ಯಾನ್ಸರ್ ಸೇರಿ ವಿವಿಧ ರೋಗಗಳಿಗೆ ಹೇಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ವಿವರಿಸಿದರು. ಆಲೆಮನೆ ಎಂದರೆ ಹಬ್ಬ. ಸ್ನೇಹಿತರ, ಆತ್ಮೀಯರ ಕೂಟ. ಇದಕ್ಕಾಗಿ ದೂರದ ಊರುಗಳಿಂದ ಆಗಮಿಸಿದ ಆಸಕ್ತರ ಸಂಖ್ಯೆ ರಜಾದಿನ ಐದು ಸಾವಿರಕ್ಕೂ ಮೀರಿತ್ತು ಎಂದು ಅಂದಾಜಿಸಲಾಗಿದೆ. ಇದು ಕೇವಲ ಕಬ್ಬಿನ ಹಾಲನ್ನು ಕುಡಿದು ಸಂತ್ರಪ್ತಿಸಿದ ದಿನಗಳಾಗಿರಲಿಲ್ಲ. ಬಿಸಿ ಬೆಲ್ಲ, ಬೆಲ್ಲದಲ್ಲಿ ಅದ್ದಿದ ಬಾಳೆದಿಂಡು, ಪಪ್ಪಾಯಿ ಇವುಗಳಿಗೆ ಬೇಡಿಕೆ ಪೂರೈಸಲಾಗಿಲ್ಲ. ಮಾತೆಯರು, ಇವುಗಳನ್ನು ಪ್ಯಾಕಿಂಗ್‌ನ್ನು ಬೆಳಗಿನಂದಲೇ ಪ್ರಾರಂಭಿಸಿದ್ದರೂ, ಕಡಿಮೆ ಅವಧಿಯಲ್ಲಿ ಖಾಲಿಯಾಗಿತ್ತು. ಕಬ್ಬಿನ ಹಾಲಿನಿಂದ ತಯಾರಿಸುವ ತೊಡೆದೇವಿಗೆ ಎಲ್ಲಿಲ್ಲದ ಬೇಡಿಕೆ. ಪ್ರಾತ್ಯಕ್ಷಿಕೆ ನೋಡಲು ಜನ ಸಮೂಹ. ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಮಕ್ಕಳ ನೃತ್ಯ, ನಾಟಕ, ಯಕ್ಷಗಾನಗಳು ನೆರೆದವರ ಮಬಸೂರೆಗೊಂಡವು. ಬೆಲ್ಲ, ಕಬ್ಬು, ಕಬ್ಬಿನ ಹಾಲು ಮತ್ತು ನಮ್ಮ ನಾಡಿನ ಸಂಸ್ಕೃತಿ, ಗೋವಿನ ಮಹತ್ವ, ಗೋ ಉತ್ಪನ್ನಗಳ ಪ್ರಾತ್ಯಕ್ಷಿಕೆ ಇವುಗಳ ಸುತ್ತಲೂ ಕಟ್ಟಿಕೊಟ್ಟ ಈ ಆಲೆಮನೆ ಹಬ್ಬ ನಿಜಕ್ಕೂ ಅಪೂರ್ವ ಅನುಭವ ನೀಡಿತು.

ಸುಳ್ಳು ಸತ್ಯವನ್ನು ಜಯಿಸುತ್ತದೆ

ನಾವು ತಿಳಿದಂತೆ ಜಗತ್ತು ಸತ್ಯ ಮತ್ತು ಸುಳ್ಳು ಎರಡನ್ನು ಒಳಗೊಂಡಿರುತ್ತದೆ. ನಮ್ಮ ಇಂದ್ರಿಯಗಳು ಹಾಗೂ ಮನಸ್ಸಿನ ಪರಿಮಿತಿಯಿಂದಾಗಿ ಅಥವಾ ನಮ್ಮ ಸುತ್ತಲಿನ ಸನ್ನಿವೇಶ ಗಳಿಂದಾಗಿ ಸುಳ್ಳು ಸತ್ಯದ ಅಪಾರ್ಥವೆಂದು ಸೂಕ್ತವಾಗಿ ಪರಿಶೀ ಲಿಸಿದಾಗ ತಿಳಿಯುತ್ತದೆ. ಚಿರಪರಿಚಿತವಾಗಿರುವ ಹಗ್ಗ ಮತ್ತು ಹಾವಿನ ಉದಾಹರಣೆ ಯಲ್ಲಿ ಹಗ್ಗವು ಸತ್ಯ, ಹಾವು ಸುಳ್ಳು. ಹಗ್ಗವಿಲ್ಲದೆ ಹಾವು ಇರುವುದಿಲ್ಲ.

ನಿತ್ಯಜೀವನದಲ್ಲಿ **ಭಗವದ್ಗೀತೆ**

• ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಆದರೆ ನಾವು ಇದನ್ನು ತಿಳಿಯುವವರೆಗೆ ನಮ್ಮೆಲ್ಲ ವಿಚಾರ ಹಾಗೂ ಕೃತಿಗಳು ಸುಳ್ಳಿನ ಮೇಲೆಯೇ ನಿಂತಿರುತ್ತವೆ. ಕೆಲವೊಮ್ಮೆ ಇದು ಸಮಾಜದಲ್ಲಿ ತಲೆಮಾರು ಗಳಿಂದ ಮುಂದುವರೆದಿರುತ್ತದೆ.

ಅದರಂತೆಯೇ ನಾವು ಯಾವುದೇ ತಂತ್ರ ಜ್ಞಾನವನ್ನು ರೂಪಕ ಸತ್ಯವೆಂದು ತಿಳಿದರೆ ಅದರ ದುಷ್ಟ ಉಪಯೋಗ ಸುಳ್ಳಾಗಿರುತ್ತದೆ. ಧ್ವನಿವರ್ಧಕವನ್ನು ನಾವು ಯಾವುದೇ ಒಳ್ಳೆಲು ವಿಚಾರದ ಪ್ರಚಾರಕ್ಕಾಗಿ ಬಳಸಬಹುದು ಹಾಗೂ ಮುಗ್ಧರನ್ನು ಹಿಂಸೆಗೆ ಪ್ರಚೋದಿಸಲು ಉಪಯೋಗಿಸಬಹುದು. ಅದರಂತೆ ಇಂದಿನ ಸಾಮಾಜಿಕ ಜಾಲತಾಣಗಳು ಸತ್ಯವಾದರೆ ಅದರ ದುರುಪಯೋಗ ಅನಿಷ್ಟವಾಗುತ್ತದೆ.

ಕೃಷ್ಣನ ಈ ಹೇಳಿಕೆಯನ್ನು ತಿಳಿದುಕೊಳ್ಳಲು ಸತ್ಯ ಮತ್ತು ಸುಳ್ಳುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಅವಶ್ಯ ವಾಗಿದೆ. ಗುಣ ಹಾಗೂ ಕರ್ಮಗಳ ಆಧಾರದ ಮೇಲೆ ನಾನು ನಾಲ್ಕು ವರ್ಣಗಳನ್ನು ಸೃಷ್ಟಿಸಿದೆ. ಆದರೆ ನಾನು ಕರ್ತೃವಲ್ಲ ಹಾಗೂ ನಾನು ರೂಪಾಂತರ ಹೊಂದುವದಿಲ್ಲ.(4.13) ಅಂಥ ವರ್ಣಗಳು ಗುಣದಿಂದ ನಿರ್ಧರಿಸಲ್ಪಟ್ಟಿದೆಯೇ ಹೊರತು ಜನ್ಮದಿಂದ ಅಲ್ಲ ಎಂದು ಕೃಷ್ಣ ಸ್ಪಷ್ಟಪಡಿಸುತ್ತಾನೆ. ಅವು ಅಭೇಧ್ಯವಾದವುಗಳೂ ಅಲ್ಲ. ಅಧಿಕಾರ ಶ್ರೇಣಿಯೂಅಲ್ಲ. ಮೂರು ಗುಣಗಳು ಬೇರೆ ಬೇರೆ ಪ್ರಮಾಣ ದಲ್ಲಿ ನಮ್ಮೆಲ್ಲರಲ್ಲಿಯೂ ಇವೆ. ಆದರೆ ಕರ್ಮಕ್ಕೆ ಸಂಬಂಧಪಟ್ಟಂತೆ ಅವುಗಳನ್ನು ಸ್ಥೂಲವಾಗಿ ನಾಲ್ಕು ವಿಭಾಗಗಳನ್ನಾಗಿ ಮಾಡಲಾಗಿದೆ. ನಮ್ಮ ಸುತ್ತಲೂ ನೋಡಿದಾಗ ಕೆಲವರು ಜ್ಞಾನಿಗಳಾಗಿದ್ದು ಸಂಶೋಧನಾ ಪ್ರವೃತ್ತಿಯವರಾಗಿರುತ್ತಾರೆ. ಕೆಲವರು ರಾಜಕಾರಣ ಮತ್ತು ಆಡಳಿತದವರಾಗಿರುತ್ತಾರೆ. ಇನ್ನೂ ಕೆಲವರು ಕೃಷಿ ಹಾಗೂ ಉದ್ಯೋಗದವರಾಗಿರು ತ್ತಾರೆ. ಮತ್ತೆ ಕೆಲವರು ನೌಕರಿ ಹಾಗೂ ಇತರ ಸೇವೆಗಳಲ್ಲಿ ಇರುತ್ತಾರೆ. ಈ ವಿಂಗಡಣೆ ಭೌತಿಕ ಜಗತ್ತಿನಲ್ಲಿ ಮಳೆ ಬಿಲ್ಲಿನಲ್ಲಿಯ ಬಣ್ಣಗಳಂತೆ ಐನ್‌ಸ್ಟೀನ್, ಅಲೆಕ್ಸಾಂಡರ್, ಪಿಕಾಸೊ ಹಾಗೂ ಮದರ್ ತೆರೇಸಾರಂತವರಿಗೆ ಅವಕಾಶ ಮಾಡಿಕೊಡುತ್ತದೆ. ಗುಣ, ಕರ್ಮಗಳಿಗೆ ಅನುಗುಣವಾಗಿ ಮಾನವರು 4 ರೀತಿಯವರಾಗಿರುತ್ತಾರೆ ಎಂಬುದು ಸತ್ಯವಾದರೆ, ಈ ನಾಲ್ಕು ವಿಂಗಡನೆಗಳು ಪದಶ್ರೇಣಿಯವುಗಳಾಗಿದ್ದು ಜನ್ಮದ ಆಧಾರದ ಮೇಲೆ ನಿಂತಿವೆ ಎನ್ನುವುದು ಸುಳ್ಳು.

5 ಪೆನ್ಸಿಲ್ ಕಲಿಸಿದ ಪಾಠಗಳು!

ಪೆನ್ಸಿಲ್ ಬಳಕೆಯ ಕುರಿತಾದ ಪರಿಕಲ್ಪನೆಯನ್ನು ನಮ್ಮ ಬದುಕಿನಲ್ಲೂ ಬಳಸಿಕೊಳ್ಳಬಹುದು!

• ಡಾ. ಎನ್. ಜಯರಾಮ ಶೆಟ್ಟಿ

ದತ್ತಾತ್ರೇಯ ಮುನಿಗಳು ಇಪ್ಪತ್ತಾ ನ್ನಲ್ಕು ಪ್ರಕೃತಿಯ ರೂಪಗಳನ್ನು ನಾವು ಗುರುಗಳಾಗಿ ಗುರುತಿಸಿ ಕಲಿಯುವಂತೆ ಪ್ರೇರೇಪಿಸಿದರು. ಆದರೆ ಅದರ ಬಗ್ಗೆ ಸ್ವಲ್ಪ ಸಂಶಯ ತಾಳಿದ ಒಬ್ಬರು ವಿದ್ವಾಂಸರು ಪುಸ್ತಕವೊಂದಕ್ಕೆ ತಡಕಾಡುವಾಗ ಪೆನ್ಸಿಲ್‌ನ ತುದಿಯಿಂದ ಚುಚ್ಚಿಸಿಕೊಂಡರು. ಸಿಟ್ಟುಗೊಂಡು ಹೇಳಿದರು, 'ಅಲ್ಲಪ್ಪ, ನಿನ್ನನ್ನು ಕೂಡಾ ನಾನು ಗುರುವೆಂದು ಒಪ್ಪಬೇಕೇನು? ಸದ್ಯ ಆ ಮುನಿಗಳು ನಿನ್ನನ್ನು ಗುರುವೆಂದು ಪರಿಗಣಿಸಲಿಲ್ಲವಲ್ಲ?' ಆ ದಿನ ರಾತ್ರಿ ವಿದ್ವಾಂಸರಿಗೆ ಪೆನ್ಸಿಲ್ ಒಂದು ಉದ್ದವಾಗಿ, ದೊಡ್ಡದಾಗಿ ಕನಸಿನಲ್ಲಿ ಕಾಣಿಸಿಕೊಂಡಿತು. ನೇರವಾಗಿ ಮಾತನಾಡಲಿಕ್ಕೆ ಶುರು ಹಚ್ಚಿಕೊಂಡಿತು. 'ನನ್ನ ಮೇಲೆ ನಿಮಗೆ ತಾತ್ಸಾರವೇಕೊ ನಾಕಾಣೆ. ನನ್ನ ಐದು ಗುಣಗಳನ್ನು ನಿಮಗಿಂದು ತಿಳಿಸಲೇ ಬೇಕಾಗಿದೆ. ಸಾಧ್ಯವಾದರೆ ಕೇಳಿಸಿಕೊಳ್ಳಿ.'

ಪರಾಧೀನತೆ ಪರವಾಗಿಲ್ಲ

ನಾನು ಕೆಲಸಕ್ಕೆ ಬರುವುದು ನನ್ನನ್ನು ಬರೆಯುವವರು ಕೈಯಲ್ಲಿ ಹಿಡಿದಾಗ ಮಾತ್ರ. ಇನ್ನೊಬ್ಬರ ಕೈಯೊಳಗಿರಲು ನನಗೆ ಯಾವ ಅಡ್ಡಿ, ಆತಂಕವಿಲ್ಲ. ಅವರ ಹಿಡಿತದಲ್ಲಿಯೇ ನಾನು ಬೆಳಕಿಗೆ ಬರುವುದು. ಅದಕ್ಕಾಗಿ ನಾನು ಎಂದೂ ಕೃತಜ್ಞನಾಗಿರುತ್ತೇನೆ. ಎಲ್ಲವೂ ನನ್ನಿಂದ, ಎಲ್ಲವೂ ನನಗಾಗಿ ಎನ್ನುವ ಧೋರಣೆ ವೈಯಕ್ತಿಕ ಪ್ರಗತಿಗೆ ಸಹಾಯಕಾರಿಯಾದುದಲ್ಲ. ಇನ್ನೊಬ್ಬರ ಕೈ ಯೊಳಗಿರುವುದೆಂದರೆ ಅವರ ಅಂಕಿತ ಅಥವಾ ಅಧೀನದಲ್ಲಿರುವುದೆಂದು ನಾವು ಅರ್ಥೈಸಬಾರದು. ಅದಕ್ಕೆ ಸೈ ಹೇಳಿ ಕೆಲಸಕ್ಕೆ ಬರುವುದು ಜಾಣತನ. ಒಂದು ಯಂತ್ರ ಅಥವಾ ತಾಂತ್ರಿಕ ವ್ಯವಸ್ಥೆಯನ್ನು ನೋಡಿ, ಸಾವಿರಾರು ಕನೆಕ್ಷನ್‌ಗಳು ತನ್ನತನ ಬದಿಗಿರಿಸಿ ಒಂದು ವಸ್ತು ಅಥವಾ ಸೇವೆಯ ತಯಾರಿಯತ್ತ ಕೆಲಸಮಾಡುತ್ತವಲ್ಲ? ಯಾರೂ ಪೂರ್ಣ ಪ್ರಮಾಣರಲ್ಲ, ಸರ್ವತಂತ್ರರಲ್ಲ. ಸನ್ಮಾನ್ಯ ಡಿವಿಜಿಯವರು ಎಷ್ಟು ಸೊಗಸಾಗಿ ಇದನ್ನೇ ಹೇಳಿದ್ದು 'ಏಕದಿಂದಲನೇಕ, ಮತ್ತನೇಕದಿಂ ಏಕ, ಈ ಕ್ರಮವೆ ವಿಶ್ವದಂಗಾಂಗ ಸಂಬಂಧ, ಲೋಕದಲಿ ಜಾತಿಯಲಿ, ವ್ಯಕ್ತಿಯಲಿ ಸಂಸ್ಥೆಯಲಿ, ಸಾಕಲ್ಯದರಿವಿರಲಿ'

ಅಣಿಗೊಳ್ಳುವ ನೋವು ನೋವಲ್ಲ

ನಾನು ಪೆನ್ಸಿಲ್, ನನ್ನ ತುದಿ ಮೊನಚಾಗಿದ್ದರೆ ಮಾತ್ರ ನಾನು ಬಳಕೆಯಲ್ಲಿರುವುದು. ಮಧ್ಯೆ ಮಧ್ಯೆ ನನ್ನನ್ನು ಮೊನಚುಗೊಳಿಸುತ್ತಾರೆ. ಅದು ನನ್ನ ಅಸ್ತಿತ್ವವನ್ನು ಉಳಿಸಲಿಕ್ಕಾಗಿ ಎಂದು ನೋವು ಆದರೂ ನಾನು ಕೃತಜ್ಞತಾ ಪೂರ್ವಕವಾಗಿ ಸಹಿಸುವೆ. ನಮ್ಮ ಯಾವುದೇ ಶಕ್ತಿ, ಸ್ಥಿತಿ, ಕ್ಷಮತೆ ನವೀಕರಣಗೊಳ್ಳಲೇ ಬೇಕು. ಆಟ, ಓಟದಲ್ಲಿಯ ಉತ್ಕೃಷ್ಟತೆ ಒಂದು ದಿನದ ನಿರ್ವಹಣೆಯಿಂದ ಅಳೆಯಲ್ಪಡುವುದಿಲ್ಲ. ಮೈದಾನ ಕ್ಕಿಳಿಯದ, ಮೈ ಬಗ್ಗಿಸದ, ದಿನವಹಿ ಬೆವರು ಸುರಿಸದ ಚ್ಯಾಂಪಿಯನ್ ತನ್ನತನ ಕಾಪಾಡಿಕೊಳ್ಳಬಲ್ಲನೆ?

ಅಳಿಸುವುದು ಉಳಿಸಿಕೊಂಡಂತೆ

ನನ್ನನ್ನು ನೀವು ಬರೆಯಲು ಬಳಸಬಹುದು, ಬರೆದದ್ದನ್ನು ಅಳಿಸಲೂ ಬಹುದು. ನಾನು ಬರೆದದ್ದೇ ಕೊನೆಯದ್ದು ಎನ್ನುವ ಜಿದ್ದು ಖಂಡಿತ ನನ್ನದಲ್ಲ. ಒಂದು ಕಾಲದಲ್ಲಿ ನನ್ನ ತಲೆಯ ಭಾಗದಲ್ಲಿ ತುಣುಕು ರಬ್ಬರ್ ಅನ್ನು ಇರಿಸುತ್ತಿದ್ದರು. ಅಂದಿನ ಪೆನ್ಸಿಲ್ ತಯಾರಕರೇನು ಹೆಡ್ಡರಲ್ಲ. ಬರೆಯುವ ಆ ಪ್ರಕ್ರಿಯೆಯಲ್ಲಿ ತಪ್ಪು ಮತ್ತು ತಪ್ಪೋತಗಳನ್ನು ಮಾಡುವುದು ಸ್ವಾಭಾವಿಕವೆ. ಓದುವವ ಕೆಲವೊಮ್ಮೆ ಮುಗ್ಗರಿಸಲೇ ಬೇಕು, ಹಾಡುವವನ ಬಾಯಿಯಿಂದ ಉಗುಳಿನ ಹನಿಯಾದರೂ ಆಚೆಗೆ ಬರಲೇ ಬೇಕು. ನಿಮ್ಮ ವಾಹನದ ನಾಲ್ಕು ಟಯರ್‌ಗಳನ್ನಷ್ಟೇ ನಂಬಿ ಪ್ರಯಾಣಕ್ಕೆ ಹೊರಡುವುದಿಲ್ಲವಲ್ಲ, ಸ್ಟೆಪ್ನಿ ಟಯರ್ ಒಂದು ಬೇಕೇ ಬೇಕಲ್ಲ?

ನನ್ನೊಳಗಿನ ನಾನು

ಪೆನ್ಸಿಲ್ ನನ್ನ ಹೆಸರು. ಆದರೆ ನನ್ನ ಒಳಗಿನ ಸೀಸದ ಕಡ್ಡಿಯೇ ನನ್ನ ಉಸಿರು. ನೀವು ಮನುಷ್ಯರು, ಉಪ್ಪು, ಹುಳಿ, ಖಾರ ತಿನ್ನುವವರು. ಕೆಲಸ ಮಾಡಿಸಿಕೊಂಡು ಸುಲಭದಲ್ಲಿ ಮರೆತು ಮರೆಯಾಗುವ ನಿಮ್ಮ ಸಣ್ಣ ಮನಸ್ಸು, ಹುಳುಕು ಬುದ್ಧಿ ನನ್ನದಲ್ಲ. ನೀವು ಅಷ್ಟೆ, ಇಷ್ಟನ್ನಾದರೂ ನನ್ನಿಂದ ಕಲಿತುಕೊಳ್ಳಿ. ನಿಮ್ಮೊಳಗಿನ ಮನಸ್ಸು, ಸತ್ವ, ಸಾಧ್ಯತೆಯನ್ನು ಮರೆತು, ಹೊರಗಿನ ಆಡಂಬರಕ್ಕೆ ಮಾತ್ರ ಮಾರು ಹೋಗದಿರಿ. ನಾನು ನನ್ನ ಒಳಗಿನ ಸೀಸದ ಕಡ್ಡಿಯನ್ನು ಹೇಗೆ ಮರೆಯುವುದಿಲ್ಲವೋ, ನೀವು ನಿಮ್ಮೊಳಗಿನ ಯೋಚನಾ ಶಕ್ತಿ, ಭಾವನಾ ಶಕ್ತಿ. ಮಾನಸಿಕ ಶಕ್ತಿ, ಚಾಲನಾ ಶಕ್ತಿ, ಜೀರ್ಣ ಶಕ್ತಿ, ನಿದ್ರಾಶಕ್ತಿ ಹಾಗೆ ಅವೆಷ್ಟೊ ಯಾವುದನ್ನೂ ಮರೆಯಬೇಡಿ, ಕಡೆಗಣಿಸಬೇಡಿ.

ಎಲ್ಲಿಯೂ ಬರೆಯಬಲ್ಲೆ..

ನನ್ನನ್ನು ಯಾವುದೇ ಮೇಲ್ಮೈ ಮೇಲೆ ಬರೆಯಿರಿ, ಗೀಚಿರಿ ನಾನು ನನ್ನ ಗುಣವನ್ನು ಅಲ್ಲಿ ಪ್ರಕಟಗೊಳಿಸಬಲ್ಲೆ. ಕಾಗದವೇ ಬೇಕೆನ್ನುವ ಹಟ ಅಥವಾ ಮಡಿ ನನಗಿಲ್ಲ. ಎಲ್ಲ ಪದರು ನನಗೆ ಒಂದೇ, ನನ್ನ ಕೆಲಸ ನಾನು ಮಾಡಿಯೇ ಸಿದ್ಧ. ಬಡಗಿಯು ಮರದ ಮೇಲೆ ನನ್ನಿಂದ ಬರೆಯಬಲ್ಲ! ಅಂತರಿಕ್ಷ ನೌಕೆಗಳಲ್ಲಿ ನನ್ನ ಮಿತ್ರ ಪೆನ್ ನಿಂದ ಬರೆಯಲಾಗದಿದ್ದನ್ನು ನನ್ನಿಂದ ಮಾಡಿಸಿಕೊಂಡಿದ್ದಾರೆ ತಿಳಿದಿರಲಿ. ಅದರ ಬಗ್ಗೆ ನನಗೆ ಅಹಂಕಾರವಿಲ್ಲ, ಧನ್ಯತೆ ಇದೆ.

ಕನಸಿನಲ್ಲಿ ಇಷ್ಟೆಲ್ಲ ಕಂಡ, ಕೇಳಿಸಿಕೊಂಡ ವಿದ್ವಾಂಸರು, ಪೆನ್ಸಿಲ್ ಹೇಳಿಕೊಂಡ ಈ ಮೇಲಿನ ಐದು ಗುಣಗಳನ್ನುಪಾಠವನ್ನಾಗಿ ಪರಿಗಣಿಸುತ್ತಾರೆ. ಈ ಐದೂ ವಿಭಾಗಗಳಲ್ಲಿ ಮನುಜರ ಕೊರತೆಗಳನ್ನು ಗಮನಿಸುತ್ತಾರೆ. ಜೀವನ ಸಂದೇಶಗಳನ್ನು ಪ್ರಕೃತಿಯ ಇಪ್ಪತ್ತಾ ನ್ನಲ್ಕು ರೂಪ ವೈಶಿಷ್ಟ್ಯಗಳಿಂದ ಕಲಿಯಬಹುದೆನ್ನುವ ಮಹಾಮುನಿಗಳ ಸಂದೇಶವನ್ನು ಪ್ರಥಮದಲ್ಲಿ ಸಂಶಯದೃಷ್ಟಿಯಿಂದ ನೋಡಿದ್ದರೂ, ಪೆನ್ಸಿಲ್ ವೃತ್ತಾಂತ ತಿಳಿದ ಮೇಲೆ ಸಂಪೂರ್ಣ ಬದಲಾದರಂತೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
04.03.2025 ಮಂಗಳವಾರ
vishwavani.news

ದಿನ ಭವಿಷ್ಯ

ಮೇಷ: ಸಮಸ್ಯೆಗಳಿಗೆ ಅಂಜದಿರಿ, ಅಳುಕದಿರಿ. ಗ್ರಹಣ ಸೂರ್ಯನನ್ನು ಹೆಚ್ಚು ಹೊತ್ತು ಹಿಡಿದಿರುವುದಿಲ್ಲ, ಒಳ್ಳೆಯ ಕಾಲ ಬರಲಿದೆ.

ವೃಷಭ: ಇಲೆಕ್ಟ್ರಾನಿಕ್ ಉಪಕರಣಗಳ ಮಾರಾಟಗಾರರು ಇಂದು ಕೊಂಚ ಹಿನ್ನಡೆ ಅನುಭವಿಸಬೇಕಾದೀತು. ಶಿವನನ್ನು ಆರಾಧಿಸಿ.

ಮಿಥುನ: ಪ್ರಾಮಾಣಿಕವಾಗಿದ್ದುಕೊಂಡು ಬೆವರು ಸುರಿಸಿ ದುಡಿಯಿರಿ. ಲಾಟರಿ ಮತ್ತು ಜೂಜಾಟಕ್ಕೆ ಒಡ್ಡಿಕೊಂಡರೆ ಸಮಸ್ಯೆ ತಪ್ಪಿದ್ದಲ್ಲ.

ಕಟಕ: ನಿಮ್ಮನ್ನು ವಿನಾಕಾರಣ ದ್ವೇಷಿಸಿದವರು, ನಿಮಗೆ ಕಿರುಕುಳ ಕೊಟ್ಟವರು, ನಿಮ್ಮನ್ನೇ ಹುಡುಕಿಕೊಂಡು ಬರಲಿದ್ದಾರೆ. ತಾಳ್ಮೆಯಿರಲಿ.

ಸಿಂಹ: ತೀರ್ಥಕ್ಷೇತ್ರಗಳ ಪ್ರವಾಸ ನಿಮ್ಮ ಮನಸ್ಸಿಗೆ ಮುದ ನೀಡಿರಬಹುದು. ಆ ಅನುಭವವನ್ನೇ ಮೆಲುಕು ಹಾಕಿ. ಗಣೇಶನ ಕೃಪೆಯಿದೆ.

ಕನ್ಯಾ: ಸುಲಭದಲ್ಲಿ ಸಿಕ್ಕಿದ್ದು ಯಾವುದೂ ಹೆಚ್ಚು ದಿನ ಉಳಿಯುವುದಿಲ್ಲ, ಕಷ್ಟಪಟ್ಟು ಸಂಪಾದಿಸಿದ ವಸ್ತು ಮಾತ್ರವೇ ನಿಮ್ಮ ಜತೆಗಿರಲಿದೆ.

ತುಲಾ: ಉತ್ತರ ದಿಕ್ಕಿನಿಂದ ಇಂದು ರಾತ್ರಿಯ ವೇಳೆಗೆ ಶುಭಸುದ್ದಿಯನ್ನು ಕೇಳಲಿದ್ದೀರಿ. ಕಚೇರಿಯ ಕೆಲಸದಿಂದಾಗಿ ಶ್ರಮವಾಗಬಹುದು.

ವೃಶ್ಚಿಕ: ಮೌನವಾಗಿರುವುದು ಒಳ್ಳೆಯದೇ, ಆದರೆ ಮಾತಾಡಬೇಕಾದ ವೇಳೆಯಲ್ಲೂ ಮೌನವಾಗಿದ್ದರೆ ಹೇಗೆ? ಗಣೇಶನನ್ನು ಪ್ರಾರ್ಥಿಸಿ.

ಧನು: ಕೆಸರಿನಂತೆ ರಾಡಿಯಾಗಿದ್ದ ಮನಸ್ಸನ್ನು ಕ್ರಮೇಣ ತಿಳಿಗೊಳಿಸಿಕೊಳ್ಳುತ್ತಿರುವಿರಿ, ಆಶಾಕಿರಣ ಗೋಚರಿಸಲಿದೆ. ಧೃತಿಗೆಡಬೇಡಿ.

ಮಕರ: ಜನರು ನಿಮಗೆ ಮೋಸ ಮಾಡಬಹುದು, ಆದರೆ ನೀವು ನಂಬಿದ ದೇವರು ನಿಮ್ಮ ಕೈಬಿಡುವುದಿಲ್ಲ. ಆದ್ದರಿಂದ ನಿರುಮ್ಮಳವಾಗಿರಿ.

ಕುಂಭ: ಉಡುಪುಗಳು, ಅಲಂಕಾರಿಕ ವಸ್ತುಗಳ ವ್ಯಾಪಾರಿಗಳಿಗೆ ಇಂದು ಶುಭದಿನ. ಹಾಗಂತ ವ್ಯಾಪಾರದ ವಿಸ್ತರಣೆಗೆ ಮುಂದಾಗದಿರಿ.

ಮೀನ: ನಿಮ್ಮ ಕೆಲಸ ಎಷ್ಟೋ ಅಷ್ಟರ ಕಡೆಗೆ ಗಮನ ಕೊಡಿ, ಪರರ ವಿಚಾರಕ್ಕೆ ಮೂಗು ತೂರಿಸಬೇಡಿ. ಎಲ್ಲರನ್ನೂ ಸುಮ್ಮನೆ ನಂಬಬೇಡಿ.

● ಕೆ.ಬಿ.ಸಂತೋಷ್ ಗುರೂಜಿ

ದಿನ ದರ್ಶಿಕೆ

ಕ್ರೋಧಿ ಸಂವತ್ಸರ, ಫಾಲ್ಗುಣ ಮಾಸ, ಶುಕ್ಲ ಪಕ್ಷ, ಪಂಚಮಿ ತಿಥಿ, ಭರಣಿ ನಕ್ಷತ್ರ, ಇಂದ್ರ ಯೋಗ, ರಾಹುಕಾಲ ಮಧ್ಯಾಹ್ನ 3.30ರಿಂದ 5ರವರೆಗೆ, ಅಭಿಜಿತ್ ಮುಹೂರ್ತ: ಮಧ್ಯಾಹ್ನ 12.08ರಿಂದ 12.55ರವರೆಗೆ.

ಮನೆಮದ್ದು

ಬಾಯಿಹುಣ್ಣಿನಿಂದ ಬಳಲುತ್ತಿರುವವರು ಸ್ವಚ್ಛವಾದ ಹತ್ತಿಯನ್ನು ಜೇನುತುಪ್ಪದಲ್ಲಿ ಅದ್ದಿ, ನೋವಿರುವ ಭಾಗಕ್ಕೆ ಇಟ್ಟುಕೊಳ್ಳಬೇಕು. ತೆಂಗಿನ ಎಣ್ಣೆಯನ್ನು ಬಾಯಿಹುಣ್ಣಿಗೆ ಹಚ್ಚಿಕೊಂಡರೂ ನೋವು ಬೇಗ ಶಮನವಾಗುತ್ತದೆ.

ಸೌಂದರ್ಯ ಸೂತ್ರ

ಮುಖದ ಮೇಲಿನ ಟ್ಯಾನ್ ತೆಗೆಯುವ ಸುಲಭೋಪಾಯವಿಲ್ಲಿದೆ. ಸ್ವಲ್ಪ ತಾಜಾ ನಿಂಬೆಗಣ್ಣಿನ ರಸವನ್ನು ತೆಗೆದುಕೊಂಡು ಅದಕ್ಕೆ ಒಂದು ಟೇಬಲ್ ಚಮಚದಷ್ಟು ಜೇನುತುಪ್ಪವನ್ನು ಸೇರಿಸಿ, ನಂತರ ಆ ಮಿಶ್ರಣವನ್ನು ಚರ್ಮದ ಮೇಲೆ ನಿಧಾನವಾಗಿ ಹಚ್ಚಿ, ಅರ್ಧಗಂಟೆಯ ನಂತರ ತೊಳೆದು ತೆಗೆಯಿರಿ.

ಮಧುರ ಸ್ಮೃತಿ

ಇವರು ಯಾರು ಬಲ್ಲಿರೇನು?! ಅಕ್ಷರ ವ್ಯಾಮೋಹಿಗಳು ಒಂದೆಡೆ ಕಲೆತರೆ ಲೋಕಾಭಿರಾಮದ 'ಹರಟೆ'ಯ ಜತೆಜತೆಗೆ ಇಂಥದೊಂದು ಚಿತ್ರದ 'ಹಸೆ'ಯೂ ಮೂಡಿಬಂದೀತು. ಈ ಚಿತ್ರದಲ್ಲಿ ಇರುವವರು ಅಕ್ಷರಲೋಕದ ಸಾಂಗತ್ಯದಲ್ಲಿದ್ದೇ ಹೆಸರು ಮಾಡಿದ ಬಿ.ಆರ್.ಲಕ್ಷ್ಮಣರಾವ್, ವೈ.ಎನ್.ಕೃಷ್ಣಮೂರ್ತಿ (ವೈಎನ್‌ಕೆ), ಬಿ.ಸಿ.ರಾಮಚಂದ್ರ ಶರ್ಮ ಹಾಗೂ ಪಿ.ಲಂಕೇಶ್. ಹೆಸರಿನ ಜತೆ 'ಬಿ.ಸಿ.' ಎಂಬ ಇನಿಷಿಯಲ್ ಇರುವ ಹಿನ್ನೆಲೆಯಲ್ಲಿ ರಾಮಚಂದ್ರ ಶರ್ಮರನ್ನು 'ವೈಎನ್‌ಕೆ' ಅವರು ತಮಾಷೆಗಾಗಿ 'ಕ್ರಿಸ್ತಪೂರ್ವ (BC) ರಾಮಚಂದ್ರ ಶರ್ಮ' ಎಂದು ಕರೆಯುತ್ತಿದ್ದರಂತೆ!

(ಚಿತ್ರಕೃಪೆ: ರಾಘವೇಂದ್ರ ಕೆ.)

ಆಂಜನೇಯನ ಭಕ್ತರಿಗೆ ಶನಿಕಾಟವಿಲ್ಲ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಶನಿದೇವನಿಗೆ, ದೃಷ್ಟಿ ಮಾತ್ರದಿಂದಲೇ ಜನರನ್ನು ಕಷ್ಟಕೋಟಲೆಗಳಿಗೆ ತಳ್ಳುವ ಶಕ್ತಿ ತನಗಲ್ಲದೆ ಇನ್ನಾರಿಗಿದೆ ಎಂಬ ಅಹಂಕಾರ ನೆತ್ತಿಗೇರಿತು. ಇದೇ ಮದದಲ್ಲಿ ತೇಲುತ್ತಿದ್ದ ಅವನು ಒಮ್ಮೆ, ಕಣ್ಣು ಮುಚ್ಚಿಕೊಂಡು ರಾಮಧ್ಯಾನದಲ್ಲಿ ತಲ್ಲೀನನಾಗಿದ್ದ ಆಂಜನೇಯನ ಮೇಲೆ ತನ್ನ ವಕ್ರದೃಷ್ಟಿಯನ್ನು ಬೀರಿದ. ಆದರೆ ಅದರಿಂದ ಆಂಜನೇಯನಿಗೆ ಏನೂ ಆಗಲಿಲ್ಲ.

ಕೋಪಗೊಂಡ ಶನಿ, "ಕಣ್ಣು ತೆರೆದು ನೋಡು, ನಿನ್ನ ಸುಖ-ಸಂತೋಷ-ನೆಮ್ಮದಿಯನ್ನು ಹಾಳುಮಾಡಲು ಬಂದಿರುವೆ. ನನ್ನನ್ನು ಎದುರಿಸುವ ಶಕ್ತಿ ನಿನಗಿಲ್ಲ. ನೋಡೀಗ, ನಾನು ನಿನ್ನ ರಾಶಿಯಲ್ಲಿ ಪ್ರವೇಶ ಮಾಡುತ್ತೇನೆ. ಆಗ ನನ್ನ ಶಕ್ತಿಯೇನೆಂದು ನಿನಗೆ ಗೊತ್ತಾಗುತ್ತದೆ" ಎಂದ. ಅದಕ್ಕೆ ಆಂಜನೇಯ, "ನಾನು ನನ್ನ ಪ್ರಭುವಿನ ಧ್ಯಾನದಲ್ಲಿರುವೆ, ತೊಂದರೆ ಕೊಡಬೇಡ" ಎಂದ ವಿನಯದಿಂದ. ಆದರೆ ಮೊಂಡುಬಿದ್ದ ಶನಿ, "ಎಲೈ ವಾನರನೇ, ನಿನಗೆ ಹೀಗೆಲ್ಲಾ ಹೇಳಿದರೆ ಅರ್ಥವಾಗದು, ನಿನ್ನ ಹೆಗಲೇರುವೆ" ಎಂದು ಹನುಮನ ಹೆಗಲು ಹಿಡಿದು ತನ್ನೆಡೆಗೆ ತಿರುಗಿಸಲು ನೋಡಿದ. ಹನುಮನಿಗೆ ಆ ಕ್ಷಣ ನಿಗಿನಿಗಿ ಉರಿಯುವ ಕೆಂಡದ ಮೇಲೆ ನಿಂತಂತಾಗಿ ತನ್ನ ಭುಜವನ್ನು ಒಮ್ಮೆಲೇ ಕೊಡವಿಕೊಂಡು ಶನಿಯಿಂದ ಬಿಡಿಸಿಕೊಂಡ.

ಹಠವಾದಿ ಶನಿಗೆ ಕೋಪ ಬಂದು, ಕರಾಳ ರೂಪವನ್ನು ತಳೆದು ಹನುಮನ ಇನ್ನೊಂದು ಭುಜದ ಮೇಲೇರಿದ. ಹನುಮನಿಗೂ ಕೋಪ ಬಂದು ತನ್ನ ಬಾಲದಿಂದ ಶನಿಯನ್ನು ಸುತ್ತಿದ. ಆದರೂ ಶನಿಯ ಅಹಂಕಾರ ಕಡಿಮೆಯಾಗಲಿಲ್ಲ. ಜೋರಾಗಿ ನಕ್ಕ ಆತ, "ಎಲೈ ವಾನರ, ನನಗೆ ನೀನೇನೂ ಮಾಡಲಾಗದು. ನೀನಿರಲಿ, ನಿನ್ನ ಪ್ರಭು ಶ್ರೀರಾಮನೂ ಏನೂ ಮಾಡಲಾರ" ಎಂದ. ತನ್ನ ಪ್ರಭುವನ್ನೇ ಗೇಲಿಮಾಡಿದ ಶನಿಯ ಮೇಲೆ ಕೋಪಗೊಂಡ ಹನುಮ, "ಏನಂದೇ, ನನ್ನ ಪ್ರಭುವಿಗೇ ಸವಾಲು ಹಾಕುವೆಯಾ?" ಎಂದು ಹೇಳುತ್ತಾ ಬಾಲದ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿ ಶನಿಯನ್ನು ಸುತ್ತಿ ಮೇಲೆತ್ತಿ ಬಂಡೆಗಳ ಮೇಲೆ ಹಾಕಿ ಅಪ್ಪಳಿಸಿದ, ಪರ್ವತಗಳ ಮೇಲೆ ಹಾಕಿ ಚಚ್ಚಿದ. ಗಿರಗಿರನೆ ತಿರುಗಿಸಿ ನೆಲದ ಮೇಲೆ ಕುಕ್ಕಿದ. ಶನಿಗೆ ಜೀವವೇ ಬಾಯಿಗೆ ಬಂದಂತಾಯಿತು. ಆದರೆ ಎಷ್ಟು ಬೇಡಿದರೂ ಹನುಮ ಕೇಳುವ ಸ್ಥಿತಿಯಲ್ಲಿರಲಿಲ್ಲ. "ನನ್ನನ್ನು ಕಾಪಾಡಿ" ಎಂದು ದೇವತೆಗಳಿಗೆ ಮೊರೆಯಿಟ್ಟ ಶನಿ. ಆದರೆ ಅವರು ಸಹಾಯಕ್ಕೆ ಬರಲಿಲ್ಲ. ಶನಿಗೆ ತನ್ನ ತಪ್ಪಿನ ಅರಿವಾಗಿ ಹನುಮನಲ್ಲಿ ಕ್ಷಮೆಯಾಚಿಸಿದ. "ನನ್ನದು ಅಪರಾಧವಾಯಿತು, ಇನ್ನೆಂದೂ ನಿನ್ನ ತಂಟೆಗೆ ಬರುವುದಿಲ್ಲ. ನಿನ್ನ ನೆರಳಿನಿಂದಲೇ ದೂರ ಹೋಗುವೆ, ನನ್ನ ಉದ್ಧಟತನವನ್ನು ಮನ್ನಿಸು" ಎಂದು ಅಂಗಲಾಚಿದ.

ಆಗ ಕೊಂಚ ಶಾಂತನಾದ ಹನುಮ, "ಶನಿದೇವಾ, ಕೇವಲ ನನ್ನ ನೆರಳಿನಿಂದ ದೂರ ಹೋಗುವುದಲ್ಲ, ನನ್ನ ಭಕ್ತರ ನೆರಳಿನಿಂದಲೂ ದೂರ ಇರುವೆ ಎಂದು ವಚನ ಕೊಡು" ಎಂದ. ಆಗ ಶನಿಯು, "ಹಾಗೇ ಆಗಲಿ, ಇನ್ನೆಂದೂ ನಿನ್ನ ಭಕ್ತರ ಮೇಲೆ ನನ್ನ ವಕ್ರದೃಷ್ಟಿಯನ್ನು ಬೀರುವುದಿಲ್ಲ, ಹಾಗೆಯೇ ಅವರ ನೆರಳಿನ ಹತ್ತಿರವೂ ಸುಳಿಯುವುದಿಲ್ಲ" ಎಂದು ವಚನ ಕೊಟ್ಟ. ನಂತರ ಹನುಮನು ತನ್ನ ಬಾಲದ ಹಿಡಿತದಿಂದ ಶನಿಯನ್ನು ಬಿಡುಗಡೆ ಮಾಡಿದ. ಆದರೆ ತನ್ನ ದೇಹ ನುಜ್ಜುಗುಜ್ಜಾಗಿದ್ದರಿಂದ ಶನಿಯು ನೋವಿನಿಂದ ನರಳುತ್ತಿದ್ದ. ಹನುಮನಿಗೆ ಕರುಣೆಯುಕ್ಕಿ, ಎಳ್ಳೆಣ್ಣೆಯನ್ನು ಶನಿದೇವನ ಅಂಗಾಲಿಗೆ ತಾನೇ ತಿಕ್ಕಿದ. ಇದರಿಂದಾಗಿ ಶನಿದೇವನ ಮೈ ಕೈ ನೋವು ಕಡಿಮೆಯಾಯಿತು, ಅವನ ಅಹಂಕಾರವೂ ತಗ್ಗಿತು.

ಈ ಕಾರಣದಿಂದಲೇ ಶನಿದೇವನಿಗೆ ಎಳ್ಳೆಣ್ಣೆ ನೀಡುವ ಕ್ರಮವಿದೆ. ಅಂದರೆ, ಎಣ್ಣೆಳ್ಳೆಯಲ್ಲಿ ನೆನೆಸಿದ ಎಳ್ಳುತುಂಬಿದ ಪುಟ್ಟ ಬಟ್ಟೆಗಂಟಿಗೆ ದೀಪ ಹಚ್ಚುವುದರಿಂದ ಶನಿದೇವ ತೃಪ್ತನಾಗಿ ಭಕ್ತರ ಕಷ್ಟವನ್ನು ಪರಿಹರಿಸುತ್ತಾನೆ. ತಾನು ಕೊಟ್ಟ ಮಾತಿನಂತೆ ಆಂಜನೇಯನ ಭಕ್ತರ ಮೇಲೆ ತನ್ನ ವಕ್ರದೃಷ್ಟಿಯನ್ನು ಶನಿ ಬೀರುವುದಿಲ್ಲ. ಅವರ ನೆರಳಿನ ಹತ್ತಿರವೂ ಸುಳಿಯುವುದಿಲ್ಲ. ಹನುಮನ ಪೂಜೆ ಮಾಡಿದರೆ ಶನಿಕಾಟದ ಭಯವಿಲ್ಲ ಎಂದು ಹಿರಿಯರು ಹೇಳುವುದು ಈ ಕಾರಣಕ್ಕೇ.

ಇಂಥ ಕಥೆಗಳನ್ನು ನಮ್ಮ ಮಕ್ಕಳಿಗೆ ಹೇಳುತ್ತಿದ್ದರೆ, ಅವರಿಗೆ ಭಗವಂತನ ಇರುವಿಕೆ ಮತ್ತು ಶಕ್ತಿಯಲ್ಲಿನ ನಂಬಿಕೆ ನೂರು ಪಟ್ಟಾಗುತ್ತದೆ.

ಇಲ್ಲೊಂಚೂರು ಕೇಳ್ರೀ...

- ರಾತ್ರಿವೇಳೆ ಸುಖನಿದ್ರೆ ಮಾಡಬೇಕಾದ್ದು ಬಹಳ ಮುಖ್ಯ, ಕಾರಣ ಇದು ನಿಮ್ಮ ದೇಹ-ಮನಸ್ಸುಗಳನ್ನು ಉಲ್ಲಸಿತವಾಗಿಸಿ ಮರುಚೈತನ್ಯಗೊಳಿಸುತ್ತದೆ. ಮಲಗುವುದಕ್ಕೆ ಒಂದು ಸಮಯವನ್ನು ನಿಗದಿಪಡಿಸಿಕೊಂಡು ಅದನ್ನು ಪಟ್ಟಾಗಿ ಅನುಸರಿಸಿ.
- 'ಸ್ಕ್ರೀನ್ ಸಮಯ'ವನ್ನು ಅಂದರೆ ಮಲಗುವ ಮುನ್ನ ಮೊಬೈಲ್, ಟಿವಿ ಅಥವಾ ಲ್ಯಾಪ್‌ಟಾಪ್‌ಗಳ ವೀಕ್ಷಣೆಗೆ ಅಂಟಿಕೊಳ್ಳುವುದನ್ನು ನಿಲ್ಲಿಸಿ. ಈ ಅಭ್ಯಾಸವು ನಿಮ್ಮ ನಿದ್ರೆಯ ಗುಣಮಟ್ಟಕ್ಕೆ ತಡೆಗೋಡೆಯಾಗುತ್ತದೆ. ಜತೆಗೆ ಇಂಥ ಗ್ಯಾಜೆಟ್‌ಗಳ ಪರದೆಗಳಿಂದ ಹೊರಹೊಮ್ಮುವ ಬಿಳಿಬೆಳಕು, ನಿಮ್ಮ ಮಿದುಳನ್ನು ಮತ್ತಷ್ಟು ಅವಧಿಗೆ ಎಚ್ಚರವಾಗಿ ಇರಿಸುವುದರಿಂದ, ತಕ್ಷಣ ನಿದ್ರೆಗೆ ಜಾರಲು ಕಷ್ಟವಾಗುತ್ತದೆ. ಹೀಗಾಗಿ ಇಂಥ ಪರಿಪಾಠ ಸಲ್ಲ. ಮಲಗುವುದಕ್ಕೆ ಕನಿಷ್ಠಪಕ್ಷ 1 ಗಂಟೆ ಮೊದಲು ಇಂಥ ಎಲ್ಲ ಗ್ಯಾಜೆಟ್‌ಗಳಿಂದ ದೂರವಿರಿ.

ಪದಬಂಧ

ಎಡದಿಂದ ಬಲಕ್ಕೆ

1. ಎರಡಕ್ಷರದ ಎಚ್ಚರ (2)
2. ಬೆಂಕಿ ಅಥವಾ ಜಠರಾಗ್ನಿ (3)
5. ತಂದೆಯ ತಮ್ಮ ಇವರು (3)
6. ಜಾನಪದ ಹಾಡುಗಳಲ್ಲಿ ಒಂದು ಪ್ರಕಾರವಿದು (3)
7. ಕರ ಪಾವತಿಸುವಾಗ ಉಂಟಾದ ಮರುಕ (4)
11. ದೆವ್ವ, ಭೂತ ಇತ್ಯಾದಿ ದುಷ್ಟಶಕ್ತಿಗಳು (2)
12. ಬಟ್ಟೆಯನ್ನು ತಯಾರಿಸಲು ಬಳಸುವ ಅರಳೆ (2)
13. ಕೈನೊಂದಿಗೆ ಬಂದಿರುವ ಕರಂಡ (4)
18. ಮಾಡಲೇಬೇಕೆಂದು ವಿಧಿಸಿದ ಕಟ್ಟಪ್ಪಣೆ (3)
19. ಮನದೊಂದಿಗೆ ಬಂದಿರುವ ಮನ್ಮಥ (3)
20. ಹೀಗೊಂದು ಉಪ್ಪು (3)
21. ಎರಡೇ ಅಕ್ಷರದ ಮರ್ಯಾದೆ (2)

ಮೇಲಿನಿಂದ ಕೆಳಕ್ಕೆ

1. ಇವನು ಗತಿಯಿಲ್ಲದವನು (4)
2. ಆಣೆ ಮಾಡಲು ಮಾಡಿದ ಆಜ್ಞೆ (3)
3. ವಿಧಾತ ನಮ್ಮ ಭವಿಷ್ಯವನ್ನು ಬರೆದಿರುವ ಹಣೆ (3)
4. ಬೆಲೆ ಬಾಳುವ ರತ್ನದ ಸರ (4)
5. ಬಾಗಿಲಿಗೆ ಹಾಕುವ ಕೊಂಡಿ (3)
8. ಕೆಲಸದಿಂದ ಸಿಕ್ಕಿದ ಬಿಡುಗಡೆ (3)
9. ವಿರಾಮದಲ್ಲಿ ಸಿಕ್ಕಿದ ಮೇಲುಹೊದಿಕೆ (3)
10. ರಕ್ಷಕನಲ್ಲ, ತಿನ್ನುವವನು (3)
11. ಗಡಿಯಲ್ಲಿದೆ ವ್ಯಾಯಾಮಶಾಲೆ (3)
12. ತಾಳಹಾಕುತ್ತ, ಹರನನ್ನು ನೆನೆಯುತ್ತ ಮಾಡಿದ ಸಂಪು (4)
14. ಸ್ವಾದವನ್ನು ತಿಳಿಸುವ ನಾಲಗೆ (3)
15. ಮಂದಿಯ ನಡುವಿನ ಮಿತ್ರತ್ವ (4)
16. ಸೋದರಮಾವನಿಗೆ ಮತ್ತೊಂದು ಹೆಸರಿದು (3)
17. ಮಣಭಾರವಿದ್ದಾನೆ ವಲ್ಲಭ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1.ನಿಗಾ 2.ಅನಲ 5.ಚಿಕ್ಕಪ್ಪ 6.ಲಾವಣಿ 7.ಕನಿಕರ 11.ಗರ 12.ಹತ್ತಿ 13.ಕರಡಿಗೆ 18.ತಾಕೀತು 19.ಮದನ 20.ಲವಣ 21.ಮಾನ

ಮೇಲಿನಿಂದ ಕೆಳಕ್ಕೆ: 1.ನಿರ್ಗತಿಕ 2.ಅಪ್ಪಣೆ 3.ಲಲಾಟ 4.ಮಣಿಹಾರ 5.ಚಿಲಕ 8.ನಿವೃತ್ತಿ 9.ರಜಾಯಿ 10.ಭಕ್ಷಕ 11.ಗರಡಿ 12.ಹರತಾಳ 14.ರಸನ 15.ಗೆಳೆತನ 16.ಮಾತುಲ 17.ರಮಣ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಾರ್ಟೂನ್ ಕಚಗುಳಿ

ವ್ಯಂಗ್ಯಚಿತ್ರ ಕೃಪೆ: ಸುಧೀರ್ ತೈಲಾಂಗ್

ಈ ಮಹಾನುಭಾವ ದೆಹಲಿಯನ್ನೂ ಆಕ್ರಮಿಸಿದ್ದಾಯ್ತು. ನಾನು ಇನ್ನು ಮುಂದೆ ಹೀಗೆ 'ಹ್ಯಾರಿ ಪಾಟರ್' ಥರ ಪೊರಕೆ ಮೇಲೆ ಕೂತ್ಕೊಂಡು, ಹೆಲಿಕಾಪ್ಟರ್‌ನಲ್ಲಿ ವೇಗವಾಗಿ ಸಾಗುತ್ತಿರೋ ಇವರ ಬೆನ್ನಟ್ಟೋಕ್ಕೆ ಆಗುತ್ತಾ ಶಿವನೇ?!

ಮುದ್ರಾವಿಶ್ವ

ಡಾ. ಪತಂಜಲಿ ಆಚಾರ್ಯ

1) ಜಲಮುದ್ರೆ

- **ಅಭ್ಯಾಸಕ್ರಮ:** ಹೆಬ್ಬೆರಳಿನ ತುದಿಯಿಂದ ಕಿರುಬೆರಳಿನ ತುದಿಗೆ ಮುಟ್ಟಿಸಬೇಕು. ಮಿಕ್ಕ ಬೆರಳುಗಳನ್ನು ನೇರವಾಗಿ ಚಾಚಿಕೊಂಡಿರಬೇಕು. ಈ ಭಂಗಿಯಲ್ಲಿ ಕನಿಷ್ಠಪಕ್ಷ 2-3 ನಿಮಿಷಗಳವರೆಗೆ ಇರಬೇಕು. ಧ್ಯಾನ ಮಾಡಲು ಕುಳಿತಾಗ ಈ ಮುದ್ರೆಯನ್ನು ಹಾಕಲು ಯತ್ನಿಸಬಹುದು. ಪದ್ಮಾಸನದಲ್ಲಿ ಕುಳಿತು ಈ ಮುದ್ರೆಯನ್ನು ಅಭ್ಯಾಸ ಮಾಡಬೇಕು.
- **ಪ್ರಯೋಜನಗಳು:** ಈ ಮುದ್ರೆಯು ತೇವಾಂಶವನ್ನು ಹೆಚ್ಚಿಸುವ ಮೂಲಕ ಶರೀರದೊಳಗಿನ ತಾಪವನ್ನು ತಗ್ಗಿಸುತ್ತದೆ. ನೀವು ಮಾಡುವ ಧ್ಯಾನವು ಮನಸ್ಸಿಗೆ ಶಾಂತಿಯನ್ನು ತಂದುಕೊಟ್ಟರೆ, ಜಲಮುದ್ರೆಯ ಅಭ್ಯಾಸವು ದೇಹವನ್ನು ತಂಪಾಗಿಸುವಲ್ಲಿ ಪ್ರಯೋಜನಕಾರಿಯಾಗಿದೆ. ಒಣಚರ್ಮ/ಚರ್ಮ ಸುಕ್ಕಾಗುವಿಕೆ, ಸಂಧಿವಾತ, ಮಲಬದ್ಧತೆ, ನಿರ್ಜಲೀಕರಣ ಮುಂತಾದ ಸಮಸ್ಯೆಗಳು ಜಲಮುದ್ರೆಯ ಅಭ್ಯಾಸದಿಂದ ನಿವಾರಣೆಯಾಗುವುವು.



2) ಪೃಥ್ವೀಮುದ್ರೆ



- **ಅಭ್ಯಾಸಕ್ರಮ:** ಉಂಗುರದ ಬೆರಳಿನ ತುದಿಯನ್ನು ಹೆಬ್ಬೆರಳಿನ ತುದಿಗೆ ಸ್ಪರ್ಶಿಸಿ. ಮಿಕ್ಕ ಮೂರು ಬೆರಳುಗಳನ್ನು ನೇರವಾಗಿ ಇಟ್ಟುಕೊಂಡಿರಬೇಕು. ಈ ಭಂಗಿಯಲ್ಲಿ ಕನಿಷ್ಠಪಕ್ಷ 2-3 ನಿಮಿಷಗಳವರೆಗೆ ಇರಬೇಕು. ಪೃಥ್ವೀಮುದ್ರೆಯನ್ನು ದಿನದ ಯಾವುದೇ ಅವಧಿಯಲ್ಲಿ ಮಾಡಬಹುದಾದರೂ, ಮುಂಜಾನೆ ಆಚರಿಸಿದರೆ ಅತ್ಯುತ್ತಮ ಎನ್ನುತ್ತಾರೆ ಬಲ್ಲವರು.
- **ಪ್ರಯೋಜನಗಳು:** ಈ ಮುದ್ರೆಯನ್ನು ಅಭ್ಯಾಸ ಮಾಡುವುದರಿಂದ ದೇಹದಲ್ಲಿನ ನೀರಿನ ಅಂಶ ಹೆಚ್ಚಾಗುತ್ತದೆ. ಕಡಿಮೆ ದೇಹತೂಕ ಇರುವವರಿಗೆ ಈ ಮುದ್ರೆ ಬಹಳ ಪ್ರಯೋಜನಕಾರಿ. ಪೃಥ್ವೀಮುದ್ರೆಯ ಆಚರಣೆಯಿಂದ ದೇಹಾಯಾಸ ತಗ್ಗುವುದು, ಒಣಚರ್ಮ, ಉರಿಯೂತ, ಆಮ್ಲೀಯತೆ ಮುಂತಾದ ಸಮಸ್ಯೆಗಳು ತಹಬಂದಿಗೆ ಬರುವುವು. ದೇಹದಲ್ಲಿನ ರಕ್ತಪರಿಚಲನೆಯ ಶೈಲಿಯಲ್ಲಿ ಸುಧಾರಣೆ ಕಂಡುಬರುತ್ತದೆ. ಒತ್ತಡದ ಕಾರಣದಿಂದಾಗಿ ವಿಶ್ರಾಂತಿಯ ಅಗತ್ಯವಿದ್ದಾಗ ಈ ಮುದ್ರೆಯನ್ನು ಅಭ್ಯಾಸ ಮಾಡಿದರೂ ಒಳ್ಳೆಯದು.

ಕಿವಿಮಾತೊಂದ ಹೇಳುವೆ ನಾನಿಂದು...

ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲಿ

- ಜಂಕ್‌ಫುಡ್ ಮತ್ತು ಸಂಸ್ಕರಿಸಿದ ಆಹಾರಗಳು ದೇಹಕ್ಕೆ ಒಳ್ಳೆಯವಲ್ಲ. ಇದರ ಬದಲಿಗೆ ನೈಸರ್ಗಿಕವಾಗಿರುವ, ಮನೆ ಯಲ್ಲಿ ತಯಾರಿಸಿರುವ ಆಹಾರವನ್ನು ಸೇವಿಸುವುದು ಒಳಿತು. ಜಂಕ್‌ಫುಡ್‌ಗಳಲ್ಲಿ ಅನಾರೋಗ್ಯಕರ ಕೊಬ್ಬು, ಸಕ್ಕರೆ ಮತ್ತು ಸಂಸ್ಕಾರಕಗಳು ಸೇರಿಕೊಂಡಿರುತ್ತವೆ. ಇವು ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸುವುದರ ಜತೆಗೆ ಉರಿಯೂತವು ತೀವ್ರವಾ ಗುವುದಕ್ಕೂ ಕಾರಣವಾಗಬಹುದು. ಇದ ರಿಂದಾಗಿ ಹೃದಯಸಂಬಂಧಿ ಕಾಯಿಲೆ ಗಳು ಕೂಡ ದೇಹವನ್ನು ಅಮರಿಕೊಳ್ಳಬಹುದು.
- ನಿಮ್ಮ ಆಹಾರ ಕ್ರಮದಲ್ಲಿ ತಾಜಾ ಹಣ್ಣುಗಳು ಮತ್ತು ತರಕಾರಿಗಳು, ಪಾಲಿಶ್ ಮಾಡಿಸದ ಧಾನ್ಯಗಳನ್ನು ಸೇರಿಸಿಕೊಳ್ಳಿ. ಈ ಪರಿಪಾಠದಿಂದಾಗಿ ಹೃದಯಕ್ಕೆ ಒಳ್ಳೆಯ ಪೋಷಣೆ ಸಿಗುತ್ತದೆ ಹಾಗೂ ಹೃದಯ ಸಂಬಂಧಿ ಸಮಸ್ಯೆಗಳು ದೂರ ಓಡುತ್ತವೆ.
- ದೇಹದ ಆರೋಗ್ಯವನ್ನು ಸಮರ್ಪಕವಾಗಿ ಕಾಪಿಟ್ಟುಕೊಳ್ಳುವಲ್ಲಿ ನಿದ್ರೆಯ ಪಾತ್ರ ಮಹತ್ತರವಾದುದು. ಹೃದಯದ ಸ್ವಾಸ್ಥ್ಯದ ದೃಷ್ಟಿಯಿಂದಲೂ ನಿದ್ರೆಯು ಅತ್ಯವಶ್ಯಕ. ಒಂದೊಮ್ಮೆ ನಿದ್ರೆಯು ಅಸಮರ್ಪಕವಾಗಿದ್ದರೆ, ಅದರಿಂದಾಗಿ ರಕ್ತದೊತ್ತಡ ಹೆಚ್ಚಾಗುತ್ತದೆ ಹಾಗೂ ಅದು ಹೃದಯದ ಕಾಯಿಲೆಗೆ ಆಹ್ವಾನವನ್ನು ನೀಡಬಹುದು.
- ಪ್ರತಿನಿತ್ಯವೂ 7-8 ಗಂಟೆಗಳ ನಿದ್ರೆ ಮಾಡುವುದು ಅತ್ಯವಶ್ಯಕ. ನಿದ್ರೆಯ ಸಮಯದಲ್ಲಿ ದೇಹವು ಹಾನಿಗೊಳಗಿರುವ ಅಂಗಾಂಶಗಳನ್ನು ದುರಸ್ತಿ ಮಾಡಿಕೊಳ್ಳುತ್ತದೆ. ದೇಹದಲ್ಲಿರಬಹುದಾದ ವಿಷಕಾರಿ ಅಂಶಗಳು ಮತ್ತು ಒತ್ತಡಕಾರಿ ಹಾರ್ಮೋನುಗಳ ಪ್ರಭಾವ ತಗ್ಗುತ್ತದೆ.
- ಒತ್ತಡವು ಎಲ್ಲರ ಜೀವನದಲ್ಲೂ ಇರುವಂಥದ್ದೇ, ಹಾಗಂತ ಅನುಕ್ಷಣವೂ ಒತ್ತಡಕ್ಕೆ ಒಡ್ಡಿಕೊಂಡಿರಬೇಕು ಎಂದೇನಿಲ್ಲ. ಏಕೆಂದರೆ ದೀರ್ಘಕಾಲಿಕ ಒತ್ತಡದಿಂದಾಗಿ ರಕ್ತದೊತ್ತಡ ಹೆಚ್ಚಾಗಬಹುದು, ಹೃದಯಕ್ಕೆ ಹಾನಿಯಾಗಬಹುದು. ಭಾವನೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಒಂದಷ್ಟು ದೈಹಿಕ ಚಟುವಟಿಕೆಗಳ ಜತೆಜತೆಗೆ ನಿಮಗಿಷ್ಟವಾಗುವ ಹವ್ಯಾಸಗಳಲ್ಲಿ ತೊಡಗುವುದೂ ಒಳ್ಳೆಯದು.

ವಿವಿಧ ವಿನೋದಾವಳಿ...

ಬೆಳೆಯುವ ಪೈರು ಮೊಳಕೆಯಲ್ಲೇ..!

ಚಂದ್ರಶೇಖರತನಯ

ಇದು ಸುಮಾರು 25 ವರ್ಷ ಹಿಂದಿನ ಕಥೆ. ಪುಟ್ಟುವಿಗೆ ಶಾಲೆಯ ವಾರ್ಷಿಕ ಪರೀಕ್ಷೆಯಲ್ಲಿ ಸರಾಸರಿ 35 ಅಂಕಗಳೂ ಬಂದಿರಲಿಲ್ಲ. ಇದನ್ನು ಕಂಡು ಕೋಪಗೊಂಡ ಮೇಷ್ಟ್ರು, "ಅಯ್ಯೋ ಪ್ರಾರಬ್ಧವೇ... ಪರೀಕ್ಷೆಯಲ್ಲಿ ಪಾಸಾಗಲು ಬೇಕಾಗಿರೋದೇ 35 ಅಂಕಗಳು. ನಿನ್ ಯೋಗ್ಯತೆಗೆ ಅದನ್ನೂ ತೆಗೆಯೋಕ್ಕೆ ಆಗಲಿಲ್ವೇನೋ?" ಅಂತ ಬೈದರು.

ಮೇಷ್ಟ್ರು 'ವಿನಾಕಾರಣ' ತನ್ನ ಮೇಲೆ ಹೊರಿಸಿದ 'ಮಿಥ್ಯಾಪವಾದ'ವನ್ನು ಕೇಳಿ ಒಂದೇ ಕಣ್ಣಲ್ಲಿ ನೀರು ಸುರಿಸಿದ ಪುಟ್ಟು, ತನ್ನ ಈ ಯೋಗ್ಯತೆಗೆ ನೀಡಿದ ಸಮರ್ಥನೆ ಹೀಗಿತ್ತು:

"ನೀವೊಳ್ಳೇ ಚೆನ್ನಾಗಿ ಹೇಳ್ತೀರಲ್ಲಾ ಸರ್? ಪರೀಕ್ಷೆಯಲ್ಲಿ 35 ಅಂಕ ತೆಗೆಯೋಕ್ಕೆ ಆಗದಿರೋದು ನನ್ನ ತಪ್ಪಾ. ಈಗ ನೋಡೀ ಸರ್, ಒಂದು ವರ್ಷದಲ್ಲಿ ಇರೋದು ಕೇವಲ 365 ದಿನಗಳು. ಅದರಲ್ಲಿ 52 ಭಾನುವಾರಗಳು ಇರ್ತವೆ. ಅವು ವಿಶ್ರಾಂತಿಗೆ ಮತ್ತು ಟಿವಿ ನೋಡೋಕ್ಕೆ ಮೀಸಲಾಗುತ್ತೆ ಅಲ್ವಾ?...

"ಇನ್ನುಳಿದದ್ದು 313 ದಿನಗಳು. ಅದರಲ್ಲಿ 60 ದಿನಗಳು ಶಾಲೆಗೆ ಬೇಸಗೆ ರಜಾ ಇರುತ್ತೆ. ಅಷ್ಟೊಂದು ಸುಡುಸುಡು ಬಿಸಿಲೂ ಸರ್... ಅದರಲ್ಲಿ ಓದೋಕ್ಕೆ ಹೇಗೆ ಸಾಧ್ಯ ನೀವೇ ಹೇಳಿ? ಇನ್ನು ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ದಿನಕ್ಕೆ 8 ಗಂಟೆ ಮಲಗಲೇಬೇಕಲ್ವಾ ಸರ್, ಅಂದ್ರೆ ವರ್ಷದಲ್ಲಿ 122 ದಿನಗಳು ಮಟಾಷ್!! ಉಳಿದದ್ದು ಎಷ್ಟು ಮಹಾ ದಿನಗಳು ಸರ್... 131 ದಿನಗಳು ತಾನೇ?...

"ಸರ್, ಮನುಷ್ಯ ಓರ್ವ ಸಂಘಜೀವಿ ಅನ್ನೋದು ನಿಮಗೂ ಗೊತ್ತಿರುವ ವಿಷಯವೇ. ಸಂಘಜೀವಿಯಾದೋನು ಮೂದೇವಿ ಥರ ಮನೇಲೇ ಕೂತಿರೋಕ್ಕೆ ಆಗುತ್ತಾ? ಆತ ಅವರಿವರ ಹತ್ರ ಮಾತಾಡಲೇಬೇಕಾಗುತ್ತೆ. ದಿನಕ್ಕೆ ಕನಿಷ್ಠಪಕ್ಷ 1 ಗಂಟೆ ಅಂದ್ಕೊಂಡ್ರೂ, ಒಟ್ಟು 15 ದಿನಗಳು ಮಾತಾಡೋಕ್ಕೆ ಅಂತಾನೇ ಆಗಿಹೋಗುತ್ತೆ ನೋಡಿ...

"ಉಳಿಯೋದು ಎಷ್ಟು ಸರ್?... 116 ದಿನಗಳು. ಪ್ರತಿದಿನವೂ ತಿಂಡಿ-ತೀರ್ಥ-ರಸಕವಳ ಇತ್ಯಾದಿಗಳನ್ನು ಜಡಿಯಲು ದಿನಕ್ಕೆ ಕನಿಷ್ಠ ಅಂದ್ರೂ, 2 ಗಂಟೆ ಬೇಕೇ ಬೇಕು. ದಿನಗಳ ಲೆಕ್ಕದಲ್ಲಿ ಅಲ್ಲಿಗೆ ಟೋಟಲ್ 30 ದಿನಗಳು ಊಟ-ತಿಂಡಿಗೇ ಆಯ್ತು. ಇಷ್ಟೆಲ್ಲಾ ಆದ್ಮೇಲೆ 86 ದಿನಗಳು ಮಾತ್ರ ಉಳಿಯುತ್ವೆ, ಅಲ್ವಾ ಸರ್?....

"ಈಗ ನೋಡಿ, ಪ್ರತಿದಿನ ಆಟಕ್ಕೆ ಮತ್ತು ಇತರ ಬಾಬತ್ತುಗಳಿಗೆ ಕನಿಷ್ಠ 1 ಗಂಟೆ ಅಂದ್ಕೊಂಡ್ರೂ, ಒಟ್ಟು 15 ದಿನಗಳಾದ್ವು. ಬಾಕಿ ಉಳಿದ ದಿನಗಳು 71 ಮಾತ್ರ. ಬೇಡಾ ಬೇಡಾ ಅಂದ್ರೂ, ಅದರಲ್ಲಿ ಶಾಲಾ ಪರೀಕ್ಷೆಗಳಿಗೆ ಅಂತಲೇ 21 ದಿನಗಳು ಹಾಳಾಗ್ತವೆ. ಇಷ್ಟೆಲ್ಲಾ ಆದ್ಮೇಲೆ ಕೇವಲ 50 ದಿನಗಳು ಉಳೀತಾವೆ ಸರ್....

"ಈ 50 ದಿನಗಳಲ್ಲಿ ದಸರಾ ರಜೆ, ಹಬ್ಬಗಳು, ಪಾರ್ಟಿಗಳು, ಪಿಕ್‌ನಿಕ್ ಅಂತ 40 ದಿನಗಳು ನೆಗೆದುಬಿದ್ದು ಹೋಗೇಬಿಡುತ್ವೆ... ಉಳಿದದ್ದು 10 ದಿನಗಳಷ್ಟೇ. ಹಬ್ಬ-ಪಾರ್ಟಿ-ಪಿಕ್‌ನಿಕ್ಕುಗಳಲ್ಲಿ ಹೊಟ್ಟೆ ಬಿರಿಯೋ ಹಾಗೆ ತಿಂದ ಮೇಲೆ ಕಾಯಿಲೆ ಬೀಳಲೇಬೇಕಲ್ವಾ ಸರ್? ಹೀಗೆ ಬರೋ ಕಾಯಿಲೆ-ಕಸಾಲೆ ಕನಿಷ್ಠಪಕ್ಷ 6 ದಿನಗಳನ್ನಾದ್ರೂ ತಿಂದುಹಾಕ್ತವೆ....

"ಉಳಿದದ್ದು 4 ದಿನಗಳು. ಸರ್, ವರ್ಷಕ್ಕೆ ಕನಿಷ್ಠಪಕ್ಷ 3 ಸಲಾನಾದ್ರೂ ಥಿಯೇಟರ್‌ನಲ್ಲಿ ಸಿನಿಮಾ ನೋಡದಿದ್ರೆ ಅದೂ ಒಂದು ಬದುಕಾ ಸರ್? ಸರಿ, ಸಿನಿಮಾ ನೋಡೋಕ್ಕೆ 3 ದಿನ ಹೋಗುತ್ತೆ. ಇನ್ನು ಉಳಿಯೋದು ಒಂದೇ ಒಂದು ದಿನ ಸರ್... ಆ ಒಂದು ದಿನವೂ ಶಾಲಾ ವಾರ್ಷಿಕೋತ್ಸವಕ್ಕೆ ಬಳಕೆಯಾಗುತ್ತೆ...

"ಸರ್... ಸರ್.... ಪಾಸಿಂಗ್ ಮಾರ್ಕ್ಸ್ ತೆಗೀಲಿಲ್ಲಾ ಅಂತ ಸುಮ್‌ಸುಮ್ನೇ ಆಕ್ಷೇಪಣೆ ಮಾಡ್ತೀರಲ್ಲಾ? ಈಗ ಹೇಳೀ ಸರ್... ನಮಗೆ ಓದೋಕ್ಕೆ ಟೈಮೆಲ್ಲಿದೆ? ದಿನಗಳೆಲ್ಲಿ ಉಳಿದಿವೆ ಅಂತ?..."

ತಮ್ಮ ಶಿಷ್ಯೋತ್ತಮ ಪುಟ್ಟು ನೀಡಿದ ಸುದೀರ್ಘ ಉತ್ತರವನ್ನು ತಮ್ಮ ತನು-ಮನಗಳಿಂದ ಕೇಳಿಸಿಕೊಂಡು ಸುಸ್ತು ಹೊಡೆದ ಉಪಾಧ್ಯಾಯರೆಂಬ ಬಡಪಾಯಿ ಜೀವಿಯು, ಶಾಲೆಯ ಸ್ಟಾಫ್ ರೂಮಿಗೆ ತೆರಳಿ, ರಾಜಕಾರಣಿಯಾಗಿದ್ದ ಪುಟ್ಟುವಿನ ಅಪ್ಪ ಶ್ರೀಮಾನ್ ನುಂಗಣ್ಣನವರಿಗೆ ಫೋನ್ ಮಾಡಿ ಹೇಳಿದರು:

"ನಮಸ್ಕಾರ ಸ್ವಾಮೀ.... ಆಹಾಹಾ ಎಂಥಾ ಮಗನ್ನ ಹೆತ್ತಿದ್ದೀರಪ್ಪಾ ನೀವು? ನಿಮ್ಮ ರಾಜಕಾರಣಕ್ಕೆ ಸಮರ್ಥ ಉತ್ತರಾಧಿಕಾರಿ ಇಲ್ಲಾಂತ ಒಂದೇ ಕಣ್ಣಲ್ಲಿ ಅಳುತ್ತಾ ಕೊರಗ್ತಾ ಇದ್ರಲ್ಲಾ ಸ್ವಾಮೀ..? ಸ್ವಲ್ಪ ತಡ್ಕೊಳ್ಳಿ, ಕೆಲವೇ ವರ್ಷ. ಬೆಳೆಯೋ ಪೈರು ಈಗಾಗ್ಲೇ ಇಲ್ಲಿ ಮೊಳಕೆಯೊಡೆದಿದೆ..!!"

ಅತ್ಯಾಧುನಿಕ ಅಪಾರ್ಥಕೋಶ...

ಅಪಾರ್ಥಸಾರಥಿ
naadigru@gmail.com

- **ವ್ಯಂಗ್ಯಚಿತ್ರಕಾರ:** 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ' ಎಂಬ ವಚನಕಾರರ ಆಶಯವನ್ನು ಉಲ್ಲಂಘಿಸಿ, ತನ್ನ 'ಡೊಂಕು'ರೇಖೆಯ ಮೂಲಕವೇ 'ಲೋಕ'ವನ್ನು ತಿದ್ದಲು, ತನ್ಮೂಲಕ ತನ್ನ ಬದುಕನ್ನು ಕಟ್ಟಿಕೊಳ್ಳಲು ಮುಂದಾಗುವವ.
- **ಏಣಿ:** ತನ್ನನ್ನು ಬಳಸಿಕೊಂಡು ಮೇಲಕ್ಕೆ ಹತ್ತಿದವರಿಂದ ತರುವಾಯದಲ್ಲಿ ತಳ್ಳಿಸಿಕೊಳ್ಳಲ್ಪಡುವ 'ಬಿದಿರು ಬೊಂಬೆ'.
- **ಬದನೇಕಾಯಿ:** ಪರೋಕ್ಷ ನಿರಾಕರಣೆಗೆ ಬಳಸಲ್ಪಡುವ ಪರ್ಯಾಯಪದ; ಉದಾಹರಣೆಗೆ, 'ಇವತ್ತು ಏನು ಕೊಡಿಸ್ತೀಯಾ?' ಅಂತ ಯಾರಾದ್ರೂ ಕೇಳಿದ್ರೆ, 'ಕೊಡಿಸ್ತೀನಿ, ಬದನೇಕಾಯಿ' ಎಂದು ಹೇಳುವಾಗಿನ ವ್ಯಂಗ್ಯ!

- **ಕಿಸೆಗಳ್ಳ:** ತನ್ನ ಜೇಬನ್ನು ತುಂಬಿಸಿಕೊಳ್ಳಲೆಂದು ಪರರ ಜೇಬನ್ನೇ ನೆಚ್ಚಿರುವ ಪರಾವಲಂಬಿ.
- **ಹಾಡುಹಗಲು:** ಪ್ರತಿಸ್ಪರ್ಧಿ ಟಿವಿ ಚಾನೆಲ್‌ನವರ 'ಮ್ಯೂಸಿಕಲ್ ನೈಟ್' ಪೈಪೋಟಿಯನ್ನು ಎದುರಿಸಲಾಗದೆ ಮತ್ತೊಂದು ಚಾನೆಲ್‌ನವರು 'ಹಾಡು'ಗಳನ್ನು 'ಹಗಲು' ವೇಳೆಯಲ್ಲಿ ಬಿತ್ತರಿಬೇಕಾಗುವ ಅನಿವಾರ್ಯ ಸ್ಥಿತಿ!
- **ಬಂಧು-ಬಳಗ:** 'ಆಪತ್ತಿಗಾದವನೇ ನೆಂಟ' ಎಂಬ ಪರಿಕಲ್ಪನೆಯ ವಿರುದ್ಧಾರ್ಥಕ ಪದ.

ಸಮಾಚಾರ ಸಣ್ಣದಲ್ಲ

ಕೆಕೆಆರ್‌ಗೆ ರಹಾನೆ ನಾಯಕ, ಅಯ್ಯರ್ ಉಪನಾಯಕ

ದೆಹಲಿ: ಚಾಂಪಿಯನ್ಸ್ ಟ್ರೋಫಿ ಬೆನ್ನಿಗೇ ಮಾರ್ಚ್ 22ರಿಂದ ಆರಂಭವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ನಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ನಾಯಕನನ್ನಾಗಿ ಅಜಿಂಕ್ಯ ರಹಾನೆ ಅವರನ್ನು ಆಯ್ಕೆ ಮಾಡಲಾಗಿದೆ. 2024ರ ಐಪಿಎಲ್ ಆವೃತ್ತಿಯಲ್ಲಿ ಕೆಕೆಆರ್ ತಂಡ ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು. ಆದರೆ, ಮೆಗಾ ಹರಾಜಿಗೂ ಮುನ್ನ ಶ್ರೇಯಸ್ ಅಯ್ಯರ್ ಅವರನ್ನೇ ಕೈಬಿಟ್ಟಿದ್ದು ಅಚ್ಚರಿಗೆ ಕಾರಣವಾಗಿತ್ತು. ಇದೀಗ ಅನುಭವಿ ಆಟಗಾರನಿಗೆ ಕೆಕೆಆರ್ ತಂಡವನ್ನು ಮುನ್ನಡೆಸುವ ಜವಾಬ್ದಾರಿ ಕೊಡಲಾಗಿದೆ. ಐಪಿಎಲ್ 2025ರ ಹರಾಜಿನಲ್ಲಿ ಶ್ರೇಯಸ್ ಅಯ್ಯರ್ ಅವರನ್ನು 26.75 ಕೋಟಿ ರೂ.ಗೆ ಪಂಜಾಬ್ ಕಿಂಗ್ಸ್ ತಂಡ ಖರೀದಿಸಿತ್ತು. ಈ ಮೂಲಕ ಅವರು ಲೀಗ್ ಇತಿಹಾಸದಲ್ಲಿಯೇ ಎರಡನೇ ಅತ್ಯಂತ ದುಬಾರಿ ಆಟಗಾರರಾದರು. ತಮ್ಮ ಚೊಚ್ಚಲ ಐಪಿಎಲ್ ಟ್ರೋಫಿಯ ಹುಡುಕಾಟದಲ್ಲಿರುವ ಪಂಜಾಬ್, ಈ ಆವೃತ್ತಿಯಲ್ಲಿ ಶ್ರೇಯಸ್ ಅಯ್ಯರ್ ಅವರನ್ನೇ ತಂಡದ ನಾಯಕನನ್ನಾಗಿ ನೇಮಿಸಿದೆ.

ರೋಹಿತ್ ಫಿಟ್‌ನೆಸ್‌ಗೆ ಕಾಂಗ್ರೆಸ್ ನಾಯಕಿ ಟೀಕೆ

ದೆಹಲಿ: ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರ ದಪ್ಪ ಹಾಗೂ ಫಿಟ್ ನೆಸ್ ಇಲ್ಲ ಮತ್ತು ಕಳಪೆ ನಾಯಕತ್ವ ಎಂದು ಟೀಕಿಸಿ ಕಾಂಗ್ರೆಸ್ ವಕ್ತಾರೆ ಶಮಾ ಮೊಹಮ್ಮದ್ ವಿವಾದ ಸೃಷ್ಟಿಸಿದ್ದಾರೆ. ಇದು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಕಾಂಗ್ರೆಸ್ ಈ ಹೇಳಿಕೆ ಶಮಾ ಅವರ ವೈಯಕ್ತಿಕ ಅಭಿಪ್ರಾಯ ಎಂದು ಸ್ಪಷ್ಟನೆ ನೀಡಿದೆ. ಕ್ರೀಡಾಪಟುವಾಗಿ ರೋಹಿತ್ ಶರ್ಮಾ ದಪ್ಪಗಿದ್ದಾರೆ, ತೂಕ ಇಳಿಸಿಕೊಳ್ಳಬೇಕು. ಖಂಡಿತವಾಗಿಯೂ, ಭಾರತ ಕಂಡ ಅತ್ಯಂತ ಕಳಪೆ ನಾಯಕ ಇವರೇ ಎಂದು ಮೊಹಮ್ಮದ್ ಪೋಸ್ಟ್ ಮಾಡಿದ್ದಾರೆ. ಮತ್ತೊಂದು ಪೋಸ್ಟ್‌ನಲ್ಲಿ, ಗಂಗೂಲಿ, ತೆಂಡೂಲ್ಕರ್, ದ್ರಾವಿಡ್, ಧೋನಿ, ಕೊಹ್ಲಿ, ಕಪಿಲ್ ದೇವ್, ಶಾಸ್ತ್ರಿ ಮತ್ತು ಉಳಿದವರಿಗೆ ಹೋಲಿಸಿದರೆ ಅವರಲ್ಲಿ ಜಗತ್ತಿಗೆ ಮಾದರಿಯಾಗುವಂತಹದ್ದೇನಿದೆ? ಅವರು ಸಾಧಾರಣ ಆಟಗಾರರಾಗಿದ್ದು, ಭಾರತದ ನಾಯಕರಾಗಲು ಅದೃಷ್ಟವಿತ್ತು ಅಷ್ಟೇ ಎಂದು ಕಾಂಗ್ರೆಸ್ ವಕ್ತಾರೆ ರೋಹಿತ್ ಅವರನ್ನು ಜರಿದಿದ್ದಾರೆ. ಶಮಾ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಿಜೆಪಿ, ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ 90 ಚುನಾವಣೆಗಳನ್ನು ಸೋತವರು ರೋಹಿತ್ ಶರ್ಮಾ ಅವರ ನಾಯಕತ್ವವನ್ನು ಕಳಪೆ ಎಂದು ಕರೆಯುತ್ತಿದ್ದಾರೆ ಎಂದು ಕಟಕಿಯಾಡಿದೆ.

ಆಸೀಸ್ ಎದುರಿನ ವಿಶ್ವಕಪ್ ಸೋಲಿಗೆ ಸೇಡು ತೀರಿಸಿಕೊಳ್ಳಲು ಸುವರ್ಣಾವಕಾಶ

ಕಾಂಗರೂ ಬೇಟೆಗೆ ರೋಹಿತ್ ಪಡೆ ಸಜ್ಜು

ದುಬೈ: ನ್ಯೂಜಿಲೆಂಡ್ ವಿರುದ್ಧದ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿದ ಟೀಮ್ ಇಂಡಿಯಾ ಮಂಗಳವಾರ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ರೋಹಿತ್ ಪಡೆ ಕಾಂಗರೂಗಳ ಎದುರಿನ ವಿಶ್ವಕಪ್ ಸೋಲಿಗೆ ಸೇಡು ತೀರಿಸಿಕೊಳ್ಳುವ ತವಕದಲ್ಲಿದೆ. ಆಸ್ಟ್ರೇಲಿಯಾ ಪ್ರಮುಖ ಟೂರ್ನಿಯಲ್ಲಿ ಛಲಕ್ಕೆ ಬಿದ್ದು ಆಡುವ ತನ್ನ ಖ್ಯಾತಿಯನ್ನು ವಿಸ್ತರಿಸುವ ಉಮೇದಿನಲ್ಲಿದೆ.

2023ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಬಳಿಕ ಇದೇ ಮೊದಲ ಬಾರಿ ಉಭಯ ತಂಡಗಳು 50 ಓವರ್‌ಗಳ ಪಂದ್ಯದಲ್ಲಿ ಮುಖಾಮುಖಿಯಾಗುತ್ತಿವೆ. ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡ ಸೋತು ರನ್ನರ್ ಅಪ್ ಆಗಿತ್ತು. ಇದೀಗ ಮೊದಲನೇ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಗೆದ್ದು ಮುಯ್ಯಿ ತೀರಿಸಿಕೊಳ್ಳಲು ಟೀಮ್ ಇಂಡಿಯಾ ಎದುರು ನೋಡುತ್ತಿದೆ.

ಬಾಂಗ್ಲಾ, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಈ ಮೂರೂ ತಂಡಗಳನ್ನು ಸೋಲಿಸಿ ಲೀಗ್ ಹಂತದಲ್ಲಿ ಟೀಮ್ ಇಂಡಿಯಾ ಎ ಗುಂಪಿನ ಪಾಯಿಂಟ್ಸ್ ಟೇಬಲ್‌ನಲ್ಲಿ ಅಗ್ರ ಸ್ಥಾನವನ್ನು ಅಲಂಕರಿಸಿದೆ. ಇದರೊಂದಿಗೆ ಮೊದಲನೇ ಸೆಮಿಫೈನಲ್‌ನಲ್ಲಿ ಭಾರತ ತಂಡಕ್ಕೆ ಬಿ ಬಣದ ದ್ವಿತೀಯ ಸ್ಥಾನಿ ಆಸ್ಟ್ರೇಲಿಯಾ ಎದುರಾಳಿ ತಂಡವಾಗಿದೆ.

ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ ಪಂದ್ಯಕ್ಕೆ ಭಾರತ ತಂಡದ ಬ್ಯಾಟಿಂಗ್ ವಿಭಾಗದಲ್ಲಿ ಯಾವುದೇ ಬದಲಾವಣೆ ಮಾಡುವ ಸಾಧ್ಯತೆ ಇಲ್ಲ. ನಾಯಕ ರೋಹಿತ್ ಶರ್ಮಾ ಹಾಗೂ ಶುಭಮನ್ ಗಿಲ್ ಇನಿಂಗ್ಸ್ ಆರಂಭಿಸಲಿದ್ದಾರೆ. ಈ ಇಬ್ಬರೂ ಫಾರ್ಮ್‌ನಲ್ಲಿದ್ದಾರೆ. ಮೂರನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಆಡಲಿದ್ದಾರೆ. ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಶತಕ ಸಿಡಿಸಿದ್ದ ಕೊಹ್ಲಿ, ಸೆಮಿಫೈನಲ್ ಪಂದ್ಯದಲ್ಲಿಯೂ ಅದೇ ಲಯವನ್ನು ಮುಂದುವರಿಸಲು ಎದುರು ನೋಡುತ್ತಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿಯೂ ಕೊಹ್ಲಿ ಉತ್ತಮವಾಗಿ ಕಂಡಿದ್ದರು. ಆದರೆ, ಗ್ಲೆನ್ ಫಿಲಿಪ್ಸ್ ಅವರ ಅದ್ಭುತ ಕ್ಯಾಚ್‌ಗೆ ಕೊಹ್ಲಿ ಔಟ್ ಆಗಿದ್ದರು. ಕಿವೀಸ್ ಎದುರು ನಿರ್ಣಾಯಕ 79 ರನ್‌ಗಳನ್ನು ಸಿಡಿಸಿದ್ದ ಶ್ರೇಯಸ್ ಅಯ್ಯರ್ ಅವರು ಉತ್ತಮ ಫಾರ್ಮ್‌ನಲ್ಲಿದ್ದು, ಅವರು ಆಸ್ಟ್ರೇಲಿಯಾ ವಿರುದ್ಧದ ಪಂದ್ಯಕ್ಕೆ ಪ್ರಮುಖ ಬ್ಯಾಟ್ಸ್‌ಮನ್ ಆಗಿದ್ದಾರೆ. ಐದನೇ ಕ್ರಮಾಂಕದಲ್ಲಿ ಅಕ್ಷರ್ ಪಟೇಲ್ ಎಡಗೈ ಬ್ಯಾಟ್ಸ್‌ಮನ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ನಂತರದ ಕ್ರಮಾಂಕಗಳಲ್ಲಿ ಕ್ರಮವಾಗಿ ಕೆ.ಎಲ್ ರಾಹುಲ್ ಮತ್ತು ಹಾರ್ದಿಕ್ ಪಾಂಡ್ಯ ಆಡಲಿದ್ದಾರೆ. ಸ್ಪಿನ್ ಆಲ್‌ರೌಂಡರ್ ಆಗಿ ರವೀಂದ್ರ ಜಡೇಜಾ ಎಂಟನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಲಿದ್ದಾರೆ. ಮೇಲ್ನೋಟಕ್ಕೆ ಭಾರತದ ಬ್ಯಾಟಿಂಗ್ ಪಡೆ ಬಲಿಷ್ಠವಾಗಿ ಕಂಡರೂ ಇದುವರೆಗೆ ನಾಯಕ ರೋಹಿತ್, ರಾಹುಲ್ ಮತ್ತು ಜಡೇಜಾ ಅವರ ಬ್ಯಾಟ್ ನಿಂದ ದೊಡ್ಡ ಮೊತ್ತ ದಾಖಲಾಗಿಲ್ಲ.

ಕಿವೀಸ್ ಎದುರಿನ ಪಂದ್ಯದಲ್ಲಿ ಹರ್ಷಿತ್ ರಾಣಾ ಸ್ಥಾನದಲ್ಲಿ ಆಡಿದ್ದ ವರುಣ್ ಚಕ್ರವರ್ತಿ ಮ್ಯಾಚ್ ವಿನ್ನಿಂಗ್ ಪ್ರದರ್ಶನವನ್ನು ತೋರಿದ್ದರು. ಈ ಹಿನ್ನೆಲೆಯಲ್ಲಿ ಸೆಮಿಫೈನಲ್ ಪಂದ್ಯದಲ್ಲಿಯೂ ಅವರನ್ನು ಮುಂದುವರಿಸುವ ಸಾಧ್ಯತೆ ದಟ್ಟವಾಗಿದೆ. ಕಿವೀಸ್ ಎದುರಿನ ಪಂದ್ಯದಲ್ಲಿ ಮೊಹಮ್ಮದ್ ಶಮಿ ಕೇವಲ ನಾಲ್ಕು ಓವರ್‌ಗಳನ್ನು ಮಾತ್ರ ಬೌಲ್ ಮಾಡಿದ್ದರು. ಅವರ ಬೌಲಿಂಗ್‌ನಲ್ಲಿ ಉತ್ತಮ ಲಯ ಕಂಡಿರಲಿಲ್ಲ. ಆದರೂ ಅನುಭವದ ಆಧಾರದ ಮೇಲೆ ಶಮಿಗೆ ಅವಕಾಶ ನೀಡುವ ಸಾಧ್ಯತೆ ಹೆಚ್ಚು.

ಇನ್ನೊಂದೆಡೆ ಆಸ್ಟ್ರೇಲಿಯಾ ತಂಡ, ಪ್ರಮುಖ ಆಟಗಾರರ ಅನುಪಸ್ಥಿತಿಯ ಹೊರತಾಗಿಯೂ ದ. ಆಫ್ರಿಕಾ ವಿರುದ್ಧದ ಪಂದ್ಯವನ್ನು ದಾಖಲೆ ರನ್‌ಗಳೊಂದಿಗೆ ಜಯಿಸಿದೆ. ಅನನುಭವಿ ಬೌಲರ್‌ಗಳು ಕೂಡ ಉತ್ತಮ ಪ್ರದರ್ಶನ ತೋರುತ್ತಿರುವುದು ತಂಡದ ಉತ್ಸಾಹ ಹೆಚ್ಚಿಸಿದೆ.

ನಾಲ್ವರು ಸ್ಪಿನ್ನರ್‌ಗಳಿಗೆ ಅವಕಾಶ

ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದ ಪಿಚ್ ವೇಗಿಗಳಿಗಿಂತ ಸ್ಪಿನ್ನರ್‌ಗಳಿಗಿಂತ ವೇಗಿಗಳಿಗೆ ಹೆಚ್ಚು ಅನುಕೂಲವಾಗಿದ್ದು ಕಳೆದ ಪಂದ್ಯದಂತೆ ಈ ಕಾದಾಟದಲ್ಲಿಯೂ ನಾಲ್ವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಸ್ಪಿನ್ ಆಲ್ ರೌಂಡರ್‌ಗಳಾಗಿ ರವೀಂದ್ರ ಜಡೇಜಾ ಹಾಗೂ ಅಕ್ಷರ್ ಪಟೇಲ್ ಕಾಣಿಸಿಕೊಂಡರೆ, ಪೂರ್ಣ ಪ್ರಮಾಣದ ಸ್ಪಿನ್ನರ್‌ಗಳಾಗಿ ಕುಲ್‌ದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ಆಡಲಿದ್ದಾರೆ.

ಪಂದ್ಯದ ವಿವರ

ಭಾರತ v/s ಆಸ್ಟ್ರೇಲಿಯಾ
ಐಸಿಸಿ ಚಾಂಪಿಯನ್ಸ್ ಟ್ರೋಫಿ 2025
ದಿನಾಂಕ: ಮಾರ್ಚ್ 4, 2025
ಸಮಯ: ಮಧ್ಯಾಹ್ನ 02:30
ಸ್ಥಳ: ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣ, ದುಬೈ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಡಿಸ್ನಿ ಹಾಟ್‌ಸ್ಟಾರ್

ಮಾಸ್ಟರ್ಸ್ ಚೆಸ್: ಭಾರತೀಯರದ್ದೇ ಪಾರಮ್ಯ

ಪ್ರಾಗ್: ಗ್ರಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಭಾನುವಾರ ಸ್ವದೇಶದ ಅರವಿಂದ ಚಿದಂಬರಮ್ ಜೊತೆ ಡ್ರಾ ಮಾಡಿಕೊಂಡಿದ್ದಾರೆ. ಇಬ್ಬರೂ ತಲಾ 3.5 ಪಾಯಿಂಟ್ಸ್ ಗಳಿಸಿದ್ದು ಜಂಟಿಯಾಗಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಈ ಇಬ್ಬರು ಆಟಗಾರರನ್ನು ಬೆನ್ನತ್ತಿರುವ ಅಗ್ರ ಶ್ರೇಯಾಂಕದ ವೀ ಯಿ (ಚೀನಾ), ಹಾಲೆಂಡ್‌ನ ಅನಿಶ್ ಗಿರಿ, ವಿಯೆಟ್ನಾಮನ ಕ್ವಾಂಗ್ ಲೀಮ್ ಲಿ ಮತ್ತು ಜರ್ಮನಿಯ ವಿನ್ಸೆಂಟ್ ಕೀಮರ್ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಜೆಕ್ ರಿಪಬ್ಲಿಕ್‌ನ ಡೇವಿಡ್ ನವಾರ, ಗ್ಯುಯೆನ್ ಥಾಯ್ ದೈವಾನ್ , ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಮತ್ತು ಟರ್ಕಿಯ ಗುರೆಲ್ ಎಡಿಜ್ ತಲಾ ಎರಡು ಪಾಯಿಂಟ್ಸ್ ಗಳಿಸಿದ್ದಾರೆ.

ಹತ್ತು ಆಟಗಾರರು ಭಾಗವಹಿಸುತ್ತಿರುವ ಈ ಟೂರ್ನಿಯಲ್ಲಿ ಇನ್ನೂ 4 ಸುತ್ತುಗಳು ಆಡಲು ಬಾಕಿ ಉಳಿದಿವೆ. ಐದನೇ ಸುತ್ತಿನ ಒಂದು ಪಂದ್ಯದಲ್ಲಿ ಮಾತ್ರ ಜಯಾಪಜಯ ನಿರ್ಧಾರವಾಗಿದೆ. ಉತ್ತಮ ಆಟ ಕಂಡುಕೊಳ್ಳಲು ಪರದಾಡುತ್ತಿದ್ದ ವೀ ಯಿ ಐದನೇ ಸುತ್ತಿನಲ್ಲಿ ಅಮೆರಿಕದ ಶಂಕ್ಲಾಂಡ್ ಅವರನ್ನು 27 ನಡೆಗಳಲ್ಲಿ ಮಣಿಸಿದರು. ಉಳಿದ ನಾಲ್ಕು ಪಂದ್ಯಗಳು ಡ್ರಾ ಆದವು.

ಡೇವಿಡ್ ನವಾರ, ವಿನ್ಸೆಂಟ್ ಕೀಮರ್ ಜೊತೆ, ಕ್ವಾಂಗ್ ಲೀಮ್ ಲಿ, ಗುರೆಜ್ ಎಡಿಜ್ ಜೊತೆ; ಅನಿಶ್ ಗಿರಿ, ಗುಯೆನ್ ಥಾಯ್ ವಾನ್ ಜೊತೆ ಡ್ರಾ ಮಾಡಿಕೊಂಡರು. ಚಾಲೆಂಜರ್ ವಿಭಾಗದಲ್ಲಿ ಭಾರತದ ದಿವ್ಯಾ ದೇಶಮುಖ್ (1.5) ಐದು ಸುತ್ತುಗಳಲ್ಲಿ ಮೂರನೇ ಬಾರಿ ಸೋಲು ಕಂಡರು. ನೊದಿರ್ಬೆಕ್ ಯಾಕುಬ್ಬೋವ್ (4 ಪಾಯಿಂಟ್) ಅವರು ಈ ವಿಭಾಗದಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಸೋಮವಾರದ ವಿಶ್ರಾಂತಿ ದಿನದ ನಂತರ ಮಂಗಳವಾರ ಆರನೇ ಸುತ್ತು ನಡೆಯಲಿದೆ.

ಟೀಮ್ ಇಂಡಿಯಾ ಟೆಸ್ಟ್ ತಂಡಕ್ಕೆ ಕನ್ನಡಿಗನ ಸೇರ್ಪಡೆಗೆ ಹೆಚ್ಚಿದ ಒತ್ತಡ

ಕರುಣ್ ನಾಯರ್ ಪರ ಅಭಿಮಾನಿಗಳ ಬ್ಯಾಟಿಂಗ್

ನಾಗ್ಪುರ: ರಣಜಿ ಮತ್ತು ಮುಷ್ತಾಕ್ ಅಲಿ ಟ್ರೋಫಿ ಪಂದ್ಯಗಳಲ್ಲಿ ಶತಕಗಳ ಮೇಲೆ ಶತಕ ಬಾರಿಸಿ ಕ್ರಿಕೆಟ್ ಪ್ರಿಯರ ಗಮನ ಸೆಳೆದಿರುವ ಕನ್ನಡಿಗ ಕರುಣ್ ನಾಯರ್ ಅವರನ್ನು ಟೀಮ್ ಇಂಡಿಯಾ ಟೆಸ್ಟ್ ತಂಡಕ್ಕೆ ಸೇರಿಸಿಕೊಳ್ಳಬೇಕೆಂಬ ಕೂಗಿಗೆ ಈಗ ಮತ್ತಷ್ಟು ಬಲ ಬಂದಿದೆ.

ವಿದರ್ಭ ತಂಡದ ರಣಜಿ ಟ್ರೋಫಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಕರುಣ್ ನಾಯರ್, ಕಳೆದ ಒಂದು ವರ್ಷದಿಂದ ಭರ್ಜರಿ ಫಾರ್ಮ್‌ನಲ್ಲಿದ್ದು ಅವರನ್ನು ಮತ್ತೆ ಟೆಸ್ಟ್ ತಂಡಕ್ಕೆ ಕರೆಸಿಕೊಳ್ಳಬೇಕೆಂಬ ಆಗ್ರಹ ಪ್ರಮುಖ ಆಟಗಾರರು ಮತ್ತು ಕ್ರಿಕೆಟ್ ಆಟಗಾರರಿಂದ ಕೇಳಿ ಬಂದಿದೆ.

ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್ ಗವಾಸ್ಕರ್ ಟ್ರೋಫಿ ಸರಣಿಯಲ್ಲಿನ ಭಾರತ ತಂಡದ ಹೀನಾಯ ಪ್ರದರ್ಶನದ ಬಳಿಕ ಟೆಸ್ಟ್ ತಂಡಕ್ಕೆ ಚೇತೇಶ್ವರ್ ಪೂಜಾರ್ ಇಲ್ಲವೇ ಕನ್ನಡಿಗ ಕರುಣ್ ನಾಯರ್ ಸೇರ್ಪಡೆ ಒತ್ತಡ ಹೆಚ್ಚಾಗಿದೆ. ಪ್ರಸ್ತುತ ದೇಶಿಯ ಕ್ರಿಕೆಟ್ ನಲ್ಲಿ ಕರುಣ್ ನಾಯರ್ ಅಬ್ಬರಿಸುತ್ತಿದ್ದು, 2017ರ ಬಳಿಕ ಮತ್ತೊಮ್ಮೆ ರಾಷ್ಟ್ರೀಯ ತಂಡದಲ್ಲಿ ಅವಕಾಶ ಗಿಟ್ಟಿಸಿಕೊಳ್ಳಲು ಎದುರು ನೋಡುತ್ತಿದ್ದಾರೆ.

ದಾಖಲೆಯ ಪ್ರದರ್ಶನ: ಈ ಋತುವಿನ ರಣಜಿ ಟ್ರೋಫಿಯಲ್ಲಿ ಕರುಣ್ ನಾಯರ್ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿದ್ದು, ನಾಲ್ಕು ಶತಕ ಬಾರಿಸಿದ ಸಾಧನೆ ಮಾಡಿದ್ದಾರೆ. ಅಂತೆಯೇ ರಣಜಿ ಫೈನಲ್ ಮೊದಲ ಇನ್ನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸುವುದರೊಂದಿಗೆ ಕರುಣ್, ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 8,000 ರನ್‌ಗಳನ್ನು ಪೂರ್ಣಗೊಳಿಸಿದರು. ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ನಾಯರ್ ಅವರ 36 ನೇ ಅರ್ಧಶತಕವಾಗಿತ್ತು. ಅಲ್ಲದೆ ನಾಯರ್ ಈಗ 2024/25 ರಣಜಿ ಟ್ರೋಫಿ ಆವೃತ್ತಿಯಲ್ಲಿ 800 ಕ್ಕೂ ಅಧಿಕ ರನ್ ಕಲೆಹಾಕಿದ ನಾಲ್ಕನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಈ ಬಾರಿಯ ರಣಜಿ ಟೂರ್ನಿಯಲ್ಲಿ ಇದು ಕರುಣ್ ಸಿಡಿಸಿರುವ ನಾಲ್ಕನೇ ಶತಕವಾಗಿದೆ.

ಯುಪಿಗೆ ಮತ್ತೆ ಸೋಲು: 2ನೇ ಸ್ಥಾನಕ್ಕೇರಿದ ಗುಜರಾತ್

ಲಖನೌ: ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) 2025ರ 15ನೇ ಪಂದ್ಯದಲ್ಲಿ ಯುಪಿ ವಾರಿಯರ್ಸ್ ವಿರುದ್ಧ ಗುಜರಾತ್ ಜೈಂಟ್ಸ್ ವನಿತೆಯರು 81 ರನ್‌ಗಳಿಂದ ಭರ್ಜರಿ ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಏರಿದ್ದಾರೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಜೈಂಟ್ಸ್ ಪರ ಬೆತ್ ಮೂನಿ 96 ರನ್‌ಗಳನ್ನು ಬಾರಿಸಿ ತಂಡ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಲು ನೆರವಾದರು. ಹರ್ಲೀನ್ ಡಿಯೋಲ್ (45) ಇವರಿಗೆ ಸಮರ್ಥ ಬೆಂಬಲ ನೀಡಿದರು. ಈ ಗುರಿ ಬೆನ್ನಟ್ಟಿದ ಯುಪಿ ವಾರಿಯರ್ಸ್ ತಂಡ ಗುಜರಾತ್ ಜೈಂಟ್ಸ್ ಬೌಲಿಂಗ್ ದಾಳಿಗೆ ತತ್ತರಿಸಿ ಕೇವಲ 17.1 ಓವರ್‌ಗಳಲ್ಲಿ 105 ರನ್‌ಗಳಿಗೆ ಸರ್ವಪತನವಾಯಿತು. ಇದರೊಂದಿಗೆ ಗುಜರಾತ್ 81 ರನ್‌ಗಳ ಅಮೋಘ ಗೆಲುವು ಸಾಧಿಸಿತು.

ಬೃಹತ್ ಮೊತ್ತ ಬೆನ್ನಟ್ಟಿದ ಯುಪಿ ವಾರಿಯರ್ಸ್ ಆರಂಭದಲ್ಲೇ ಪ್ರಮುಖ 2 ವಿಕೆಟ್ ಕಳೆದುಕೊಂಡಿತು. ಕಿರಣ್ ನವ್‌ಗಿರೆ ಮತ್ತು ಜಾರ್ಜಿಯಾ ವೋಲ್ ಶೂನ್ಯ ಔಟಾದರು. ಇದಾದ ಪವರ್‌ಪ್ಲೇನಲ್ಲಿ ಯುಪಿ ತಂಡ 50 ರನ್ ಗಳಿಸುವುದರೊಳಗೆ 4 ವಿಕೆಟ್ ಕಳೆದುಕೊಂಡಿತು. ಬಳಿಕ ಬಂದ ಚಿನೆಲ್ಲೆ ಹೆನ್ರಿ (28) ಮತ್ತು ಗ್ರೇಸ್ ಹ್ಯಾರಿಸ್ (25) ಯುಪಿ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಈ ಇಬ್ಬರನ್ನೂ ಹೊರತುಪಡಿಸಿ 7 ಮಂದಿ ಒಂದಂಕಿಗೆ ಔಟಾದರು. ಸತತ ಎರಡನೇ ಸೋಲು ಕಂಡ ಯುಪಿ ಪ್ಲೇಆಫ್ ಹಾದಿ ಕಠಿಣವಾಗಿದೆ.

ತೆರೆಗೆ ಸಿದ್ಧವಾದ ಅಜ್ಞಾತವಾಸಿ



ಕವಲುದಾರಿ, ಗೋಧಿಬಣ್ಣ ಸಾಧಾರಣ ಮೈಕಟ್ಟು ಹಾಗೂ ಸಪ್ತ ಸಾಗರದಾಚೆ ಎಲ್ಲೋ ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದ ಹೇಮಂತ್ ರಾವ್ ನಿರ್ಮಾಣಕ್ಕೂ ಮುಂದಾಗಿದ್ದು ಅಜ್ಞಾತವಾಸಿ ಸಿನಿಮಾವನ್ನು ನಿರ್ಮಿಸಿದ್ದಾರೆ. ಗುಳ್ಟು ಖ್ಯಾತಿಯ ಜನಾರ್ಧನ್ ಚಿಕ್ಕಣ್ಣ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಅಜ್ಞಾತವಾಸಿ ಟೀಸರ್ ಬಿಡುಗಡೆಯಾಗಿದ್ದು ಪ್ರೇಕ್ಷಕರಲ್ಲಿ ಕುತೂಹಲ ಹೆಚ್ಚಿಸಿದೆ. ಇದೀಗ ಚಿತ್ರತಂಡ ಸಿನಿಮಾವನ್ನು ಬೆಳ್ಳಿತೆರೆಗೆ ತರಲು ಸಜ್ಜಾಗಿದೆ. ಏಪ್ರಿಲ್ 11ರಂದು ಅಜ್ಞಾತವಾಸಿ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ ಅಜ್ಞಾತವಾಸಿಯಲ್ಲಿ ಪಾವನಾ ಗೌಡ ಹಾಗೂ ಸಿದ್ದು ಮೂಲಿಮನಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಶರತ್ ಲೋಹಿತಾಶ್ವ, ರವಿಶಂಕರ್ ಗೌಡ ಹಲವರು ತಾರಾಗಣದಲ್ಲಿದ್ದಾರೆ. ತೊಂಬತ್ತರ ದಶಕದಲ್ಲಿ ಮಲೆನಾಡಿನಲ್ಲಿ ನಡೆದ ಕೊಲೆಯೊಂದರ ಸುತ್ತ ಈ ಚಿತ್ರದ ಕಥೆ ಸಾಗಲಿದೆ. ಕನ್ನಡದಲ್ಲಿ ಈವರೆಗೂ ಬಂದಿರದ ಮರ್ಡರ್ ಮಿಸ್ಟರಿ ಕಥಾಹಂದರ ಈ ಸಿನಿಮಾದಲ್ಲಿ ಅಡಕವಾಗಿದೆ. ಕೃಷ್ಣರಾಜ್ ಕಥೆ ಹೆಣೆದಿದ್ದಾರೆ. ಹಂಬಲ್ ಪೊಲಿಟಿಷಿಯನ್ ನಾಗರಾಜ್ ಸಿನಿಮಾದ ನಿರ್ಮಾಪಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದ ಹೇಮಂತ್ ರಾವ್ ಅಜ್ಞಾತವಾಸಿ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಿರ್ಮಾಪಕರಾಗಿ ಹೆಜ್ಜೆ ಇಟ್ಟಿದ್ದಾರೆ. ಅದ್ವೈತ ಛಾಯಾಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ, ಎಂ.ಸಿ.ಭರತ್ ಸಂಕಲನ ಈ ಚಿತ್ರಕ್ಕಿದೆ.

ಸಂಸತ್ ಪ್ರವೇಶಿಸಲಿದ್ದಾರೆ ಶಿವಣ್ಣ

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಕ್ಯಾನ್ಸರ್ ಗೆ ಚಿಕಿತ್ಸೆ ಪಡೆದಿದ್ದು ಚೇತರಿಸಿಕೊಳ್ಳುತ್ತಿದ್ದಾರೆ. ಈಗ ಸಿನಿಮಾದ ಶೂಟಿಂಗ್ ಗೆ ಹಾಜರಾಗಲು ರೆಡಿಯಾಗಿದ್ದಾರೆ. ಹೌದು, ಕನ್ನಡದ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿರುವ ಶಿವರಾಜ್ ಕುಮಾರ್ ಅವರಿಗೆ ಪರ ಭಾಷೆಯಲ್ಲಿಯೂ ಭರ್ಜರಿ ಬೇಡಿಕೆ ಇದೆ. ಈಗಾಗಲೇ ತಮಿಳಿನ ಜೈಲರ್ , ಕ್ಯಾಪ್ಟನ್ ಮಿಲ್ಲರ್ ಸಿಮಾಗಳಲ್ಲಿ ನಟಿಸಿ ಮನಗೆದ್ದ ಶಿವಣ್ಣ ಈಗ ರಾಮ್ ಚರಣ್ ಅಭಿನಯದ ತೆಲುಗಿನ ಹೊಸ ಚಿತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ. ಬುಚ್ಚಿ ಬಾಬು ನಿರ್ದೇಶನದಲ್ಲಿ ಮೂಡಿಬರುತ್ತಿರುವ ಆರ್ ಸಿ 16 ಚಿತ್ರದಲ್ಲಿ ಶಿವಣ್ಣ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಪೊಲಿಟಿಕಲ್ ಆ್ಯಕ್ಷನ್ ಡ್ರಾಮಾ ಜಾನರ್ ನ ಈ ಚಿತ್ರದ ಕೆಲವು ಸನ್ನಿವೇಶಗಳನ್ನು ದೆಹಲಿಯ ಸಂಸತ್ ಭವನದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಪ್ಲಾನ್ ಮಾಡಿದೆ. ಆದರೆ ಅಲ್ಲಿ ಶೂಟಿಂಗ್ ನಡೆಸುವುದು ತುಸು ಕಷ್ಟ. ಪವನ್ ಕಲ್ಯಾಣ್ ಅವರ ಶ್ರಮದಿಂದ ಚಿತ್ರೀಕರಣಕ್ಕೆ ಅವಕಾಶ ಸಿಕ್ಕಿದರೆ ಇಲ್ಲಿ ಶೂಟಿಂಗ್ ಮಾಡಲಾಗುತ್ತದೆ ಇಲ್ಲದಿದ್ದರೆ ಸಂಸತ್ ಭವನದಂತೆಯೇ ಬೃಹತ್ ಸೆಟ್ ನಿರ್ಮಿಸಿ ಅಲ್ಲಿಯೇ ಶೂಟಿಂಗ್ ನಡೆಸಬೇಕಾಗುತ್ತದೆ.

ಆರ್ ಸಿ 16 ಚಿತ್ರದಲ್ಲಿ ಶಿವಣ್ಣ ರಾಜಕಾರಣಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ರಾಮ್ ಚರಣ್ ಈ ಹಿಂದೆ ಗೇಮ್ ಚೇಂಜರ್ ಸಿನಿಮಾದಲ್ಲಿ ನಟಿಸಿದ್ದರು. ಆ ಸಿನಿಮಾ ಅಷ್ಟಾಗಿ ಸದ್ದು ಮಾಡಲಿಲ್ಲ. ಹಾಗಾಗಿ ಈ ಸಿನಿಮಾದ ಬಗ್ಗೆ ಅಪಾರ ನಿರೀಕ್ಷೆಯೂ ಇದೆ.

ಈ ತಿಂಗಳು ಮನದ ಕಡಲು

ಮುಂಗಾರು ಮಳೆ ಜೋಡಿಯ ಬಹುನಿರೀಕ್ಷಿತ ಮನದ ಕಡಲು ಆರಂಭದಿಂದಲೂ ಸದ್ದು ಮಾಡುತ್ತಿದೆ. ಈ ಚಿತ್ರ ಹಾಡಿನಲ್ಲಿಯೇ ಮೋಡಿ ಮಾಡುತ್ತಿದೆ. ಯೋಗರಾಜ್ ಭಟ್ ನಿರ್ದೇಶನ ಹಾಗೂ ಈ.ಕೃಷ್ಣಪ್ಪ ನಿರ್ಮಾಣದ ಮನದ ಕಡಲು ಈ ತಿಂಗಳಾಂತ್ಯಕ್ಕೆ ತೆರೆಗೆ ಬರಲಿದೆ. ಈ ಹಿಂದೆ ಫಿಸಿಕ್ಸ್ ಟೀಚರ್ ಆಗಿ ಪಾಠ ಹೇಳಿದ್ದ ಸುಮುಖ ಈ ಚಿತ್ರದಲ್ಲಿಯೂ ನಾಯಕನಾಗಿ ನಟಿಸಿದ್ದಾರೆ. ರಾಶಿಕಾ ಶೆಟ್ಟಿ ಹಾಗೂ ಅಂಜಲಿ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ರಂಗಾಯಣ ರಘು, ದತ್ತಣ್ಣ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ರಂಗಾಯಣ ರಘು ಆದಿವಾಸಿಯಾಗಿ ಕಾಣಿಸಿಕೊಂಡಿದ್ದು, ಅವರಿಗಾಗಿ ಹೊಸ ಭಾಷೆ ಸೃಷ್ಟಿ ಮಾಡಲಾಗಿದೆ.

ಮನದ ಕಡಲು ನವಿರಾದ ಪ್ರೇಮಕಥೆಯ ಸಿನಿಮಾವಾಗಿದೆ. ಇಂತಹ ಸಿನಿಮಾ ಮಾಡುವಾಗ ಕಥೆ ಕೂಡಾ ಇವತ್ತಿನ ?????ಂಡ್‌ಗೆ ತಕ್ಕಂತೆ ಇರಬೇಕು. ಈ ನಿಟ್ಟಿನಲ್ಲಿ ಭಟ್ಟರು ಈ ಬಾರಿ ಸ್ವಲ್ಪ ಹೆಚ್ಚೇ ತಲೆಕೆಡಿಸಿಕೊಂಡು ಅದ್ಭುತವಾದ ಹಾಗೂ ಅಷ್ಟೇ ?????ಂಡಿಯಾದ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಂದಿನ ಯುವಪೀಳಿಗೆ ಕನೆಕ್ಟ್ ಆಗುವ ಸ್ಟೋರಿ ಇದಾಗಿದೆಯಂತೆ.

ಕರ್ನಾಟಕದ ಹನ್ನೆರಡು ಜಿಲ್ಲೆಗಳಲ್ಲಿ ಚಿತ್ರೀಕರಣ ಮಾಡಿದ್ದೇವೆ. ಮಹಾರಾಷ್ಟ್ರದ ಮುರುಡ್ ಜಂಜೀರ ಎಂಬ ಸಮುದ್ರದ ಮಧ್ಯದ ಕೋಟೆಯಲ್ಲಿ ಕೆಲವು ಸನ್ನಿವೇಶಗಳನ್ನು ಸೆರೆಹಿಡಿದಿದ್ದೇವೆ. ಅದಕ್ಕೆ ಹದಿನೈದು ರೀತಿಯ ಪರ್ಮಿಷನ್ ಬೇಕು. ಅದೊಂದು ಯುದ್ಧ ಮಾಡಿದ ಅನುಭವ. ಬಿಸಿಲು, ರಣಮಳೆಯ ನಡುವೆ ಚಿತ್ರೀಕರಣ ಸುಲಭವಲ್ಲ. ಚಿತ್ರತಂಡದ ಶ್ರಮದಿಂದ ನಮ್ಮ ಮನದ ಕಡಲು ಅದ್ಭುತವಾಗಿ ಮೂಡಿಬಂದಿದೆ.

-ಯೋಗರಾಜ್ ಭಟ್ ನಿರ್ದೇಶಕ

ಕಡಲಿಗೆ ಒಂದು ಕಾವು ಇದೆ. ಅದು ಸಿಹಿಯಲ್ಲ. ನದಿ ಅಥವಾ ಫಾಲ್ಸ್ ತರಹ ಮಧುರವಲ್ಲ. ಕಡಲಿನ ಮುಂದೆ ನಿಂತಾಗ ನಮಗೆ ಕೀಳರಿಮೆ ಬರುತ್ತದೆ. ಪ್ರಕೃತಿ ಮುಂದೆ ನಾವೆಷ್ಟು ಚಿಕ್ಕವರು ಎನಿಸುತ್ತದೆ. ಆರಂಭ, ಇಂಟರ್ವೆಲ್ ಮತ್ತು ಕ್ಲೈಮ್ಯಾಕ್ಸ್ ಸನ್ನಿವೇಶದಲ್ಲಿ ಕಡಲು ಗೋಚರಿಸುತ್ತದೆ.

-ಸುಮುಖ ನಟ

ಖ್ಯಾತ ನಟ, ನಿರ್ದೇಶಕ ಮತ್ತು ನಿರ್ಮಾಪಕ ಅರ್ಜುನ್ ಸರ್ಜಾ ಇದೀಗ ಮತ್ತೆ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ಜೈ ಹಿಂದ್, ಅಭಿಮನ್ಯು ಸಿನಿಮಾಗಳನ್ನು ನಿರ್ದೇಶನ ಮಾಡಿ ಸೈ ಎನಿಸಿಕೊಂಡಿದ್ದ ಅರ್ಜುನ್ ಸರ್ಜಾ ಈಗ ಸೀತಾ ಪಯಣ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಜತೆಗೆ ತಮ್ಮದೇ ಶ್ರೀ ರಾಮ್ ಫಿಲಂಸ್ ಇಂಟರ್ ನ್ಯಾಷನಲ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಸೀತಾ ಪಯಣದಲ್ಲಿ ಉಪೇಂದ್ರ ಅಣ್ಣನ ಮಗ ನಿರಂಜನ್ ನಾಯಕನಾಗಿ ನಟಿಸಿದರೆ, ಅರ್ಜುನ್ ಸರ್ಜಾ ಪುತ್ರಿ ಐಶ್ವರ್ಯಾ ನಾಯಕಿಯಾಗಿ ಅಭಿನಯಿಸಿದ್ದಾರೆ. ಚಿತ್ರದ ಶೀರ್ಷಿಕೆಯೇ ಹೇಳುವಂತೆ ಇದು ಪಯಣದಲ್ಲಿ ಸಾಗುವ ಕಥೆಯಾಗಿದ್ದು, ಅಭಿ ಮತ್ತು ಸೀತಾ ಎಂಬ ಭಾವನಾತ್ಮಕ ಪಯಣವನ್ನು ತೋರಿಸಲಾಗುತ್ತಿದೆ. ನಿರಂಜನ್ ಮತ್ತು ಐಶ್ವರ್ಯಾ ಜತೆಗೆ ಪ್ರಕಾಶ್ ರೈ, ಸತ್ಯರಾಜ್ ಮುಂತಾದವರು ಸಿನಿಮಾದಲ್ಲಿ ನಟಿಸಿದ್ದಾರೆ. ಅರ್ಜುನ್ ಸರ್ಜಾ ಅವರು ಕೂಡ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.

ಸೀತಾ ಪಯಣ ಸಿನಿಮಾಕ್ಕೆ ಬಾಲಮುರುಗನ್ ಛಾಯಾಗ್ರಹಣ, ದೃಶ್ಯಂ ಸಿನಿಮಾ ಖ್ಯಾತಿಯ ಆಯೂಬ್ ಖಾನ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ. ಅನೂಪ್ ರುಬೆನ್ಸ್ ಸಂಗೀತ ಸಂಯೋಜಿಸಿದ್ದಾರೆ. ಚಿತ್ರೀಕರಣ ಮುಗಿಸಿರುವ ಸೀತಾ ಪಯಣ ಪೋಸ್ಟ್ ಪ್ರೊಡಕ್ಷನ್ ನಲ್ಲಿದ್ದು ಏಪ್ರಿಲ್‌ನಲ್ಲಿ ಚಿತ್ರ ತೆರೆಗೆ ಬರಲಿದೆ. ಸೀತಾ ಪಯಣ ಕನ್ನಡದ ಜತೆಗೆ ತೆಲುಗು ಮತ್ತು ತಮಿಳಿನಲ್ಲಿಯೂ ನಿರ್ಮಾಣವಾಗಿದೆ.

ಸೀತಾ ಪಯಣದ ಸಾರಥ್ಯ ವಹಿಸಿದ ಅರ್ಜುನ